ಕರ್ನಾಟಕ ಸಾಹಿತ್ಯ ಅಕಾಡೆಮಿ

# ಬೆಳಕಿನ ಸೆರಗು

## ಅಂಜಲಿ ರಾಮಣ್ಣ



# ಬೆಳಕಿನ ಸೆರಗು

(ಅರುಣಾಚಲ ಪ್ರದೇಶ ಪ್ರವಾಸ ಕಥನ)

ಅಂಜಲಿ ರಾಮಣ್ಣ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.
ದೂರವಾಣಿ:080-22211730/22106460

www.karnatakasahithyaacademy.org
Email: sahithya.academy@gmail.com

# BELAKINA SERAGU

**A Travelogue of Arunachal Pradesh**
**Written by: Anjali Ramanna**

Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ



| | |
|---|---|
| ಪುಟಗಳು | : viii+೧೪೮ |
| ಬೆಲೆ | : ₹ ೮೦/– |
| ಮೊದಲ ಮುದ್ರಣ | : ೨೦೧೬ |
| ಪ್ರತಿಗಳು | : ೧೦೦೦ |

| | |
|---|---|
| ISBN | : 978-81-931964-0-3 |
| Pages | : viii+148 |
| Price | : ₹ 80/- |
| First impression | : 2016 |
| Copies | : 1000 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು–560 059.
080– 28483133 / 28484518

# ಅಧ್ಯಕ್ಷರ ನುಡಿ

ಪ್ರವಾಸ ಕಥನವು ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಅದು ಪ್ರವಾಸ ಕೈಗೊಂಡ ಸ್ಥಳದ ವರದಿಯೂ ಅಲ್ಲ. ಪ್ರವಾಸಿಗಳ ಮಾರ್ಗದರ್ಶಿಯೂ ಅಲ್ಲ. ಅದು ಪ್ರವಾಸಿಯ ಸ್ವಾನುಭವದ ರಸಾಭಿವ್ಯಕ್ತಿ. ಪ್ರವಾಸ ಸ್ಥಳದ ಭೌಗೋಳಿಕ, ಐತಿಹಾಸಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಅಧ್ಯಯನದ ಜೊತೆ ಪ್ರವಾಸಿಯ ಅನುಭವ ಬೆರೆತುಕೊಂಡ ರಸಪಾಕದಂತಿರುತ್ತದೆ.

ಸಾವಿರಾರು ವರ್ಷಗಳ ಹಿಂದೆ ಪ್ರಪಂಚದ ಸುಪ್ರಸಿದ್ಧ ಮಹತ್ವಾಕಾಂಕ್ಷಿ ಪ್ರವಾಸಿಗಳಾದ ಮಾರ್ಕೋಪೋಲೋ, ಕೊಲಂಬಸ್, ಹೆನ್ರಿ ಹಡ್ಸನ್, ಫರ್ಡಿನಾಂಡ್ ಮೆಗೆಲ್ಲೊ, ಇಬ್ನಬತೂತಾರಂಥ ಸಾಹಸಿ ಪಯಣಿಗರು ತಮ್ಮ ಶೋಧದ ಸಾಹಸ ಯಾತ್ರೆಗಳನ್ನು ಬರೆದಿಟ್ಟು ಮಾಡಿದ ಉಪಕಾರ ಚಿರಸ್ಮರಣೀಯ. ಭಾರತಕ್ಕೆ ಪ್ರವಾಸ ಕೈಗೊಂಡ ಅನೇಕ ಪ್ರವಾಸಿಗಳಲ್ಲಿ ನಾವು ನೆನಪಿಡಲೇಬೇಕಾದವರು– ಚೀನಾದೇಶದ ಫಾಹಿಯಾನ್, ಹುಯೆನ್‌ಸ್ಹಾಂಗ್, ಮೊಹೊರಲ್ಲಾ ದೇಶದ ಇಬ್ನಬತೂತಾ ಪರ್ಷಿಯಾದೇಶದ ಅಲ್ಬರೂನಿ, ಅಬ್ದುಲ್ ರಜಾಕ್, ಅವರು ಆ ಕಾಲದ ಭಾರತದ ಸ್ಥಿತಿಗತಿಗಳ ಇತಿಹಾಸವನ್ನೂ ಬರೆದಿಟ್ಟರು. ಹಾಗೆ ಪ್ರವಾಸ ಕಥನಗಳು ಕೇವಲ ಮನರಂಜನೆಗಾಗಿ ಕೈಗೊಂಡ ಪ್ರವಾಸಗಳಾಗದೆ ಅಧ್ಯಯನಪೂರ್ಣ ಸಂಶೋಧನೆಗಳೂ ಆದರೆ ಅವುಗಳ ಮೌಲಿಕತೆ ಅಧಿಕವಾಗುತ್ತದೆ.

ಕಳೆದ ಎರಡು ದಶಕಗಳಿಗಿಂತ ಮೇಲ್ಪಟ್ಟು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರವಾಸ ಕಥನದ ಬರವಣಿಗೆಗೆ ಪ್ರೋತ್ಸಾಹ ನೀಡಲು ಸಹಾಯಧನ ನೀಡಿ ಯುವ ಬರಹಗಾರರನ್ನು ಆಹ್ವಾನಿಸಿ ಅವರ ಆಯ್ಕೆಯಂತೆ ಭಾರತದ ರಾಜ್ಯಗಳಿಗೆ ಕಳಿಸಿಕೊಟ್ಟು ಅವರಿಂದ ಪ್ರವಾಸ ಕಥನಗಳನ್ನು ಬರೆಸಲು ಇಟ್ಟುಕೊಂಡ ಯೋಜನೆಯನ್ನು ನಾವು ಮುಂದುವರಿಸಿದ್ದೇವೆ. 2014–15ನೇ ವರ್ಷದಲ್ಲಿ ಆಯ್ಕೆಯಾಗಿ ಪ್ರವಾಸ ಕೈಗೊಂಡವರು

1. ಶ್ರೀ ಮೋದೂರು ತೇಜ ತೆಲಂಗಾಣದ ಪ್ರವಾಸ ಕೈಗೊಂಡು ಬರೆದ ಪ್ರವಾಸ ಕಥನ–"ತೇಟ ತೆಲುಗು ನಾಡಿನಲ್ಲಿ"
2. ಡಾ. ಪಜ್ಞಾ ಮತ್ತಿಹಳ್ಳಿಯವರು ಕೇರಳ ರಾಜ್ಯದ ಪ್ರವಾಸ ಕೈಗೊಂಡು ಬರೆದದ್ದು "ದೇವರ ಸ್ವಂತ ನಾಡಿನಲ್ಲಿ"

3. ಡಾ. ಶೈಲಜಾ ಬಾಗೇವಾಡಿಯವರು ತಮಿಳುನಾಡು ಪ್ರವಾಸ ಕೈಗೊಂಡು ಬರೆದ ಪ್ರವಾಸ ಕಥನದ ಶೀರ್ಷಿಕೆ "ದೇವಾಲಯಗಳ ನಾಡಿನಲ್ಲಿ"

4. ಶ್ರೀ ಶಿವರುದ್ರಯ್ಯಸ್ವಾಮಿ ಅವರು ಕೈಗೊಂಡ ಮಿಜೋರಾಂ ಪ್ರವಾಸ ಕಥನದ ಹೆಸರು "ಬೊಗಸೆಯಲ್ಲಿ ಈಶಾನ್ಯ"

5. ಸಂತೋಷ್ ಕುಮಾರ್ ಮೆಹಂದಳೆಯವರು ಕೈಗೊಂಡ ಮಣಿಪುರ ಪ್ರವಾಸ ಕಥನದ ಹೆಸರು "ಪ್ರಮಿಳೆಯರ ನಾಡಿನ'ಲ್ಲಿ"

6. ಶ್ರೀಮತಿ ಅಂಜಲಿ ರಾಮಣ್ಣ ಅವರು ಅರುಣಾಚಲ ಪ್ರವಾಸ ಕೈಗೊಂಡು ರಚಿಸಿದ ಪ್ರವಾಸ ಕಥನದ ಹೆಸರು "ಬೆಳಕಿನ ಸೆರಗು"

ಇವರೆಲ್ಲರದ್ದು, ತಮ್ಮ ಪ್ರವಾಸದ ಅನುಭವಗಳನ್ನು ಸಾಹಿತ್ಯಕ ಮೌಲ್ಯದ ಕೃತಿಗಳನ್ನಾಗಿಸಿದ್ದಕ್ಕೆ ಅವರಿಗೆ ಹಾರ್ಧಿಕ ಧನ್ಯವಾದಗಳು. ಪ್ರತಿವರ್ಷ ಪ್ರತಿಭಾನ್ವಿತ ಹೊಸ ಬರಹಗಾರರನ್ನು ಗುರುತಿಸುವುದು, ಅವರಿಗೆ ಅನುದಾನ ನೀಡಿ ಪ್ರವಾಸ ಕೈಗೊಳ್ಳಲು ಮಾರ್ಗದರ್ಶನ ಮಾಡುವುದು, ಅವರು ಆಯ್ದುಕೊಂಡ ರಾಜ್ಯಗಳ ಕುರಿತು ಪ್ರವಾಸ ಕಥನವನ್ನು ಬರೆಸುವುದು, ಮುದ್ರಿಸುವುದು– ಈ ಪ್ರವಾಸ ಕಥನಗಳಿಂದ ಕನ್ನಡದ ಓದುಗರಲ್ಲಿ ಪ್ರವಾಸದ ಹವ್ಯಾಸ ಬೆಳೆಸುತ್ತಾ ಪ್ರವಾಸ ಕಥನಗಳ ರಚನೆಯು ಪ್ರೋತ್ಸಾಹಿಸುವುದು– ಹೀಗೆ ಕೈಗೊಂಡ ಒಂದು ಯೋಜನೆಯು ಎಷ್ಟು ಬಗೆಯಿಂದ ಫಲಕಾರಿಯಾಗುತ್ತದೆ ಎಂಬುದಕ್ಕೆ ನಮ್ಮ ಪ್ರವಾಸ ಕಥನಗಳ ಯೋಜನೆಯೇ ಸಾಕ್ಷಿ.

ಬೊಗಸೆಯಲ್ಲಿ ಈಶಾನ್ಯ ರಾಜ್ಯವಾದ ಮಿಜೋರಾಂನಲ್ಲಿನ ತಮ್ಮ ಅನುಭವಗಳನ್ನು ತುಂಬಿಕೊಟ್ಟ ಶ್ರೀ ಶಿವರುದ್ರಯ್ಯಸ್ವಾಮಿಯವರಿಗೆ ತಂದೆಯ ವರ್ಗಾವರ್ಗಿ ನೌಕರಿಯಿಂದಾಗಿ ವೈವಿಧ್ಯಮಯ ಪ್ರದೇಶಗಳನ್ನು ನೋಡಬೇಕೆಂಬ ಆಕರ್ಷಣೆ ಅವರ ಬಾಲ್ಯದಲ್ಲೇ ಇತ್ತೆಂದು ತಮ್ಮ ಪ್ರವಾಸ ಕಥನದ ಮುನ್ನುಡಿಯಲ್ಲಿ ದಾಖಲಿಸಿದ್ದಾರೆ.

"ದೇವರ ಸ್ವಂತ ನಾಡಿನಲ್ಲಿ" ಶೀರ್ಷಿಕೆಯಡಿ ಪ್ರವಾಸ ಕಥನ ರಚಿಸಿದ ಡಾ. ಪ್ರಜ್ಞಾಮತ್ತಿಹಳ್ಳಿ ಅವರು ಕಲೆ, ಸಾಹಿತ್ಯ, ನಿಸರ್ಗ, ಇತಿಹಾಸಗಳ ಸಂಗಮದಂತಿದ್ದು, ಕೇರಳ ಪ್ರವಾಸ ಕುರಿತು ಹೀಗೆ ಬರೆಯುತ್ತಾರೆ: ಕೇರಳದ

ಕಲೆ, ಸಾಹಿತ್ಯ, ನಿಸರ್ಗ ಸೌಂದರ್ಯವನ್ನು ವರ್ಣಿಸಲು ಒಂದು ಪ್ರವಾಸ ಸಾಧ್ಯವೇ? ಒಂದು ಪುಸ್ತಕದಲ್ಲಿ ಬರೆದಿಡುವುದು ಸಾಧ್ಯವೇ? ಎಂದು. "ದೇವಾಲಯಗಳ ನಾಡಿನಲ್ಲಿ" ಪುಸ್ತಕದ ಕರ್ತೃ ಡಾ. ಶೈಲಜಾ ಬಾಗೇವಾಡಿಯವರು ತಮ್ಮ ಪುಸ್ತಕದ ತುಂಬ ತಮಿಳುನಾಡಿನ ಸುಂದರ ಶಿಲ್ಪದ ದೇವಾಲಯಗಳ ಬಗ್ಗೆ ಸವಿಸ್ತರವಾಗಿ ಬರೆಯುತ್ತಾರೆ. ಶ್ರೀ ಮೋದೂರು ತೇಜರವರು ತಮ್ಮ ತೇಟ ತೆಲುಗುನಾಡಿನಲ್ಲಿ ಪ್ರವಾಸ ಕಥನದಲ್ಲಿ ಮುಖ್ಯವಾಗಿ ಸ್ಪಂದಿಸಿದ್ದು, ಆಂಧ್ರ ಪ್ರದೇಶವು ಇಬ್ಭಾಗವಾದ ನಂತರದ ತೆಲುಗು ಜನ ಅನುಭವಿಸುತ್ತಿರುವ ನೋವು ತಲ್ಲಣಗಳನ್ನು ದಾಖಲಿಸಿದ್ದಾರೆ.

ಒಬ್ಬ ಸಂಶೋಧಕನ ಕ್ಷೇತ್ರಕಾರ್ಯವೆಂಬಂತೆ ಹತ್ತು ಹಲವು ಹೊಸ ವಿಷಯಗಳನ್ನು ತೆರೆದಿಟ್ಟ ಶ್ರೀ ಸಂತೋಷ ಕುಮಾರ ಮೆಹೆಂದಳೆ ಅವರ ಪ್ರಮೀಳೆಯರ ನಾಡಿನಲ್ಲಿ ಪ್ರವಾಸ ಕಥನವು ಮನಸ್ಸಿಗೆ ಮುದ ನೀಡುತ್ತದೆ. ಈ ಪ್ರವಾಸ ಕಥನವು ವಿವರಗಳ ಪಟ್ಟಿಯಾಗದೆ ಒಂದು ಸಾಹಿತ್ಯಕ ಸಂಪ್ರಬಂಧದಂತಿದೆ. ಶ್ರೀಮತಿ ಅಂಜಲಿ ರಾಮಣ್ಣ ಅವರ ಅರುಣಾಚಲ ಪ್ರದೇಶದ ಪ್ರವಾಸ ಕಥನದ ಹೆಸರು ಬೆಳಕಿನ ಸೆರಗು ಶೀರ್ಷಿಕೆಯು ತುಂಬಾ ರೂಪಕಾತ್ಮಕವಾಗಿದೆ. ಭಾರತದ ನಕಾಶೆಯಲ್ಲಿ ಪೂರ್ವೋತ್ತರದ ಈ ಪ್ರಾಂತವು ಸೆರಗಿನಂತೆಯೇ ಕಾಣಿಸುತ್ತದೆ. ಇಲ್ಲಿಯ ಬಹುತೇಕ ಕುಟುಂಬಗಳ ಕೇಂದ್ರ ಸದಸ್ಯೆ ಮಹಿಳೆ. ಪುರುಷ ಬೇಜವಾಬ್ದಾರನಾಗಿದ್ದಾಗ ಪರಿವಾರಗಳ ಹೊಣೆಗಾರಿಕೆ ಇಲ್ಲಿಯ ಮಹಿಳೆಯದ್ದೆಂಬುದು ಪ್ರಶಂಸನೀಯ. ಪ್ರತಿಯೊಂದು ಮನೆಯಲ್ಲಿ ಚಿಕ್ಕ ಗಾತ್ರದ ಮಗ್ಗದಲ್ಲಿ ಕುಳಿತು ನೇಯುತ್ತಾ ಕುಟುಂಬಕ್ಕೆ ಆಧಾರ ಸ್ತಂಭದಂತಿರುವ ಅರುಣಾಚಲದ ಮಹಿಳೆಯರ ಬಗ್ಗೆ ಅಭಿಮಾನ ಮೂಡುತ್ತದೆ.

ನಮ್ಮ ಪ್ರವಾಸ ಕಥನಕಾರರಿಗೆ ನಾವು ಅನುವು ಮಾಡಿಕೊಟ್ಟ ದೇಶೀಯ ರಾಜ್ಯಗಳ ಪ್ರವಾಸದ ಅನುಭವವು ಪ್ರಪಂಚದ ಪ್ರವಾಸಕ್ಕೆ ನಾಂದಿಯಾಗಲಿ, ಅವರು ನಮಗೆ ಬರೆದುಕೊಟ್ಟ ಪ್ರವಾಸ ಕಥನಗಳಿಗಾಗಿ ಪಟ್ಟ ಪರಿಶ್ರಮಗಳನ್ನು ನೆನೆಯುತ್ತಾ ಮತ್ತೊಮ್ಮೆ ಅಭಿನಂದಿಸುತ್ತೇನೆ.

ಹೀಗೆ ಕನ್ನಡದ ಓದುಗರಿಗೆ ಪ್ರವಾಸ ಕಥನದ ಗ್ರಂಥಗಳನ್ನು ನೀಡಿ ಅವರುಗಳು ಇಂಥ ಯಾತ್ರೆಗಳಿಗಾಗಿ ಹೊರಡುವಂಥ ಮನಸ್ಸು ಮಾಡಿ, ಪ್ರವಾಸ ಕೈಗೊಂಡು ತಮ್ಮ ಅನುಭವಗಳನ್ನು ಪುಸ್ತಕ ರೂಪದಲ್ಲಿ ತರುವಂತಾದರೆ, ಕನ್ನಡ ಸಾಹಿತ್ಯ ಭಂಡಾರಕ್ಕೆ ಹೀಗೆ ಹೆಚ್ಚು ಸಂಖ್ಯೆಯಲ್ಲಿ

ಪ್ರವಾಸ ಕಥನಗಳನ್ನು ಸೇರಿಸಿ ಶ್ರೀಮಂತಗೊಳಿಸುವುದಾದರೆ, ಎಷ್ಟು ಚೆನ್ನ ಎಂದು ನಾನು ಯೋಚಿಸುತ್ತೇನೆ.

ಸಾಹಿತ್ಯ ಅಕಾಡೆಮಿಯು ಆಯೋಜಿಸಿದ ಅನೇಕ ಹೊಸ ಹೊಸ ಯೋಜನೆಗಳಲ್ಲಿ ಪಾಲ್ಗೊಂಡರೆ ನಮ್ಮ ಪ್ರಯತ್ನಗಳು ಸಾರ್ಥಕವಾಗಬಲ್ಲವು ಎಂಬ ಆಶಯವನ್ನು ಪ್ರವಾಸ ಕಥನದ ಆರು ಪುಸ್ತಕ ಮಾಲಿಕೆಯನ್ನು ಪ್ರಕಟಿಸುವ ಸಂದರ್ಭದಲ್ಲಿ ಅಭಿವ್ಯಕ್ತಿಸಲು ತುಂಬ ಸಂತೋಷವೆನಿಸುತ್ತದೆ.

ಮಾಲತಿ ಪಟ್ಟಣಶೆಟ್ಟಿ
ಅಧ್ಯಕ್ಷರು


ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಎರಡನೇ ಮಹಡಿ,
ಜೆ.ಸಿ.ರಸ್ತೆ, ಬೆಂಗಳೂರು-560 002.

# ಪರಿವಿಡಿ


| | | |
|---|---|---|
| ಅಧ್ಯಕ್ಷರ ನುಡಿ | | iii |
| 1. | ನಾನು ಅರುಣಾಚಲ ಪ್ರದೇಶ | 1–19 |
| 2. | ನಡೆದಾಡುವ ಕನ್ನಡ ಎನ್‌ಸೈಕ್ಲೋಪೀಡಿಯ | 20–25 |
| 3. | ಧಾವಂತದಲ್ಲಿದೆ ಇಟ್ಟಿಗೆಯ ನಗರ | 26–34 |
| 4. | ಮುಖ್ಯಮಂತ್ರಿಯ ಪುಟಾಣಿ ತಂಗಿ | 35–39 |
| 5. | ಶಾಂತಿ, ಸುವ್ಯವಸ್ಥೆ ಕೊಟ್ಟವರು | 40–49 |
| 6. | ಜ಼ೀರೋ ಎಂದರೆ ಶೂನ್ಯವಲ್ಲ ಅಪತಾನಿ | 50–58 |
| 7. | ನಂಬಿಕೆಯೇ ಬದುಕು, ಬದುಕೇ ದೇವರು | 59–67 |
| 8. | ಮುಖವಾಡಕ್ಕೊಂದು ಹಬ್ಬ, ಹೆಜ್ಜೆಗೊಂದು ನೃತ್ಯ | 68–72 |
| 9. | ಗಂಗೆಯ ಶಿರದಲ್ಲಿ ಶಂಕರ | 73–78 |
| 10. | ಕೃಷ್ಣ, ರುಕ್ಮಿಣಿ, ಪಾರ್ವತಿ ಭೇಟಿಯಾದರು | 79–84 |
| 11. | ದೇಮಾಜಿಯಲ್ಲಿ ಸಮಾಧಿಯಾದವರು | 85–89 |
| 12. | ನಾಗದೇವ, ಭೀಷ್ಮಕ ಮತ್ತು ಪರಶುರಾಮ | 90–93 |
| 13. | ಅಚಾನಕ್ ಸಿಕ್ಕ ಕಾವಿಧಾರಿ | 94–99 |
| 14. | ವೈ.ಡಿ.ತೊಂಗ್ಚಿ ಎನ್ನುವ ಅನುಭವ | 100–111 |
| 15. | ಆರ್ಕಿಡ್ ಹೂವಿನಂಥಾ ಕನ್ನಡಿಗರು | 112–120 |
| 16. | ನೋವಿಲ್ಲ ನರಳುತಿದೆ | 121–125 |
| 17. | ಬೆಳಕಿನ ಪ್ರಾಣಕ್ಕೆ ದಾರಿ ತೋರಿದ ಬಿಕ್ಕುಣಿ | 126–137 |
| 18. | ಕಾಗದ ಮಾಡುವ ಗುಡಿ | 138–142 |
| 19. | ಅಡ್ಡಗಟ್ಟಿದ ನರಕಾಸುರ | 143–147 |
| 20. | ಗಂಗೆ ಏಕೆ ಹರಿಯುತ್ತೀಯೇ?! | 148–152 |
| 21. | ಹೇಗೆ ತೀರಿಸಲಿ ನಿಮ್ಮ ಋಣವಾ | 153–159 |

# 1. ನಾನು ಅರುಣಾಚಲ ಪ್ರದೇಶ

**ಭೂಗೋಳ**: ಈಶಾನ್ಯ ಭಾರತದ ತುಟ್ಟ ತುದಿಯಲ್ಲಿ, ಹಿಮಾಲಯದ ತಪ್ಪಲಲ್ಲಿ 27 ಡಿಗ್ರೀ ಅಕ್ಷಾಂಶ ಮತ್ತು 30 ಡಿಗ್ರಿ ರೇಖಾಂಶದಲ್ಲಿ ಸರಿ ಸುಮಾರು 83,573 ಚದರ ಕಿಲೋಮೀಟರ್ಗಳಷ್ಟು ಅಳತೆಯಲ್ಲಿ ಹರಡಿಕೊಂಡಿರುವ ಸುಂದರ ಹಸಿರು ನಾಡು. ಉತ್ತರದಲ್ಲಿ ಚೀನಾ ದೇಶದೊಡನೆ 1030 ಕಿಲೋಮೀಟರ್ಗಳಷ್ಟು, ಪೂರ್ವದಲ್ಲಿ ಮೇನ್ಮಾರ್ ಜೊತೆಗೆ 440 ಕಿಲೋಮೀಟರ್ಗಳಷ್ಟು, ಪಶ್ಚಿಮದಲ್ಲಿ ಭೂತಾನ್ ಜೊತೆಗೆ 160 ಕಿಲೋಮೀಟರ್ಗಳಷ್ಟು ಭೂ ಸರಹದ್ದನ್ನು ಹೊಂದಿರುವ ಈ ನಾಡು ತನ್ನ ದಕ್ಷಿಣ ದಿಕ್ಕಿನಿಂದ ಅಸ್ಸಾಂ ಹಾಗೂ ನಾಗಾಲ್ಯಾಂಡ್ ರಾಜ್ಯಗಳಿಂದ ಮಹಾನ್ ಭಾರತಕ್ಕೆ ಅಂಟಿಕೊಂಡಿದೆ. ಕುರುಚಲು, ನಿತ್ಯಹರಿದ್ವರ್ಣ ಮತ್ತು ಶೀತವಲಯದ ಕಾಡುಗಳನ್ನು ಹೊಂದಿರುವ ಈ ನಾಡನ್ನು ಪರ್ವತ ಪ್ರದೇಶ ಎಂದೇ ಗುರುತಿಸಲಾಗುತ್ತೆ. ಆಳವಾದ ಪ್ರಪಾತಗಳು, ಅಗಲವಾದ ಹುಲ್ಲುಗಾವಲುಗಳು, ಕಣ್ಣು ಹರಿದಷ್ಟೂ ಕಾಣಿಸುವ ಬೆಟ್ಟೇಣುಗಳು, ಸೂರ್ಯ ಕಿರಣಗಳನ್ನೇ ಬಿಂಬಿಸುತ್ತಾ ಫಳಫಳ ಹೊಳೆಯುವ ನದಿಗಳಿಂದ ಕಂಗೊಳಿಸುವ ಅರುಣಾಚಲ ಪ್ರದೇಶವು, ಮೊದಲಿಗೆ ನಾರ್ತ್ ಈಸ್ಟ್ರನ್




**ರಾಜಧಾನಿ ಇಟಾನಗರವನ್ನು ಪ್ರವೇಶಿಸಲು ಇರುವ ಮುಖ್ಯ ದ್ವಾರ**

ಫ್ರೊಂಟಿಯರ್ ಏಜೆನ್ಸಿಯ ಒಂದು ಭಾಗವೇ ಆಗಿದ್ದು, NEFA ಎಂಬುದಾಗಿ ಗುರುತಿಸಿಕೊಂಡಿತ್ತು. 'ಮುಂಜಾವು ಹೊತ್ತಿಸಿದ ಪರ್ವತಗಳು' ಎನ್ನುವ ಹೆಸರನ್ನೂ ಹೊತ್ತು ನಿಂತಿದೆ ಈ ನಾಡು. 1987 ರಲ್ಲಿ ಶಾಲೆಯೊಂದರಲ್ಲಿ ಅಧ್ಯಾಪಕರಾಗಿದ್ದ ದಾಸ್ ಎನ್ನುವವರು ಭಾರತದಲ್ಲಿ ಸೂರ್ಯನು ಮೊದಲು ಉದಯಿಸುವ ನಾಡು ಇದಾದ್ದರಿಂದ ಇದನ್ನು 'ಅರುಣನ ಆಂಚಲ್' (ಸೆರಗು) ಎನ್ನುವುದಾಗಿ ಕರೆಯಲು ಆರಂಭಿಸಲಾಗಿ ಅಂದಿನಿಂದ ಜನಮಾನಸದಲ್ಲಿ ಮತ್ತು ಸರ್ಕಾರಿ ದಾಖಲೆಗಳಲ್ಲಿ ಈ ರಾಜ್ಯವನ್ನು ಅರುಣಾಚಲ ಪ್ರದೇಶ ಎನ್ನುವ ಹೆಸರಿನಿಂದ ಗುರುತಿಸಲಾಯಿತು. ಸಾಯಂಕಾಲ 5 ಗಂಟೆಗೆಲ್ಲಾ ಕತ್ತಲು ಆವರಿಸಿಕೊಂಡು ಬೆಳಗ್ಗೆ 4.30ಕ್ಕೆಲ್ಲಾ ಬೆಳ್ಳನೆಯ ಬೆಳಗು ನಗುತ್ತಿರುತ್ತದೆ ಇಲ್ಲಿ.

**ಅಳತೆ ಮತ್ತು ನದಿಗಳು** : ಅಳತೆಯಲ್ಲಿ ಮಣಿಪುರ, ಮಿಝೋರಾಂ ಮತ್ತು ಮೇಘಾಲಯ ರಾಜ್ಯಗಳಿಗಿಂತ ನಾಲ್ಕು ಪಟ್ಟು ದೊಡ್ಡದಾಗಿದ್ದು, ಅಸ್ಸಾಂಗಿಂತ 500 ಚದರ ಕಿಲೋಮೀಟರ್ಗಳಷ್ಟು ಅಗಲವಿದ್ದು, ಸ್ವಿಟ್ಜರ್ಲ್ಯಾಂಡ್, ಬೆಲ್ಜಿಯಂ ಮತ್ತು ಡೆನ್ಮಾರ್ಕ್ ದೇಶಗಳಿಗಿಂತ ಎರಡು ಪಟ್ಟು ದೊಡ್ಡದಾಗಿರುವ ರಾಜ್ಯವಾಗಿದೆ ಇದು. ಬೇಸಿಗೆ, ಮಳೆಗಾಲ ಮತ್ತು ಚಳಿಗಾಲ ಎಲ್ಲವೂ ಇಲ್ಲಿ ಉಗ್ರವಾಗಿಯೂ ಮತ್ತು ಹೆಚ್ಚಿನ ಸಮಯವೂ ಇರುತ್ತವೆ. ಬ್ರಹ್ಮಪುತ್ರ, ಕಮೆಂಗ್, ಸಿಯಾಂಗ್, ಲೋಹಿತ್, ಸುಬಾನ್ಸಿರಿ ಮತ್ತು ತಿರಾಪ್ ಎನ್ನುವ ಮುಖ್ಯ ನದಿಗಳು ವಿಶಾಲವಾಗಿ, ಸ್ವಚ್ಛವಾಗಿ ಹರಿಯುವ ಇಲ್ಲಿಯ ನೈಸರ್ಗಿಕ ಸಂಪತ್ತುಗಳನ್ನು ಇನ್ನೂ ಗರಿಷ್ಟ ಮಟ್ಟದಲ್ಲಿ ಬಳಸಿಕೊಳ್ಳಲಾಗುತ್ತಿಲ್ಲ ಎನ್ನುವುದು ಅಲ್ಲಿನ ಅಭಿವೃದ್ಧಿಯನ್ನು ಕುಂಠಿತಗೊಳಿಸಿರುವ ಅಂಶಗಳಲ್ಲಿ ಒಂದಾಗಿದೆ.

**ಜೀವ ವೈವಿಧ್ಯ** : 85 ಬಗೆಯ ಸಸ್ತನಿಗಳೊಡನೆ, 525 ಪ್ರಭೇದಗಳ ಆರ್ಕಿಡ್ ಹೂವುಗಳು ಇಲ್ಲಿವೆ. ಏಷ್ಯಾ ಖಂಡದಲ್ಲಿ ದೊರೆಯುವ 115 ಬಗೆಯ ಬೊಂಬು (ಬಿದಿರು) ಮರಗಳಲ್ಲಿ 45 ಬಗೆಯ ಮರಗಳು ಇಲ್ಲಿ ಸಿಗುತ್ತವೆ. 5000 ಪ್ರಬೇಧಗಳಷ್ಟು ವಿವಿಧ ಗಿಡ ಮರಗಳು ಇಲ್ಲಿದ್ದು, ಏಷ್ಯಾದಲ್ಲಿಯೇ ಅತೀ ಹೆಚ್ಚು ಔಷಧೀಯ ಗಿಡಮೂಲಿಕೆಗಳಿಗೆ ತವರು ನಾಡು ಎಂದು ಪ್ರಸಿದ್ಧಿ ಪಡೆದಿದೆ. ವರ್ಷಕ್ಕೆ ಸರಾಸರಿ 800 ರಿಂದ 1000 ಮಿಲಿಮೀಟರ್ಗಳಷ್ಟು ಮಳೆ ಕಾಣುವ ಈ ನಾಡು ವಿಶೇಷವಾದ ಆರ್ಕಿಡ್‌ಗಳು, ಹೂಬಳ್ಳಿಗಳು ಮತ್ತು

ಚಿಟ್ಟೆಗಳೊಂದಿಗೆ ಸುಂದರ ಕೀಟ ರಾಶಿಗೆ ಆಶ್ರಯ ಕೊಟ್ಟಿದೆ. ವೈವಿಧ್ಯಮಯವಾದ ಸರಿಸೃಪಗಳನ್ನು ಇಲ್ಲಿ ನೋಡಬಹುದು. ಪಕ್ಷಿ ಪ್ರಿಯರ ಕಾಶಿ ಎನಿಸಿಕೊಂಡಿರುವ ಇಲ್ಲಿ  ಚೀನ ದೇಶ ಮತ್ತು ಇತರೆ ಪ್ರದೇಶಗಳಿಂದ ವಲಸೆ ಬರುವ 425 ಪಕ್ಷಿ ಪ್ರಬೇಧಗಳು ಕಾಣಲು ಸಿಗುತ್ತವೆ. 2003 ರಿಂದೀಚೆಗೆ ಅಭಿವೃದ್ಧಿಪಡಿಸಲಾಗುತ್ತಿರುವ ಇಲ್ಲಿನ ಪಕ್ಷಿಧಾಮಗಳಿಗೆ ಅಧ್ಯಯನದ ಉದ್ದೇಶದಿಂದ ಬರುತ್ತಿರುವ ವಿದೇಶಿಯರ ಸಂಖ್ಯೆ ಹೆಚ್ಚುತ್ತಲೇ ಇದೆ.

**ಮಿಥುನ (ಮಿಥುನ್)** : ಈ ಹೆಸರು ಕೇಳಿದೊಡನೆ ಇದೊಂದು ಪ್ರಾಣಿ ಎನ್ನುವ ಕಿಂಚಿತ್ ಅನುಮಾನವೂ ಯಾರಿಗೂ ಬರಲಾರದು. ಹೌದು, ಹಸುವಿನಷ್ಟೇ ಮುಗ್ಧಮುಖವುಳ್ಳ ಇದು ನೋಡಲು ಹಸುವಿನಂತೆಯೇ ಇರುವ ಪ್ರಾಣಿ. ಆದರೆ ಹಸು ಅಲ್ಲ. ಅರುಣಾಚಲ ಪ್ರದೇಶದಲ್ಲಿ ಮಾತ್ರ ಕಂಡುಬರುವ ಇದನ್ನು 'ಪ್ರಾಣಿ'



**ಹಸು ಮತ್ತು ಎಮ್ಮೆಯ ಸಂಯೋಜಿತ ಮಿಥುನ್ ಎನ್ನುವ ಪ್ರಾಣಿ**

ಕಂದುಬಣ್ಣಗಳ ವಿನ್ಯಾಸವನ್ನು ಮೈಭರ್ತಿಹೊಂದಿರುವ ಈ ಹಸುವು, ಹಸು ಹಾಗೂ ಗೂಳಿಯ ಸಂಯೋಜನೆಯಿಂದಾಗಿ ಹುಟ್ಟಿದ ಪ್ರಾಣಿಯಾಗಿದೆ. ಸಾಧಾರಣವಾಗಿ ಒಂದು ದಷ್ಟಪುಷ್ಟ ಎಮ್ಮೆಯ ಗಾತ್ರವಿರುತ್ತದೆ.  ಪ್ರಾಣಿಶಾಸ್ತ್ರ

ವಿಜ್ಞಾನದಲ್ಲಿ ಇದನ್ನು ಬಾಸ್ ಫ್ರಂಟಾಲಿಸ್ (Bos frontalis) ಎಂದು ಗುರುತಿಸಲಾಗಿದೆ. ಇದು ಕಾಡು ಪ್ರಾಣಿಯೂ ಅಲ್ಲ ಸಾಕುಪ್ರಾಣಿಯೋ ಅಲ್ಲ ಎಂದರೆ ಅಚ್ಚರಿಯಾದೀತು. ಸ್ಥಳೀಯರು ನಂಬಿರುವ ಪುರಾಣದ ಕಥೆಯಂತೆ ಆಕಾಶ ಮತ್ತು ಭೂಮಿಯ ಸಮಾಗಮದಲ್ಲಿ ಮೊದಲು ಹುಟ್ಟಿದ ಜೀವಿಯೇ ಈ ಮಿಥುನ್. ಒಂದೊಮ್ಮೆ ಭೂಮಿಯು ನೀರಿನಲ್ಲಿ ಮುಳುಗಿ ಹೋಗಿದ್ದಾಗ ಇದೇ ಮಿಥುನ್ ತನ್ನ ಕೊಂಬಿನಿಂದ ನೀರನ್ನು ಸೀಳಿ 'ಎರೆ' ಎನ್ನುವಬಿದಿರನ್ನು ಚಿಗುರಿಸಿ ಭೂಮಿಯ ಮೇಲೆ ಮತ್ತೆ ಜೀವರಾಶಿಯನ್ನು ಸ್ಥಾಪಿಸಿಕೊಟ್ಟಿದ್ದು ಎನ್ನುತ್ತಾರೆ. ಒಂದು ಮಿಥುನ್‌ಗೆ 2 ರಿಂದ 3 ಲಕ್ಷ ರೂಪಾಯಿಗಳ ಖರೀದಿ ಬೆಲೆ ಇದೆ. ಇವುಗಳನ್ನು ದೇಶದ ಇತರೆ ಭಾಗದ ಜನರಿಗಾಗಲೀ, ವಿದೇಶಿಯರಿಗಾಗಲೀ ಮಾರುವುದನ್ನು ಕಾನೂನಿನಲ್ಲಿ ನಿಷೇಧಿಸಲಾಗಿದೆ. ಬುಡಕಟ್ಟು ಕುಟುಂಬಗಳು ಇವುಗಳ ಒಡೆಯರಾದರೂ ಇವುಗಳನ್ನು ಮನೆಗಳಲ್ಲಿ ಹಸುಗಳನ್ನು ಸಾಕುವಂತೆ ಸಾಕುವುದಿಲ್ಲ. ಬದಲಿಗೆ ಕಾಡಿನಲ್ಲಿಯೇ ಇವುಗಳ ವಾಸ್ತವ್ಯ ಮತ್ತು ಪೋಷಣೆ. ಹಬ್ಬ ಹರಿದಿನಗಳಲ್ಲಿ ಮಾಲೀಕರು ಕಾಡಿನೊಳಗೆ ಹೋಗಿ ಹೊರಡಿಸುವ ವಿಚಿತ್ರವಾದ ಶಬ್ದವನ್ನು ಗುರುತಿಸಿಯೇ ಅವುಗಳು ತಮ್ಮ ತಮ್ಮ ಒಡೆಯರ ಬಳಿ ಬಂದು ನಿಲ್ಲುವುದು ಪ್ರಕೃತಿಯ ಅದ್ಭುತಗಳಲ್ಲಿ ಒಂದು. ಮೇಲ್ಮಧ್ಯಮವರ್ಗ ಮತ್ತು ಶ್ರೀಮಂತ ಕುಟುಂಬಗಳು 25 ರಿಂದ 40 ಮಿಥುನ್‌ಗಳನ್ನು ಹೊಂದಿದ್ದರೆ ಬಡವರು ಕನಿಷ್ಠ 3ರಿಂದ 4 ಮಿಥುನ್‌ಗಳನ್ನು ಹೊಂದಿರುತ್ತಾರೆ. ಹಬ್ಬ ಮತ್ತು ಜಾತ್ರೆಯ ಸಮಯದಲ್ಲಿ ಇವುಗಳನ್ನು ಬಲಿಯನ್ನಾಗಿಸಿ ಮಾಂಸವನ್ನು ತಿನ್ನುತ್ತಾರೆ. ಮಿಥುನ್ ಒಡೆಯರಿಲ್ಲದ ಮನೆಯೇ ಇಲ್ಲ ಮತ್ತು ಅದನ್ನು ತಿನ್ನದ ಜನರೇ ಇಲ್ಲ. ಮದುವೆಯ ಸಮಯದಲ್ಲಿ, ಟಿಬೇಟ್ ಜನಗಳ ಪರಂಪರೆಯಂತೆ 'ತದುಕ್' ಎನ್ನುವ ಬೆಲೆ ಬಾಳುವ ಕಲ್ಲು (ಹರಳು) ಮತ್ತು ಮಿಥುನ್ ಅನ್ನು 'ವಧುದಕ್ಷಿಣೆ'ಯಾಗಿ ವಿನಿಮಯ ಮಾಡಿಕೊಳ್ಳಲಾಗುತ್ತದೆ. ಯಾರು ಹೆಚ್ಚಿನ ಸಂಖ್ಯೆಯ ಮಿಥುನ್‌ಗಳ ಒಡೆಯರಾಗಿರುತ್ತಾರೋ ಹುಡುಗಿಯರು ಅವರನ್ನು ಹೆಚ್ಚು ಇಷ್ಟಪಡುತ್ತಾರೆ ಎನ್ನುವ ನಂಬಿಕೆ ಇದೆ. ಅಪರೂಪಕ್ಕೆ ಆಗುವ ವಿವಾಹ ವಿಚ್ಛೇದನಗಳಲ್ಲಿ ವಧುದಕ್ಷಿಣೆಯಾಗಿ ನೀಡಲಾಗಿದ್ದ ಮಿಥುನ್‌ಗಳನ್ನು ಗಂಡಿನ ಮನೆಯವರು ವಾಪಸ್ಸು ಪಡೆಯುತ್ತಾರೆ.

**ಪ್ರಾಂತ್ಯಗಳು** : ಇಟಾನಗರವು ಅರುಣಾಚಲ ಪ್ರದೇಶದ ರಾಜಧಾನಿ. ಇಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತವಿದೆ. ಈ ಚಿಕ್ಕ ರಾಜ್ಯವನ್ನು ಆಡಳಿತದ ದೃಷ್ಟಿಯಿಂದ ಮತ್ತು ನಾಗರಿಕ ಸೌಲಭ್ಯಗಳ ಯೋಜನೆಯ ಉದ್ದೇಶದಿಂದ 6 ನೈಸರ್ಗಿಕ ಪ್ರಾಂತ್ಯಗಳನ್ನಾಗಿ, ಅವುಗಳನ್ನು 15 ಪುಟ್ಟಪುಟ್ಟ ಜಿಲ್ಲೆಗಳನ್ನಾಗಿ ವಿಂಗಡಿಸಲಾಗಿದೆ. ಆಯಾ ಜಾಗಗಳಲ್ಲಿ ಇರಬಹುದಾದ ಪ್ರಪಾತ, ನದಿ, ಬೆಟ್ಟಗುಡ್ಡಗಳಿಂದ ಮತ್ತು ಹವಾಮಾನದಿಂದ ಅರ್ಥಾತ್ ಅವುಗಳ ಭೌಗೋಳಿಕ ವಿಶೇಷತೆಯಿಂದಲೇ ಅವುಗಳನ್ನು ಗುರುತಿಸಲಾಗುತ್ತದೆ. ಒಂದೇ ಹೆಸರನ್ನು ಎರಡು ಜಾಗಗಳಿಗೆ ಇಟ್ಟು ಈಸ್ಟ್ ಮತ್ತು ವೆಸ್ಟ್ ಎಂತಲೋ ಅಥವಾ ಅಪ್ಪರ್ ಮತ್ತು ಲೋಯರ್ ಎಂತಲೋ ಅವುಗಳ ಹೆಸರುಗಳ ಹಿಂದೆ ಸೇರಿಸುತ್ತಾ ಜಾಗಗಳನ್ನು ಬೇರ್ಪಡಿಸಲಾಗಿದೆ. ಉದಾ : ಅಪ್ಪರ್ ಸುಬಾನ್ಸಿರಿ, ಲೋಯರ್ ಸುಬಾನ್ಸಿರಿ, ಈಸ್ಟ್ ಕಮೆಂಗ್, ವೆಸ್ಟ್ ಕಮೆಂಗ್ ಇತ್ಯಾದಿಗಳಾಗಿ. ಈ ರಾಜ್ಯದಲ್ಲಿ ಮೊದಲನೆಯ ಬಾರಿಗೆ ಜನಗಣತಿಯು 1961 ರಲ್ಲಿ ಆರಂಭವಾಯಿತು. ಅಂದಿನಿಂದ ಈ ದಿನದವರೆಗೂ ಶೇಕಡ 3.26% ಪ್ರಮಾಣದಲ್ಲಿ ಜನಸಂಖ್ಯೆಯು ಬೆಳೆದಿದೆ. 2001 ರ ಸಮೀಕ್ಷೆಯ ಪ್ರಕಾರ 1,09,7968 ರಷ್ಟು ಜನಸಂಖ್ಯೆಯನ್ನು ಹೊಂದಿರುವ ಈ ರಾಜ್ಯದ ಅಕ್ಷರ ಜ್ಞಾನದ ಪ್ರಮಾಣ ಶೇಕಡಾ 44.24%. 1000 ಗಂಡಸರಿಗೆ 998 ಹೆಂಗಸರ ಅನುಪಾತವಿದೆ. ಈ ರಾಜ್ಯದ ಯಾವುದೇ ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ನೇರವಾಗಿ ಹೋಗಲು ಸಾಧ್ಯವೇ ಇಲ್ಲ. ಅಸ್ಸಾಂ ಅನ್ನು ಪ್ರವೇಶಿಸಿಯೇ ಮತ್ತೆ ಈ ರಾಜ್ಯವನ್ನು ಪ್ರವೇಶಿಸಬೇಕು. ಪೂರ್ವದ ಭಾಗಗಳನ್ನು ಪಶ್ಚಿಮದ ಭಾಗಗಳಿಂದ ಬ್ರಹ್ಮಪುತ್ರ ನದಿಯು ಬೇರ್ಪಡಿಸುತ್ತದೆ ಹಾಗಾಗಿ ನೀರಿನಲ್ಲಿ ಫೆರ್ರಿಗಳ ಮೂಲಕ ಪ್ರಯಾಣ ಮಾಡುವುದು ಅನಿವಾರ್ಯ ಮತ್ತು ಈ ನದಿಯ 99 ಭಾಗ ಸರಹದ್ದು ಅಸ್ಸಾಂನ ಆಡಳಿತಕ್ಕೆ ಬರುವುದರಿಂದ ಎಲ್ಲಿಯೇ ಹೋಗಬೇಕಾದರೂ ಅಸ್ಸಾಂಅನ್ನು ಪ್ರವೇಶಿಸಿಯೇ ಮತ್ತೊಮ್ಮೆ ಅರುಣಾಚಲವನ್ನು ಹೊಕ್ಕಬೇಕಿರುತ್ತದೆ. ನೀರಿನ ಪ್ರಯಾಣ ಒಲ್ಲೆ ಎನ್ನುವವರಿಗೆ ಅತೀ ಕಡಿದಾದ, ಕೆಟ್ಟ ಸ್ಥಿತಿಯಲ್ಲಿರುವ, ದೂರವೂ ಆದ, ಕಾಡು ಹಾದಿಯ, ಬಳಸು ದಾರಿಯೊಂದೇ ಆಯ್ಕೆ ಆಗಿರುತ್ತದೆ. ಇಂತಹ ಆಯ್ಕೆಯಲ್ಲಿ ಬೋಡೋ ಭಯೋತ್ಪಾದಕರ ಹಾವಳಿಯ ಭಯ ಇದ್ದೇ ಇರುತ್ತದೆ. ಪ್ರವಾಸದ ದೃಷ್ಟಿಯಿಂದ ಅರುಣಾಚಲ ಪ್ರದೇಶವನ್ನು ಹನ್ನೊಂದು ಪ್ರವಾಸೀ ವಿಭಾಗವಾಗಿ

(ಸರ್ಕ್ಯೂಟ್) ವಿಂಗಡಿಸಲಾಗಿದೆ. ಜನರ ಜೀವ ಶೈಲಿ, ಸಂಸ್ಕೃತಿ ಮತ್ತು ಭೌಗೋಳಿಕ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು 83,500 ಚದರ ಕಿಲೋಮೀಟರ್‌ಗಳಷ್ಟು ಜಾಗವನ್ನು ಹೀಗೆ ವಿಂಗಡಿಸಲಾಗಿದೆ. 1972 ರವರೆಗೂ ಈ ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯೇ ಇರಲಿಲ್ಲ. ಅಲ್ಲಿಯ ತನಕ ಎಲ್ಲಾ ವ್ಯಾಜ್ಯಗಳನ್ನೂ ಪಂಚಾಯಿತಿ ವಿಧಾನದಲ್ಲಿ ಬಗೆಹರಿಸಲಾಗುತ್ತಿತ್ತು.

**ಹೋಗುವ ದಾರಿ** : ದೇಶದ ಯಾವುದೇ ಸ್ಥಳದಿಂದ ಇಲ್ಲಿಗೆ ನೇರವಾಗಿ ಹೋಗಲಾಗುವುದಿಲ್ಲ. ಅಸ್ಸಾಂನ ಗೌಹಾಟಿಯ ಮೂಲಕವೋ ಇಲ್ಲವೇ ಕೋಲ್ಕತ್ತ ಮೂಲಕವೋ ಹೋಗಬೇಕಷ್ಟೆ. ಈ ಎರಡು ಸ್ಥಳಗಳಿಂದ ಬಸ್ ವ್ಯವಸ್ಥೆ ಇದೆ. ಆದರೆ ರಸ್ತೆಗಳ ಪಾಡಂತೂ ಪದಗಳಲ್ಲಿ ಹೇಳಲು ಸಾಧ್ಯವಿಲ್ಲ. ಎರಡೂ ಜಾಗಗಳಿಂದ ಹತ್ತರಿಂದ ಹನ್ನೆರಡು ಗಂಟೆಗಳಷ್ಟು ರಸ್ತೆ ಸವೆಸಬೇಕು. ಹೆಲಿಕ್ಯಾಪ್ಟರ್ ಸೌಲಭ್ಯವೂ ಇದೆ. ಗೌಹಾಟಿ ಹಾಗು ಕೋಲ್ಕತ್ತದಿಂದ ಅರುಣಾಚಲ ಪ್ರದೇಶದ ಇಟಾನಗರ ಮತ್ತು ತೇಜ್ಪುರ್ ನಗರಗಳಿಗೆ ಸುಮಾರು 1 ಗಂಟೆ ನಲವತ್ತು ನಿಮಿಷಗಳ ಪ್ರಯಾಣಾವಧಿಯಾಗಿರುತ್ತದೆ. ಹವಾಮಾನದ ಮರ್ಜಿಯಲ್ಲಿ ಹೆಲಿಕ್ಯಾಪ್ಟರ್ಗಳು ಚಾಲನೆಯಾಗುವುದರಿಂದ ಅವುಗಳನ್ನು ನೆಚ್ಚಲಾಗದು. ಒಂದು ವಾರದ ಮೊದಲೇ ಬುಕ್ಕಿಂಗ್ ಆರಂಭವಾಗಿರುತ್ತದೆ. ತಲಾ 28 ಸೀಟುಗಳ ಎರಡು ಹೆಲಿಕ್ಯಾಪ್ಟರ್ಗಳು ನಿತ್ಯವೂ ಸೇವೆ ಒದಗಿಸುತ್ತವೆ. ಕಾಯ್ದಿರಿಸಿದ ಸೀಟುಗಳು ಮಾತ್ರ ಪ್ರತೀ ಪ್ರಯಾಣಕ್ಕೂ ಐವತ್ತು ಅರವತ್ತಕ್ಕೂ ಮೀರಿರುತ್ತದೆ. ಡಿಮ್ಯಾಂಡ್ ಹೆಚ್ಚಿದಂತೆಲ್ಲಾ ಒಂದು ಪ್ರಯಾಣದ ಟಿಕೆಟ್ ದರ 3000 ರೂಪಾಯಿಗಳಿಂದ 4200 ರೂಪಾಯಿಗಳವರೆಗೂ ಆಗುತ್ತದೆ. ಸರ್ಕಾರಿ ಮತ್ತು ಖಾಸಗಿ ಬಸ್ಸುಗಳು, ಟೆಂಪೋಗಳು ಹಾಗು ಟ್ಯಾಕ್ಸಿಗಳು ಕೂಡ ಸರಿ ಸುಮಾರು ಇದೇ ದರವನ್ನು ನಿಗದಿಯಾಗಿಟ್ಟುಕೊಂಡಿವೆ. ಆದರೆ ರಸ್ತೆ ಪ್ರಯಾಣವು ತೆಗೆದುಕೊಳ್ಳುವ ಸಮಯ ಮತ್ತು ನೀಡುವ ಆಯಾಸಕ್ಕೆ ಜನ ಬೆಚ್ಚುತ್ತಾರೆ. ಕಳೆದ ವರ್ಷ ಗೌಹಾಟಿಯಿಂದ ಇಟಾನಗರಕ್ಕೆ 9 ಬೋಗಿಗಳ ರೈಲು ಸೇವೆಯನ್ನು ಉದ್ಘಾಟಿಸಲಾಗಿದೆಯಷ್ಟೆ. ಆದರೆ ಸೇವೆ ಇನ್ನೂ ಆರಂಭವಾಗಿಲ್ಲ. ರಾಜ್ಯದ ಒಳಗೂ ಮುಖ್ಯ ನಗರಗಳ ಒಳ ಭಾಗದಲ್ಲಿ ಸರ್ಕಾರಿ ಸಂಚಾರಿ ವ್ಯವಸ್ಥೆಯಾಗಿ ಬಸ್‌ಗಳು ಓಡಾಡುತ್ತವೆ. ಅದರೆ ಅವುಗಳ ಗುಣಮಟ್ಟ ಅಷ್ಟೇನು

ಇಲ್ಲದ್ದರಿಂದ ಜೊತೆಗೆ ಗ್ರಾಮಾಂತರ ಪ್ರದೇಶಗಳು ಮತ್ತು ತೀರಾ ರಸ್ತೆಯೇ ಇಲ್ಲದ ಜಾಗಗಳಲ್ಲಿ ಈ ಬಸ್ಸುಗಳು ಇಲ್ಲವಾದ್ದರಿಂದ ಅಲ್ಲಿನ ಜನ ಖಾಸಗಿ ವಾಹನಗಳನ್ನು, ಟೆಂಪೋ, ಆಟೋಗಳನ್ನು ಕಾಲ್ನಡಿಗೆಯನ್ನು ಅವಲಂಬಿಸಿದ್ದಾರೆ. ಖಾಸಗಿ ಸಂಚಾರಿ ವಾಹನಗಳ ದರವು ಅತೀ ಹೆಚ್ಚಿನದ್ದಾಗಿದೆ.

**ವೀಸಾ ಪ್ರಕ್ರಿಯೆ** : ಅತೀ ದೊಡ್ಡ ಪ್ರಜಾಪ್ರಭುತ್ವ ಎನಿಸಿರುವ ನಮ್ಮ ದೇಶದ ಪ್ರತೀ ನಾಗರಿಕನಿಗೂ ಎಲ್ಲಿಂದ ಎಲ್ಲಿಗೂ ಪಯಣಿಸುವ, ಎಲ್ಲಿಯೂ ವಾಸ ಮಾಡುವ ಹಕ್ಕನ್ನು ಸಂವಿಧಾನವೇ ನೀಡಿದೆ ನಿಜ. ಆದರೆ ಇತರೆ ಕೆಲವು ಈಶಾನ್ಯ ರಾಜ್ಯಗಳಗೆ ಇರುವಂತೆ ಅರುಣಾಚಲ ಪ್ರದೇಶಕ್ಕೆ ಹೋಗಲೂ ಸಹ ಕೆಲವು ನಿರ್ಬಂಧಗಳಿವೆ. ಪ್ರವಾಸಿಯಾಗಿ ಹೋಗಲು ಬಯಸಿದರೆ ನಾವು ಯಾವ ದೇಶದ ಪ್ರಜೆ ಎನ್ನುವ ಗುರುತಿನ ದಾಖಲೆ ಅಥವಾ ಪಾಸ್ಪೋರ್ಟ್‌ಅನ್ನು ನಿಗದಿತ ಶುಲ್ಕದೊಂದಿಗೆ ನೀಡಿ ಅರುಣಾಚಲ ಪ್ರದೇಶ ರಾಜ್ಯದ ಕಮಿಷನರ್ ಕಚೇರಿಗಳಿಂದ ಅಪ್ಪಣೆ ಪಡೆದುಕೊಂಡಿರಬೇಕಿರುತ್ತೆ. ಭಾರತೀಯರಿಗೆ ಕೊಡುವ ಈ ದಾಖಲೆ ಪತ್ರಕ್ಕೆ ಇನ್ನರ್ ಲೈನ್ ಪರ್ಮಿಟ್ ಎನ್ನಲಾಗುತ್ತದೆ. ವಿದೇಶಿಯರಿಗೆ ಕೊಡುವುದಕ್ಕೆ ಪ್ರೊಟೆಕ್ಟೆಡ್ ಏರಿಯಾ ಪರ್ಮಿಟ್ ಎನ್ನಲಾಗುತ್ತದೆ. ವ್ಯಾಪಾರ, ವಹಿವಾಟು ಮಾಡುವ ಇಚ್ಛೆ ಇರುವವರು ಬೇರೆಯದೇ ತೆರನಾದ ಪರ್ಮಿಷನ್ ತೆಗೆದುಕೊಳ್ಳಬೇಕಿರುತ್ತದೆ. ಹೀಗೆ ವೀಸಾಕ್ಕೆ ಪರ್ಯಾಯ ದಾಖಲೆಯನ್ನು ಕೊಡುವ ಕಚೇರಿಗಳು ದೆಹಲಿ, ಗೌಹಾಟಿ, ಕೋಲ್ಕತ್ತ, ಶಿಲ್ಲಾಂಗ್ ಮತ್ತು ಇತರೆ ಕೆಲವು ಸ್ಥಳಗಳಲ್ಲಿಯೂ ಇವೆ. ಇಂತಿಷ್ಟೇ ದಿನಗಳಿಗೆಂದು ನಿರ್ಧಾರ ಮಾಡಿ ವೀಸಾ ಮಾದರಿಯ ದಾಖಲೆಯನ್ನು ಕೊಡಲಾಗುತ್ತದೆ. ಅದನ್ನು ಇಟ್ಟುಕೊಂಡೇ ಊರು ಸುತ್ತಬೇಕಿರುತ್ತೆ. ಏಕೆಂದರೆ ಅದನ್ನು ಪರಿಶೀಲನೆ ಮಾಡುವ ಹಕ್ಕು ಯಾವ ಸಮಯದಲ್ಲೂ ಯಾವ ಅಧಿಕಾರಿಗೂ ನೀಡಲಾಗಿದೆ. ಸದಾ ಕಾಲವೂ ಚೀನಿಯರ ದಾಳಿಗೆ ಹೆದರಿ ತತ್ತರಿಸುತ್ತಿರುವ ನಾಡು ಇದು ಎಂಬುದಾಗಿ ಪುಸ್ತಕಗಳಲ್ಲಿ ಓದಿ ಬಲ್ಲೆವು ನಾವು. ಅದು ರಾಜಕೀಯವಾಗಿ ಸತ್ಯವೇ ಇರಬಹುದು. ಅದಕ್ಕಾಗಿಯೇ ಇಲ್ಲಿ ಪ್ರವೇಶಕ್ಕೆ ಅಷ್ಟೊಂದು ಕಟ್ಟುಪಾಡು. ಆದರೆ ಇಲ್ಲಿನ ಸಾಮಾನ್ಯ ಜನರು ವರ್ಗಭೇದವಿಲ್ಲದೆ ಯಾವ ದಾಳಿಯ ಬಗ್ಗೆಯೂ

ನಿದ್ರೆ ಕೆಡಿಸಿಕೊಳ್ಳದೆ ನೆಮ್ಮದಿಯಾಗಿದ್ದಾರೆ. ಶ್ರಮಿಕ ವರ್ಗದ ಜನರಂತೂ ಜಗತ್ತಿನ ಇನ್ನಾ್ಯವುದೇ ಶ್ರಮಿಕ ವರ್ಗದವರಂತೆ ಯಾವ ಆಗುಹೋಗುಗಳಗೂ ತೆರೆದುಕೊಳ್ಳದೆ ಹೊಟ್ಟೆಹೊರೆದುಕೊಳ್ಳುತ್ತಿದ್ದಾರೆ. ಅವರಿಗೆ ಚೀನಾ ದೇಶದ ಹೆಸರೂ ತಿಳದಿಲ್ಲ. ಭಾರತೀಯ ಎನ್ನುವ ಅನಾವಶ್ಯಕ ಅಭಿಮಾನವೂ ಇಲ್ಲ. ತಾವು ತಮ್ಮ ದೈನಂದಿನ ಪಾಡು ಎನ್ನುವುದಷ್ಟೇ ಅವರುಗಳ ಬದುಕು.

**ಜನ, ಜೀವನ ಶೈಲಿ**: ಭಾರತದಲ್ಲೇ ಹುಟ್ಟಿಯೂ ಇಲ್ಲಿಂದ ವಲಸೆ ಹೋಗಿದ್ದ ಬೌದ್ಧ ಧರ್ಮವು ಭಾರತಕ್ಕೆ ಮರುಪ್ರವೇಶ ಮಾಡಿದ ಮೊದಲ ನಾಡು (ಸೆಲಾ ಪಾಸ್ ಬಳಯಿರುವ ತವಾಂಗ್ ಪ್ರದೇಶ) ಎನ್ನುವ ಹೆಮ್ಮೆ ಹೊಂದಿರುವ ಇಲ್ಲಿ 26 ಕ್ಕೂ ಹೆಚ್ಚಿನ ಮುಖ್ಯ ಬುಡಕಟ್ಟು ಜನಾಂಗದವರಿದ್ದಾರೆ. ಮತ್ತು ಅವರುಗಳಲ್ಲೇ ಹತ್ತಾರು ಶಾಖೆಗಳ ಪಂಗಡದವರೂ ಇದ್ದಾರೆ. (ದೇಶದ ಇತರೆ ಭಾಗಗಳಲ್ಲಿ ಕಂಡುಬರುವ ಜಾತಿಗಳು ಹಾಗೂ ಉಪಜಾತಿಗಳಂತೆ.) ಒಟ್ಟಾರೆಯಾಗಿ ಇವರುಗಳನ್ನು ಪರಿಶಿಷ್ಟ ಪಂಗಡದವರೆಂದು ಗುರುತಿಸಿ ಸಂವಿಧಾನಾತ್ಮಕ ಮಾನ್ಯತೆ ನೀಡಲಾಗಿದೆ. ಅವರಲ್ಲಿ ತೊಂಭತ್ತೊಂಭತ್ತು ಭಾಗ ಜನರು ಸೂರ್ಯಾರಾಧಕರು. ಪ್ರಕೃತಿಯನ್ನು ದೇವರೆಂದು ನಂಬುವವರು. ಆದರೆ ಎರಡು ವರ್ಷದಿಂದೀಚೆಗೆ ಚಾಂಗ್‌ಲಾಂಗ್ ಜಿಲ್ಲೆಯ ರಾಂಗ್ ಫ್ರಾ ಎನ್ನುವ ಸ್ಥಳದಲ್ಲಿ ಸೂರ್ಯನ ಮುಖವನ್ನು ದೊಡ್ಡ ವಿಗ್ರಹವನ್ನಾಗಿ ಮಾಡಿಟ್ಟುಕೊಂಡು ಅದನ್ನು ಪೂಜಿಸಲಾಗುತ್ತಿದೆ. ಬುಡಕಟ್ಟು ಜನಾಂಗಗಳ ನಂತರ ಬೌದ್ಧ ಧರ್ಮೀಯರು (ಅವರುಗಳು ಸಹ ಬುಡಕಟ್ಟು ಜನಾಂಗಕ್ಕೆ ಸೇರಿದವರೇ ಆಗಿರುತ್ತಾರೆ) ಸಂಖ್ಯೆಯಲ್ಲಿ ಹೆಚ್ಚು ಎನಿಸಿಕೊಂಡರೆ, ಅವರಿಗಿಂತ ತುಸು ಹೆಚ್ಚಿನ ಸಂಖ್ಯೆಯಲ್ಲಿ ಹಿಂದುಗಳೂ ಅವರ ಛಾಪನ್ನು ಮೂಡಿಸಿದ್ದಾರೆ. ಅಧುನೀಕರಣದ ಪ್ರಭಾವಕ್ಕೊಳಗಾದ ಸ್ಥಳಗಳಲ್ಲಿ ಕ್ರೈಸ್ತ ಧರ್ಮ ಅನುಯಾಯಿಗಳು ಬೆಳೆಯುತ್ತಿದ್ದಾರೆ. ಇತ್ತೀಚೆಗೆ ಬಾಂಗ್ಲಾ ದೇಶದಿಂದ ಬರುವ ಕಾನೂನು ಬಾಹಿರ ಮುಸ್ಲಿಂ ವಲಸೆಗಾರರು ಹೆಚ್ಚುತ್ತಿದ್ದಾರೆ. ಇಲ್ಲಿನ ಮೂಲ ನಿವಾಸಿಗಳು ಹೆಚ್ಚುತ್ತಿರುವ ಮತಾಂತರ ಹಾವಳಿಯ ಬಗ್ಗೆ ಆತಂಕಗೊಂಡಿದ್ದಾರೆ. ಆದರೂ ಸಮಾಜಮುಖಿ ಧ್ವನಿಯಾಗುವಲ್ಲಿ ತುಸು ನಿಧಾನಸ್ಥರು ಎನಿಸುತ್ತಾರೆ. ಮೃದುಭಾಷಿಗಳಾಗಿ, ಯಾರ ತಂಟೆಗೂ ಹೋಗದೆ ತಮ್ಮತಮ್ಮ ಬೆಳಗು

ಬೈಗುಗಳಲ್ಲೇ ಜೀವನ ಕಳೆಯುವಂತೆ ತೋರುವ ಇಲ್ಲಿನವರು ಬಹುಪಾಲು ಶಾಂತಿಪ್ರಿಯರು. ಯಾವುದೋ ಅಸಹಜ ಗುರಿಯ ಹಿಂದೆ ಬಿದ್ದು ಅದನ್ನು ಗಳಿಸಿಕೊಳ್ಳುವ ಭರಾಟೆ ಇವರಲ್ಲಿ ಇದ್ದಂತಿಲ್ಲ. ಎಲ್ಲಿಗೆ ಯಾಕಾಗಿ ಹೋಗುತ್ತಿದ್ದೇವೆ ಎಂದರಿಯದೆ ನಾಗಾಲೋಟದಲ್ಲಿ ಒಬ್ಬರ ಹಿಂದೊಬ್ಬರು ಕಣ್ಣು ಮುಚ್ಚಿ ಓಡುತ್ತಿರುವಂತೆ ತೋರುವ ಬೆಂಗಳೂರಿಗರಿಗೆ ಇವರನ್ನು ನೋಡಿದಾಗ ಜಗತ್ತಿನಲ್ಲಿ ಜನರು ಹೀಗೂ ಇರಬಹುದೇ ಎಂದೆನಿಸದೆ ಇರದು. ಆರೋಗ್ಯದ ಬಗ್ಗೆ ಹೆಚ್ಚಿನ ತಿಳುವಳಿಕೆಯಾಗಲೀ, ಅಂಗಾಂಗದಾನ ಮತ್ತು ನೇತ್ರ ದಾನಗಳ ಬಗ್ಗೆ ಜಾಗೃತಿಯಾಗಲಿ ಇಲ್ಲಿ ಕಂಡುಬರುವುದಿಲ್ಲ. ಇವರುಗಳ ಬಹುಪಾಲು ಧಾರ್ಮಿಕ ನಂಬಿಕೆಗಳು ಅಂಗಾಂಗ ಮತ್ತು ನೇತ್ರ ದಾನಗಳಿಗೆ ವಿರುದ್ಧವಾಗಿಯೇ ಇವೆ. ಪ್ರಾಥಮಿಕ ಆರೋಗ್ಯ ಮತ್ತು ಸಾಮಾನ್ಯ ಶಸ್ತ್ರ ಚಿಕಿತ್ಸೆಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ವೈದ್ಯಕೀಯ ಸೌಲಭ್ಯಕ್ಕೂ ಗೌಹಾಟಿಯ ಆಸ್ಪತ್ರೆಗಳನ್ನು ಅವಲಂಬಿಸಿದ್ದಾರೆ. ಇಲ್ಲಿ ಸಾಯಂಕಾಲಕ್ಕೇ ಕತ್ತಲಾಗುವುದರಿಂದ ಕೆಲಸಗಾರರು ಬೇಗನೆ ಮನೆ ಸೇರುತ್ತಾರೆ. ಅಂಗಡಿ ಮುಂಗಟ್ಟುಗಳು ಬೇಗನೇ ಮುಚ್ಚುತ್ತವೆ. ಬೆಳಗು ಬೇಗನೆಯೇ ಆದರೂ ಅವರು 11 ಗಂಟೆಯವರೆಗೂ ಕೆಲಸ ಆರಂಭಿಸುವುದಿಲ್ಲ. ಶಾಲಾ ಕಾಲೇಜುಗಳು ಮಾತ್ರ ತುಸು ಬೇಗ ತೆರೆಯುತ್ತವೆ. ಸರ್ಕಾರಿ ಕಚೇರಿಗಳು ವಾರಕ್ಕೆ ಐದು ದಿನಗಳು ಮಾತ್ರ ಕೆಲಸ ನಿರ್ವಹಿಸುತ್ತವೆ. ಇಲ್ಲಿನ ಹೆಚ್ಚು ಭಾಗ ಗಂಡಸರು ವ್ಯವಸಾಯ ಮತ್ತು ಕಟ್ಟಡ ಕಾಮಗಾರಿ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ. ವ್ಯವಸಾಯ ಅಷ್ಟೇನೂ ಅಭಿವೃದ್ಧಿಗೊಂಡಿಲ್ಲ. ಪ್ರತೀ ಬುಡಕಟ್ಟಿನವರಿಗೂ ಅವರವರದ್ದೇ ಆದ ಉಡುಪಿನ ವಿನ್ಯಾಸವಿದೆ. ಹೆಂಗಸರು ಧರಿಸುವ ಸ್ಕರ್ಟ್ ರೀತಿಯ ಬಟ್ಟೆಯನ್ನು ಸೌಸೌ ಹಾಗೂ ಗಾಲೆ ಎನ್ನುವುದಾಗಿ ಕರೆಯುತ್ತಾರೆ. ಗಂಡಸರು ಧರಿಸುವ ನಿಲುವಂಗಿಯನ್ನು ಗಾಲುಕ್ ಎನ್ನುತ್ತಾರೆ.

**ಆಹಾರ**: ಇಲ್ಲಿನ ಜನರ ಆಹಾರ ಪದ್ಧತಿ ಮತ್ತು ವಸ್ತ್ರ ವಿನ್ಯಾಸವು ಅವರುಗಳನ್ನು ಪ್ರಪಂಚದ ಇತರ ಯಾವುದೇ ಭಾಗದ ಜನರಿಗಿಂತ ವಿಭಿನ್ನವಾಗಿಯೂ, ವಿಶೇಷವನ್ನಾಗಿಯೂ ಮಾಡಿದೆ. ಮಿಥುನ್, ಹಂದಿ, ಚಮರೀಮೃಗ, ಕೋಣ, ಕುಳ್ಳಗೆ ದಪ್ಪಗೆ ಬುಲ್ ಡಾಗ್ ನಂತಿರುವ ಆಡು, ಮೇಕೆಗಳನ್ನು ಮುಖ್ಯವಾಗಿ ತಿನ್ನಲು ಬಳಸುತ್ತಾರೆ. ಯಾವುದೇ ಪದಾರ್ಥವನ್ನು

ತಯಾರು ಮಾಡುವ ವಿಧಾನದಿಂದಾಗಿ ಇಲ್ಲಿನ ಅಡುಗೆಗಳು ವಿಶಿಷ್ಟವೆನಿಸಿವೆ. ಧಾನ್ಯಗಳಲ್ಲಿ ಅಕ್ಕಿಯು ಇಲ್ಲಿನ ಜನರ ಮುಖ್ಯ ಆಹಾರವಾಗಿದೆ. ಮಸಾಲೆ ಪದಾರ್ಥಗಳನ್ನು ಬಳಸುವುದೇ ಇಲ್ಲ. ಉಪ್ಪನ್ನು ಕೂಡ ಅತೀ ಕಡಿಮೆ ಪ್ರಮಾಣದಲ್ಲಿ ಬಳಸುತ್ತಾರೆ. ಅಪತಾನಿ ಸಮುದಾಯದವರು ತಮ್ಮದೇ ಆದ ವಿಶಿಷ್ಟ ರೀತಿಯ ಉಪ್ಪನ್ನು ತಯಾರಿಸಿಕೊಳ್ಳುತ್ತಾರೆ. 'ತಪೋ' ಎಂದು ಕರೆಯುವ ಈ ಉಪ್ಪಿನಲ್ಲಿ ಹಲವು ಕಾಯಿಲೆಗಳನ್ನು ತಡೆಗಟ್ಟುವ ಅಂಶಗಳವೆ ಎಂದು ಸಾಬೀತಾಗಿದೆ. ಇದನ್ನು ಚಹ ತಯಾರಿಕೆಯಲ್ಲಿಯೂ ಬಳಸುತ್ತಾರೆ. ಬಿದಿರಿನ ಚಿಗುರು, ಕಳಲೆಗಳು ಇವರ ಪಾರಂಪರಿಕ ತರಕಾರಿಗಳಾದರೆ ಈಚಿನ ದಿನಗಳಲ್ಲಿ ಸ್ವಲ್ಪ ಮಟ್ಟಿಗಿನ ಕ್ಯಾರೆಟ್, ಎಲೆಕೋಸು, ಹೂಕೋಸು ಮತ್ತು ಆಲೂಗೆಡ್ಡೆಗಳನ್ನು ಬೆಳೆದು ಬಳಸುತ್ತಾರೆ. ಈ ಪ್ರದೇಶದಲ್ಲಿ ಕೆಂಪುಬಣ್ಣದ ಚುರುಕು ಮೆಣಸಿನ ಕಾಯಿಯನ್ನು ಕೆಲವು ದಶಕಗಳಿಂದ ಬೆಳೆಯುತ್ತಿದ್ದರೂ ಅಲ್ಲಿನ ಮೂಲ ನಿವಾಸಿಗಳು ಖಾರವನ್ನು ಬಳಸುವುದೇ ಇಲ್ಲ. ಪ್ರಾಣಿಗಳನ್ನು ರಕ್ತದ ಸಮೇತ ತೆಳುವಾಗಿ ಬೇಯಿಸುವುದು, ಬೆಂಕಿಯಲ್ಲಿ ಸುಡುವುದು, ಕುದಿಸುವುದು ಹೀಗೆಲ್ಲಾ ವಿಧಾನಗಳನ್ನು ಅನುಸರಿಸುತ್ತಾರೆ. ಕಳಲೆ ಬೇಯಿಸಿದ ನೀರಿನಲ್ಲಿ ಅಕ್ಕಿಯನ್ನು ಅಥವಾ ಮಾಂಸಾಹಾರವನ್ನು ಬೇಯಿಸಿ, ಸ್ವಲ್ಪವೇ ಉಪ್ಪು ಹಾಕಿಕೊಂಡು ಬಳಸುವುದು, ಬೊಂಬಿನ ಕೊಳವೆಗಳಲ್ಲಿ ಅಕ್ಕಿಯನ್ನು ಇಟ್ಟು ಬೇಯಿಸುವುದು ಇವೆಲ್ಲಾ ಇಲ್ಲಿ ನಿತ್ಯವೂ ತಿನ್ನುವ ಊಟವಾಗಿವೆ.

ಪ್ರತಿ ಮನೆಯಲ್ಲಿಯೂ ಅಕ್ಕಿಯನ್ನು ಕೊಳೆಯಲು ಹಾಕಿ, ಅದರ ಹುದುಗನ್ನು ತಯಾರು ಮಾಡಿಕೊಂಡು, ಮರದ ಪಿಪಾಯಿಗಳಲ್ಲಿ ಇಟ್ಟು, ಕುದಿಸಿ, ಸೋಸಿಕೊಂಡು ಮಾದಕ ಪಾನೀಯವನ್ನು ತಯಾರು ಮಾಡುತ್ತಾರೆ. ಇದನ್ನು ಅಪಾಂಗ್, ಮಾರ್ವಾ, ಅಪೋ ಎಂತೆಲ್ಲಾ ಕರೆಯುತ್ತಾರೆ. ರಾಗಿ ಹಾಗು ಬಿಳಿಜೋಳದಂತಹ ಸ್ಥಳೀಯವಾಗಿ ಬೆಳೆಯುವಂತಹ ಧಾನ್ಯಗಳಿಂದಲೂ ಇಂತಹ ಪಾನೀಯಗಳನ್ನು ತಯಾರು ಮಾಡುತ್ತಾರೆ. ಇವುಗಳನ್ನು ಮಾಡುವ ವಿಧಾನ ಪ್ರತಿ ಕುಟುಂಬಕ್ಕೂ ಬೇರೆಬೇರೆಯಾಗಿರುತ್ತದೆ. ಯಾವ ಮನೆಯ ಹೆಂಗಸು ಇದನ್ನು ಚೆನ್ನಾಗಿ ಮಾಡಬಲ್ಲಳು ಎಂದು ಊರಿನವರೆಲ್ಲಾ ಎದುರು ನೋಡುತ್ತಿರುತ್ತಾರೆ. ಗೋವಾ ರಾಜ್ಯದ ಫೆನ್ನಿಯನ್ನು ಹೋಲುವ ಈ ಪಾನೀಯ ಇಲ್ಲಿ ಕುಡಿಯುವ ನೀರಿನಂತೆ ಬಳಕೆಯಾಗುತ್ತದೆ.

ಹಬ್ಬ ಹರಿದಿನಗಳಲ್ಲಿ, ನೋವು ನಲಿವುಗಳಲ್ಲಿ ಮಾತ್ರವಲ್ಲ ನಿತ್ಯವೂ ಕುಡಿಯುತ್ತಾರೆ. ಇದನ್ನು ಒಂದು ಬಗೆಯ ವೈನ್ ಎಂದೇ ಹೇಳಬಹುದು. ಅತಿಥಿಗಳಿಗೆ ಇದನ್ನು ಕೊಡುವುದು ಅಲ್ಲಿನ ಸಂಸ್ಕೃತಿಯೇ ಒಂದು ಭಾಗವೇ ಆಗಿದೆ. ಇದನ್ನು ಕುಡಿಯಲೂ ಕೂಡ ಒಂದು ಪದ್ಧತಿ ಇದೆ. ಸುಂಗಾ ಎಂದು ಕರೆಯುವ ಬೊಂಬಿನಿಂದ ಮಾಡಿರುವ ಲೋಟದಲ್ಲಿ ಮುಕ್ಕಾಲು ಭಾಗ ಸುರುವಿಕೊಂಡು, ಆ ಲೋಟವನ್ನು ತೆಳುವಾಗಿ ತುಟಿಗೆ ತಗುಲಿಸಿಕೊಂಡು, ಬಿಡುವು ಕೊಡದೆ ಮೂರು ಗುಕ್ಕುಗಳನ್ನು ಸ್ವೀಕರಿಸಬೇಕು. ಈ ಪಾನೀಯವು ಪ್ರತಿ ಮನೆಯ ಸ್ಥಿತಿಗತಿಯ ಧ್ಯೋತಕವಾಗಿದೆ.



**ಅಪಾಂಗ್ ಪಾನೀಯವನ್ನು ತಯಾರಿಸುತ್ತಿರುವ ಮಹಿಳೆ**

**ಸ್ತ್ರೀಯೇ ಶಕ್ತಿ**: ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇಲ್ಲಿನ ಬುಡಕಟ್ಟು ಜನರ ವೈಶಿಷ್ಟ್ಯ. ಹೆಚ್ಚಿನ ಭಾಗ ಗಂಡಸರು ತಿಂದು ಕುಡಿದು ಮಾಡಿ ಕಾಲಹರಣ ಮಾಡುತ್ತಿದ್ದರೆ ಮನೆ ಮತ್ತು ಸಂಸಾರದ ನಿರ್ವಹಣೆ ಇಲ್ಲಿ ಹೆಣ್ಣಿನದೇ. ಎಂತಹಾ ಕಷ್ಟಕರ ಕೆಲಸವನ್ನೂ ತಾನೇ ನಿಭಾಯಿಸುತ್ತಾಳೆ. ಅಡುಗೆ ಮಾಡುವುದರಿಂದ ಹಿಡಿದು ಹಣ ಉಳಿತಾಯದವರೆಗೂ, ಮಕ್ಕಳ ಲಾಲನೆ-ಪೋಷಣೆಯಿಂದ ಹಿಡಿದು ಮರುಮದುವೆಯ ನಿರ್ಧಾರ ತೆಗೆದುಕೊಳ್ಳುವವರೆಗೂ ಮಹಿಳೆಯರೇ ಮುನ್ನೆಲೆಯಲ್ಲಿರುತ್ತಾರೆ. ಹತ್ತಿರಹತ್ತಿರ ಐದು ಅಡಿ ಎತ್ತರದ, ಸಾಮಾನ್ಯ ಅಗಲದ, ಹಾಲ್ಬಿಳುಪಿನ ತ್ವಚೆಯ, ನೀಳ-ನೇರ ಕಡುಗಪ್ಪು ಕೂದಲಿನ, ಗುಂಡು ಮುಖದ, ಚೂಪುಗಲ್ಲದ, ನೇರ ಮೂಗಿನ ಅತೀ ಸುಂದರಿಯರು ಇಲ್ಲಿನ ಹೆಂಗಸರು. ಕೈ ತೊಳೆದು ಮುಟ್ಟಬೇಕು ಎನ್ನುವಷ್ಟು ಶುಭ್ರ ಚೆಲುವೆಯರು. ಯಾರನ್ನು ಒಮ್ಮೆ ನೋಡಿ ಸುಮ್ಮನೆ ಮುಂದೆ ಹೋಗಿ ಬಿಡುವುದು ಸಾಧ್ಯವೇ ಇಲ್ಲ. ಮತ್ತೊಮ್ಮೆ ನೋಡಲೇ ಬೇಕು ಎನ್ನಿಸುತ್ತದೆ. ಆರ್ಥಿಕ ಪರಿಸ್ಥಿತಿ ಹೇಗಿದ್ದರೂ ಸಾಮಾನ್ಯವಾಗಿ ಎಲ್ಲಾ ವಯಸ್ಸಿನ ಹೆಚ್ಚಿನ ಮಹಿಳೆಯರು ಮೇಕಪ್ ಮಾಡಿಕೊಂಡಿರುತ್ತಾರೆ. ಲಿಪ್ಸ್ಟಿಕ್ ಹಚ್ಚಿಕೊಳ್ಳದಿರುವ ಹೆಣ್ಣುಗಳನ್ನು ರಸ್ತೆಯಲ್ಲಿ ಕಾಣುವುದೇ ಅಪರೂಪ.  ಆದರೆ ಹವಾಮಾನ ವೈಪರೀತ್ಯ ಮತ್ತು ವರ್ಣತಂತುಗಳ ಪ್ರಭಾವದಿಂದ ಇವರುಗಳ ಚರ್ಮದಲ್ಲಿ ಬಹಳ ಚಿಕ್ಕ ವಯಸ್ಸಿನಲ್ಲೇ ಹೆಚ್ಚಿನ ಸುಕ್ಕುಗಳು ಬಂದುಬಿಡುತ್ತವೆ. ಮೂವತ್ತು ವಯಸ್ಸಿನ ನಂತರ ಅದು ಹೆಚ್ಚುತ್ತಾಲೇ ಹೋಗುತ್ತದೆ. ಹಾಗಾಗಿ ವಯಸ್ಸು ಚಿಕ್ಕದಿದ್ದರೂ ಬಲು ಬೇಗ ವೃದ್ಧರಂತೆ ಕಾಣತೊಡಗುತ್ತಾರೆ. ಪೊಂಪುನಾಲಹ್ ಪ್ರದೇಶದ ನಿಬಾ ಕ್ಲಿನಿಕ್‌ನ ಡಾ.ನಿರ್ಮಲ ಅವರು ಹೇಳುವಂತೆ ಚಿಕ್ಕ ವಯಸ್ಸಿನಿಂದಲೇ ಅತೀ ಹೆಚ್ಚಿನ ಲೈಂಗಿಕ ಚಟುವಟಿಕೆಯಿಂದಾಗಿ ಮತ್ತು ಹೆಚ್ಚು ಜನರೊಡನೆಯ ದೈಹಿಕ ಸಂಪರ್ಕದಿಂದಾಗಿ ಇಲ್ಲಿನ ಮಹಿಳೆಯರಿಗೆ ಇದಕ್ಕೆ ಸಂಬಂಧಪಟ್ಟ ಕಾಯಿಲೆಗಳೂ ಚಿಕ್ಕ ವಯಸ್ಸಿನಲ್ಲೇ ಪ್ರಾರಂಭವಾಗುತ್ತದೆ ಮತ್ತು ಸಂಖ್ಯೆಯಲ್ಲೂ ಹೆಚ್ಚು. ಈ ರಾಜ್ಯದ ಜನರನ್ನು ಸಾಮಾನ್ಯವಾಗಿ ಬಾಧಿಸುವ ಕಾಯಿಲೆಗಳೆಂದರೆ ಅಲರ್ಜಿ, ಶ್ವಾಸಕೋಶಕ್ಕೆ ಸಂಬಂಧಪಟ್ಟ ಏರುಪೇರುಗಳು ಮತ್ತು ಅವರ ಆಹಾರ ಕ್ರಮದಿಂದಾಗಿ ಉದರ ಬೇನೆಗಳೂ ಕಾಡುತ್ತವೆ.

ಪ್ರತೀ ಹೆಣ್ಣು ಮಗುವಿಗೂ ಚಿಕ್ಕ ವಯಸ್ಸಿನಿಂದಲೇ ಬಟ್ಟೆ ನೇಯುವುದನ್ನು ಕಲಿಸಿರಲಾಗುತ್ತದೆ. ಅದು ಇಲ್ಲಿನ ಜನರ ಅತೀ ಮುಖ್ಯ ಪರಂಪರೆ. ಎರಡು ಕೈಯಲ್ಲಿ ಹಿಡಿದು ಎಲ್ಲೆಂದರಲ್ಲಿ ಬಟ್ಟೆ ನೇಯಬಹುದಾದಷ್ಟು ಚಿಕ್ಕ ಅಳತೆಯ ನೇಯ್ಗೆ ಯಂತ್ರದಿಂದ ಹಿಡಿದು ಒಂದು ಕೋಣೆಯಷ್ಟು ದೊಡ್ಡ ಗಾತ್ರದ ಯಂತ್ರಗಳವರೆಗೂ ಇರುತ್ತವೆ. ಪ್ರತೀ ಹೆಣ್ಣು ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ತಾಯಿಯ ಕಡೆಯಿಂದ ಇಂತಹ ಯಂತ್ರವೊಂದನ್ನು ಬಳುವಳಿಯನ್ನಾಗಿ ನೀಡಲಾಗುತ್ತದೆ. ಇದನ್ನು ಸ್ತ್ರೀಧನವನ್ನಾಗಿ ಪರಿಗಣಿಸಲಾಗುತ್ತದೆ. ಕುಟುಂಬದಲ್ಲಿ ತಾಯಿಯ ನಿಧನವಾದಾಗ ಅವಳ ನೇಯ್ಗೆಯಂತ್ರವನ್ನು ಆ ಮನೆಯ ಹೆಣ್ಣು ಮಕ್ಕಳಲ್ಲಿ ಒಬ್ಬರಿಗೆ ನೀಡಲಾಗುತ್ತದೆ. ಹೀಗಾಗಿ ತಲೆತಲಾಂತರದಿಂದ ಬರುವ ನೇಯ್ಗೆ ಯಂತ್ರವನ್ನು ಜತನದಿಂದ ಕಾಪಾಡಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಈಗಲೂ ಸಹ ಅವರುಗಳು ಹಾಕಿಕೊಳ್ಳುವ ಬಟ್ಟೆಯನ್ನು ಅವರೇ ನೇಯ್ದುಕೊಳ್ಳುತ್ತಾರೆ ಮತ್ತು ಅದರಿಂದ ಗುಡಿ ಕೈಗಾರಿಕೆಗಳನ್ನು ಮಾಡಿಕೊಂಡು ವ್ಯಾಪಾರ ಮಾಡುತ್ತಾರೆ. ಮಗಳನ್ನು ಆರ್ಥಿಕ ಆದಾಯದ ಮೂಲವಾಗಿಯೂ, ಆಸ್ತಿ ಎಂಬುದಾಗಿಯೂ ನೋಡುವ ಸಂಸ್ಕೃತಿ ಇಲ್ಲದೆ. ಸಣ್ಣ ಸಣ್ಣ ಸ್ಕಾರ್ಫ್, ಮಫ್ಲರ್‌ಗಳು, ಚೀಲಗಳು 500 ರೂಪಾಯಿಗಳಲ್ಲಿ ದೊರೆತರೆ, ಶಾಲು, ಕರ್ಟನ್, ಟೇಬಲ್ ಮೇಲಿನ ಹೊದಿಕೆ, ಸ್ಕರ್ಟ್‌ಗಳು, ಗಂಡಸರ ಚಳಿಗಾಲದ ದಪ್ಪನೆಯ ಕೋಟ್‌ಗಳು, ಇವೆಲ್ಲಾ ಅವುಗಳ ಮಾಡಿರುವ ವಿನ್ಯಾಸಕ್ಕನುಗುಣವಾಗಿ 20000 ರೂಪಾಯಿಗಳವರೆಗೂ ದರವನ್ನು ಹೊಂದಿವೆ. ಬಟ್ಟೆಗಳ ಮೇಲೆ ನೇಯ್ದಿರುವ ವಿನ್ಯಾಸದಿಂದಲೇ ಅದು ಯಾವ ಬುಡಕಟ್ಟಿಗೆ ಸೇರಿದವರದ್ದು ಎಂದು ಗುರುತಿಸಲಾಗುತ್ತದೆ. ಅಂತಹ ವಿನ್ಯಾಸಗಳಿಂದ ಶ್ರೀಮಂತರು ಮತ್ತು ಮಧ್ಯಮ ವರ್ಗದವರೆಂದೂ ಗುರುತಿಸುತ್ತಾರೆ. ಹೆಚ್ಚಾಗಿ ಹಸಿರು, ಹಳದಿ, ನೀಲಿ ಮತ್ತು ಕೆಂಪು ಬಣ್ಣಗಳಲ್ಲೇ ನೇಯ್ಗೆ ಮಾಡಲಾಗುತ್ತದೆ. ಬಳಸುವ ದಾರ ಮತ್ತು ಬಣ್ಣಗಳನ್ನು ಸಾವಯವ ರೀತಿಯಲ್ಲಿಯೇ ತಯಾರು ಮಾಡಿಕೊಂಡಿರುತ್ತಾರೆ. ರೇಖಾಗಣಿತದ ವಿವಿಧ ಆಕೃತಿಗಳೇ ಪ್ರಾಥಮಿಕ ರಚನೆಯಾಗಿರುತ್ತದೆ. ಪ್ರಾಣಿಪಕ್ಷಿಗಳು, ಕೀಟಗಳು, ಚಿಟ್ಟೆಗಳು ಮತ್ತು ಕಾಮನಬಿಲ್ಲು ಸಹ ಒಮ್ಮೊಮ್ಮೆ ಬಟ್ಟೆಗಳ ಮೇಲೆ ಮೂಡಿ ಬರುತ್ತವೆ. ನೇಯ್ಗೆಗೆ ಇಲ್ಲಿ ಎಷ್ಟು ಮಹತ್ತ್ವ ಇದೆಯೆಂದರೆ, ನೇಯ್ಗೆ ಇಲ್ಲದ ಭೂಮಿಯಲ್ಲಿ ಮರುಹುಟ್ಟು ಪಡೆಯುವುದನ್ನು,

ಮನುಷ್ಯ ಸತ್ತ ನಂತರ ಸಿಗುವ ಶಿಕ್ಷೆಗಳಲ್ಲಿ ಒಂದು ಎಂದು ನಂಬಲಾಗಿದೆ. ಒಟ್ಟಿನಲ್ಲಿ ನೇಯ್ಗೆ ಇಲ್ಲಿನ ಎಲ್ಲಾ ಬುಡಕಟ್ಟುಗಳ ಹೆಂಗಸರ ವಿಶೇಷತೆ , ಹೆಗ್ಗುರುತು, ಪರಂಪರೆ, ಸಂಸ್ಕೃತಿ ಮತ್ತು ಜೀವನ.

ನೇಯ್ಗೆಯ ನಂತರದಲ್ಲಿ ಹೆಚ್ಚಾಗಿ ಹೆಂಗಸರು ಮಾಡುವ ಮತ್ತೊಂದು ಕೆಲಸ ಎಂದರೆ ಕಲ್ಲುಗಳು, ಹರಳುಗಳು, ಮರದ ತುಂಡುಗಳು ಮತ್ತು ಲೋಹಗಳನ್ನು ಬಳಸಿ ವೈವಿಧ್ಯಮಯವಾದ ಒಡವೆಗಳನ್ನು ಮಾಡುವುದು. ಹಿಂದೊಮ್ಮೆ 'ನಿನುರ್‌ಬೋತೆ' ಎನ್ನುವವನು ಮೂಳೆಯಿಂದ ತನ್ನ ಪ್ರೇಯಸಿಗಾಗಿ ಮಣಿಗಳನ್ನು ಮಾಡಿಕೊಟ್ಟನಂತೆ. ಅವಳು ಅದನ್ನು ಪೋಣಿಸಿಕೊಂಡು ಮಾಲೆಯಂತೆ ಧರಿಸಿಕೊಳ್ಳಲು ನೋಡಿದಾಗ ಆ ಮಣಿಗಳಲ್ಲಿ ರಂಧ್ರಗಳು ಇರಲಿಲ್ಲ. ಆಗ ಆಕೆ ಮರಕುಟಿಕ ಹಕ್ಕಿಯನ್ನು ಕರೆದು ಆ ಮಣಿಗಳಿಗೆ ತೂತುಗಳನ್ನು ಕೊರೆಯಿಸಿ ಸುಂದರವಾದ ಒಡವೆ ಮಾಡಿಕೊಂಡಳಂತೆ. ಅವಳು ಆ ಒಡವೆಗಳಿಗೆ ಕುದೊ, ಪೊದತ್, ಕುಲ್ಲಿ, ಫುಲನ್, ಪೊಲಿ, ತಗುಮ್ ಎನ್ನುವ ಹೆಸರನ್ನೂ ಕೊಟ್ಟಳಂತೆ. ಹಾಗಾಗಿ ಮೊದಲ ದುದಪ್ (ಸರದ ಪದಕ) ತಯಾರು ಮಾಡಿದವಳು ಎಂದು ಪ್ರಸಿದ್ಧಿಯಾಗಿದ್ದಾಳೆ ನಿನುರ್ ಬೋತೆಯ ಪ್ರೇಯಸಿ.

ಇಲ್ಲಿನ ಕುಟುಂಬಗಳ ನಿರ್ವಹಣೆ ಹೆಣ್ಣಿನಿಂದಲೇ ಆಗುತ್ತಿದ್ದರೂ ಮೊದಲಿನಂತೆ ಈಗ ಹೆಣ್ಣು ಮಕ್ಕಳು ಹುಟ್ಟುವುದನ್ನು ಸಂತೋಷದಿಂದ ಎದುರುನೋಡುವುದಿಲ್ಲ. ಭ್ರೂಣಹತ್ಯೆಯಂತಹ ಕ್ರೌರ್ಯ ಇಲ್ಲಿ ಕಂಡುಬರದಿದ್ದರೂ ಗಂಡಿನ ಫಲವತ್ತತೆ (ವೀರ್ಯಾಣು) ಸರಿಯಾಗಿ ಇಲ್ಲದಿದ್ದರೆ ಹೆಣ್ಣು ಮಗು ಹುಟ್ಟುತ್ತದೆ ಎನ್ನುವ ಹುರುಳಿಲ್ಲದ ನಂಬಿಕೆಯನ್ನು ಜನ ಬೆಳೆಸುತ್ತಿದ್ದಾರೆ. ಪತಿಯ ಮರಣಾನಂತರ ಆ ಹೆಂಗಸಿಗೆ ತೀರಿಹೋದ ಪತಿಯ ಆಸ್ತಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಹೆಣ್ಣು ಅಥವಾ ಗಂಡು ಯಾವುದೇ ಮಗು ಹುಟ್ಟಿದರೂ ತಂದೆಯ ಹೆಸರಿನ ಕೊನೆಯ ಮೂರು ಅಕ್ಷರಗಳನ್ನು ಮಗುವಿನ ಮೊದಲ ಮೂರು ಅಕ್ಷರಗಳನ್ನಾಗಿ ಮಾಡಿ ಮುಂದಕ್ಕೆ ತಮಗೆ ಬೇಕಾದ ಹೆಸರನ್ನು ಸೇರಿಸಿ ನಾಮಕರಣ ಮಾಡುವ ಪದ್ಧತಿಯನ್ನು ಎಲ್ಲಾ ಬುಡಕಟ್ಟಿನವರೂ ಅನುಸರಿಸುತ್ತಾರೆ. ಉದಾಹರಣೆಗೆ; ಮಿಬಿರಿವಾ ಎನ್ನುವ ಹೆಸರು. ಆದಿ ಬುಡಕಟ್ಟಿಗೆ ಸೇರಿದ ಈಕೆ ಮೆಡಿಕಲ್

ಆಂತ್ರೊಪಾಲಜಿಯಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾಳೆ. ಈಕೆಯ ಹೆಸರಿನ ಮೊದಲಲ್ಲಿ ಬರುವ ಮೂರು ಅಕ್ಷರಗಳು ಎಂಬಿಐ ಎನ್ನುವುದು ಆಕೆಯ ತಂದೆಯ ಹೆಸರಿನ ಕೊನೆಯ ಮೂರು ಅಕ್ಷರಗಳಾಗಿವೆ. ಈಕೆಗೆ ರಿವಾ ಎನ್ನುವ ಹೆಸರನ್ನು ಅದರ ಜೊತೆಗೆ ಸೇರಿಸಲಾಗಿದೆ. ಹಾಗಾಗಿ ಆಕೆ ಮಿಬಿರಿವಾ.

ಒಬ್ಬರಿಗಿಂತ ಹೆಚ್ಚಿನ ಲೈಂಗಿಕ ಸಂಗಾತಿಯನ್ನು ಹೊಂದಿರುವುದನ್ನು ಇಲ್ಲಿನ ಸಂಸ್ಕೃತಿಯಲ್ಲಿ ಜನರು ಸ್ವೀಕರಿಸಿರುವುದರಿಂದ ವೇಶ್ಯಾವೃತ್ತಿ ಇಲ್ಲಿ ಒಂದು ಅಪರಾಧವಾಗಿ ಕಂಡು ಬರುವುದಿಲ್ಲ. ಗಂಡ ಸತ್ತ ನಂತರ ತ್ವರಿತವಾಗಿ ಮತ್ತು ಸಹಜವಾಗಿ ಗಂಡನನ್ನು ಕಳೆದುಕೊಂಡ ಹೆಣ್ಣು ಸ್ವಯಿಚ್ಛೆಯಿಂದ ಮತ್ತೊಂದು ಗಂಡಿನೊಡನೆ 'ಕೂಡುಬಾಳ್ವೆ' ಮಾಡುವುದರಿಂದ ಮತ್ತು ಸಮಾಜದಲ್ಲಿ ಅದಕ್ಕೆ ಮಾನ್ಯತೆ ಇರುವುದರಿಂದ ವೈಧವ್ಯ ಇಲ್ಲಿ ಶಾಪವಾಗಿ ತೋರುವುದಿಲ್ಲ. ವಿವಾಹದ ಸಂಕೇತವಾಗಿ ಇಲ್ಲಿ ಮಾಂಗಲ್ಯ, ಕಾಲುಂಗುರ ಮತ್ತು ಸಿಂಧೂರವನ್ನು ಬಳಸುವ ಯಾವುದೇ ಪದ್ಧತಿ ಇಲ್ಲ. ಹಾಗಾಗಿ ಮದುವೆಯಾದ ಹೆಂಗಸರು ಮತ್ತು ಅವಿವಾಹಿತರು ಎಲ್ಲರೂ ನೋಡಲು ಸಮಾನವಾಗಿ ಕಾಣುತ್ತಾರೆ.

**ಯುವ ಶಕ್ತಿ**: ಇತರೆ ಈಶಾನ್ಯ ರಾಜ್ಯಗಳಲ್ಲಿ ಇರುವಂತೆ ವಿದ್ಯಾರ್ಥಿ ಸಂಘಟನೆಗಳು ಇಲ್ಲಿ ಇನ್ನೂ ಗಟ್ಟಿಗೊಂಡಿಲ್ಲವಾದರೂ ಇತ್ತೀಚಿನ ದಿನಗಳಲ್ಲಿ ರಾಜಕೀಯ ದಿಶೆಯಲ್ಲಿ ವಿದ್ಯಾರ್ಥಿ ಸಂಘಟನೆಗಳು ಬಲಗೊಳ್ಳುತ್ತಿವೆ. ಮುಂದೊಂದು ದಿನ ಅಸ್ಸಾಂ ರಾಜ್ಯದಂತೆ ಈ ವಿದ್ಯಾರ್ಥಿ ಸಂಘಟನೆಗಳೇ ರಾಜ್ಯ ರಾಜಕಾರಣದ ದಿಕ್ಕನ್ನು ಬದಲಿಸುವಂತಾಗಬಹುದು ಎನ್ನುವುದು ಅಲ್ಲಿನ ಜನರ ಅನಿಸಿಕೆ. ಪದವಿ ಪೂರ್ವ ಹಂತದಲ್ಲಿ ವಿಜ್ಞಾನ ವ್ಯಾಸಂಗಕ್ಕೆ ಅಷ್ಟೊಂದು ಪ್ರಾಮುಖ್ಯತೆ ಇಲ್ಲದೆ ಕಲೆ, ಸಮಾಜ ವಿಜ್ಞಾನ, ಮಾನವ ಶಾಸ್ತ್ರ ಮತ್ತು ವಾಣಿಜ್ಯ ವಿಭಾಗದೆಡೆಗೆ ಹೆಚ್ಚಿನ ಗಮನ ಕೊಡುತ್ತಾರೆ. ಅಲ್ಲಿಯೇ ನೆಲೆನಿಂತು ವಿದ್ಯಾಭ್ಯಾಸ ಮುಂದುವರೆಸುವ ಯುವಕರು ಆ ರಾಜ್ಯದಲ್ಲಿಯೇ ಇರುವ ಎರಡು ವಿಶ್ವವಿದ್ಯಾಲಯಗಳಲ್ಲಿ ಓದುತ್ತಾರೆ. ಉನ್ನತ ವಿದ್ಯಾಭ್ಯಾಸವೆಂದರೆ ಬಹುಪಾಲು ಯುವಕ ಯುವತಿಯರು ಬುಡಕಟ್ಟು ಜನಾಂಗಗಳ ಬಗ್ಗೆ ಅಧ್ಯಯನ ನಡೆಸಿ ಪಿಎಚ್‌ಡಿ ಪಡೆಯುತ್ತಿದ್ದಾರೆ. ಇನ್ನುಳಿದಂತೆ ಐಎಎಸ್ ಮತ್ತು ಐಪಿಎಸ್ ಪರೀಕ್ಷೆಗಳ ಕಡೆಗೆ ಒಲವು ತೋರಿಸುತ್ತಿದ್ದಾರೆ. ಶೇಕಡಾ 95

ರಷ್ಟು ಯುವಕರು ಅಂತರ್ಜಾಲವನ್ನು ಬಳಸುವುದು ಮಾತ್ರವಲ್ಲ, ಫೇಸ್‌ಬುಕ್, ಟ್ವೀಟರ್‌ಗಳಂತಹ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿದ್ದಾರೆ. ಆಪತಾನಿ ಎನ್ನುವ ಬುಡಕಟ್ಟಿಗೆ ಸೇರಿದ ಜನರು ವಿದ್ಯಾಭ್ಯಾಸದೆಡೆಗೆ ಹೆಚ್ಚಿನ ಆಸಕ್ತಿ ತೋರುತ್ತಾರೆ ಮತ್ತು ಬುದ್ಧಿವಂತರು ಕೂಡ ಎನ್ನಿಸಿಕೊಂಡಿದ್ದಾರೆ. ಆದರೂ ಇಲ್ಲಿನ ಹೆಚ್ಚು ಹೆಚ್ಚು ಯುವಕರು ವಿದ್ಯಾಭ್ಯಾಸ ಹಾಗು ಉದ್ಯೋಗಕ್ಕಾಗಿ ಅಸ್ಸಾಂ ಹಾಗೂ ದಕ್ಷಿಣ ಭಾರತ ಅದರಲ್ಲೂ ಕರ್ನಾಟಕಕ್ಕೆ ವಲಸೆ ಬರುತ್ತಾರೆ. ಅವರುಗಳು ಪುನಃ ಹಿಂದಿರುಗಿ ತಾಯಿನಾಡಿನಲ್ಲಿ ನೆಲೆಸುವುದು ಬಹಳ ಅಪರೂಪವಾಗಿರುವುದರಿಂದ ಸ್ಥಳೀಯರಿಂದ ಈ ರಾಜ್ಯದ ಅಭಿವೃದ್ಧಿಯೆಡೆಗೆ ಏನೂ ಕೊಡುಗೆ ಇಲ್ಲವೆಂದು ಅಲ್ಲಿನ ಜನರ ಆತಂಕ. ರ್‍ಯಾಪ್ ಸಂಗೀತ ಮತ್ತು ಪಂಜಾಬಿನ ಬಾಂಗ್ಡಾ ನೃತ್ಯ, ಸಂಗೀತದೆಡೆಗೆ ಇಲ್ಲಿನ ಯುವಕರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಗಿಟಾರ್ ವಾದ್ಯವನ್ನು ಬಳಸುವುದು ಈಗ ಪ್ರತೀ ಯುವಕನ ಹೊಸ ಹವ್ಯಾಸವಾಗಿದೆ. ಪಾಶ್ಚಾತ್ಯ ಸಂಗೀತಗಾರರ ಬ್ಯಾಂಡ್‌ಗಳು ದಿನದಿನವೂ ಹುಟ್ಟುತ್ತಿದೆ. ಸಾಹಿತ್ಯದಲ್ಲಿ ಅಲ್ಪಸ್ವಲ್ಪ ಆಸಕ್ತಿ ಇಟ್ಟುಕೊಂಡಿರುವ ಯುವಕರು ತಮ್ಮದೇ ದುಡ್ಡಿನಲ್ಲಿ ಪುಸ್ತಕವನ್ನೂ ಪ್ರಕಟಿಸುತ್ತಿದ್ದಾರೆ. ಸೌಂದರ್ಯ ಸ್ಪರ್ಧೆಗಳಲ್ಲೂ ಆಸಕ್ತಿ ಬೆಳೆಸಿಕೊಳ್ಳುತ್ತಿರುವ ಯುವತಿಯರು ಆಧುನಿಕತೆಗೆ ಒಗ್ಗಿಕೊಳ್ಳುತ್ತಿದ್ದಾರೆ. ವಾಂಚೋ ಬುಡಕಟ್ಟಿಗೆ ಸೇರಿದ 'ರುನುಬೊಂಹಂ' ಎನ್ನುವ ಯುವತಿಯು 2015 ನೆಯ ಸಾಲಿನ, ಮಿಸ್. ಅರುಣಾಚಲಪ್ರದೇಶ ಆಗಿ ಆಯ್ಕೆಯಾಗಿದ್ದಾಳೆ.

**ಭಾಷೆ-ಮಾತು**: ನಶಿಸಿ ಹೋದ ನಂತರ ಈಗ ಮುಖ್ಯವಾಗಿ ಇಲ್ಲಿ 26 ವಿಧದ ಭಾಷೆಗಳು ಮತ್ತು 200 ತರಹದ ಉಪಭಾಷೆಗಳು ಉಳಿದುಕೊಂಡಿವೆ. ಇವುಗಳಲ್ಲಿ ಮೊನ್ಪಾ ಎನ್ನುವ ಭಾಷೆಗೆ ಬೊಂತಿ ಲಿಪಿ (ಟಿಬೇಟಿಯನ್ ಲಿಪಿ)ಯನ್ನು ಮತ್ತು ಕಾಂಮ್ತಿ ಎನ್ನುವ ಭಾಷೆಗೆ ಥಾಯ್ ಲಿಪಿಯನ್ನು ಬಳಸಲಾಗುತ್ತಿದ್ದು , ಮತ್ತ್ಯಾವ ಭಾಷೆಗೂ ಅದರದ್ದೇ ಲಿಪಿ ಇಲ್ಲವಾಗಿದ್ದು ಅವೆಲ್ಲವೂ ಬರಿಯ ಆಡು ಭಾಷೆಯಾಗಿಯೇ ಉಳಿದು ಬಂದು ಈಗ ವಿನಾಶದ ಅಂಚಿನಲ್ಲಿವೆ. ಎಲ್ಲಾ ಭಾಷೆಗಳೂ ಟಿಬೇಟ್ ಮತ್ತು ಬರ್ಮ ಭಾಷೆಗಳ ಮೂಲದಿಂದಲೇ ಜನ್ಯವಾಗಿದೆ. ಕಳೆದ ಎರಡು ತಲೆಮಾರಿನಿಂದಲೂ ಹಿಂದಿ ಭಾಷೆಯೇ ನಿತ್ಯ ಬಳಕೆಯ ಭಾಷೆಯಾಗಿದ್ದು, ಯುವಕರು ತಮ್ಮ

ಭಾಷೆಯನ್ನು ಮಾತನಾಡಲು ಕಲಿಯಲೂ ಉತ್ಸಾಹ ತೋರಿಸದೆ ಹಿಂದಿಯ ಬಗ್ಗೆಯೇ ಒಲವು ಬೆಳೆಸಿಕೊಂಡಿರುವುದು ಹಳೆ ಪೀಳಿಗೆಯ ಜನರಿಗೆ ಬೇಸರ ಮೂಡಿಸಿದೆ. ಇವರುಗಳಿಗೆ ಭಾಷಾಭಿಮಾನವೇ ಇಲ್ಲವೇನೋ ಎನ್ನಿಸುವ ಹೊತ್ತಿಗಾಗಲೇ ಪ್ರತೀ ಯುವಕನು ಸ್ಪಷ್ಟವಾದ ಹಿಂದಿ, ಇಂಗ್ಲಿಷ್, ಗುಜರಾತಿ, ಅಸ್ಸಾಮಿಸ್, ಕನ್ನಡ, ಅಪರೂಪಕ್ಕೊಮ್ಮೆ ತಮಿಳು, ತೆಲುಗು ಭಾಷೆಗಳಲ್ಲಿ ಅಥವಾ ದೇಶದ ಇನ್ನ್ಯಾವುದೇ ಭಾಷೆಯಲ್ಲಿ ಮಾತನಾಡಿ ಚಕಿತಗೊಳಿಸುತ್ತಾನೆ. ಅತೀ ಕಡಿಮೆ ಸಮಯದಲ್ಲಿ ಹೆಚ್ಚು ಭಾಷೆಗಳನ್ನು ಕಲಿಯಬಲ್ಲ ಸಾಮರ್ಥ್ಯ ಇರುವ ಇಲ್ಲಿನ ಜನರ ಮಾತು ಕೇಳಲು ಹಿತವಾಗಿರುತ್ತದೆ. ಅವರದ್ದೇ ಭಾಷೆಗಳಲ್ಲಿ ಇರುವ ಪದಗಳು ಕೇಳಲು ಇಂಪಾಗಿಯೂ ಇರುತ್ತವೆ. ಉದಾಹರಣೆಗೆ ; ಗತ್ ಬಂಗ್ = ಬಿಲ್ಲು ಬಾಣ, ನಂಗ್ = ನಗಾರಿ, ಸೆದಿ = ಭೂಮಿ, ಮೆಲೊ = ಸೂರ್ಯ, ಪಯಾರೋ ಪಚು = ಧನ್ಯವಾದಗಳು.

**ಮಾಧ್ಯಮಗಳು**: ಇಲ್ಲಿ ಆಂಗ್ಲ ಭಾಷೆ, ಹಿಂದಿ ಮತ್ತು ಅಸ್ಸಾಮಿ ಭಾಷೆಯ ವೃತ್ತಪತ್ರಿಕೆಗಳು ದೊರೆಯುತ್ತದೆ. ಅರುಣಾಚಲ್ ಟೈಮ್ಸ್, ಅರುಣಾಚಲ್ ಫ್ರಂಟ್, ಎಖೊ ಆಫ್ ಅರುಣಾಚಲ್, ಅರುಣಾಚಲ್ ಸೆಂಟಿನಲ್, ಆಗ್ರಾದುದ್, ಪ್ರೊತಿ ದಿನ್, ಸಾಪ್ತಾಹಿಕ್ ಸಂಡೆ ಇವುಗಳು ನಿತ್ಯವೂ ದೊರೆಯುತ್ತವೆ. ಇಂಗ್ಲಿಷ್ ಭಾಷೆಯ ಪತ್ರಿಕೆಗಳು 7 ರೂಪಾಯಿಗಳಿಗೂ ಉಳಿದ ಪತ್ರಿಕೆಗಳು 5 ರೂಪಾಯಿಗಳಿಗೂ ಸಿಕ್ಕುತ್ತವೆ. ಸಂಖ್ಯೆಯಲ್ಲಿ ಹೆಚ್ಚಿನ ಪತ್ರಿಕೆಗಳು ಮಾರಾಟವಾಗದಿದ್ದರೂ ಬೇರೆಬೇರೆ ಪ್ರಕಟಣೆಗಳ ಪತ್ರಿಕೆಗಳಿಗೆ ಬರವಿಲ್ಲ. ಇಡೀ ರಾಜ್ಯದಲ್ಲಿ ಒಂದೇ ಒಂದು ಸಿನೆಮಾ ಥಿಯೇಟರ್ ಆಗಲಿ, ಟಾಕೀಸು, ಟೆಂಟಾಗಲಿ ಇರುವುದಿಲ್ಲ. ನಾಲ್ಕು ವರ್ಷಗಳ ಹಿಂದೆ ಕೇವಲ ಎರಡು ವರ್ಷಗಳ ಕಾಲ ಇಟಾನಗರದಲ್ಲಿ ಒಂದು ಚಲನಚಿತ್ರ ಮಂದಿರವಿತ್ತು. ಆದರೆ ಪ್ರೇಕ್ಷಕರು ಬರದೆ ಆ ಜಾಗವು ಸೋಮಾರಿಗಳ ಅಪರ ಕೆಲಸಗಳಿಗೆ ಆಶ್ರಯ ತಾಣದಂತಾಗಿದ್ದರಿಂದ ಅದನ್ನು ಮುಚ್ಚಿ ಬಿಡಲಾಗಿದೆ. ದೇಶದ ಎಲ್ಲೆಡೆಯೂ ಅಣಬೆಗಳಂತೆ ಕಂಡುಬರುವ 'ಮಾಲ್'ಗಳು ಇಲ್ಲಿ ಇಲ್ಲ. ಪ್ರಸಾರ ಭಾರತಿ ನಿಯಮಗಳು ಜಾರಿಗೆ ಬರುವ ಮೊದಲು ಸ್ಥಳೀಯ ಕಾರ್ಯಕ್ರಮಗಳನ್ನು ಬಿತ್ತರಿಸುವ ಸಣ್ಣ ದೂರದರ್ಶನ ನಿಲಯವೊಂದು ಕೆಲಸ ಮಾಡುತ್ತಿತ್ತು. ಆದರೆ ಈಗ ಇರುವ ಒಂದೇ ಚ್ಯಾನಲ್‌ನಲ್ಲಿ ಅಸ್ಸಾಂನಿಂದ ಕಾರ್ಯಕ್ರಮಗಳನ್ನು

ಚಿತ್ತರಿಸಲಾಗುತ್ತದೆ. ಇದರ ಹೊರತಾಗಿ ಡಿಶ್ ವ್ಯವಸ್ಥೆಯಲ್ಲಿ ಬೇರೆ ಬೇರೆ ಭಾಷೆಯ ಒಂದಷ್ಟು ವಾಹಿನಿಗಳೂ ಲಭ್ಯವಿದೆ. ಆದರೆ ನಿರಂತರ ಪ್ರಸಾರಕ್ಕಾಗಿ ವಿದ್ಯುಚ್ಛಕ್ತಿಯ ಅಭಾವವಿದೆ. ಒಂದೇ ಒಂದು ಸರ್ಕಾರೀ ರೇಡಿಯೋ ಚ್ಯಾನಲ್ ಇದ್ದು ಬೆಳಗಿನ ನಿಗದಿತ ಅವಧಿಯಲ್ಲಿ 'ನಿಶಿ' ಭಾಷೆಯ ಕಾರ್ಯಕ್ರಮವನ್ನು, ಮಧ್ಯಾಹ್ನದ ಅವಧಿಯಲ್ಲಿ ಹಿಂದಿ ಭಾಷೆಯ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತದೆ. ಅತೀ ಸುಂದರವಾದ, ಸಂಕೀರ್ಣವಾದ, ಸುಭಿಕ್ಷವಾದ, ಸುಮನೋಹರವಾದ ಜೀವವೈವಿಧ್ಯವನ್ನು, ಸಾಂಸ್ಕೃತಿಕ ಮತ್ತು ಮನೋವೈವಿಧ್ಯವನ್ನು ಹೊಂದಿರುವ ಅರುಣಾಚಲ ಪ್ರದೇಶ ಭೂಮಿಯ ಮೇಲಿರುವ ಒಂದು ಸೋಜಿಗದಂತೆ ಎನ್ನಿಸುತ್ತದೆ.

* * * * *

## 2. ನಡೆದಾಡುವ ಕನ್ನಡ ಎನ್ಸೈಕ್ಲೋಪೀಡಿಯಾ

ಯಂತ್ರ, ತಂತ್ರಜ್ಞಾನಗಳಂದ ಅವಶ್ಯಕತೆಗಿಂತ ಹೆಚ್ಚಿನ ಸಹಾಯ ಪಡೆದುಕೊಂಡು ಬದುಕನ್ನು ಸರಾಗ ಮಾಡಿಕೊಂಡಿದ್ದರೂ, ಅವುಗಳಂದ ದೂರ ಓಡಿ ಹೋಗಿ ಪ್ರಕೃತಿಯ ಮಡಿಲನಲ್ಲಿ ಅಡಗಿಕೊಳ್ಳುವ ಯಾವ ಅವಕಾಶವನ್ನೂ ಬಿಟ್ಟುಕೊಡಲಾರದ ಯುಗ ಇದು. ಪ್ರಕೃತಿಯ ಉಚ್ಛ್ರಾಯ ಸೌಂದರ್ಯದ ಮುಖವೇ ಆಗಿರುವ ಅರುಣಾಚಲ ಪ್ರದೇಶದ ಮೂಲಭೂತ ಪರಿಚಯ ನನಗಾಗಿದ್ದು ತಂತ್ರಜ್ಞಾನದ ಮೂಲಕವೇ ಎನ್ನುವುದು ಗಮನಾರ್ಹ. ಪ್ರವಾಸಕ್ಕೆ ಆಯ್ಕೆಯಾದ ಮೇಲೆ, ನಕಾಶೆ ಸಿದ್ಧಪಡಿಸಿಕೊಳ್ಳುತ್ತಿದ್ದಾಗ, ಶುಭಾಕಾಂಕ್ಷಿಗಳಾದ ಡಾ. ನಟರಾಜು ಸೀಗೇಕೋಟೆಯವರು ಯಾವುದೋ ಕೆಲಸಕ್ಕಾಗಿ ಫೋನ್ ಮಾಡಿದ್ದರು. ಮಾತು ಮಾತಿನಲ್ಲೇ ನನ್ನ ಪ್ರವಾಸದ ಬಗ್ಗೆ ಹೇಳದಾಗ "ಫೇಸ್ ಬುಕ್‌ನಲ್ಲಿ ಮಾಲ್ತೇಶ್ ಮೋಟೆಬೆನ್ನೂರು ಅಂತ ಒಬ್ಬರಿದ್ದಾರೆ. ಅವರು ಅರುಣಾಚಲ ಪ್ರದೇಶದಲ್ಲಿ ಇರುವುದಾಗಿ ಹೇಳಕೊಂಡಿದ್ದಾರೆ. ವಿಚಾರಿಸಿ ನೋಡಿ" ಎಂದರು. ಅಷ್ಟು ಸಾಕಾಯ್ತು ನನಗೆ. ಮಾಲ್ತೇಶ್ ಅವರಿಗೆ ಫೇಸ್‌ಬುಕ್‌ನಿಂದಲೇ ಒಂದು ಸಂದೇಶ ಕಳಸಿದೆ. ಎರಡು ದಿನಗಳಾದರೂ ಅವರಿಂದ ಉತ್ತರ ಬರಲಿಲ್ಲ. ಹಠ ಹಿಡಿದರೆ ನಡು ರಾತ್ರಿಯೂ ಬೀದಿಗೆ ಬಿದ್ದು ಕೆಲಸ ಮಾಡುವ ನನ್ನ ಚಡಪಡಿಕೆ ಹೇಳತೀರದು. ಅಲ್ಲೇ ಅವರ ಪರಿಚಯದ ಕಾಲಂನಲ್ಲಿ ಇದ್ದ ಮೈಸೂರಿನಲ್ಲಿ ಇರುವ ಅವರ ಸಹೋದರನಿಗೆ ಒಂದು ಸಂದೇಶ ಕಳಸಿದೆ. ಕೂಡಲೇ ಅವರಿಂದ ಫೋನ್ ಬಂತು. ನನ್ನ ಇಹಪರವನ್ನು ಕೂಲಂಕಷವಾಗಿ ತಿಳದು ಮಾಲ್ತೇಶ್ ಅವರ ಫೋನ್ ನಂಬರ್ ಕೊಟ್ಟರು. ಹೊತ್ತುಗೊತ್ತು ನೋಡದೆ ಅವರಿಗೆ ಫೋನಾಯಿಸಿದೆ. ತಮ್ಮ ಸಂತೋಷವನ್ನು ಸಂಯಮದಿಂದಲೇ ವ್ಯಕ್ತಪಡಿಸಿದ ಮಾಲ್ತೇಶ್ ಅವರು "ಇಲ್ಲಿ ಬನ್ನಿ ನನ್ನಿಂದಾಗುವ ಸಹಾಯವನ್ನೆಲ್ಲಾ ಮಾಡುತ್ತೇನೆ" ಎನ್ನುವ ಸಭ್ಯ ಆಹ್ವಾನವನ್ನೂ ಕೊಟ್ಟರು. ಅವರ ಧ್ವನಿ, ಮಾತಿನ ತೀರು ಎಲ್ಲವೂ ಅವರೊಬ್ಬ ಹೆಚ್ಚೇ ಅಹಂವುಳ್ಳ, ಸಹಾಯ ಮಾಡಲು ಅಷ್ಟೇನೂ ಮನಸ್ಸಿಲ್ಲದ, ವಯಸ್ಸಾದ ವ್ಯಕ್ತಿಯಂತೆ ನನಗೆ ಪರಿಚಯ ಮಾಡಿಕೊಟ್ಟಿತು. ಯಾವಾಗಲೋ ಒಮ್ಮೆ ಫೋನಿನಲ್ಲಿ ಮಾತನಾಡುವಾಗ ನನ್ನ ಪ್ರಯಾಣದ ದಿನಾಂಕವನ್ನು ಸಹಜವಾಗಿ ಅವರಿಗೆ ಹೇಳದ್ದೆ ಅಷ್ಟೆ.



**ಮಾಲ್ತೇಶ್ ಮೋಟೆಬೆನ್ನೂರು ಮತ್ತು ಅವರ ಪತ್ನಿ ಕಾವೇರಿ**

ಇವರನ್ನು ನಂಬಿಕೊಂಡರೆ ಆಗುವುದಿಲ್ಲ ಎನ್ನುತ್ತಿತ್ತು ಮನಸ್ಸು. ನನ್ನ ಪಾಡಿಗೆ ನಾನು ತಯಾರಿ ನಡೆಸಿಕೊಂಡೆ. ಮುಂಚಿತವಾಗಿಯೇ ಅರ್ಜಿ ಹಾಕಿಕೊಂಡು ದೆಹಲಿಯ ಕಚೇರಿಯಿಂದ ಇನ್ನರ್ ಲೈನ್ ಪರ್ಮಿಟ್ ಅನ್ನು ತರಿಸಿಕೊಂಡೆ. ಅಂತರ್ಜಾಲದ ಸಹಾಯ ಪಡೆದು ಗೌಹಾಟಿಯಿಂದ ಇಟಾನಗರಕ್ಕೆ ಹೆಲಿಕ್ಯಾಪ್ಟರನ್ನು ಕೂಡ ಕಾದಿರಿಸಿಕೊಂಡೆ. ಪ್ರಯಾಣದ ದಿನದಂದು ಬೆಳಗಿನ ಝೂವದ ವಿಮಾನದಲ್ಲಿ ಹೊರಟು 9 ಗಂಟೆಗೆಲ್ಲಾ ಗೌಹಾಟಿಯಲ್ಲಿ ಇದ್ದೆ. ಹೆಲಿಕಾಪ್ಟರ್ ಇದ್ದದ್ದು 11 ಗಂಟೆಗೆ. ಕಾಯುತ್ತಾ ಕುಳಿತಾಗಲೂ ಮಾಲ್ತೇಶ್ ಅವರಿಗೆ ಫೋನ್ ಮಾಡಲಿಲ್ಲ. ವಿಮಾನ ನಿಲ್ದಾಣದ ಆವರಣದಲ್ಲಿ ಇದ್ದ ಅರುಣಾಚಲ ಪ್ರದೇಶದ ಪ್ರವಾಸಿ ಮಾಹಿತಿ ಕೇಂದ್ರಕ್ಕೆ ಹೋಗಿ ಇಟಾನಗರದಲ್ಲಿ ಉಳಿದುಕೊಳ್ಳುವ ಬಗ್ಗೆ ಮಾಹಿತಿ ಪಡೆದೆ. ಪ್ರವಾಸಿ ಮಾಹಿತಿಯು ಆಕರ್ಷಣೀಯವಾಗಿ, ಸಮಾಧಾನಕರವಾಗಿ ಇಲ್ಲದಿದ್ದರೂ ಅನಿವಾರ್ಯತೆಯೆನಿಸಿತ್ತು. ಕಾಜಿರಂಗ ಕಾಡಿನ ಕಪ್ಪು ದಟ್ಟತೆಯ ಮೇಲೆ ಹಾರಾಡಿ, ಬ್ರಹ್ಮಪುತ್ರ ಮತ್ತು ದಿಹಿಂಗ್ ನದಿಗಳ ಮೇಲೆ ರೆಕ್ಕೆಯಾಡಿಸಿ, ಉತ್ತರ

ಮತ್ತು ದಕ್ಷಿಣ ಈಶಾನ್ಯ ರಾಜ್ಯಗಳ ಏಕೈಕ ಕೊಂಡಿಯಾಗಿರುವ, 7 ಕಿಲೋಮೀಟರ್‌ಗಳಷ್ಟು ಉದ್ದವಿರುವ 'ಬೊಂಬ್ರಾಗುರಿ' (ಬ್ರಹ್ಮಪುತ್ರನದಿಗೆ ಕಟ್ಟಲಾಗಿರುವ ಅಣೆಕಟ್ಟು)ಯನ್ನು ದಾಟಿ ನಹಲ್ಗಾಂವ್ ಹೆಲಿಪ್ಯಾಡಿಗೆ ಬಂದು ಇಳಿಯಲು ತೆಗೆದುಕೊಂಡ ಸಮಯ 1 ಗಂಟೆ40 ನಿಮಿಷಗಳು. ಹೊರಗೆ ಬಂದಾಗ ಸುಮ್ಮನೆ ಒಂದು ಫೋನ್ ಮಾಡೋಣ ಎನ್ನಿಸಿ ಮಾಲ್ತೇಶ್ ಅವರಿಗೆ ಫೋನ್ ಮಾಡಿದೆ. ಓಹ್, ಅದಿನ್ನೆಷ್ಟು ಉತ್ಸಾಹ ಸಂತೋಷ ಅವರ ಧ್ವನಿಯಲ್ಲಿತ್ತು ಎಂದರೆ "ಟ್ಯಾಕ್ಸಿ ಮಾಡಿಕೊಂಡು ಸೀದಾ ನಮ್ಮ ಯೂನಿವರ್ಸಿಟಿಯ ಲೈಬ್ರೆರಿಗೆ ಬಂದು ಬಿಡಿ" ಎಂದರು. ಲೈಬ್ರೆರಿಯ ಮುಂದಿಳಿದಾಗ ಇಪ್ಪತ್ತರ ಯುವಕನನ್ನೂ ನಾಚಿಸುವಂತಹ ಮೈಕಟ್ಟಿನ ಸೂಟು ಬೂಟುಧಾರಿ "ನಾನೇ ಮಾಲ್ತೇಶ್ ಮೋಟೆಬೆನ್ನೂರು" ಎಂದು ಕೈಕುಲುಕುತ್ತಾ ಪರಿಚಯ ಮಾಡಿಕೊಂಡಾಗ ನಾನು ಮಿಕಮಿಕ ಕಣ್ಣುಬಿಡುತ್ತಿದ್ದೆ. ಆಕಾಶದಿಂದ ಇಳಿದುಬಂದ ತಾರೆಯಂತೆಣಿಸಿ ನನ್ನನ್ನು ಅಲ್ಲಿರುವ ಸಿಬ್ಬಂದಿವರ್ಗಕ್ಕೆ, ವಿದ್ಯಾರ್ಥಿಗಳಿಗೆ ಹೆಮ್ಮೆಯಿಂದ ಪರಿಚಯ ಮಾಡಿಸಿಕೊಟ್ಟರು. ಕನ್ನಡದ ನೆಲ ನಮ್ಮಿಬ್ಬರನ್ನೂ ಭಾವನಾತ್ಮಕವಾಗಿ ಬೆಸೆದಿತ್ತು. ಅದರಲ್ಲೂ ಅವರು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬರುವ ನನ್ನ ಅಂಕಣ 'ಜೀನ್ಸ್ ಟಾಕ್'ಅನ್ನು ತಪ್ಪದೆ ಓದುತ್ತೀನಿ ಎಂದಾಗ ನನ್ನೊಳಗಲ್ಲಿ ಖುಷಿಯ ಹೊನಲು ಹರಿದಂತಾಯ್ತು. "ನಿಮಗಾಗಿ ಗೆಸ್ಟ್‌ಹೌಸ್ ಬುಕ್ ಮಾಡಿದ್ದೇನೆ. ಊಟ ಮಾಡಿ ರೆಸ್ಟ್‌ಮಾಡಿ. ನಾನು ಸಾಯಂಕಾಲ ಬರುತ್ತೇನೆ" ಎಂದು ಹೇಳಿ ಕಳಿಸಿಕೊಟ್ಟರು. ಅವರು ಸಂಜೆ 7 ಗಂಟೆಗೆ ನನ್ನ ಕೋಣೆಯ ಬಾಗಿಲು ಮುಟ್ಟುವುದರಲ್ಲಿ ನಾನು ಅಲ್ಲಿನ ಕೆಲಸದ ಜನರೊಡನೆ ಮಾತನಾಡುತ್ತಾ ಕ್ಯಾಂಪಸ್‌ನ ಒಂದುಭಾಗವನ್ನು ಸುತ್ತಿ ಬಂದಿದ್ದೆ. 6 ಗಂಟೆಗೆಲ್ಲಾ ಬೆನ್ನು ಮೂಳೆ ಕೊರೆಯುವಂತಹ ಚಳಿ ಹತ್ತಿತ್ತು. ಬೆಚ್ಚನೆಯ ಕೋಟು ಧರಿಸಿ ಮಾಲ್ತೇಶ್ ಬಂದವರೇ ಅದಿನ್ನೆಷ್ಟು ಆತ್ಮೀಯವಾಗಿ ಮಾತನಾಡಿಸಿದರು ಎಂದರೆ, ಬೆಂಗಳೂರಿನಲ್ಲಿ ಅವರ ಬಗ್ಗೆ ಮೂಡಿದ್ದ ತಪ್ಪು ಕಲ್ಪನೆಗೆ ನನಗೆ ಖೇದವೆನಿಸಿತು. ಅದೆಷ್ಟೋ ಬಾರಿ ಪೂರ್ವ ನಿರ್ಧಾರಕ್ಕೆ ಬರುವ ನಮ್ಮ ಸ್ವಭಾವವೇ ಜೀವನದ ಎಷ್ಟೋ ಸಂತೋಷಗಳನ್ನು ಅನುಭವಿಸಲು ಅಡ್ಡ ಬಂದುಬಿಡುತ್ತವೆ ಎನ್ನುವ ಸತ್ಯ ಮತ್ತೊಮ್ಮೆ ಸಾಬೀತಾಗಿತ್ತು. ರಾತ್ರಿ ಹನ್ನೊಂದರವರೆಗೂ ಬಿಡುವಿಲ್ಲದೆ ಅರುಣಾಚಲ ಪ್ರದೇಶದ ಕಣಕಣದ ಬಗ್ಗೆಯೂ ಸವಿಸ್ತಾರವಾಗಿ ಉಪನ್ಯಾಸ ಮಾಡಿದರು. ಅವರ ಮಾತನ್ನೆಲ್ಲಾ ಧ್ವನಿ

ಮುದ್ರಿಸಿಕೊಂಡೆ. ಆ ಜಾಗದ ಮೇಲೆ ಅವರಿಗಿರುವ ಅಭಿಮಾನ, ಹಂಚಿಕೊಳ್ಳಬೇಕು ಎನ್ನುವ ಉತ್ಸಾಹ, ಜೀವಪರತೆ ಎಲ್ಲವೂ ಅಸಾಮಾನ್ಯ.

ಡಾ. ಮಾಲ್ತೇಶ್ ಮೋಟಿಬೆನ್ನೂರು ಮೂಲತಃ ಧಾರವಾಡದವರು. ಕಳೆದ ಇಪ್ಪತ್ತೆಂಟು ವರ್ಷಗಳಿಂದ ಇಟಾನಗರದ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಮುಖ್ಯ ಗ್ರಂಥಾಪಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಚುರುಕುತನ, ಚಟುವಟಿಕೆಗಳನ್ನು ನೋಡಿದರೆ ಇನ್ನೆರಡು ವರ್ಷಗಳಲ್ಲಿ ನಿವೃತ್ತಿ ಹೊಂದಲಿದ್ದಾರೆ ಎಂದರೆ ನಂಬಲು ಕಷ್ಟವೇ ಸರಿ. ಹುದ್ದೆಯಲ್ಲಿ ಗ್ರಂಥಾಲಯ ಪಾಲಕರಾಗಿದ್ದರೂ ಮೆದುಳಿನಲ್ಲಿ ನೂರಾರು ಗ್ರಂಥಗಳನ್ನೇ ಹೊತ್ತು ತರುತ್ತಿದ್ದಾರೆ. ನಿಜಾರ್ಥದ ನಡೆದಾಡುವ ಎನ್ಸೈಕ್ಲೋಪೀಡಿಯಾ. ಕನ್ನಡ, ಇಂಗ್ಲಿಷ್, ಹಿಂದಿ, ಅಸ್ಸಾಮಿಸ್, ಒರಿಯ, ಬೆಂಗಾಲಿ, ಮಣಿಪುರಿ, ಅರುಣಾಚಲ ಪ್ರದೇಶದ ಬಡಕಟ್ಟು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುವ ಮಾಲ್ತೇಶ್ ಅವರಿಗೆ ನನ್ನದೇ ಕೆಲವು ಪುಸ್ತಕಗಳನ್ನು ಮತ್ತು 'ಕೇಳಿ ಕಥೆಯ' ಎನ್ನುವ ಕನ್ನಡ ಕಥೆಗಳ ಧ್ವನಿಮುದ್ರಿಕೆಯನ್ನು ಉಡುಗೊರೆಯಾಗಿ ಕೊಟ್ಟಿದ್ದು ಧನ್ಯತೆಯ ಭಾವ ಮೂಡಿಸಿತು. ಅಂತಾರಾಷ್ಟ್ರೀಯ ಮಟ್ಟದ ನಿಯತ ಕಾಲಿಕಗಳಲ್ಲಿ ಲೇಖನಗಳನ್ನು ಬರೆಯುತ್ತಾರೆ ಮತ್ತು ಪ್ರಬಂಧ ಮಂಡನೆ ಮಾಡುತ್ತಾರೆ. ಅಸ್ಸಾಂನ ಸುಪ್ರಸಿದ್ಧ ಲೇಖಕಿ ದಿ. ಇಂದಿರಾ ಗೋಸ್ವಾಮಿಯವರೊಡನೆ ಒಡನಾಟವಿಟ್ಟುಕೊಂಡಿದ್ದ ಮಾಲ್ತೇಶ್ ಇಂದಿರಾ ಅವರದ್ದೇ ಸಣ್ಣ ಕಥೆಗಳನ್ನು ನಾಟಕ ರೂಪಕ್ಕೆ ತಂದು ರಂಗ ಪ್ರದರ್ಶನಗಳನ್ನು ಮಾಡಿಸಿ ಸೈ ಎನಿಸಿಕೊಂಡಿದ್ದಾರೆ. ಅರುಣಾಚಲ ಪ್ರದೇಶದ ಸಂಸ್ಕೃತಿ, ಪರಂಪರೆ, ಭೌಗೋಳಿಕ ಸ್ಥಿತಿಗತಿ ಇವುಗಳ ಬಗ್ಗೆ ಸಾಕಷ್ಟು ವೀಡಿಯೋ ಡಾಕ್ಯುಮೆಂಟರಿಗಳನ್ನು ಮಾಡಿದ್ದಾರೆ. ಅರುಣಾಚಲ ಪ್ರದೇಶಕ್ಕೆ ಮೊಟ್ಟಮೊದಲ ಬಾರಿಗೆ ನಾಟಕ ಎನ್ನುವ ಪರಿಕಲ್ಪನೆಯನ್ನೇ ಪರಿಚಯಿಸಿದವರು ಮಾಲ್ತೇಶ್. ಸತತವಾಗಿ ಎಂಟ್ಹತ್ತು ವರ್ಷಗಳು ನಾಟಕಗಳನ್ನು ಪ್ರದರ್ಶಿಸಿದ ನಂತರ ಕಾರಣಾಂತರಗಳಿಂದ ಈಗ ಆ ರಂಗಸಂಸ್ಥೆಯನ್ನು ನಡೆಸಲಾಗುತ್ತಿಲ್ಲ ಎನ್ನುವ ಅಳಲು ಅವರಿಗಿದೆ. ಶಾಲಾ ಕಾಲೇಜುಗಳಲ್ಲಿ ನಾಟಕ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮೊದಲ ಬಾರಿಗೆ ಜಾರಿಗೆ ತರುವಲ್ಲಿ ಹಿರಿದಾದ ಪಾತ್ರವಹಿಸಿದ್ದ ಮಾಲ್ತೇಶ್

ಅವರಿಗೆ ಅಲ್ಲಿನ ಸಮಸ್ತ ಸ್ಥಳೀಯರೂ ಅಭಿಮಾನಿಗಳೇ. ಇಟಾನಗರದಲ್ಲಿ ಯಾವ ರಸ್ತೆಯಲ್ಲಿ ನಿಂತು ಯಾರನ್ನೇ ಕೇಳಿದರೂ ಅವರಿಗೆ ಮಾಲ್ತೇಶ್ ಅವರ ಪರಿಚಯ ಇರುತ್ತದೆ.

ಪಕ್ಕದ ರಾಜ್ಯವಾದ ಅಸ್ಸಾಂನ ಸುಂದರಿ ಕಾವೇರಿಯವರನ್ನು ಪ್ರೀತಿಸಿ ಮದುವೆಯಾಗಿರುವ ಇವರ ಒಬ್ಬನೇ ಮಗ ಬೆಂಗಳೂರಿನಲ್ಲಿ ಸ್ನಾತಕೋತ್ತರ ಪದವಿ ಓದುತ್ತಿದ್ದಾನೆ. ಕಾವೇರಿ ಶಾಲೆಯೊಂದರಲ್ಲಿ ಅಧ್ಯಾಪಕಿಯಾಗಿದ್ದಾರೆ. ವಿವಿಧ ರೀತಿಯ ಕಾಡು ಕಾಯಿಗಳನ್ನು, ಬಿದಿರನ್ನು ಬಳಸಿ ಉಪ್ಪಿನ ಕಾಯಿ ಹಾಕುವುದು, ಸಾಂಬಾರ ಪುಡಿಗಳನ್ನು ಮಾಡುವುದು, ಕೈದೋಟ ಮಾಡುವುದು ಅವರ ನೆಚ್ಚಿನ ಹವ್ಯಾಸ. ಅವರ ಮನೆಮುಂದಿನ ಅವರೇ ಮಾಡಿದ ಹೂವು ಮತ್ತು ತರಕಾರಿಗಳ ತೋಟ ಒಂದು ಧ್ಯಾನ ಮಂದಿರದಂತೆ ಭಾಸವಾಗುತ್ತದೆ. ಆಕೆ ಪ್ರತೀ ಹೂವು, ಎಲೆ, ಬೀಜ, ಹೀಚು, ಕಾಯಿಗಳೊಂದಿಗೆ ಮಾತನಾಡುತ್ತಾರೆ. ಅವರ ಸ್ಪರ್ಶಕ್ಕೆ ಹಸಿರು ಸ್ಪಂದಿಸುವುದು ನಿಜಕ್ಕೂ ಸುಂದರವಾದ ಅನುಭೂತಿ. ನಾಲ್ಕೈದು ಧಾರವಾಡ ಶೈಲಿಯ ಕನ್ನಡ ಪದಗಳನ್ನು ಕಲಿತಿದ್ದಾರೆ. ಪತಿಯ ನಿವೃತ್ತಿಯ ನಂತರ ಧಾರವಾಡದಲ್ಲಿ ನೆಲೆಯೂರಲು ಉತ್ಸುಕರಾಗಿದ್ದಾರೆ. ಅವರ ಸೌಂದರ್ಯಕ್ಕೆ ತಕ್ಕಂತಹ ಫ್ಯಾಷನ್ ಪ್ರಜ್ಞೆ ಹೊಂದಿರುವ ಕಾವೇರಿ ತಮ್ಮ ಬಳಿ ಅಸ್ಸಾಂನ ಪಾರಂಪರಿಕ ಉಡುಗೆಯಾದ ಮೇಖ್‌ಲಾದ ಜೊತೆಗೇ ಅರುಣಾಚಲ ಪ್ರದೇಶದ ವಿವಿಧ ಬುಡಕಟ್ಟಿಗೆ ಸಂಬಂಧಪಟ್ಟ ಉಡುಗೆಗಳನ್ನು ಇಟ್ಟುಕೊಂಡಿದ್ದಾರೆ. ಸ್ವಲ್ಪವೂ ಬೇಸರಗೊಳ್ಳದೆ, ಪ್ರತೀ ಉಡುಪನ್ನು ಬದಲಿಸುತ್ತಾ ಅದಕ್ಕೆ ಹೊಂದಿಕೊಳ್ಳುವಂತಹ ಪಾರಂಪರಿಕ ಒಡವೆಗಳನ್ನು ಹಾಕಿಕೊಂಡು ನನ್ನ ಕ್ಯಾಮೆರಾಕ್ಕೆ ಫೋಸ್ ಕೊಡುತ್ತಿದ್ದ ಅವರ ಉತ್ಸಾಹ ಅವರಿಗೆ ಷೋಡಶಿಯ ಮೆರುಗು ನೀಡಿತ್ತು. ಪ್ರವಾಸದ ಕಡೆಯದಿನ ಊಟಕ್ಕೆ ಕರೆದಿದ್ದರು. ಅವರದ್ದೇ ತೋಟದ ತರಕಾರಿಗಳನ್ನು ಹಾಕಿ ಹುಳಿ ಮಾಡಿದ್ದರು. ಅಲ್ಲಿಯೇ ನನ್ನ ಅಮ್ಮ ಹೇಳಿಕೊಟ್ಟಿದ್ದ ಮೈಸೂರು ಶೈಲಿಯ ಟೊಮ್ಯಾಟೊ ತಿಳಿಸಾರು ಮಾಡಿಕೊಟ್ಟೆ. ಇಲ್ಲಿಂದ ಅವರಿಗಾಗಿಯೇ ತೆಗೆದುಕೊಂಡು ಹೋಗಿದ್ದ ಉಡುಗೊರೆಯೊಂದನ್ನು ಕೊಟ್ಟಾಗ ಅವರು ಅದನ್ನು ತೆಗೆದುಕೊಂಡ ರೀತಿ ಜೀವನದ ಬಗ್ಗೆ ಅವರಿಗಿರುವ ಕುತೂಹಲ, ಆಸಕ್ತಿಯನ್ನು ಎದ್ದು

ತೋರಿಸುತ್ತಿತ್ತು. ಕಾವೇರಿ ಮತ್ತು ಮಾಲ್ತೇಶ್ ಅವರ ಆತಿಥ್ಯವನ್ನು ಸ್ವೀಕರಿಸದೆ ಹಿಂದಿರುಗಿದ್ದಿದ್ದರೆ ಬಹುಶಃ ಅರುಣಾಚಲ ಪ್ರದೇಶದ ಪ್ರವಾಸ ಅಪೂರ್ಣವಾಗಿಯೇ ಇರುತ್ತಿತ್ತು. ಕನ್ನಡದ ಯಾವುದೇ ಸಾಹಿತ್ಯ ಕೃತಿ ಅಸ್ಸಾಮಿ ಭಾಷೆಗಾಗಲೀ ಅಥವಾ ಲಿಪಿಯಿರುವ ಅರುಣಾಚಲ ಪ್ರದೇಶದ ಬುಡಕಟ್ಟು ಭಾಷೆಗಳಿಗಾಗಲೀ ಭಾಷಾಂತರಗೊಳ್ಳದಿರುವ ಬಗ್ಗೆ ತಮ್ಮ ಖೇದವನ್ನು ವ್ಯಕ್ತ ಪಡಿಸುತ್ತಲೇ ಅಲ್ಲಿನ ಎಷ್ಟೋ ಮೊದಲುಗಳಲ್ಲಿ ಕನ್ನಡಿಗರ ಪಾತ್ರವನ್ನು ಪರಿಚಯ ಮಾಡಿಕೊಟ್ಟರು  ಡಾ. ಮಾಲ್ತೇಶ್ ಮೋಟೆಬೆನ್ನೂರು. ಅವರಿಗೆ ಮತ್ತು ಅವರ ಕುಟುಂಬಕ್ಕೆ ಒಂದು ವಿಶೇಷ ಧನ್ಯವಾದಗಳು.

* * * * *

## ೩. ಧಾವಂತದಲ್ಲಿದೆ ಇಟ್ಟಿಗೆಯ ನಗರ

ಪೂರ್ವಾಧುನಿಕ ಮೌಖಿಕ ಚರಿತ್ರೆಯ ಪ್ರಕಾರ ಮತ್ತು ಸಾಂಸ್ಕೃತಿಕ ಆಚರಣೆಗಳ ಆಧಾರದಲ್ಲಿ ಇಲ್ಲಿನ ಜನರು ಮೂಲತಃ ಬರ್ಮಾ ದೇಶದ ಪರ್ವತ ಪ್ರದೇಶದಿಂದ ವಲಸೆ ಬಂದವರು. ಟಿಬೇಟ್–ಬರ್ಮಾ ವಲಸಿಗರು ಕಟ್ಟಿಕೊಂಡ ನಾಡಿದು. ಆದರೆ ಸರ್ಕಾರದ ಬಳಿ ಇರುವ ಪೌರಾಣಿಕ ದಾಖಲೆಗಳ ಪ್ರಕಾರ ಮಹಾಭಾರತ ಮತ್ತು ಕಾಳಿಕಾ ಪುರಾಣದಲ್ಲಿ, ಪರಶುರಾಮನ ಅವತಾರದಲ್ಲಿ, ಕೃಷ್ಣ–ರುಕ್ಮಿಣಿ ಕಲ್ಯಾಣ ಪರ್ವದಲ್ಲಿ ಉಲ್ಲೇಖವಾಗಿರುವ ಸ್ಥಳವಿದು. ಪುರಾಣಗಳಲ್ಲಿ 'ಪ್ರಭು ಪರ್ವತಶ್ರೇಣಿ' ಎಂಬುದಾಗಿ ಕರೆಯಲಾಗಿದೆ. ಹಾಗಾಗಿ ಇದು ಆರ್ಯರು ನೆಲೆಗೊಂಡಿದ್ದ ನಾಡು. ಆಧುನಿಕ ಇತಿಹಾಸದಲ್ಲಿ ಇದುಹಿಂದು ಮತ್ತು ಬೌದ್ಧ ಧರ್ಮ ಅನುಯಾಯಿಗಳ ಸಮ್ಮಿಳಿತ ನಾಡು ಎನ್ನುವ ಪುರಾವೆಗಳು ಸಿಗುತ್ತವೆ. ಚೀನಾ, ಟಿಬೇಟ್, ಬರ್ಮಾ ಇದು ಅವರಿಗೆ ಸೇರಿದ ಭೂಮಿ ಎನ್ನುವ ತಗಾದೆ ತೆಗೆದಾಗ ಬ್ರಿಟೀಷ್ ಆಡಳಿತದಲ್ಲಿ ಇದ್ದ ಭಾರತವು 1913–14 ರಲ್ಲಿ ಸಿಮ್ಲಾ ಒಪ್ಪಂದವನ್ನು ಮಾಡಿಕೊಂಡು ಇದು ಅಖಂಡ ಭಾರತಕ್ಕೆ ಸೇರಿದ ಇನಿಕಾ ಎಂಬುದಾಗಿ ಪ್ರಪಂಚಕ್ಕೆ ಘೋಷಿಸಿಬಿಟ್ಟಿದೆ. ಆದರೂ ಇಂದಿಗೂ ಚೀನಾ ದೇಶವು ಈ ಒಪ್ಪಂದವನ್ನು ಒಪ್ಪದೆ ತನ್ನ ಅಸಮಾಧಾನವನ್ನು ಆಗ್ಗಾಗೆ ಹೊರಗೆ ಹಾಕುತ್ತಲೇ ಇದೆ. ಹೊರಗಿನ ಟಿಬೇಟ್‌ಗೂ ಅರುಣಾಚಲ ಪ್ರದೇಶಕ್ಕೂ ಇರುವ ಗಡಿ ರೇಖೆಯನ್ನು ಮೆಕ್ ಮಹೋನ್ (Mc Mahon) ರೇಖೆ ಎಂಬುದಾಗಿ ಗುರುತಿಸಲಾಗಿದೆ.

ಹೀಗೆ ಇರುವ ಈ ರಾಜ್ಯಕ್ಕೆ 'ಇಟಾನಗರ' ರಾಜಧಾನಿಯಾಗಿದೆ. ಅಹೋಂ ಎನ್ನುವ ಸ್ಥಳೀಯ ಭಾಷೆಯಲ್ಲಿ ಇಟಾ ಎಂದರೆ ಇಟ್ಟಿಗೆ ಎನ್ನುವ ಅರ್ಥ. ಬಿಳಿ ಧೂಳು, ಕಪ್ಪು ಕೊಚ್ಚೆ, ಕೆಂಡದಂತ ಬಿಸಿಲು, ಬೆನ್ನು ಕದಡುವ ಚಳಿ, ಭುಜಕ್ಕೆ ತಗಲುವ ಜನ, ಟ್ರಾಫಿಕ್‌ಜ್ಯಾಂ, ಕಡಿದಾದ ರಸ್ತೆಗಳು, ಕೊಳಕು ಕೊಳಕು ಗುಪ್ಪೆಗಳು, ನಿಜ , ಕಣ್ಣಿಗೆ ಎದ್ದು ಕಾಣವ ಇವುಗಳನ್ನು ನೋಡಿ 'ಇದು ಈ ಊರು' ಎನ್ನುವ ಅಭಿಪ್ರಾಯಕ್ಕೆ ಬಂದರೆ ನಾ ದೊಡ್ಡ ಮೂರ್ಖಳೇ ಸರಿ ಎನ್ನುವುದು ಮೊದಲಿನ ಪ್ರವಾಸದ ಅನುಭವದಿಂದ ತಿಳಿದಿತ್ತು. ಹಾಗಾಗಿಯೇ, ಪೂರ್ವಾಗ್ರಹವಿಲ್ಲದೆ ಈ ಊರಿನ ಗಲ್ಲಿಗಲ್ಲಿಗಳನ್ನು ಸುತ್ತಿದೆ. 'ನಹಾರ್‌ಲಗನ್' ಎನ್ನುವುದು ಇಟಾನಗರದಿಂದ ೯ ಕಿಲೋಮೀಟರ್ ಅಷ್ಟು

ದೂರದಲ್ಲಿ ಇರುವ ಅವಳ ನಗರ. (ನಮ್ಮ ಹುಬ್ಬಳ್ಳಿ ಧಾರವಾಡದ ಹಾಗೆ). ಇಲ್ಲಿ ಹೆಲಿಕಾಪ್ಟರ್ ನಿಲ್ದಾಣವಿದೆ. ಅಸ್ಸಾಂನ ಗೌಹಾಟಿ ಹಾಗೂ ಕೋಲ್ಕತ್ತಾ ನಗರಗಳಿಂದ ಇಲ್ಲಿಗೆ ಹೆಲಿಕ್ಯಾಪ್ಟರ್‌ನಲ್ಲಿ ಬರಬಹುದಾದ ಸೌಲಭ್ಯವಿದೆ. ಅಸ್ಸಾಂನ ಲಿಕಾಬಲಿಯಿಂದ 4 ಗಂಟೆಗಳ ಹಾಗೂ ಗೌಹಾಟಿಯಿಂದ 8 ಗಂಟೆಗಳ ಕಾಲ ರಸ್ತೆ ಪ್ರಯಾಣದ ದೂರಲ್ಲಿ ಇರುವ ಇಟಾನಗರದಲ್ಲಿ ಪಳಯುಳಿಕೆಯಾಗಿಯೂ ಜೀವಂತವಾಗಿರುವ ಚರಿತ್ರೆಯಿದೆ, ಧಾರ್ಮಿಕ ಶ್ರೀಮಂತಿಕೆ ಇದೆ, ಸಂಸ್ಕೃತಿ-ನಂಬಿಕೆಗಳ ಆಚರಣೆಯ ಕುರುಹು ಇದೆ, ಅಳದ-ಉಳದ ಭಾಷೆಗಳ ಶಬ್ದವಿದೆ, ಅಕ್ಷರ -ಸಾಹಿತ್ಯಗಳ ಒರತೆಯಿದೆ, ಹಬ್ಬ-ಜಾತ್ರೆಗಳ ಲಾಸ್ಯವಿದೆ, ಮನುಕುಲದ ಕಲರವವಿದೆ, ಜಗತ್ತಿನ ಬೆರಗಿಗೆ ತೆರೆದುಕೊಳ್ಳುವ ಹಂಬಲವಿದೆ, ಹೊಂದಿಕೊಳ್ಳುವ ಧಾವಂತವಿದೆ.

ಇಂತಹ ಇಟಾನಗರದ ಇಂಚಿಂಚನ್ನೂ ನೋಡಲು ನನ್ನ ಜೊತೆಯಾದ ಹುಡುಗ ಜಯಂತೋ ಬೋಡ. ಅಸ್ಸಾಂ ಮೂಲದವನಾದರೂ 24 ವರ್ಷದವ ಹುಟ್ಟಿದ್ದು ಬೆಳೆದದ್ದು ಎಲ್ಲಾ ಇಲ್ಲೇ. ಅವನ ಭೇಟಿಯ ಮೊದಲಲ್ಲೇ ಹೇಳದೆ "ನನಗೆ ಇಲ್ಲಿನ ವೃತ್ತ ಪತ್ರಿಕೆಗಳನ್ನು ಓದಬೇಕಿದೆ. ಮೊದಲು ಅದನ್ನು ತೆಗೆದುಕೊಡು ಆಮೇಲೆ ಮುಂದಿನ ಪ್ರಯಾಣ" ಎಂದು. ಬರಹಗಾರ್ತಿ ಅಮ್ಮ ಎದೆಯೂಡುತ್ತಿರುವಾಗ ಪತ್ರಕರ್ತ ಪಪ್ಪ ನ್ಯೂಸ್ ಪೇಪರ್ಸ್ ಓದಿಸುತ್ತಿದ್ದರು. ನನ್ನ ಮೊದಲ ಹಾಸಿಗೆ, ಹೊದಿಕೆ, ಆಟಿಕೆ, ತಿನಿಸು, ಸ್ನೇಹಿತ, ಗುರು ಎಲ್ಲವನ್ನೂ ನ್ಯೂಸ್ ಪೇಪರ್ಸ್ ಆಗಿಸಿಕೊಟ್ಟವರು ಅಮ್ಮ, ಪಪ್ಪ. ಅದೀಗ ನನ್ನ ಅಭ್ಯಾಸವೂ ಅಲ್ಲ, ಹವ್ಯಾಸವೂ ಅಲ್ಲ ಬದಲಿಗೆ ಸ್ವಭಾವ ಆಗಿಬಿಟ್ಟಿದೆ. ಜಗತ್ತನ್ನು ಪ್ರೀತಿ ಮಾಡಲು ಕಲಿಸಿದ್ದು ನಿಜಾರ್ಥದಲ್ಲಿ ನ್ಯೂಸ್ ಪೇಪರ್ಸ್. ಹಾಗಾಗಿ ಎಲ್ಲಿಯೇ ಹೋದರೂ ಸ್ಥಳೀಯ ವೃತ್ತ ಪತ್ರಿಕೆಗಳ ಕಡೆಗೆ ಒಂದು ಸಣ್ಣ ಆಕರ್ಷಣೆ ಇದ್ದೇ ಇರುತ್ತದೆ. ಜಯಂತೋ ಬೆಳಗಿನ ಉಪಹಾರಕ್ಕೂ ಮೊದಲೇ ವೃತ್ತ ಪತ್ರಿಕೆಗಳ ಅಂಗಡಿಗೆ ಕರೆದುಕೊಂಡು ಹೋದ. ಅಷ್ಟು ಮಾತ್ರವಲ್ಲ ಇಡೀ ದಿನ ಪದೇ ಪದೇ "ಇನ್ನಾ್ಯವುದಾದರೂ ಪೇಪರ್‌ಬೇಕಾ? ಪುಸ್ತಕಬೇಕಾ? ನಾಳೆಯೂ ನಿಮಗೆ ನ್ಯೂಸ್ ಪೇಪರ್ಸ್ ಬೇಕಾ?" ಎಂದು ಪ್ರೀತಿಯಿಂದ ವಿಚಾರಿಸಿಕೊಳ್ಳುತ್ತಿದ್ದ. ಊರ ಸುತ್ತಾಟ ಶುರುವಾಗಿದ್ದು ಇಟಾನಗರದ ಕೋಟೆಯಿಂದ.

**ಇಟ್ಟಿಗೆಯ ಕೋಟೆ**: ಕೋಟೆಯ ದಾರಿಯಲ್ಲಿಯೇ ಇದೆ ಪುರಾತತ್ವ ಶಾಸ್ತ್ರ ಇಲಾಖೆಯ ಕಚೇರಿ. ಬನ್ನೂರು, ಮಳವಳ್ಳಿ ಪ್ರಾಂತ್ಯಗಳಲ್ಲಿ ಕಂಡು ಬರುವಂತಹ ಮನೆಗಳಂತಹ ಒಂದು ಸಣ್ಣ ಮನೆಯೇ ಕಚೇರಿಯಾಗಿದೆ. ಬಿಗಿಯಾಗಿದ್ದ ಸಣ್ಣ ಗೇಟ್ ಅನ್ನು ದೂಡಿ ಒಳಹೋದಾಗ ಎದುರಾಗಿದ್ದು 'ರೀಮೇ ಕೂಂಯಾ' ಎನ್ನುವ ಹೆಸರಿನ ಸುಂದರ ಯುವತಿ. ಸ್ಕರ್ಟಿನಂತಹ ಪಾರಂಪರಿಕ ಬಟ್ಟೆ ಧರಿಸಿದ್ದ ಕಾಡಿಗೆ ತೀಡಿದ್ದ ಚುರುಕು ಕಣ್ಣಿನ, ಅಗಲಭುಜದ ಆಕೆ ಅದೆಷ್ಟು ಸುಂದರವಾಗಿದ್ದಳೆಂದರೆ, ನಾನು ಅಲ್ಲಿಗೆ ಯಾಕಾಗಿ ಹೋಗಿದ್ದೆ ಎನ್ನುವುದನ್ನೇ ಮರೆತು ಅವಳ ಫೋಟೊಗಳನ್ನು ತೆಗೆಯುತ್ತಾ, ಅದು ಇದು ಮಾತನಾಡುತ್ತಾ ಕುಳಿತುಬಿಟ್ಟೆ. ಒಬ್ಬರು ಒಳಹೋದರೆ ಮತ್ತಿಬ್ಬರು ಹೊರ ಬರುವಷ್ಟು ಚಿಕ್ಕದಾದ ಕೋಣೆಯಲ್ಲಿತ್ತು ಆಕೆಯ ಟೇಬಲ್. ಅದರ ಮೂಲೆಯಲ್ಲಿ 'ಆಕಾಶಭೈರವ ಕಲ್ಪ' ಎನ್ನುವ ನೀಲಿಬಣ್ಣದ ರಕ್ಷಾಪುಟ ಹೊತ್ತು ಕುಳಿತ್ತಿದ್ದ ಮಧ್ಯಮ ಗಾತ್ರದ ಪುಸ್ತಕವೊಂದು ನನ್ನ ಗಮನ ಸೆಳೆಯಿತು. ತಿರುವಿ ಹಾಕಿದಾಗ ತಿಳಿಯಿತು ಅದರಲ್ಲಿ ಇಟಾನಗರದ ಬಗ್ಗೆ ಸಂಪೂರ್ಣ ಮಾಹಿತಿ ಇದೆಯೆಂದು. ಅದು ಪುಣೆಯ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಅವರ ಪ್ರಕಟಣೆ ಪುಸ್ತಕವಾಗಿತ್ತು. ಅದರ ಪ್ರತಿಯೊಂದು ಮಾರಾಟಕ್ಕಿದೆಯೇ ಎಂದು ಕೇಳಿದೆ. ಆದರೆ ಇರಲಿಲ್ಲ. ಆದರೆ ಅಲ್ಲೇ ಕುಳಿತು ಓದಿಕೊಳ್ಳಲು ಪರ್ಮಿಷನ್ ಕೊಟ್ಟಳು ರೀಮೇ. ಹೊತ್ತು ಹೋಗಿದ್ದೇ ತಿಳಿಯಲಿಲ್ಲ. ಸುಮಾರು ಎರಡು ಗಂಟೆಗಳ ಕಾಲ ಅದನ್ನು ಓದುತ್ತಾ, ಅವಳೊಡನೆ ಮಾತನಾಡುತ್ತಾ, ಟಿಪ್ಪಣಿ ಮಾಡಿಕೊಂಡು ಹೊರಬರುವ ವೇಳೆಗೆ ಕೋಟೆಗೆ ಹೋಗುವ ಒಂದು ದಾರಿಯನ್ನು ಕಾಮಗಾರಿಗಾಗಿ ಮುಚ್ಚಿಬಿಟ್ಟಿದ್ದರು. ಇನ್ನೊಂದು ದಿಕ್ಕಿನ ದಾರಿಯಲ್ಲಿ ಮೇಲೇರಲು ಸಂಜೆಯೂ ಆಗುತ್ತಿತ್ತು. ನನ್ನ ನಿರಾಸೆಯನ್ನು ಗಮನಿಸಿದ ಜಯಂತೋ "ಯೋಚಿಸಬೇಡಿ ಬನ್ನಿ. ಒಂದೊಳ್ಳೆ ಜಾಗಕ್ಕೆ ಕರೆದುಕೊಂಡು ಹೋಗುತ್ತೇನೆ. ಅಲ್ಲಿಂದ ನಿಮಗೆ, ನಿಮ್ಮ ಕ್ಯಾಮೆರಾಕ್ಕೆ ಕೋಟೆ ಸುಂದರವಾಗಿ ಕಾಣುತ್ತದೆ" ಎಂದು ಒಂದಷ್ಟು ದೂರ ನಗರದಿಂದ ಹೊರ ಭಾಗದಲ್ಲಿ, ಸುಮಾರು ಎತ್ತರವೇ ಇದ್ದ ಗುಡ್ಡದ ಮೇಲೆ ಕರೆದುಕೊಂಡು ಹೋದ. ಮೇಲೇರಿ ನಿಂತು ನೋಡಿದಾಗ ಇಟಾಕೋಟೆಯ ಪಳಯುಳಿಕೆಗಳು ನಮ್ಮ ಸಕಲೇಶಪುರದ ಬಳಿಯಿರುವ ಮಂಜರಾಬಾದ್ ಕೋಟೆಯ ಒಂದು ಪಾರ್ಶ್ವದಂತೆ ಕಾಣುತ್ತಿದ್ದವು. 1350 ಹಾಗೂ 1450ನೆಯ ಇಸವಿಗಳ ನಡುವೆ

ಇಸ್ಲಾಂ ದಾಳಿಗೆ ಹೆದರಿದ ಇಲ್ಲಿನ ಮೂಲ ನಿವಾಸಿಗಳು 80 ಲಕ್ಷ ಸುಟ್ಟ ಇಟ್ಟಿಗೆಗಳನ್ನು ಉಪಯೋಗಿಸಿ ಅಸಮಾನ ಅಳತೆಯಲ್ಲಿ ಕಟ್ಟಿಕೊಂಡಿರುವ ಇಟಾಕೋಟೆಗೆ ಸೌವ್ ಡಾನ್, ವಿಸ್ತಾನ್ ಹಾಗು ಈಸ್ತಾನ್ ಎನ್ನುವ ಮೂರು ದಿಕ್ಕುಗಳ ಗೇಟ್‌ಗಳಿವೆ. ಕೋಟೆಯ ನಿರ್ಮಾಣ ಸಮಯವನ್ನು ಮಾಯಾಪುರವನ್ನು ಆಳಿದ ಜಿತಾರಿ ಮನೆತನಕ್ಕೆ ಸೇರಿದ ರಾಮಚಂದ್ರ ಅಥವಾ ಮಾಯಾಮತ್ತ ದೊರೆ ಮತ್ತು ಆತನ ಮಗ ಅರಿಮತ್ತನ ಆಡಳಿತ ಕಾಲವೆಂದು ಗುರುತಿಸಲಾಗಿದೆ. ದಿಬಾಂಗ್ ಮತ್ತು ಲೋಹಿತ ನದಿಗಳ ನಡುವೆ ಹರಡಿಕೊಂಡಿರುವ ಈ ಜಾಗವನ್ನು ಮೊಟ್ಟ ಮೊದಲನೆಯ ಆರ್ಯರ ರಾಜ್ಯಭಾರ ನಡೆದ ಸ್ಥಳವೆಂದೂ ಹೇಳಲಾಗುತ್ತದೆ. ಹತ್ತನೆಯ ಶತಮಾನದಿಂದ ಹದಿನಾರನೆಯ ಶತಮಾನದವರೆಗೂ ಸೂತಿಯ (ಚುತಿಯಾ) ಮತ್ತು ಅಹೋಂ ರಾಜಮನೆತನದ ಆಳ್ವಿಕೆಯಲ್ಲಿದ್ದ ಇಟಾನಗರದ ಈ ಕೋಟೆಯ ಗೋಡೆಗಳ ಎತ್ತರ 640.24 ಚದರ ಮೀಟರ್ಗಳಾಗಿದೆ. ಕ್ಯಾಮೆರ ಕಣ್ಣಿಗಂತೂ ದಿಡ್ಡಿಯ ಗೋಡೆಗಳಂತೂ ಮುಂಗಾರಿನಲ್ಲಿ ಮಿಂದ ಸುಂದರಿಯಂತೆ ಕಾಣುತ್ತವೆ. ಸತತವಾಗಿ 12 ವರ್ಷಗಳ ಕಾಲ ಕಟ್ಟಿರುವ ಈ ಕೋಟೆಯ ನಿರ್ಮಾಣದಲ್ಲಿ ಬಳಸಿರುವ ಪ್ರತಿಯೊಂದು ಇಟ್ಟಿಗೆಯೂ ಕೈಯಿಂದ ಮಾಡಿದ್ದಾಗಿಯೂ, ಪ್ರತೀ ಇಟ್ಟಿಗೆಯ ಮೇಲೂ ಹೆಂಗಸರ, ಮಕ್ಕಳ ಕೈಗುರುತುಗಳಿವೆ. ಪ್ರಾಣಿಗಳ ಮುಖದ ಮತ್ತು ರಂಗೋಲಿಯಂತಹ ಚಿತ್ತಾರಗಳಿವೆ. ಅದಕ್ಕೇ ಇರಬೇಕು ಈ ಕೋಟೆಯ ಪಳಿಯುಳಿಕೆಗಳು ಈಗಲೂ ಗತಿಸಿಹೋದ ಕಾಲಘಟ್ಟವೊಂದರ ನೆನಪಿನಲ್ಲಿಯೇ ಉಸಿರಾಡುತ್ತಿರುವಂತೆ ತೋರುತ್ತವೆ. ಹೊತ್ತು ಮುಳುಗುವವರೆಗೂ ಕೋಟೆಯನ್ನೇ ನೋಡುತ್ತಾ, ಮುಂದಿನ ಬೀದಿಗಳನ್ನು ಸುತ್ತುವುದನ್ನು ಮರುದಿನಕ್ಕೆ ಮುಂದೂಡುತ್ತಾ ಹಿಂದಿರುಗಿದೆ.

**ಬೌದ್ಧ ಸ್ತೂಪಗಳು**: ಮಾರನೆಯ ಬೆಳಗಿನಲ್ಲಿ ಸೂರ್ಯ ಫಳಫಳಿಸುತ್ತಿದ್ದ. ದೇಶದ ಬೇರೆ ರಾಜ್ಯಗಳ ರಾಜಧಾನಿಗಳಿಗೆ ಹೋಲಿಸಿದಾಗ ಶೇಕಡ 70ರಷ್ಟು ಹೆಚ್ಚಿನ ಜನ ಸಾಂದ್ರತೆಯನ್ನು ಹೊಂದಿರುವ ಇಟಾನಗರದಲ್ಲಿ ಮಹಾಯಾನ ಮತ್ತು ತೇರಾವಾದ ಎರಡೂ ಪಂಗಡಗಳಿಗೂ ಸೇರಿದ ಒಂದೊಂದು ಬೌದ್ಧ ಪ್ರಾರ್ಥನಾ ಸ್ಥಳಗಳಿವೆ. ತೇರಾವಾದಕ್ಕೆ ಸೇರಿದ ಬೌದ್ಧ ಮಂದಿರವನ್ನು



**ಇಟಾನಗರದಲ್ಲಿರುವ ತೇರಾವಾದ ಪಂಗಡದ ಗೊಂಪಾ (ಬೌದ್ಧ)**

'ಗೊಂಪಾ' (ಕ್ಯೊಂಗ್ ತೇಯರ್ಯಾವೆದ) ಎಂದು ಕರೆಯಲಾಗುತ್ತದೆ. ಎತ್ತರದ ಗುಡ್ಡವೊಂದರ ಮೇಲಿರುವ ಸುಂದರ ಹಸಿರು ಸಿರಿಯ ನಟ್ಟನಡುವೆ ಟಿಬೇಟಿಯನ್ ಶೈಲಿಯ ಪ್ರಭಾವ ಎದ್ದು ಕಾಣುವಂತಹ ಮಂದಿರ ಅದಕ್ಕೆ ಅತೀ ಸುಂದರವಾದ ಗಾಢ ಹಳದಿ ಬಣ್ಣದ ಮೇಲ್ಛಾವಣಿ. ಅದರ ಮುಂದೆಯೇ ಬೆಳ್ಳಂಬಿಳ ಬಣ್ಣದ ದುಂಡನೆಯ ಸ್ಥೂಪ. ಅದರ ಸುತ್ತಲೂ ಕೆಂಪುವರ್ಣದ ಸುತ್ತುಗಂಟೆಗಳು. ಅದರ ಪಕ್ಕದಲ್ಲಿ ಈಗಿನ ದಲೈಲಾಮ ಅವರೇ ಸ್ವತಃ ನೆಟ್ಟು ಬೆಳೆಸಿರುವ ದೇವದಾರು ಮರ. ಅದರ ಎದುರೇ ಇರುವ ಇಪ್ಪತ್ತು ಮೆಟ್ಟಿಗಳನ್ನು ಇಳಿದು ಹೋದರೆ ಒಂದು ಅಟ್ಟಣಿಗೆ. ಅಲ್ಲಿ ನಿಂತು ನೋಡಿದರೆ ಸೌಂದರ್ಯಕ್ಕೆ ಹೊಸ ಭಾಷ್ಯ ಬರೆಯುತ್ತಿರುವಂತೆ ತೋರುವ ಇಟಾನಗರ ಮತ್ತು ಸುತ್ತಲಿನ ಪ್ರದೇಶ. ಏಕಾಂತದ ನಿಜಾರ್ಥವನ್ನು ಕಂಡುಕೊಳ್ಳಲು ಹೇಳಿ ಮಾಡಿಸಿದಂತಹ ಜಾಗವಾದರೂ ಆ ದಿನ ನಾನು ಹೋಗಿದ್ದ ಸಮಯದಲ್ಲಿ ಮಂದಿರದ ಒಳಗೆ ಹೆಜ್ಜೆ ನಮಸ್ಕಾರ ಹಾಕುತ್ತಿದ್ದ ಬೌದ್ಧ ಬಿಕ್ಷು, ಅದೇ ಗುಡ್ಡದ ತಪ್ಪಲಿನಲ್ಲಿದ್ದ ಕಾಲೇಜಿನಲ್ಲಿ ನಡೆಯುತ್ತಿದ್ದ ಯುವ ಮಹೋತ್ಸವ, ಅಲ್ಲಿಂದ ಕೇಳಿ ಬರುತ್ತಿದ್ದ ಹಿಂದಿ ಸಿನೆಮಾ ಹಾಡು ಅದಕ್ಕೂ ತನಗೂ ಸಂಬಂಧ ಕಲ್ಪಿಸಿಕೊಳ್ಳಲು ಹೆಣಗುತ್ತಿದ್ದ ಮಂದಿರದ ಘಂಟಾನಾದ ಎಲ್ಲವೂ ನನ್ನನ್ನು ಕಳೆದುಹೋಗದಂತೆ ತಡೆದಿದ್ದವು.

**ವಸ್ತು ಸಂಗ್ರಹಾಲಯ**: ಶೇಕಡ 66.95 ರಷ್ಟು ಅಕ್ಷರಸ್ಥರನ್ನು ಹೊಂದಿರುವ ಇಟಾನಗರದ ಮತ್ತೊಂದು ಆಕರ್ಷಣೆ ಜವಹರಲಾಲ್ ನೆಹರು ವಸ್ತು ಸಂಗ್ರಹಾಲಯ. ಅರುಣಾಚಲ ಪ್ರದೇಶದ ಬುಡಕಟ್ಟು ಜನರ ಸಂಸ್ಕೃತಿಯನ್ನು ಬಿಂಬಿಸುವ ಹಾಗೂ ರಾಜ್ಯದ ಇತಿಹಾಸವನ್ನು ಅಧ್ಯಯನ



**ಜವಹರ್‌ಲಾಲ್ ನೆಹರು ಸಂಗ್ರಹಾಲಯದಲ್ಲಿಟ್ಟಿರುವ ಸಾಮಾಗ್ರಿಗಳು**

ಕಟ್ಟಡವೊಂದರಲ್ಲಿ ಈ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. ಸುತ್ತಲೂ ಹೂದೋಟದಿಂದ ಅಲಂಕೃತಗೊಂಡಿರುವ ಈ ಜಾಗದ ಪ್ರಶಾಂತತೆ ಮನಮೋಹಕವೆನಿಸುತ್ತದೆ. ಮೊದಲನೆಯ ಅಂತಸ್ತಿನಲ್ಲಿ ಮೊನ್ಪಾ, ಆದಿ, ವಾಂಚೋ, ಮಿಶಿಮಿ, ಅಸು. ತಂಗ್ಸಾ, ಆದಿ ಪದಮ್ ಹಾಗು ಇನ್ನೂ ಮುಂತಾದ ಬುಡಕಟ್ಟಿಗೆ ಸೇರಿದ ಜನರುಗಳು ಶತಮಾನಗಳಿಂದ ಉಪಯೋಗಿಸುತ್ತಿದ್ದ ಉಡುಪುಗಳು, ಗೃಹಾಲಂಕಾರ ವಸ್ತುಗಳು, ಒಡವೆಗಳು, ಪಾತ್ರೆ ಪಡಗಗಳು, ಅಡುಗೆ ಪದಾರ್ಥಗಳು, ಊಟಕ್ಕೆ ಬಳಸುತ್ತಿದ್ದ ತಟ್ಟೆ ಲೋಟಗಳು, ತಲೆಗೆ ಹಾಕಿಕೊಳ್ಳುತ್ತಿದ್ದ ವಿವಿಧ ಟೊಪ್ಪಿಗೆಯಂತಹ ರಕ್ಷಕಗಳು, ಮರದ ಹಾಗೂ ಕಂಚಿನಲ್ಲಿ ಮಾಡಿದ ಬುದ್ಧನ ಪ್ರತಿಮೆಗಳು ಮತ್ತು ವಿವಿಧ ಮುಖವಾಡಗಳು, ಮೀನು, ಇಲಿ, ಮೊಲ, ಪಕ್ಷಿಗಳನ್ನು ಹಿಡಿಯಲು ಬಳಸುತ್ತಿದ್ದ ಮರದ ಜಾಲಿಗಳು, ಮರ ಮತ್ತು ಕಲ್ಲಿನಿಂದ ಮಾಡಿರುವ ಬಿಲ್ಲು ಬಾಣ, ಈಟಿ

ಭರ್ಜಿಯಂತಹ ಆಯುಧಗಳು, ಸಂಗೀತ ಮತ್ತಿತರ ಮನೋರಂಜನೆಯ ಸಾಧನಗಳು, ವ್ಯವಸಾಯ ಮಾಡಲು ಬಳಸುತ್ತಿದ್ದ ಉಪಕರಣಗಳು, ಚುಟ್ಟಾ ತಯಾರಿಸಲು ಮತ್ತು ಸೇದಲು ಬಳಸುತ್ತಿದ್ದ ಸಲಕರಣೆಗಳು, ಮದ್ಯ ತಯಾರಿಸಲು ಬಳಸುತ್ತಿದ್ದ ಮರದ ಪಾತ್ರೆಗಳು, ಅಂದಿನ ಜೀವನ ಶೈಲಿಯನ್ನು ತೋರಿಸಿಕೊಡುವ ಬೊಂಬೆ ಮಾದರಿಗಳು, ಕರಕುಶಲ ವಸ್ತುಗಳು ಇವೆಲ್ಲವನ್ನೂ ಸಂಗ್ರಹಿಸಿ ಇಡಲಾಗಿದೆ. ಎರಡನೆಯ ಅಂತಸ್ತಿನಲ್ಲಿ ಇಟಾಕೋಟೆಯ ಪಳಯುಳಿಕೆಗಳು ಮತ್ತು ಆಗಿನ ರಾಜರ ಆಳ್ವಿಕೆಯನ್ನು ನೆನಪಿಸುವ ಸಾಮಗ್ರಿಗಳನ್ನು ಸಂಗ್ರಹಿಸಿ ಇಡಲಾಗಿದೆ. ಮ್ಯೂಸಿಯಂಗೆ ಸೇರಿದಂತೆ ಸಣ್ಣ ಗ್ರಂಥಾಲಯವೂ ಇದೆ. ಆಗೊಮ್ಮೆ ಈಗೊಮ್ಮೆ ಬಿದಿರು ಮತ್ತು ಬೆತ್ತದ ಸಾಮಾಗ್ರಿಗಳ ತಯಾರಿಕೆಯ ಬಗ್ಗೆ ತರಬೇತಿ ಶಿಬಿರವನ್ನೂ ಅಲ್ಲಿ ನಡೆಸಲಾಗುತ್ತದೆ. ಅರುಣಾಚಲ ಪ್ರದೇಶದ ಮೊಟ್ಟಮೊದಲ ಮತ್ತು ಏಕೈಕ ಮೌಂಟ್ ಎವೆರೆಸ್ಟ್ ಹತ್ತಿದ ಸಾಹಸಿ ತಪಿ ಮಿರ ಅವರು ತಾವು ಚಾರಣಕ್ಕೆ ಬಳಸಿದ್ದ ಎಲ್ಲಾ ಸಾಮಗ್ರಿಗಳನ್ನು 2011ರಲ್ಲಿ ಪ್ರದರ್ಶನಕ್ಕಾಗಿ ಈ ಸಂಗ್ರಹಾಲಯಕ್ಕೆ ಕೊಡುಗೆ ನೀಡಿದ್ದಾರೆ. ಅವುಗಳನ್ನೂ ಇಲ್ಲಿ ಒಪ್ಪವಾಗಿ ಜೋಡಿಸಲಾಗಿದೆ. ಸಂತೋಷದ ವಿಷಯವೆಂದರೆ ಇಲ್ಲಿ ಫೋಟೊ ತೆಗೆಯಲು ಯಾವುದೇ ನಿಷೇಧವಿಲ್ಲ. ಇವೆಲ್ಲಕ್ಕಿಂತ ನನಗೆ ಅಲ್ಲಿ ಆಕರ್ಷಣೀಯವಾಗಿ ಕಂಡಿದ್ದು ಅಲ್ಲಿಗೆ ಪ್ರವಾಸ ಬಂದಿದ್ದ ಶಾಲಾ ಮಕ್ಕಳು ಮತ್ತು ಇವೆಲ್ಲವನ್ನೂ ನೋಡಿದಾಗ ಅವರ ಕಣ್ಣುಗಳಲ್ಲಿ ಮತ್ತು ಮಾತುಗಳಲ್ಲಿ ಇಣುಕುತ್ತಿದ್ದ ಜೀವನದ ಬಗೆಗಿನ ಆಸಕ್ತಿ, ಆಸೆ ಮತ್ತು ಕುತೂಹಲ. ಮುಂದಿನ ಪೀಳಿಗೆಯನ್ನು ಜೀವನ್ಮುಖಿಯಾಗಿಸಲು ಇಂತಹ ಸಂಗ್ರಹಾಲಯಗಳ ಪಾತ್ರ ಹಿರಿದಾದುದು ಎಂದುಕೊಳ್ಳುತ್ತಾ, ಅಲ್ಲಿನ ಭಾಷೆಯಲ್ಲಿ ಕಲಿತಿದ್ದ ಕೆಲವು ಪದಗಳನ್ನು ಮನನ ಮಾಡಿಕೊಳ್ಳುತ್ತಾ ಮುಂದಿನ ದಾರಿ ಹಿಡಿದೆ.

**ಗಂಗಮ್ಮನ ಕೆರೆ:** ಪ್ರಕೃತಿ ನಿರ್ಮಿತ ಈ ಕೆರೆಯ ಉಗಮದ ಬಗ್ಗೆ ಇರುವ ರಹಸ್ಯವನ್ನು ಇನ್ನೂ ಭೇದಿಸಲಾಗಿಲ್ಲ. ಸ್ಥಳೀಯ ಭಾಷೆಯಲ್ಲಿ 'ಗ್ಯಾಕರ್‌ಸಿನ್ಯಿ' ಎನ್ನುವ ಹೆಸರಿನಿಂದ ಕರೆಯಿಸಿಕೊಳ್ಳುವ ಇದು ಸ್ವಚ್ಛವಾದ ತಿಳಿನೀರಿನಿಂದ ಕೂಡಿದ್ದರೂ ಪಾಚಿ ಹಸಿರು ಬಣ್ಣದ್ದಾಗಿದೆ. ಹಿಮಾಲಯದ ತಪ್ಪಲಿನಲ್ಲಿ ಇದ್ದು, ಸುತ್ತಲೂ ದೇವದಾರು ಮರ, ಅವುಗಳ ಎತ್ತರದಲ್ಲಿ ಕೆಲವು

ಆರ್ಕಿಡ್ ಹೂವಿನ ಗಿಡಗಳು ಮತ್ತು ಹಸಿರಿನಿಂದ ತುಂಬಿದ್ದರೂ ಈ ಕೆರೆಗೆ ನೀರು ಎಲ್ಲಿಂದ ಬರುತ್ತದೆ ಎನ್ನುವ ವಿಷಯ ಇಂದಿಗೂ ವಿಜ್ಞಾನಿಗಳಗೆ ತಿಳಿಯದಾಗಿದೆ. ಪುರಾಣದ ನಂಬಿಕೆಯೊಂದರ ಪ್ರಕಾರ ಇಲ್ಲಿ ಗಂಗೆಯು ಸುಪ್ತವಾಗಿ ಹರಿಯುತ್ತಿದ್ದಾಳೆ ಎಂದು ಹೇಳುತ್ತಾರೆ. ಅದಕ್ಕೇ ಇದನ್ನು 'ಗಂಗಾ ಕೆರೆ' ಎಂದೂ ಕರೆಯುತ್ತಾರೆ. ಒಂದಷ್ಟು ಪಕ್ಷಿಗಳಗೂ ತಂಗುಧಾಮವಾಗಿರುವ ಇಲ್ಲಿ ದೋಣಿ ವಿಹಾರವೂ ಮಾಡಬಹುದು.

**ಇಂದಿರಾ ಗಾಂಧಿ ಪಾರ್ಕ್** : ಬೆಂಗಳೂರಿನ ಮಾಣಿಕ್ ಷಾ ಮೈದಾನದಂತೆ ಇಲ್ಲಿನ ಮೈದಾನವೇ 'ಇಂದಿರಾಗಾಂಧಿ ಪಾರ್ಕ್'. ಒಳಗಡೆ ಅಡಿಯಿಡುತ್ತಿದ್ದಂತೆಯೇ ಥೇಟ್‌ನಮ್ಮ ಕಬ್ಬನ್ ಪಾರ್ಕ್‌ನ ವಾತಾವರಣ. ನೂರಾರು ಬಗೆಯ ಗಿಡಮರಗಳು, ಹಸಿರೋಹಸಿರು. ನಡುವಿನಲ್ಲೊಂದು ಧ್ವಜಗಂಭ ಅದರ ಪಕ್ಕದಲ್ಲಿ ಭಾರತ ಚೀನಾ ಯುದ್ಧದಲ್ಲಿ ಬಳಸಲಾಗಿದೆ ಎನ್ನಲಾದ ವಿಮಾನದ ಪಳಯುಳಕೆಯನ್ನು ಇಡಲಾಗಿದೆ. ಬಹುಶಃ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವದ ದಿನಗಳಂದು ಸರ್ಕಾರ ಈ ಪಾರ್ಕಿನ ಬಗ್ಗೆ ಗಮನ ಹರಿಸುವುದು ಬಿಟ್ಟರೆ ಉಳಿದಂತೆ ಎಲ್ಲಾ ದಿನಗಳಲ್ಲೂ ಯಾರ ಹಂಗಿಗೂ ಒಳಪಡದೆ ಸಾರ್ವಜನಿಕರ ದಣಿವಾರಿಸಿಕೊಳ್ಳುವ ಒಂದು ಜಾಗವಾಗಿದೆ ಅಷ್ಟೆ.

ಇವುಗಳ ಜೊತೆಗೆ, ಹತ್ತಿರದಲ್ಲೇ ಚಿಂಪು ಎನ್ನುವ ಪ್ರದೇಶದಲ್ಲಿ ಇರುವ ಒಂದು ಸಣ್ಣ ಮೃಗಾಲಯ, ಪೋಲೋ ಪಾರ್ಕ್ ಎನ್ನುವ ಸಸ್ಯದೋಟ, ಸರ್ಕಾರದ ಕರಕುಶಲ ಸಾಮಾನುಗಳನ್ನು ಮಾರಾಟ ಮಾಡುವ ಮಳಿಗೆ ಎಲ್ಲವೂ ಇಲ್ಲಿ ಲಭ್ಯ. ಕೈಮಗ್ಗದ ಶಾಲು, ಕುಲಾವಿ, ಮಫ್ಲರ್, ಕಾರ್ಪೆಟ್‌ಗಳು, ಅಲ್ಲಿನ ಪಾರಂಪರಿಕ ಧಿರಿಸುಗಳು, ಬಿದಿರು ಬೆತ್ತದಿಂದ ಮಾಡಿದ ಗೃಹಾಲಂಕಾರ ವಸ್ತುಗಳು ಹೀಗೆ ಏನೇನೋ ಆಕರ್ಷಣೀಯ ಸಾಮಾಗ್ರಿಗಳು ಮಾರಾಟಕ್ಕಿದ್ದರೂ ನನ್ನ ಪರ್ಸ್ ಬಿಗಿಯಾಗಿ ಮುಗುಮ್ಮನೆ ಕುಳಿತ್ತಿದ್ದರಿಂದ ನನ್ನ ಪಾಲಿನ ವ್ಯಾಪಾರ ವಹಿವಾಟು ಕಣ್ಣಿನಲ್ಲಿಯೇ ಮುಗಿದಿತ್ತು ಅದೇ ವೇಳೆಗೆ ಇತರರಿಗೆ ಸರಿ ಸಮಾನವಾಗಿ ಬೆಳೆಯಬೇಕು ಎನ್ನುವ ಧಾವಂತಲ್ಲಿರುವಂತೆ ತೋರುವ ಇಟಾನಗರವೂ ಇಷ್ಟವಾಗಲು ಶುರುವಾಗಿತ್ತು.



**ಇಂದಿರಾಗಾಂಧಿ ಪಾರ್ಕಿನಲ್ಲಿರುವ ಯುದ್ಧ ವಿಮಾನದ ಪಳಯುಳಿಕೆ**

* * * * *

## 4. ಮುಖ್ಯಮಂತ್ರಿಯ ಪುಟಾಣಿ ತಂಗಿ

ಇಟಾನಗರದ ಸುತ್ತು ಮುಗಿಸುವ ವೇಳೆಗೆ ಸೂರ್ಯ ಮನೆಕಡೆಗೆ ತೆರಳುತ್ತಿದ್ದ. ಕತ್ತಲು ಮೆಲ್ಲನೆ ಆವರಿಸಿಕೊಳ್ಳುತ್ತಿತ್ತು. ನಾನು ಇಳಿದುಕೊಂಡಿದ್ದ ಜಾಗ ಇನ್ನೂ 10 ಕಿಲೋಮೀಟರ್‌ಗಳಷ್ಟು ದೂರದಲ್ಲಿತ್ತು. ಈ ಸಂಜೆಯಲ್ಲಿ, ಅರೆತೆರೆದ ಕಣ್ಣಿನಂತಹ ಕತ್ತಲಲ್ಲಿ, ಸುಮ್ಮನೆ ನಡೆಯುತ್ತಿರಬೇಕು ಎನ್ನುವ ಆಸೆಯು ಇಂಚಿಂಚೇ ಮನಕ್ಕೆ ಮೆತ್ತಿಕೊಳ್ಳುತ್ತಿತ್ತು. ನಡಿಗೆ ಶುರು ಮಾಡಿದೆ. ಊರ ಹೊರಗಿನ ದಾರಿಗೆ ಬರುವ ವೇಳೆಗೆ ಪೂರ್ಣ ಕತ್ತಲಾಗಿತ್ತು. ಎಡ ಭಾಗದಲ್ಲಿ ಹಸಿರಿನ ಮೈದಾನ, ಕಿರಿದಾದ ಡೊಂಕು ಡೊಂಕಾದ ರಸ್ತೆ, ಅಲ್ಲೊಂದು ಇಲ್ಲೊಂದು ಕಾಣುತ್ತಿದ್ದ ಮಿಣುಕು ದೀಪಗಳು, ಬಲಭಾಗದಲ್ಲಿ ಸಾಲಾಗಿ ಕೆಂಡದಲ್ಲಿ ಜೋಳ ಸುಡತ್ತಾ ಕೆಂಪು ಜ್ವಾಲೆಯಂತೆ ಕಾಣುತ್ತಿದ್ದ ಹೆಂಗಸರು. ಆಹಾ, ನೀಲಿ ಮೈಯಿನ ಹುಡುಗನ ಎದೆಯ ಮೇಲೆ ರಾಧೆಯೊಬ್ಬಳ ಕೂದಲ ಗುಂಗುರಿನ ಎಳೆಯೊಂದು ತೃಪ್ತಿಯಿಂದ ಕಣ್ಣು ಮುಚ್ಚಿದಂತೆ ಕಾಣುತ್ತಿತ್ತು ಜಗತ್ತು. ಸುಟ್ಟ ಜೋಳವನ್ನು ತಿನ್ನುತ್ತಾ, ಹೆಜ್ಜೆಯೊಳಗೆ ಹೆಜ್ಜೆ ತೂರಿಸುತ್ತಾ ಹಾಯಾಗಿ ನಡೆಯುತ್ತಿದ್ದೆ. ಬಲಭಾಗದಲ್ಲಿ 'ವಿವೇಕಾನಂದ ಹಾಸ್ಟೆಲ್' ಎನ್ನುವ ಫಲಕ ನೋಡಿದೆ. ತಕ್ಷಣವೇ ಬೆಳಗ್ಗೆ ಆಕಸ್ಮಿಕವಾಗಿ ಭೇಟಿಯಾಗಿದ್ದ ಕೇರಳದ ಕೊಲ್ಲಂ ಮೂಲದ ಮಲೆಯಾಳಿ ಮನುಷ್ಯ ಅಜಯ್ ಕುಮಾರ್'' ಮೇಡಂ ನಾನು ವಿವೇಕಾನಂದ ಪ್ರೈವೇಟ್ ಹಾಸ್ಟೆಲ್ ನಡೆಸುತ್ತಿದ್ದೇನೆ. ಮುಂದಿನ ವರ್ಷದಿಂದ ಖಾಸಗಿ ಶಾಲೆಯನ್ನು ತೆರೆಯಲಿದ್ದೇನೆ" ಎಂದಿದ್ದು ನೆನಪಾಯಿತು. ಅಷ್ಟೇ ಅಲ್ಲ "ಮೇಡಂ ಅರುಣಾಚಲ ಪ್ರದೇಶದ ಮುಖ್ಯಮಂತ್ರಿಗಳ ತಂಗಿ ನನ್ನ ಹಾಸ್ಟೆಲ್‌ನಲ್ಲೇ ಇರುವುದು" ಎಂದು ಹೇಳಿದ್ದೂ ನೆನಪಾಯಿತು. ಅವಕಾಶಗಳು ತಾವೇ ನನ್ನನ್ನು ಪ್ರೀತಿಸಿ ಹತ್ತಿರ ಬರುವಾಗ ದೂರ ತಳ್ಳುವಷ್ಟು ಉದ್ಧಟತನವಂತೂ ನನಗಿಲ್ಲ. ಗಡಿಯಾರವನ್ನೇ ನೋಡದೆ ಸೀದ ಆ ಹಾಸ್ಟೆಲ್‌ನ ಗೇಟ್ ಬಳಿ ನಿಂತಿದ್ದೆ.

ಅರುಣಾಚಲ ಪ್ರದೇಶದಲ್ಲಿ 2011 ರಿಂದ ಕಾಂಗ್ರೆಸ್ ಪಕ್ಷದ ಆಡಳಿತವಿದೆ. ಆ ರಾಜ್ಯದ ಎಂಟನೇ ಮುಖ್ಯಮಂತ್ರಿಯಾಗಿ 1 ನವೆಂಬರ್, 2011 ರಂದು ನಬಮ್ ತುಕಿಯವರು ಅಧಿಕಾರ ಸ್ವೀಕರಿಸಿದ್ದಾರೆ. ಮೂಲತಃ ಅಪತಾನಿ

ಬುಡಕಟ್ಟಿನ ಶಾಖೆಯಾದ ಡೋನ್ಯಿ ಪೋಲೊ ಧರ್ಮಕ್ಕೆ ಸೇರಿದವರಾಗಿದ್ದಾರೆ. 7 ಜುಲೈ, 1964 ರಂದು ಜನಿಸಿರುವ ಇವರು ತಮ್ಮ ಕಾಲೇಜು ದಿನಗಳಿಂದಲೇ ರಾಜಕೀಯದಲ್ಲಿ ಆಸಕ್ತಿ ಹೊಂದಿದ್ದು, ವಿದ್ಯಾರ್ಥಿ ಸಂಘಟನೆಯ ಮೂಲಕ ಸಕ್ರಿಯವಾಗಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಪ್ರದೇಶ ಕಾಂಗ್ರೆಸ್ಸಿನ ಯುವ ಸಂಘಟನೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಮುಖ್ಯ ರಾಜಕಾರಣಕ್ಕೆ ಬಂದವರಾಗಿದ್ದಾರೆ. 2030ರ ವೇಳೆಗೆ ಅರುಣಾಚಲವನ್ನು ಮಾದರಿ ರಾಜ್ಯವನ್ನಾಗಿ ಮಾಡಬೇಕೆಂಬ ಕನಸು ಹೊತ್ತು ಅದಕ್ಕಾಗಿ ರೂಪರೇಷೆಗಳನ್ನು ಹಾಕಿಕೊಂಡು ಆ ದಿಶೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಪ್ರಥಮ ಆದ್ಯತೆ ಈಶಾನ್ಯ ರಾಜ್ಯಗಳಲ್ಲಿಯೇ ಅರುಣಾಚಲ ಪ್ರದೇಶವನ್ನು ಮೊದಲ ಅತ್ಯುತ್ತಮ ಪ್ರವಾಸೀ ಆಕರ್ಷಣೆಯ ರಾಜ್ಯವನ್ನಾಗಿಸುವುದು. ವಿದ್ಯಾಭ್ಯಾಸ ಹಾಗು ಆರೋಗ್ಯ ಕ್ಷೇತ್ರಗಳಿಗೆ ಹೆಚ್ಚಿನ ಮಹತ್ವ ಕೊಡುವುದು. ಕೃಷಿಗೆ ಆದ್ಯತೆ ಕೊಡುವುದರ ಮೂಲಕ ಸ್ಥಳೀಯ ಜನರು ವಲಸೆ ಹೋಗುವುದನ್ನು ತಡೆಗಟ್ಟುವುದು ಇವುಗಳು ಮುಖ್ಯಮಂತ್ರಿಯವರ ಯೋಜನೆಗಳೆಂದು ಓದಿ ತಿಳಿದುಕೊಂಡಿದ್ದೆ. ಆದರೆ ಅವರ ಕುಟುಂಬದ ಬಗ್ಗೆ ಹೆಚ್ಚಿನ ಆಸಕ್ತಿಯನ್ನೇನು ತಳೆದಿರಲಿಲ್ಲ. ಆದರೆ ಈಗ ಅವರ ವೈಯಕ್ತಿಕ ಬದುಕನ್ನು ಪರಿಚಯ ಮಾಡಿಕೊಳ್ಳುವ ಅವಕಾಶ ಧುತ್ತೆಂದು ತಾನೇ ನನ್ನೆದುರು ಬಂದಿತ್ತು.

ದೊಡ್ಡ ಗೇಟ್‌ಅನ್ನು ತೆರೆದ ಕಾವಲುಗಾರ ಧಡೂತಿ ಹೆಂಗಸೊಬ್ಬರನ್ನು ಹಾಸ್ಟೆಲ್‌ನ ವಾರ್ಡನ್ ಎಂದು ಪರಿಚಯಿಸಿಕೊಟ್ಟ. ಪರಸ್ಪರ ಪರಿಚಯದ ನಂತರ, ನಗುಮುಖದಿಂದ ಆಕೆ ನನ್ನನ್ನು ಕುಳಿತುಕೊಳ್ಳಲು ಹೇಳಿ ಮುಖ್ಯಮಂತ್ರಿಗಳ ಸಹೋದರಿಯನ್ನು ಕರೆತರಲು ಸಂದೇಶ ಬರೆದು ಕಳುಹಿಸಿದರು. ಅತೀ ಸಾಧಾರಣ ಎನ್ನಿಸುವಂತಹ ಕಟ್ಟಡ, ತೀರಾ ಸಾಮನ್ಯ ಎನ್ನಿಸುವಂತಹ ಆಫೀಸು ಕೋಣೆಯಲ್ಲಿ ಶ್ರೀಮಂತ ನಡವಳಿಕೆ, ಹಾವಭಾವಗಳ ಯುವತಿಯೊಬ್ಬಳನ್ನು ನಿರೀಕ್ಷಿಸುತ್ತಾ ಕುಳಿತ್ತಿದ್ದೆ. ಹತ್ತು ನಿಮಿಷಗಳ ತರುವಾಯ, ಉದ್ದನೆಯ ಕೂದಲಿನ, ಶ್ವೇತವರ್ಣದ ಅತೀ ಸುಂದರವಾದ ಹದಿಹರೆಯದ ಹೆಣ್ಣು ಮಗುವೊಂದು, ಕಂದು ಬಣ್ಣದ ಸ್ಕರ್ಟ್ ಹಾಕಿಕೊಂಡು ಅದರ ಮೇಲೊಂದು ಕೆಂಪುಬಣ್ಣದ ಶಾಲು ಹೊದ್ದು, ಬೆವರುತ್ತಾ,

ತುಸುವೇ ನಡುಗುತ್ತಾ, ಭಯಮಿಶ್ರಿತ ಪ್ರಶ್ನಾರ್ಥಕವೊಂದನ್ನು ಮುಖದಲ್ಲಿ ಇಟ್ಟುಕೊಂಡು ನನ್ನ ಮುಂದೆ ನಿಂತಿತ್ತು. ಆ ಹುಡುಗಿಯನ್ನು ನೋಡಿದ ಕೂಡಲೇ ನನ್ನೊಳಗಿನ ಅಮ್ಮ 'ಅಯ್ಯೋ ಪಾಪದ ಮಗು' ಎಂದು ಒಂದರೆಕ್ಷಣ ಮರುಗಿದಳು. ಪಕ್ಕದಲ್ಲಿ ಕೂರಿಸಿಕೊಂಡು ನೀರು ಕೊಟ್ಟೆ. ನಿಧಾನವಾಗಿ ನನ್ನ ಪರಿಚಯ ಮಾಡಿಕೊಂಡೆ. ಸ್ಪಷ್ಟವಾದ ಹಿಂದಿಯಲ್ಲಿ ಆಕೆಯ ಹೆಸರು ನಬಮ್ ಹೀನಾ ಎಂದು ಹೇಳಿದಳು. 7ನೇ ತರಗತಿಯಲ್ಲಿ ಓದುತ್ತಿರುವ 12 ವರ್ಷ ವಯಸ್ಸಿನ ಎಳೆ ಬಾಲಕಿಯವಳು. ಮುಖ್ಯಮಂತ್ರಿಯವರ ಕೊನೆಯ ತಂಗಿ ಎಂದು ಹೇಳಿಕೊಂಡಾಗ ನನಗೆ ಅತೀ ಆಶ್ಚರ್ಯ ! "ನಿಮ್ಮ ಅಣ್ಣನಿಗೆ ಈಗ 54 ವರ್ಷ ವಯಸ್ಸು. ನೀನು ಇಷ್ಟು ಚಿಕ್ಕವಳು" ಎಂದು ಮುಜುಗರದಿಂದಲೇ ನಾನು ಕೇಳಿದಾಗ, ಆಕೆ ಸಣ್ಣನೆಯ ಮಧುರವಾದ ಧ್ವನಿಯಲ್ಲಿ "ಹೌದು ಅವರು ನನ್ನ ದೊಡ್ಡ ಅಣ್ಣ. ನಮ್ಮ ತಂದೆ ತಾಯಿಗೆ ನಾವು ಒಟ್ಟು ಹನ್ನೆರಡು ಜನ ಮಕ್ಕಳು. ತುಕಿ ಮೊದಲನೆಯವರು ನಾನು ಕೊನೆಯವಳು" ಎನ್ನುತ್ತಾ ಸಣ್ಣ ನಗು ಬೀರಿದಳು. "ಓಹ್, ನೀವೆಲ್ಲಾ ಒಟ್ಟಿಗೆ ಇದ್ದೀರಾ?" ಎಂದು ಕೇಳಿದೆ. "ಇಲ್ಲಾ ಅಣ್ಣ ಅತ್ತಿಗೆ ಇಟಾ ನಗರದಲ್ಲಿರುವ ಸರ್ಕಾರೀ ಮನೆಯಲ್ಲಿ ಇದ್ದಾರೆ. ನನ್ನ ಅಪ್ಪ ಅಮ್ಮ ಮತ್ತು ಒಡಹುಟ್ಟಿದವರು ಪಾಪುಮ್‌ಪರೆ ಜಿಲ್ಲೆಯಲ್ಲಿದ್ದಾರೆ. ನನ್ನ ಇಬ್ಬರು ಅಕ್ಕಂದಿರಿಗೆ ಮದುವೆಯಾಗಿ ನನಗಿಂತ ದೊಡ್ಡ ಮಕ್ಕಳಿದ್ದಾರೆ. ಇಬ್ಬರು ಅಣ್ಣಂದಿರು ಅವರವರ ಸಂಸಾರದ ಜೊತೆ ಬೇರೆಯಿದ್ದಾರೆ" ಎಂದಳು ಹುಡುಗಿ. "ನಬಮ್ ತುಕಿ ನಿನ್ನನ್ನು ನೋಡಲು ಬರುತ್ತಿರುತ್ತಾರ ಇಲ್ಲಿಗೆ?" ಎಂದು ಕೇಳಿದೆ. "ಇಲ್ಲ ಅವರಿಗೆ ಸಮಯವೇ ಸಿಗುವುದಿಲ್ಲ. ವಾರಕೊಮ್ಮೆ ಫೋನ್ ಮಾಡುತ್ತಿರುತ್ತಾರೆ. ಆದರೆ ನನ್ನ ತಂದೆ ಒಮ್ಮೊಮ್ಮೆ ಬರುತ್ತಿರುತ್ತಾರೆ" ಎಂದಳು. ತನ್ನ ತಂದೆಯೂ ಹಿಂದೊಮ್ಮೆ ಸ್ಥಳೀಯ ರಾಜಕಾರಣದಲ್ಲಿ ಪಾತ್ರ ವಹಿಸುತ್ತಿದ್ದನ್ನು ಬಿಟ್ಟರೆ ಮನೆಯಲ್ಲಿ ಮತ್ತ್ಯಾರಿಗೂ ರಾಜಕೀಯ ತಿಳಿದಿಲ್ಲ. ಎಲ್ಲ ಅಣ್ಣ, ಅಕ್ಕಂದಿರ ಕುಟುಂಬಗಳು ವ್ಯವಸಾಯ, ಕೈಗಾರಿಕೆ ಮತ್ತು ಇತರೆ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ ಎಂದು ಹೇಳಿಕೊಂಡಳು ಹೀನಾ. ಕುತೂಹಲಕ್ಕಾಗಿ ನಿನ್ನ ತಂದೆಯ ಮತ್ತು ಅಕ್ಕ-ಅಣ್ಣಂದಿರ ಹೆಸರುಗಳೇನು ಎಂದು ಅವಳನ್ನು ಕೇಳಿದೆ. "ನಬಂ ನೆನೆ, ನಬಂ ತುಕಿ, ನಬಂ ಯಾನೆ, ನಬಂ ಪಿತೀ, ನಬಂ ತಕೆ, ನಬಂ ಪಾರಾ, ನಬಂ ಹೀನಾ. . ." ಹೀಗೆ ಹೆಸರು ಹೇಳುತ್ತಾ ಹೋದಳವಳು.

ಯಾವುದೋ ಸುಶ್ರಾವ್ಯವಾದ ಮಂತ್ರ ಸರಣಿಯನ್ನು ಆಲಿಸಿದಂತಾಗುತ್ತಿತ್ತು ನನಗೆ. 'ನಬಂ' ಎನ್ನುವುದು ಅವರ ಕುಟುಂಬದ ಹೆಸರು. ಭವಿಷ್ಯದಲ್ಲಿ ವೈದ್ಯೆಯಾಗಬೇಕೆಂಬ ಕನಸು ಹೊತ್ತಿರುವ ಈ ಹುಡುಗಿಯಲ್ಲಿ ತಾನು ರಾಜ್ಯವೊಂದರ ಮುಖ್ಯಮಂತ್ರಿಗಳ ಸ್ವಂತ ತಂಗಿ ಎನ್ನುವ ಯಾವ ಹಮ್ಮು ಬಿಮ್ಮೂ ಇರಲಿಲ್ಲ. ತನ್ನ ಮುಖ್ಯಮಂತ್ರಿ ಅಣ್ಣನಿಗೆ 7 ಜನ ಮಕ್ಕಳು. ಇಬ್ಬರು ಗಂಡು ಐದು ಜನ ಹೆಣ್ಣು ಮಕ್ಕಳು. ಅವರಲ್ಲಿ ಇಬ್ಬರಿಗೆ ಮದುವೆಯಾಗಿ



**ಮುಖ್ಯಮಂತ್ರಿ ನಬಂ ತುಕಿ ಅವರ ಸಹೋದರಿ ನಬಂ ಹೀನಾ ಜೊತೆ ಲೇಖಕಿ**

ಮಕ್ಕಳಾದ್ದಾರೆ ಎನ್ನುವ ವಿಷಯವನ್ನು ಸರಳವಾಗಿ ಇನ್ನಿತರ ಯಾವುದೇ ಮನೆವಾರ್ತೆಯಂತೆ ಹೇಳಿದಳು. "ನಿನ್ನ ಅಣ್ಣನ ಮನೆಯವರೊಡನೆ ಭೇಟಿ ಮಾಡಿಸುತ್ತೀಯಾ?" ಎನ್ನುವ ನನ್ನ ಪ್ರಶ್ನೆಗೆ, ತೀರಾ ಮುಗ್ಧವಾಗಿ "ಅದು ನನಗೆ ಗೊತ್ತಿಲ್ಲ" ಎಂದಳು. ಅವಳಿಗೂ ಸಣ್ಣ ಉಡುಗೊರೆಯೊಂದನ್ನು ಕೊಟ್ಟು, ಚೆನ್ನಾಗಿ ಓದು ಎಂದು ಹೇಳಿ, ಒಂದೆರಡು ಫೋಟೊ ತೆಗೆದುಕೊಂಡು, ಹಾರೈಕೆಯ ಅಪ್ಪುಗೆಯೊಂದಿಗೆ ಬೀಳ್ಕೊಟ್ಟೆ. ಅಲ್ಲಿಂದ ಹೊರಬರುವಾಗ ಅನುಭವ ಹೇಳುತ್ತಿತ್ತು ಇಲ್ಲಿನ ಜನರಿಗೆ ಸಿರಿವಂತಿಕೆ, ಅಂತಸ್ತಿನ ಅಹಂ ಇಲ್ಲವೇ ಇಲ್ಲ. ಪೊಲೀಸ್ ಮಹಾನಿರ್ದೇಶಕನಿಂದ ಹಿಡಿದು, ಸೇನೆಯಲ್ಲಿ ಕರ್ನಲ್ ಸ್ಥಾನ

ಹೊಂದಿರುವ ಜನರವರೆಗೂ ಭೇಟಿಯಾಗಿದ್ದೆ. ಎಲ್ಲರೂ ವಿನಮ್ರವಾಗಿಯೇ ಕಂಡುಬರುತ್ತಾರೆ. ಸ್ವಲ್ಪ ಹೆಚ್ಚೇ ಎನಿಸುವಷ್ಟು ಹಿಂಜರಿಕೆಯ ಸ್ವಭಾವದವರು ಅನ್ನಿಸಿಬಿಡುತ್ತಾರೆ. ಸ್ನೇಹ ಜೀವಿಗಳು. ಶಾಂತಿಪ್ರಿಯರು. ಬಹಳವೇ ಕತ್ತಲಾಗಿಬಿಟ್ಟಿತ್ತು. ಒಬ್ಬೊಂಟಿಯಾಗಿದ್ದೆ. ಸರಬರನೆ ಟ್ಯಾಕ್ಸಿ ಹತ್ತಿ ರೂಮು ಸೇರಿದೆ. ಮಾರನೆಯ ದಿನ ಬೆಳಗ್ಗೆ ಮತ್ತೆಲ್ಲೋ ಹೋಗುತ್ತಿರುವಾಗ ಮುಖ್ಯಮಂತ್ರಿಗಳು ನನ್ನ ಮುಂದೆಯೇ ಯಾವುದೋ ತುರ್ತಿನ ಕೆಲಸಕ್ಕೆ ಹೋಗುತ್ತಿದ್ದರು. ಹಿಂದಿನ ರಾತ್ರಿ ಅವರ ಪುಟಾಣಿ ತಂಗಿಯನ್ನು ಭೇಟಿಯಾಗಿದ್ದು ಯಾರು ಎನ್ನುವ ಅರಿವೂ ಅವರಿಗಿದ್ದಂತಿರಲಿಲ್ಲ. ತಮ್ಮ ಕುಟುಂಬದ ಎಷ್ಟೆಷ್ಟೋ ಸುಖ, ಶಾಂತಿ, ನೆಮ್ಮದಿ, ಕರ್ತವ್ಯಗಳ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಜನರಿಗಾಗಿ, ತಾವು ನಂಬಿಕೊಂಡಿರುವ ಆದರ್ಶಗಳಗಾಗಿ ನಿಸ್ಪೃಹವಾಗಿ ಕೆಲಸ ಮಾಡುವ ರಾಜಕಾರಣಿಗಳ ಬಗ್ಗೆ ಒಂದು ಕ್ಷಣ ಮನಸ್ಸು ಕರಗಿತು. ಪಕ್ಕದ ಕೊಳಚೆ ಗುಂಡಿಯ ಗಬ್ಬು ವಾಸನೆ ಮೂಗಿಗೆ ಬಡಿದಾಗ ಅಲ್ಲಿಯೇ ಅವರನ್ನು ಜೋರಾಗಿ ಕೂಗಿ "ಸ್ವಚ್ಛಭಾರತದ ಕನಸನ್ನು ನನಸು ಮಾಡಲು ದಯವಿಟ್ಟು ನಿಮ್ಮ ಜನರಿಗೆ ಕೈಜೋಡಿಸಲು ಹೇಳಿ" ಎಂದು ಹೇಳಿಬಿಡಬೇಕು ಎನ್ನಿಸಿದ್ದು ಸತ್ಯ. ಮುಖ್ಯಮಂತ್ರಿ ನಬಮ್ ತುಕಿಯವರನ್ನು ಭೇಟಿಯಾಗಲು ಸಾಧ್ಯವಿಲ್ಲ. ಆದರೆ ವೈದ್ಯೆಯಾದ ಮೇಲೆ ನಬಮ್ ಹೀನಾಳನ್ನು ಒಮ್ಮೆ ಭೇಟಿ ಮಾಡಿ ಶುಭ ಹಾರೈಸಬೇಕೆಂದು ಆಶಿಸುತ್ತಾ ಮುಂದಿನ ಹೆಜ್ಜೆ ಇಟ್ಟೆ.

* * * * *

## ೫. ಶಾಂತಿ, ಸುವ್ಯವಸ್ಥೆ ಕೊಟ್ಟವರು

ಇದು ಒಂದು ಹುಚ್ಚಿನಂಥಾ ಆಸಕ್ತಿಯೇ ಇರಬೇಕು. ದೇಶ ವಿದೇಶಗಳ ಯಾವ ಊರಿಗೇ ಹೋದರೂ ಅಲ್ಲಿನ ಪೊಲೀಸಿನವರೊಂದಿಗೆ ಅವರುಗಳ ಕಷ್ಟ ಸುಖ ವಿಚಾರಿಸುತ್ತಾ ಮಾತನಾಡುವುದು. ಅಲ್ಲಿನ ಜನರ ಅಪಾರಾಧಿಕ ಸ್ವಭಾವದ ಬಗ್ಗೆ ಕೇಳುವುದು, ಅಂಕಿ ಅಂಶಗಳನ್ನು ಪಡೆದುಕೊಳ್ಳುವುದು, ಅದರಲ್ಲೂ ಮಹಿಳೆಯರಿಗೆ ಸಂಬಂಧ ಪಟ್ಟ ಅಪರಾಧಗಳ ಬಗ್ಗೆ, ಅದಕ್ಕೆ ಕಾರಣಗಳ ಬಗ್ಗೆ ಮಾತಾನಾಡುವುದೆಂದರೆ ನನಗೆ ಎಲ್ಲಿಲ್ಲದ ಆಸಕ್ತಿ ಮತ್ತು ಅದನ್ನು ಜವಾಬ್ದಾರಿ ಕೂಡ ಎಂದುಕೊಳ್ಳುತ್ತೇನೆ. ಗಡಿ ಪ್ರದೇಶಗಳಿಗೆ ಹೋದರೆ ತಪ್ಪದೆ ಸೈನಿಕರುಗಳೊಡನೆ, ಸೇನೆಯ ಅಧಿಕಾರಿಗಳೊಡನೆ ಮಾತನಾಡಿ ಬರುತ್ತೇನೆ. ಅದಕ್ಕಾಗಿಯೇ ಇಟಾನಗರದ ಮುಖ್ಯ ಪೋಲಿಸ್ ಠಾಣೆಗೆ ನುಗ್ಗಿದೆ. ಎಡ ಭಾಗದಲ್ಲಿ ಒಂದಷ್ಟು ಯುವ ಅಧಿಕಾರಿಗಳು ಬ್ಯಾಸ್ಕೆಟ್ ಬಾಲ್ ಆಡುತ್ತಿದ್ದರು. ಬಲಭಾಗದಲ್ಲಿ ಗುಲಾಬಿ ತೋಟ ಅರಳಿ ನಿಂತಿತ್ತು. ಆ ದಿನ ಹೆಚ್ಚೇ ಬಿಸಿಲಿತ್ತು. ಯೂನಿಫಾರಂ ಧರಿಸಿದ್ದ ಮಾಲಿ ಗಿಡಗಳಿಗೆ ನೀರುಣಿಸುತ್ತಿದ್ದ. ಅದೊಂದು ಚಿಕ್ಕದಾಗಿ, ಬಲು ಚೊಕ್ಕವಾಗಿ, ನೋಡಲೂ ಸುಂದರವಾಗಿ, ಬಿಳಿ ಬಣ್ಣವನ್ನು ಹೊದ್ದುಕೊಂಡಿದ್ದ ಆರಕ್ಷಕ ಠಾಣೆ. ತನಿಖಾಧಿಕಾರಿ ಬಂದು ನನ್ನ ಪರಿಚಯ ಮಾಡಿಕೊಂಡರು. "ಠಾಣೆಯಹಿರಿಯ ಅಧಿಕಾರಿಯನ್ನು ಭೇಟಿಯಾಗಬೇಕು" ಎಂದು ಮನವಿ ಮಾಡಿಕೊಂಡೆ. ಆತ ಸೀದಾ ಅಡಿಷನಲ್ ಸುಪರಿಡೆಂಟ್ ಆಫ್ ಪೊಲೀಸ್ ಅವರ ಕೋಣೆಗೆ ಕರೆದುಕೊಂಡು ಹೋದರು. ಪರದೆ ಪಕ್ಕಕ್ಕೆ ತಳ್ಳಿ ಒಳ ಹೋಗುವ ಮೊದಲು ಬೋರ್ಡ್ ನೋಡಿದೆ. ಎಎಸ್‌ಪಿ ದಿಪಾಂಕರ್ ಮಿಶ್ರಾ ಎಂದಿತ್ತು. ಒಳಗೆ ಹೋದಾಗ ಪೊಲೀಸ್ ಎನ್ನಿಸಿಕೊಳ್ಳಲು ತಕ್ಕುದಾದ ಖಡಕ್ ದೇಹ ಮತ್ತು ಮುಖಭಾವ ಹೊತ್ತ ಅಧಿಕಾರಿ ದಿಪಾಂಕರ್ ಅವರು ಸಹೋದ್ಯೋಗಿಗಳಿಗೆ ಒಂದು ಮ್ಯಾಪ್ ಇಟ್ಟುಕೊಂಡು ಏನನ್ನೋ ವಿವರಿಸುತ್ತಿದ್ದರು, ಅವರುಗಳ ನಡುವೆಯೇ ನನ್ನನ್ನೂ ಕುಳಿತುಕೊಳ್ಳಲು ಹೇಳಿದರು. ಒಂದ್ನಾಲ್ಕು ನಿಮಿಷಗಳ ನಂತರ "ಮುಂದಿನ ವಾರ ಪ್ರಧಾನಮಂತ್ರಿ ಮೋದಿಯವರು ಬರುತ್ತಿದ್ದಾರೆ ಮೇಡಂ. ಅದಕ್ಕೆ ಎಲ್ಲಾ ಸಿದ್ಧತೆಗಳನ್ನು ನಡೆಸುತ್ತಿದ್ದೇವೆ" ಎಂದು ಆ ಮ್ಯಾಪ್ ಕಡೆಗೆ ಕೈ ತೋರಿಸಿದರು. ಅವರುಗಳ ಮಾತುಗಳು ಮುಗಿಯುವವರೆಗೂ ನಾನೊಂದು ತೆಳ್ಳನೆಯ ನಗು ಹೊತ್ತು

ಕುಳಿತಿದ್ದೆ. ನಡುವಿನಲ್ಲಿಯೇ ಸಹಾಯಕನಿಗೆ ಬಿಸಿಬಿಸಿ ಕೆಂಪು ಚಹ ತರಲು ಹೇಳಿದರು. ಅವರುಗಳ ಮೀಟಿಂಗ್ ಮುಗಿಯುವದರಲ್ಲಿ ಬಿಳಿಬಣ್ಣದ ಮೇಲೆ ಹಸಿರು ಹೂವಿನ ಚಿತ್ರವಿದ್ದ ಪಿಂಗಾಣಿ ಕಪ್ ಮತ್ತು ಸಾಸರ್‌ನಲ್ಲಿ ಬಂದ ಚಹವನ್ನು ಕುಡಿಯುತ್ತಲೇ ನನ್ನ ಪರಿಚಯ ಮಾಡಿಕೊಂಡರು. ಬೆಂಗಳೂರು ಎಂದೊಡನೆ "ರಜೆಗಾಗಿ ಕಾಯುತ್ತಿದ್ದೇನೆ. ನನ್ನ ಚಿಕ್ಕಪ್ಪನಿಗೆ ಬೆಂಗಳೂರಿನಲ್ಲಿ ಕಿವಿಯ ಶಸ್ತ್ರಚಿಕಿತ್ಸೆ ಮಾಡಿಸಬೇಕಿದೆ" ಎನ್ನುತ್ತಾ ಬೆಂಗಳೂರಿನಲ್ಲಿ ಒಳ್ಳೆಯ ವೈದ್ಯಕೀಯ ಸೌಲಭ್ಯಗಳು ಇರುವುದರ ಬಗ್ಗೆ ತಾವು ಕೇಳಿರುವುದಾಗಿ ಹೇಳಿದರು. ಪರರಸ್ಪರ ಮೊಬೈಲ್ ಸಂಖ್ಯೆಗಳ ವಿನಿಮಯ ಮಾಡಿಕೊಂಡೆವು. ಮಾತಿನ ನಡುವೆನಡುವೆ ಬಂದು ಹೋಗುವವರು ಸತತವಾಗಿ ಇದ್ದೇ ಇದ್ದರು. ಹಾಗೆ ಬಂದವರಲ್ಲಿ ವಕೀಲರಾದ ತಲೀನ್ ರೇಗಿಯಾ ಕೂಡ ಒಬ್ಬರು. ಅರುಣಾಚಲ ಪ್ರದೇಶ ಕಾನೂನು ಬಾಹಿರ ಚಟುವಟಿಕೆ ತಡೆಗಟ್ಟುವಿಕೆ ಕಾಯಿದೆಯ ಅಡಿಯಲ್ಲಿ ಬಂಧಿತನಾಗಿದ್ದ ತಮ್ಮ ಕಕ್ಷಿದಾರನೊಬ್ಬ ಜಾಮೀನಿನ ಮೇಲೆ ಹೊರಗಿದ್ದರೂ ಪೋಲಿಸರು ಯಾವುದೇ ಕಾರಣ ಹೇಳದೆ ಮತ್ತೊಮ್ಮೆ ಆತನನ್ನು ಬಂಧಿಸಿದ್ದರಿಂದ ಅವರು ಈಗ ಕಾರಣ ಕೇಳಲು ಕಕ್ಷಿದಾರನ ಪರವಾಗಿ ಉನ್ನತ ಅಧಿಕಾರಿಗಳ ಬಳಿ ಬಂದಿದ್ದರು. ನಾನೊಬ್ಬ ವಕೀಲಳಾಗಿ ಮತ್ತೊಬ್ಬ ವಕೀಲ ಮತ್ತು ಪೋಲೀಸ್ ಅಧಿಕಾರಿಯ ನಡುವಿನ ಸಂಭಾಷಣೆ, ಚರ್ಚೆ ಕೇಳುವುದು ಆಸಕ್ತಿದಾಯಕವಾಗಿತ್ತು. ದಿಪಾಂಕರ್ ಮಿಶ್ರಾ ಅವರು ಮಾತನಾಡುತ್ತಿದ್ದ ಶೈಲಿಯಲ್ಲಿಯೇ ತಿಳಿಯುತ್ತಿತ್ತು ಅವರೊಬ್ಬ ನುರಿತ, ಚಾಣಾಕ್ಷ ಪೋಲೀಸ್ ಅಧಿಕಾರಿ ಎಂದು. ಅವರಿಗೆ ಬೇರೆ ಬೇರೆ ಪ್ರಶಸ್ತಿಗಳೊಂದಿಗೆ ರಾಜ್ಯ ಸರ್ಕಾರವು ರಜತ ಪದಕ ಕೊಟ್ಟು ಗೌರವಿಸಿದೆ. ಮೂಲತಃ ಪಶ್ಚಿಮ ಬಂಗಾಳದವರಾದ ಅವರು ಕಳೆದ ನಾಲ್ಕು ವರ್ಷಗಳಿಂದ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮೂಲಭೂತವಾಗಿ ಅರುಣಾಚಲ ಪ್ರದೇಶದ ಜನರು ಶಾಂತಿ ಪ್ರಿಯರು. ಹೆಚ್ಚಿನ ಮಟ್ಟದಲ್ಲಿ ಸಮಾಜಕ್ಕೆ ತೊಂದರೆ ನೀಡುವಂಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲಾರರು. ಅವರದ್ದೇನಿದ್ದರೂ ಬುಡಕಟ್ಟುಗಳ ಒಳಗಿನ ಜಗಳಗಳು. ಆದ್ದರಿಂದ ಆತಂಕ ಪಡುವಷ್ಟರ ಮಟ್ಟಿಗೆ ಇಲ್ಲಿ ಅಪರಾಧಗಳು ಘಟಿಸುತ್ತಿಲ್ಲ. ಆದರೂ ನಗರ ಪ್ರದೇಶಗಳಲ್ಲಿ ಇತ್ತೀಚೆಗೆ ಹುಟ್ಟಿ, ಬೆಳೆಯುತ್ತಿರುವ ಯುವ ಮತ್ತು ವಿದ್ಯಾರ್ಥಿ ಸಂಘಟನೆಗಳ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ಇರಬೇಕಾದ ಅವಶ್ಯಕತೆ ಇದೆ ಎಂದು ಹೇಳಿದ ಅವರು

ಟ್ರಾಫಿಕ್ ಮತ್ತು ಅಪಘಾತ ಕೂಡ ಮುಂದೊಮ್ಮೆ ಸಮಸ್ಯೆಯಾಗುವುದರಲ್ಲಿ ಅನುಮಾನವಿಲ್ಲ ಎಂದು ಹೇಳುತ್ತಿರಬೇಕಾದರೆ ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರು ಒಳ ಬಂದರು. ಅವರನ್ನು ನನ್ನ ಪಕ್ಕದಲ್ಲಿ ಕುಳಿತುಕೊಳ್ಳಲು ಹೇಳಿದ ಮಿಶ್ರಾ ಆಕೆ ತಮ್ಮ ಮುಂದಿಟ್ಟ ಕಾಗದವನ್ನು ಓದಿ ನನ್ನೆಡೆಗೆ ತಿರುಗಿ "ನೋಡಿ ಇವರಿಗೆ ಊರಿಗೆ ಹಬ್ಬಕ್ಕೆ ಹೋಗಲು ರಜೆಬೇಕಂತೆ. ಆದರೆ ಪ್ರಧಾನಮಂತ್ರಿ ಬರುತ್ತಿದ್ದಾರೆ. ಸದ್ಯಕ್ಕೆ ರಜೆ ಕೊಡಲು ಹೇಗೆ ಸಾಧ್ಯ?" ಎನ್ನುತ್ತಾ ಲಘುವಾಗಿ ನಕ್ಕರು. ತವಾಂಗ್ ಊರಿಗೆ ಸೇರಿದ ಆಕೆಯ ಹೆಸರು ಸಿರಿಂಗ್ ದೋಗಾ ಮತ್ತು ಅವರು ತಮ್ಮ ತವರಿನಲ್ಲಿ ನಡೆಯುವ 'ಲೋಸಾ' ಹಬ್ಬಕ್ಕೆ ಹೋಗಲು ರಜೆ ಕೇಳುತ್ತಿದ್ದರು. ಅವರ ಮೊಬೈಲ್ ನಂಬರ್ ಅನ್ನು ನನಗೆ ಕೊಟ್ಟು ದಿಪಾಂಕರ್ ಅವರು "ನೀವು ತವಾಂಗ್‌ಗೆ ಹೋದಾಗ ಈಕೆಗೆ ಫೋನ್ ಮಾಡಿ ಇವರು ನಿಮಗೆ ಬೇಕಾದ ಎಲ್ಲಾ ಸಹಾಯ ಮಾಡುತ್ತಾರೆ" ಎಂದರು. ಅದಕ್ಕೆ ನಾನು ನಗುತ್ತಾ "ಸರ್, ಹಾಗಾದರೆ ಅವರಿಗೆ ನೀವು ರಜೆ ಕೊಡುತ್ತಿದ್ದೀರಿ ಅಲ್ವಾ?" ಎಂದೆ. ಮೂವರೂ ಜೋರಾಗಿ ನಕ್ಕೆವು. ಕೇವಲ ಮನುಷ್ಯರಾಗಿದ್ದೆವು.

"ನಿಮಗೆ ಮಹಿಳೆಯರ ಮೇಲಿನ ಅಪರಾಧಗಳ ಬಗ್ಗೆ ಹೆಚ್ಚಿನ ವಿಷಯಬೇಕಿದ್ದರೆ ಇಲ್ಲಿನ ಏಕೈಕ ಮಹಿಳಾ ಪೊಲೀಸ್ ಠಾಣೆಗೆ ಹೋಗಿ. ನಾನು ಹೇಳಿರುತ್ತೇನೆ. ಅಲ್ಲಿ ಡಿವೈಎಸ್‌ಪಿ ಬಳಿ ಮಾತನಾಡಿ" ಎನ್ನುತ್ತಾ ಅಲ್ಲಿಗೆ ಫೋನ್ ಮಾಡಿ ವಿಷಯ ತಿಳಿಸಿದರು. ಇಲ್ಲಿಂದ ಬೀಳ್ಕೊಂಡು ಸೀದಾ ರಾಜ್ಯದ ಏಕೈಕ ಮಹಿಳಾ ಪೊಲೀಸ್ ಠಾಣೆಯ ಕಡೆಗೆ ಹೊರಟೆ. ಠಾಣೆಯ ಬಾಗಿಲಲ್ಲೇ ನಾಲ್ಕು ಜನ ಸುಂದರವಾದ ಯುವ ಮಹಿಳಾ ಕಾನ್ಸ್‌ಟೇಬಲ್‌ಗಳು ಮಾತನಾಡುತ್ತಾ ಕುಳಿತ್ತಿದ್ದರು. ಅವರೆಲ್ಲರೂ ಈಶಾನ್ಯ ರಾಜ್ಯದ ಮಹಿಳೆಯರೇ ಆಗಿದ್ದರು. ನಾ ಭೇಟಿ ಮಾಡಬೇಕಿದ್ದ ಅಧಿಕಾರಿ ಕಾರ್ಯ ನಿಮಿತ್ತ ಹೊರಗೆ ಹೋಗಿದ್ದರು. ಒಂದು ಗಂಟೆಗಳ ಕಾಲ ಬಿಟ್ಟು ಬರಲು ಹೇಳಿದರು. ಆ ಬಿಡುವಿನ ವೇಳೆಯಲ್ಲಿ ಪುರಾತತ್ವ ಇಲಾಖೆಯ ಮ್ಯೂಸಿಯಂಗೆ ಹೋಗಿ ಬಂದೆ. ಹಿಂದಿರುಗಿ ಬಂದಾಗ ಕಾನ್ಸ್‌ಟೇಬಲ್‌ಗಳು ಅವರ ಕೊಠಡಿಯಲ್ಲಿ ಕುಳಿತು ಕಾಯಲು ಹೇಳಿದರು. ಅಲ್ಲಿ ಇನ್ನೂ ಇಬ್ಬರು ಹೆಂಗಸರು ಕಾಯುತ್ತಿದ್ದರು. ಕುಳ್ಳಗೆ, ಚಕ್ಕಿತವಾದ ದೇಹ, ಚುರುಕು ನಡೆ, ತೀಕ್ಷ್ಣ ನೋಟ ಹೊತ್ತ, ಗರಿಗರಿ ಯೂನಿಫಾರಂನ ಮೇಲೆ



**ತೆಚಿ ಹ್ಯಾನಿರ್, ಡಿವೈಎಸ್‌ಪಿ, ಅರುಣಾಚಲ ಪ್ರದೇಶ, ಲೇಖಕಿ ಮತ್ತು ಠಾಣಾಧಿಕಾರಿ**

ತೆಚಿ ಹ್ಯಾನಿರ್, ಡಿವೈಎಸ್‌ಪಿ ಎನ್ನುವ ಬ್ಯಾಡ್ಜ್ ಹಾಕಿಕೊಂಡಿದ್ದ ಯುವತಿ ಒಳಬಂದರು. ಎಷ್ಟೆಷ್ಟೋ ಶತಮಾನಗಳು ನಮ್ಮಿಂದ ಕಸಿದುಕೊಂಡಿದ್ದ ಇಂತಹ ಒರಟು ವೃತ್ತಿಗಳಲ್ಲಿ ಯೂನಿಫಾರಂ ಹಾಕಿಕೊಂಡು ಧೃಢತೆಯಿಂದ ಕೆಲಸ ಮಾಡುವ ಹೆಂಗಸರನ್ನು ಕಂಡರೆ ನನಗೆ ಗೌರವ ಮಾತ್ರವಲ್ಲ ಒಂದು ಹಿಡಿ ಪ್ರೀತಿಯೇ ಹೆಚ್ಚು. ನನ್ನ ಮನಸ್ಸನ್ನು ಆಕೆ ಗ್ರಹಿಸಿದ್ದರೋ ಏನೋ, ಹಸ್ತಲಾಘವದ ಮರುಕ್ಷಣವೇ ನಾವಿಬ್ಬರೂ ಗೆಳತಿಯರಂತೆ ಹರಟಲು ಶುರು ಮಾಡಿದೆವು. ಮೂಲತಃ ಅರುಣಾಚಲ ಪ್ರದೇಶದ ಇಟಾನಗರ ಪ್ರಾಂತ್ಯದ ಹ್ಯಾನಿರ್ ಎನ್ನುವ ಬುಡಕಟ್ಟಿಗೆ ಸೇರಿದ ಆಕೆ ಭೂಗೋಳ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿ, ರಾಜ್ಯದ ಆಡಳಿತ ಸೇವಾ ಪ್ರಾಧಿಕಾರದ ಪರೀಕ್ಷೆ ತೆಗೆದುಕೊಂಡು, ದೆಹಲಿಯಲ್ಲಿ ತರಬೇತಿ ಪಡೆದು ಈಗ ಡಿವೈಎಸ್‌ಪಿ ಹುದ್ದೆಯನ್ನು ಅಲಂಕರಿಸಿದ್ದಾರೆ. ಅರುಣಾಚಲ ಪ್ರದೇಶದ ಮೊಟ್ಟಮೊದಲ ಹಾಗೂ ಏಕೈಕ ಡಿವೈಎಸ್‌ಪಿ ತೆಚಿ ಹ್ಯಾನಿರ್.

ಇಲ್ಲಿನ ಸಾಂಸ್ಕೃತಿಕ ಬೇರು ಆಳವಾಗಿ ಮತ್ತು ಗಟ್ಟಿಯಾಗಿ ಇರುವುದರಿಂದ ಮತ್ತು ಇಲ್ಲಿನ ಗಂಡಸರು ವಿಶಾಲ ಮನೋಭಾವದವರಾಗಿರುವುದರಿಂದ ಬೇರೆ ರಾಜ್ಯಗಳಂತೆ (ನಾಲ್ಕೈದು ಉತ್ತರ ಭಾರತ ರಾಜ್ಯಗಳ ಹೆಸರು ಹೇಳಿದರು) ಇಲ್ಲಿ ಮಹಿಳೆಯರ ಮೇಲೆ ಹೆಚ್ಚು ಅಪರಾಧ ಘಟಿಸುವುದಿಲ್ಲ. ಜೊತೆಗೆ ಇಲ್ಲಿನ ಹೆಂಗಸರು ಬಹಳ ಆತ್ಮವಿಶ್ವಾಸ ಉಳ್ಳವರು ಮತ್ತು ಆರ್ಥಿಕವಾಗಿ ಬಹುಪಾಲು ಸಮರ್ಥರಾಗಿದ್ದಾರೆ. ಕೌಟುಂಬಿಕ

ಜವಾಬ್ದಾರಿಯನ್ನೂ ತಾವೇ ಹೊರುತ್ತಾರೆ ಹಾಗಾಗಿ ಅಷ್ಟೊಂದು ದೌರ್ಜನ್ಯ ನಡೆಯುವುದಿಲ್ಲ. ಆದರೂ ಈಗ ನಗರ ಪ್ರದೇಶಗಳಿಗೆ ಹೆಚ್ಚು ಜನ ವಲಸೆ ಬರುತ್ತಿರುವುದರಿಂದ ಇಲ್ಲಿ ಕೌಟುಂಬಿಕ ದೌರ್ಜನ್ಯ, ಹಲ್ಲೆಗಳಂತಹ ಅಪರಾಧಗಳು ಸಾಮಾನ್ಯವಾಗಿ ಕಂಡುಬರುತ್ತಿದೆ. ವರದಕ್ಷಿಣೆ ಕಿರುಕುಳ ಹಾಗೂ ಅತ್ಯಾಚಾರ ಪ್ರಕರಣಗಳು ತೀರಾ ಅಪರೂಪವೆನ್ನಬಹುದು. "ಮೇಡಮ್ ನಿಮಗೆ ಗೊತ್ತಾ ಇಲ್ಲಿ ಇಂದಿನವರೆಗೂ ಕೂಡ ಒಂದೂ ಹುಡುಗಿಯರನ್ನು ಚುಡಾಯಿಸುವಿಕೆ ಪ್ರಕರಣ ದಾಖಲಾಗಿಲ್ಲ" ಎಂದರು ತೆಚಿ. "ಹೌದು ಹೌದು ನಾನೂ ಗಮನಿಸಿದೆ. ಒಬ್ಬರೂ ನನ್ನನ್ನು ನೋಡದೆಯೇ ಇದ್ದಾಗಲೇ ಅಂದುಕೊಂಡೆ. ಇಲ್ಲಿ ಈವ್ ಟೀಸಿಂಗ್ ಇರಲಾರದು" ಅಂತ ನಾನು ಹೇಳಿದಾಗ ಇಬ್ಬರೂ ಸ್ನೇಹಮಯವಾಗಿ ನಕ್ಕೆವು. ಇಲ್ಲಿ ಹೆಣ್ಣು ಮಕ್ಕಳ ಅಕ್ಷರಜ್ಞಾನ ಗಂಡಸರಿಗಿಂತ ಹೆಚ್ಚಿದೆ ಹಾಗೂ ಮೃದು ಸ್ವಭಾವಿಗಳು. "ಇಲ್ಲಿ ಮಹಿಳಾ ಪೊಲೀಸರು ಎಷ್ಟಿದ್ದಾರೆ?" ಎನ್ನುವ ನನ್ನ ಪ್ರಶ್ನೆಗೆ "ಹೆಚ್ಚೇನು ಇಲ್ಲ ಮೇಡಂ. ಕಾನ್ಸ್‌ಟೇಬಲ್ ಹಂತದಿಂದ ಇಡೀ ರಾಜ್ಯದಲ್ಲಿ 300 ಜನ ಮಹಿಳಾ ಪೊಲೀಸರು ಇರಬಹುದು ಅಷ್ಟೆ. ಕಾರಣ ಪೊಲೀಸ್ ಆಗಲು ದೈಹಿಕ ಸಾಮರ್ಥ್ಯದ ಪರೀಕ್ಷೆ ಇರುತ್ತದೆ. ಅದಕ್ಕೇ ಸಾಕಷ್ಟು ಮಹಿಳೆಯರು ಹಿಂಜರಿಯುತ್ತಾರೆ" ಎಂದರು. "ಅಷ್ಟೇ ಅಲ್ಲ. ಮೊದಲೆಲ್ಲಾ ಇಲ್ಲಿ ಮಹಿಳೆಯರ ಮೇಲೆ ಯಾವುದೇ ಕ್ರಿಮಿನಲ್ ಅಪರಾಧ ನಡೆಯುತ್ತಲೇ ಇರಲಿಲ್ಲ ಎನ್ನಬಹುದು. ಅದಕ್ಕಾಗಿ ಬಹುಶಃ ಮಹಿಳಾ ಪೊಲೀಸರ ಅವಶ್ಯಕತೆ ಕಂಡಿಲ್ಲದಿರಬಹುದು. ಆದರೆ ಈಗ ಹಾಗಲ್ಲ. ಅದಕ್ಕಾಗಿಯೇ ಮಹಿಳಾ ಪೋಲಿಸರ ಹುದ್ದೆಗಳನ್ನು ತೆರೆಯಲಾಗಿದೆ" ಎನ್ನುವ ಅವರ ಮಾತು ನನಗೆ ಹೊಸ ಅರ್ಥವನ್ನೇ ನೀಡಿತು. ವಿದ್ಯಾವಂತ ಮಹಿಳೆಯರು ಹೆಚ್ಚಾಗಿ ಸರ್ಕಾರಿ ಕೆಲಸವನ್ನೋ ಇಲ್ಲವೇ ಅಧ್ಯಾಪಕರ ವೃತ್ತಿಯನ್ನೋ ಆಯ್ದುಕೊಳ್ಳುತ್ತಿದ್ದಾರೆ. ಇಲ್ಲಿನ ಪ್ರತೀ ಬುಡಕಟ್ಟಿನವರಿಗೂ ತಮ್ಮದೇ ಆದ ಆಚಾರ ಮಾತ್ರವಲ್ಲ ವಿಚಾರವೂ ಇದೆ. ಅವರುಗಳು ಸ್ವಭಾವದಲ್ಲೂ ಒಬ್ಬರಿಗಿಂತ ಇನ್ನೊಬ್ಬರು ವಿಭಿನ್ನ. ನಾನು ಗಮನಿಸಿದ್ದ, ಓದಿದ್ದ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಆಕೆಯನ್ನು ಕೇಳಿದೆ "ಅಪರಾಧ ಎಸಗುವುದರಲ್ಲಿ ಯಾವ ಬುಡಕಟ್ಟು ಜನದವರು ಮುಂದು?" ಎಂದು, ಆಕೆ ದೀರ್ಘವಾದ ಉಸಿರು ತೆಗೆದುಕೊಂಡು, ಸಣ್ಣಗೆ ನಗುತ್ತಾ "ಮೇಡಂ ನಿಜ ಹೇಳಬೇಕೆಂದರೆ ನನ್ನ ಟ್ರೈಬ್‌ನವರೇ ಸ್ವಲ್ಪ

ಒರಟು. ಎಲ್ಲಿಯೇ ಹೋಗಿ ಸ್ಥಳೀಯರು ಹೊರಗಿನಿಂದ ಬಂದವರ ಮೇಲೆ ಮೇಲ್ಗೈ ಸಾಧಿಸುತ್ತಾರೆ" ಎಂದರು. ಆ ಗಳಿಗೆಯಲ್ಲಿ ನಮ್ಮ ಕನ್ನಡದ ಮಣ್ಣಿನ ಗುಣದ ಬಗ್ಗೆ, ಕನ್ನಡಿಗರ ಬಗ್ಗೆ ಅವರ ಸಹಿಷ್ಣು ಗುಣದ ಬಗ್ಗೆ ಹೆಮ್ಮೆಯೆನಿಸ್ಸಿದ್ದಂತೂ ಸುಳ್ಳಲ್ಲ.

ಆ ದಿನ ಬೆಳಗ್ಗೆ ತಾನೆ ಬೆಂಗಳೂರಿನಲ್ಲಿ ಸರಗಳ್ಳತನ ಎನ್ನುವ ಸುದ್ದಿ ಕೇಳಿದ್ದೆ. ಅದು ನೆನಪಾಯ್ತು. ಜೊತೆಗೆ ಅಲ್ಲಿನ ಹೆಂಗಸರು ಯಾವುದೇ ರೀತಿಯ ಒಡವೆಯನ್ನು ಹಾಕಿಕೊಂಡಿದ್ದನ್ನು ಅಲ್ಲಿಯವರೆಗೂ ನಾನು ನೋಡಿರಲಿಲ್ಲ. ಅದಕ್ಕೆ ತೆಚಿಯವರನ್ನು ಕೇಳಿದೆ "ನಿಮ್ಮಹೆಣ್ಣು ಮಕ್ಕಳು ಚಿನ್ನಾಭರಣಗಳನ್ನು ಹಾಕಿಕೊಳ್ಳುವುದಿಲ್ಲವಾ?" ಎಂದು, ಅದಕ್ಕವರು "ಓಹ್, ದಕ್ಷಿಣ ಭಾರತೀಯ ಹೆಂಗಸರಂತೆ ಇಲ್ಲಿನವರಿಗೆ ಚಿನ್ನದ ಖಾಯಿಷ್ ಇಲ್ಲ. ಆದರೂ ಅಪರೂಪಕ್ಕೆ ಒಬ್ಬರೋ ಇಬ್ಬರೋ ಹಾಕಿಕೊಳ್ಳುತ್ತಾರೆ. ಸಾಮಾನ್ಯವಾಗಿ ಇಲ್ಲಿನವರು ಬೆಳ್ಳಿ ಒಡವೆಗಳನ್ನು ಧರಿಸುತ್ತಾರೆ" ಎಂದರು. ಅಷ್ಟರಲ್ಲಿ ನಮ್ಮ ಮಾತನ್ನು ಕೇಳಿಸಿಕೊಳ್ಳುತ್ತಾ ಅಲ್ಲೇ ಕುಳಿತ್ತಿದ್ದ ಆ ಇಬ್ಬರು ಹೆಂಗಸರಲ್ಲಿ ಒಬ್ಬಾಕೆ "ಚಿನ್ನವನ್ನು ಹಾಕಿಕೊಳ್ಳಬೇಕೆಂದರೂ ಅದನ್ನು ಕೊಂಡುಕೊಳ್ಳುವ ಶಕ್ತಿ ಇರಬೇಕಲ್ಲ" ಎಂದಾಗ ನನಗೆ ಎಲ್ಲೋ ಒಂದು ಕಡೆ ನಾವು ಹೆಂಗಸರೆಲ್ಲ ಒಂದೇ ಅನ್ನಿಸಿತು. "ನೀವು ಇಲ್ಲಿ ಇರುವವರೆಗೂ ಯಾವ ಸಮಸ್ಯೆಯಾದರೂ ಎಷ್ಟು ಹೊತ್ತಿನಲ್ಲೂ ಫೋನ್ ಮಾಡಿ" ಎನ್ನುತ್ತಾ ತೆಚಿಯವರು ತಮ್ಮ ವೈಯಕ್ತಿಕ ಮೊಬೈಲ್ ನಂಬರ್ ಕೊಟ್ಟು ನನ್ನೊಡನೆ ತಮ್ಮ ಮೊಬೈಲ್‌ನಲ್ಲೂ ಒಂದೆರಡು ಫೋಟೊ ತೆಗೆದುಕೊಂಡು ಕಳುಹಿಸಿಕೊಟ್ಟರು. ಹೊರ ಬರುವಾಗ ಕಂದ ಅಪರಾಧ ಅಂಕಿ ಅಂಶಗಳ ಫಲಕ ಹೇಳುತ್ತಿತ್ತು "2014-15, ಜನವರಿಯವರೆಗೂ ನೊಂದಣಿಯಾದ ಅತ್ಯಾಚಾರ -1, ಹಲ್ಲೆ-24, ಕೊಲೆ-1 ಮತ್ತು ಮಕ್ಕಳ ಅಪಹರಣ-27" ಎಂದು. ಬೇರೆಲ್ಲೆಡೆಗಿಂತ ಇಲ್ಲಿ ಅಪರಾಧ ಸಂಖ್ಯೆ ಕಡಿಮೆ ಎಂದು ನಿರಾಳವಾಗಲೋ ಅಥವಾ ಇಷ್ಟು ಅಪರಾಧಗಳು ಯಾಕೆ ತಾನೆ ಘಟಿಸಬೇಕು ಎಂದು ಆದರ್ಶವಾದಿಯಾಗಲೋ ಎಂದು ಯೋಚಿಸುತ್ತಾ ಒಂದೆರಡು ನಿಮಿಷ ಆ ಫಲಕದ ಮುಂದೆ ಮೌನವಾಗಿ ನಿಂತು ಅಲ್ಲೇ ಇದ್ದ ಮಹಿಳಾ ಕಾನ್ಸ್‌ಟೇಬಲ್‌ಗಳಿಗೆ ಗೌರವ ಸೂಚಿಸುತ್ತಾ ಹೊರಬಂದೆ.

**10ನೇ ಬೆಟಾಲಿಯನ್ ಸೈನ್ಯ ತುಕಡಿ**: ಮರುದಿನ ಮಾಲಿನಿತಾನ್‌ಗೆ ಹೊರಟೆ. ಈ ರಾಜ್ಯದ ಗಡಿ ಬಿಟ್ಟು ಅಸ್ಸಾಂ ಪ್ರವೇಶಿಸಿದೆ. ಅಸ್ಸಾಂನಲ್ಲಿ ಹೆಚ್ಚಿನ ಪಾಲು ರಸ್ತೆಗಳು ಅಗಲವಾಗಿ, ಸಪೂಟಾಗಿ ಇರುತ್ತವೆ. ನಗರಗಳ ಹೊರತಾಗಿ ಮತ್ತೆಲ್ಲ ಕಡೆಯೂ ನಿರ್ಜನವಾಗಿಯೂ ಇರುತ್ತದೆ. ಅರುಣಾಚಲದ ಚಳಿಯನ್ನು ಅಸ್ಸಾಂನ ಚುರುಗುಟ್ಟುವ ಬಿಸಿಲು ನುಂಗಿ ಹಾಕಿತ್ತು. ಸ್ವೆಟರ್ ಬಿಚ್ಚಲು ಹೀಗೆ ಬಗ್ಗಿದೆ ಎಡ ಭಾಗದಲ್ಲಿ ಕಣ್ಣಿಗೆ ಬಿತ್ತು "ಟಿಬೇಟಿಯನ್ ಬಾರ್ಡರ್ ಸೆಕ್ಯುರಿಟಿ ಫೋರ್ಸ್, 10ನೇ ಬೆಟಾಲಿಯನ್ 40 ಕಿಲೋಮೀಟರ್" ಎನ್ನುವ ಬೋರ್ಡ್. ಸೈನಿಕರು ಕೈಯಳತೆಯ ದೂರದಲ್ಲಿದ್ದಾರೆ ಎಂದು ತಿಳಿದಾಗ ಎಲ್ಲಿಯೂ ಅವರುಗಳನ್ನು ಮಾತನಾಡಿಸದೆ, ಅವರೊಡನೆ ಸ್ವಲ್ಪ ಹೊತ್ತು ಕಳೆಯದೆ ಹಿಂದಿರುಗಿ ಬರುವವಳೇ ಅಲ್ಲ.  ಚಾಲಕನಿಗೆ ಆ ರಸ್ತೆಗೆ ತಿರುಗಿಸಿಕೊಳ್ಳಲು ಹೇಳಿದೆ. "ಅಯ್ಯೋ ದೀದಿ, ಅಲ್ಲಿಂದ ಮಾಲಿನಿತಾನ್‌ಗೆ ಹೋಗಲು ಸಾಧ್ಯವಿಲ್ಲ. ಜೊತೆಗೆ ನಾವು ಅಲ್ಲಿ ಹೋದರೆ ಸಂಜೆಯೊಳಗೆ ಊರು ಸೇರಲೂ ಆಗುವುದಿಲ್ಲ. ತಿನ್ನಲು ಏನೂ ಸಿಗೋಲ್ಲ. ಮಲಗಲು ಜಾಗವೂ ಇರೋಲ್ಲ" ಎಂದ ಅವನ ಮಾತನ್ನು ಲೆಕ್ಕಿಸದೆ'' ಏನೂ ಸಿಗದಿದ್ದರು ಸೈನಿಕರು ಸಿಗುತ್ತಾರೆ. ಅವರೇ ನಮ್ಮನ್ನು ನೋಡಿಕೊಳ್ಳುತ್ತಾರೆ. ನಡಿ" ಎಂದು ಹಟಹಿಡಿದು ಗಾಡಿಯನ್ನು ಆ ರಸ್ತೆಗೆ ತಿರುಗಿಸಿದ್ದಾಯ್ತು. ಆಹಾ, ಆ 40 ಕಿಲೋಮೀಟರ್ಗಳ ಪಯಣ ನಿಜಕ್ಕೂ ಅನೂಹ್ಯವಾದದ್ದು. ಎರಡೂ ಬದಿಗಳಲ್ಲೂ ಹಸಿರು ಹಸಿರಿನ ಮೈದಾನ. ನಡುನಡುವೆ ಹರಿಯುತ್ತಿದ್ದ ಕಾಲುವೆ, ವಾಹನವಾಗಲಿ, ನಮ್ಮಿಬ್ಬರನ್ನು ಹೊರತುಪಡಿಸಿ ಮನುಷ್ಯರಾಗಲಿ ಇರಲಿಲ್ಲ. ತಲೆಯೆತ್ತಿದರೆ ಕೈಗೆಟಕುವಂತೆ ಹಾರುತ್ತಿದ್ದ ಹಕ್ಕಿಗಳು, ನೀಲಿ ಆಕಾಶ, ಕಿವಿಗೆ ಸಿಕ್ಕಿಸಿಕೊಂಡಿದ್ದ ಹಾಡಿನ ಪುಟಾಣಿ ಯಂತ್ರದಿಂದ 'ಚಲಿಸುವ ಕಾಲವು ಕಲಿಸುವ ಪಾಠವ ಮರೆಯಬೇಡ ನೀ ತುಂಬಿಕೋ ಮನದಲಿ' ಸಾಲುಗಳು ಹಾಡಾಗಿ ತೇಲಿ ಬರುತ್ತಿತ್ತು. ಚಾಲಕನಿಗೆ ಕಾರುನಿಲ್ಲಿಸಲು ಹೇಳಿ, ನಡಿಗೆಯ ನಶೆ ಏರಿದವಳಂತೆ ಸುಮ್ಮನೆ ನಡೆಯುತ್ತಿದ್ದೆ. ದೂರದೂರದಲ್ಲಿ ಬಿದಿರಿನ ಮನೆಗಳು ಕಾಣುತ್ತಿದ್ದವು. ಅಲ್ಲಿಗೂ ಹೋಗಬೇಕೆನ್ನುವ ಅದಮ್ಯ ಬಯಕೆ ಚಕ್ರ ಕಟ್ಟಿಕೊಂಡ ಮನಸ್ಸಿಗೆ. ಬಿದಿರಿನ ಮನೆಯ ಮುಂದೆ ಗೂಡೆಯೊಳಗೆ ಚಿಕ್‌ಚಿಕ್ ಎನ್ನುತ್ತಿದ್ದ ಕೋಳಿ ಪಿಳ್ಳೆಗಳನ್ನು ದಾಟಿ ಹೋದೆ. ಇಬ್ಬರು ಹುಡುಗಿಯರು ಬಿಸಿಲಿನಲ್ಲಿ ಹಸಿ ಅರಿಷಿಣವನ್ನು ಬಿಡಿಸುತ್ತಾ ಕುಳಿತ್ತಿದ್ದರು. ಅವರನ್ನು ಮಾತನಾಡಿಸುತ್ತಾ. ಅವರಾಡುತ್ತಿದ್ದ ಅಸ್ಸಾಮಿ ಭಾಷೆಯನ್ನು ನನ್ನ ಕನ್ನಡದಲ್ಲೇ ಅರ್ಥೈಸಿಕೊಳ್ಳುತ್ತಾ ಅದೆಷ್ಟೋ ಹೊತ್ತು ಕಾಲಕಳೆದೆ. ಕ್ಯಾಮೆರಾಕ್ಕೆ ಹತ್ತಾರು

ಬಗೆಯ ಫೋಸ್ ಕೊಟ್ಟ ಹುಡುಗಿಯರು ತಮ್ಮದೇ ಫೋಟೊಗಳನ್ನು ಮತ್ತೆ ಮತ್ತೆ ನೋಡಿ ನಾಚಿಕೊಳ್ಳುತ್ತಿದ್ದದ್ದು ಅಲ್ಲಿನ ಪ್ರಕೃತಿಯಷ್ಟೇ 'ವಾಹ್' ಎನ್ನುವಂತಿತ್ತು. ಬಿಟ್ಟು ಹೊರಡಲು ಮನಸ್ಸೇ ಇರಲಿಲ್ಲ. ಅಂತೂ ಒಂದು ಹತ್ತು ಕಿಲೋಮೀಟರ್ಗಳಾದ ಮೇಲೆ ಚಾಲಕ ರಂಜು "ದೀದಿ ಹೀಗಾದರೆ ನಾಳೆಯಾದರೂ ನಾವು ತಲುಪೋಲ್ಲ. ಬನ್ನಿ ಕಾರಿನಲ್ಲಿ ಕುಳಿತುಕೊಳ್ಳಿ" ಎಂದಾಗ ಈ ಬಾರಿ ನನಗಿಂತ ಮೊದಲು ಕಾಲುಗಳು ಕಾರು ಹತ್ತಿ ಬಾಗಿಲು ಹಾಕಿಕೊಂಡವು. ಸೇನಾ ತುಕಡಿಯ ಕಚೇರಿಯ ಗೇಟಿನ ಬಳಿ ಕಾರು ನಿಂತಾಗ ಐದಾರು ಜನ ಕಾವಲುಗಾರರು ದಡದಡ ಓಡಿ ಬಂದರು. ಗುರುತಿನಪತ್ರ, ಪಾಸ್‌ಪೋರ್ಟ್ ಎಲ್ಲವನ್ನೂ ನೋಡಿಯೂ ಸ್ವಲ್ಪ ಖಡಕ್ ಆಗಿಯೇ ಇದ್ದರು. ಈ ವರೆಗೂ ಸೈನಿಕರು ನನ್ನೊಡನೆ ಸಲುಗೆಯಿಂದ ಮಾತಾಡಿದ್ದನ್ನೇ ನೋಡಿದ್ದೇನೆ. ಆದರೆ ಇಲ್ಲಿ ಸ್ವಲ್ಪ ಬಿಗುವಿನ ವಾತಾವರಣವಿತ್ತು. ಕಾರ್ ಚಾಲಕನನ್ನೂ ಪರೀಕ್ಷೆ ಮಾಡಿದರು. ನಾನು ನಿಧಾನವಾಗಿ ಮಾತನಾಡುತ್ತಾ ಎಲ್ಲವನ್ನೂ ವಿವರಿಸಿ ಅಮ್ಮ ಮಾಡಿಕೊಟ್ಟಿದ್ದ ಲಾಡು, ಕೋಡುಬಳೆಗಳನ್ನು ಹಂಚಿಕೊಳ್ಳುವ ಸ್ಥಿತಿಗೆ ಬಂದ ಮೇಲೆ ಒಬ್ಬೊಬ್ಬರೇ ಸ್ನೇಹದಿಂದ ಮಾತನಾಡತೊಡಗಿದರು. ನನ್ನನ್ನು ಒಳಗೆ ಬಿಡಲು ರೆಡಾರ್ ವಿಭಾಗದ ಅನುಮತಿ ಪಡೆಯಬೇಕಿತ್ತು. ಆ ರೇಜಿಗೆ ಕೆಲಸವನ್ನು ತಪ್ಪಿಸಲು ಒಳಗಿದ್ದವರು ಒಬ್ಬೊಬ್ಬರೇ ಹೊರಗೆ ಬಂದು ಮಾತನಾಡಿಸುತ್ತಿದ್ದರು. ತಮ್ಮ ಊರು ಕುಟುಂಬ, ಕೆಲಸಗಳ ಬಗ್ಗೆ ಕಷ್ಟ ಸುಖ, ನೆನಪುಗಳನ್ನು ಅವರುಗಳು ಹಂಚಿಕೊಳ್ಳುವಾಗ ನನ್ನ ಕಣ್ಣಿಗೆ ಪ್ರತೀ ಸೈನಿಕನೂ ಒಬ್ಬ ಬುದ್ಧನಂತೆ ಕಾಣುತ್ತಾನೆ. ಅಷ್ಟೊಂದು ನಿರ್ಮಲ ಮತ್ತು ಪವಿತ್ರ. ಹಿರಿಯ ಅಧಿಕಾರಿಗಳ ಅಪ್ಪಣೆ ಪಡೆದು ನನ್ನೊಡನೆ ಫೋಟೊ ತೆಗೆಸಿಕೊಂಡರು. ಇನ್ನು ಅರವತ್ತು ಕಿಲೋಮೀಟರ್ಗಳಷ್ಟು ಹೋದರೆ ಚೀನಾ ಹಾಗು ಟಿಬೇಟ್ ಸರಹದ್ದು. ಅತೀ ಸೂಕ್ಷ್ಮವಾದ ಪ್ರದೇಶ. ಪ್ರಕೃತಿ ಆಗತಾನೆ ಮೈನೆರೆತು ಹೂವಾಗಿ ಅರಳಿದ್ದಾಳೇನೋ ಎನ್ನುವಷ್ಟು ಸುಂದರ ಸ್ಥಳ. ನಿರ್ವಾತದಲ್ಲಿ ಉಕ್ಕುತ್ತಿದ್ದ ನಿರುಮ್ಮಳತೆಯಂತಿದ್ದ ಅಲ್ಲಿನ ಕಚೇರಿಯವರೆಗೂ ಸಹಾ ಸಾಮಾನ್ಯ ನಾಗರೀಕರು ಬರುವುದಿಲ್ಲ. ಇಲ್ಲಿಂದ ಮುಂದಕ್ಕಂತೂ ಯಾರಿಗೂ ಪ್ರವೇಶವಿಲ್ಲ. ಆದರೂ ತಮಗಿದ್ದ ಅಧಿಕಾರವನ್ನು ಚಲಾಯಿಸಿ ಹಿರಿಯ ಅಧಿಕಾರಿಯೊಬ್ಬರು ಮಿಲಿಟರಿ ವಾಹನದಲ್ಲಿ ಕೂರಿಸಿಕೊಂಡು ಮುಂದೆ ಒಂದು ಹತ್ತು ಕಿಲೋಮೀಟರ್ ನನ್ನನ್ನು ಕರೆದುಕೊಂಡು ಹೋದರು. ಮಾತು ಮುಗಿಯದಿದ್ದರೂ ಲಾಡು, ಕೋಡುಬಳೆಯ ಡಬ್ಬ ಖಾಲಿಯಾಗಿತ್ತು. ನನ್ನ ಚಾಲಕ ಈ 'ದೀದಿಯ' ಬಗ್ಗೆ ಹೆಚ್ಚೇ ಕಾಳಜಿ ವಹಿಸಿದ್ದ. ಹಾಗಾಗಿ ಪ್ರಯಾಣ

ಮುಂದುವರಿಸಲೇಬೇಕಿತ್ತು. ಹೊರಡುವ ವೇಳೆಗೆ ಒಬ್ಬ ಸೈನಿಕ "ಮೇಡಂ ನೀವೆಲ್ಲಾ ಎಷ್ಟು ಚೆನ್ನಾಗಿರುವ ಜಾಗದಲ್ಲಿ ಇರುತ್ತೀರ. ನಾವು ನೋಡಿ ಹೇಗಿರಬೇಕು?" ಎಂದ. ಹಿಂದೊಮ್ಮೆ ರಾಜಸ್ಥಾನದ ಗಡಿಯಲ್ಲಿ ಆಶುತೋಷ್ ಎನ್ನುವ ಗಡಿ ರಕ್ಷಕ ಹೀಗೆಯೇ ಕೇಳಿದ್ದಾಗ ಹೇಳಿದ್ದೆ "ಪ್ರಪಂಚದಲ್ಲಿ ಎರಡೇ ಸುಂದರ ಸ್ಥಳ ಇರುವುದು. ಒಂದು ಸೈನಿಕ ಎಲ್ಲಿ ಕೆಲಸ ಮಾಡುತ್ತಾನೋ ಅದು ಮತ್ತೊಂದು ಪ್ರತೀ ಹೆಣ್ಣಿನ ತವರು" ಎಂದು. ಈಗಲೂ ಇವನಿಗೆ ಅದೇ ಮಾತನ್ನು ಹೇಳುತ್ತಾ, ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತಾ ಪಯಣ ಬೆಳೆಸಿದ್ದೆ. ಆದರೆ ಮಾಲಿನಿತಾನ್‌ಗೆ ಹೋಗುವುದು ಸಾಧ್ಯವಿರಲಿಲ್ಲ. ಅಲ್ಲಿನ ಸೈನಿಕರೇ ಕಿರುದಾರಿಯಲ್ಲಿ 120 ಕಿಲೋಮೀಟರ್ಗಳಷ್ಟು ದೂರದಲ್ಲಿದ್ದ ಜ಼ೀರೋ ಎನ್ನುವ ಭುವಿಯೇ ಬಾಂದಳವಾದ ನಾಡಿಗೆ ಹೊರಟಿದ್ದಾಯ್ತು.



**ಟಿಬೇಟಿಯನ್ ಬಾರ್ಡರ್ ಸೆಕ್ಯುರಿಟಿ ಫೋರ್ಸ್, 10ನೇ ಬೆಟಾಲಿಯನ್‌ನ ಸೇನಾಧಿಕಾರಿಗಳು**

* * * * *

# 6. ಜ಼ೀರೋ ಎಂದರೆ ಶೂನ್ಯವಲ್ಲ ಅಪತಾನಿ

ಇನ್ನೆಲ್ಲಿಗೋ ಹೊರಟವಳನ್ನು ಬಳಸು ದಾರಿಯಲ್ಲಿ ಕೈಬೀಸಿ ಕರೆಯುತ್ತಿತ್ತು ಈ ಮಣ್ಣು. ಹೊಂಡ ಹಾರಿ, ಹಳ್ಳದಲ್ಲಿ ಜಾರಿ, ಧೂಳನಲ್ಲಿ ಮಿಂದು, ಚಳಿಯಲ್ಲಿ ನಡುಗಿ, ಬಿಸಿಲಿಗೆ ಸ್ವಲ್ಪವೇ ಬೆಂದುಕೊಂಡು ಅಂತೂ ಇಂತೂ ರಸ್ತೆ ಎನ್ನುವ ಹೆಸರಿನ ದಾರಿಯಲ್ಲಿ ತಲುಪಿದ್ದಾಯ್ತು ಈ ಗಿರಿಧಾಮವನ್ನು. ಇದು ಅತ್ಯಂತ ಅಪರೂಪದ ನಾಡು ಮತ್ತು ಸರಹದ್ದಿನ ಸಮೀಪದ ತಾಣವಾದ್ದರಿಂದ ಇಲ್ಲಿ ಮಿಲಿಟರಿ ಬಂದೋಬಸ್ತು ಬೇರೆಲ್ಲೆಡೆಗಿಂತಲೂ ಹೆಚ್ಚು ಮತ್ತು ಖಡಕ್. ಊರಿನ ಒಳಗೆ ಬಿಡಲು ಸಹ ನಮ್ಮ ಗುರುತಿನ ದಾಖಲೆಯನ್ನು ಪರಿಶೀಲಿಸಲಾಗುತ್ತದೆ. ಊರು ಸುತ್ತಲು ಪ್ರಕೃತಿಯೇ ನಿಗಧಿತ ಸಮಯ ಹಾಕಿಕೊಟ್ಟಿದ್ದಾಳೆ ಇಲ್ಲಿ. ಅವಳ ಆಣತಿಯನ್ನು ಮೀರಿದರೆ ಸೈನಿಕರು ತಡೆಯುತ್ತಾರೆ. ಇಲ್ಲಿ ಗೋರಿಲ್ಲಾ ಪಡೆಯ ಸೈನಿಕರು ಸರಹದ್ದು ಕಾಯುತ್ತಿದ್ದಾರೆ. ಸಮುದ್ರ ಮಟ್ಟದಿಂದ 5754 ಅಡಿಗಳಷ್ಟು ಎತ್ತರದಲ್ಲಿರುವ, ಜಗತ್ತಿನ ಅದ್ಭುತ ಗಿರಿಧಾಮಗಳಲ್ಲಿ ಒಂದಾದ ಇದನ್ನು 'ಜ಼ೀರೋ' ಎನ್ನುವುದಾಗಿ ಕರೆಯಲಾಗುತ್ತದೆ. ಈ ಅಪತಾನಿ ಪ್ರಸ್ಥಭೂಮಿಯು ವಿಶ್ವದ ಎಲ್ಲಾ ಸೌಂದರ್ಯ ಮತ್ತು ಸತ್ವವನ್ನು ತನ್ನಲ್ಲಿ ಅಡಗಿಸಿಟ್ಟುಕೊಂಡು ನಿಜದ 'ಶೂನ್ಯ' ಎನಿಸಿದೆ. ಉತ್ತರ ಲಖೀಮ್‌ಪುರ ಮತ್ತು ಇಟಾನಗರಗಳಿಂದ ಆರೇಳು ಗಂಟೆಗಳ ರಸ್ತೆ ಪ್ರಯಾಣದಲ್ಲಿ ತಲುಪಬಹುದಾದ 'ಜ಼ೀರೋ' ಸುತ್ತಲೂ ದೇವದಾರು ಮರಗಳಿಂದ ಆವೃತಗೊಂಡು, ಸುಬಾನ್ಸಿರಿ, ಅಪತಾನಿ, ಡಾಫ್ಲ, ನಿಶಿ, ಪೆಂಗೆ, ಸಿಪು, ಕರಿಂಗ್ ಮತ್ತು ಮಿರಿ ನದಿಗಳ ನೆಮ್ಮದಿಯ ಹರಿಯುವಿಕೆಗೆ ಸಾಕ್ಷಿಯಾಗಿದೆ. ಜೀವ ವೈವಿಧ್ಯ, ಸಸ್ಯ ವೈವಿಧ್ಯಗಳ ಖನಿ ಈ ಜ಼ೀರೋವನ್ನು ನಾನು ತಲುಪಿದಾಗ ಮಂಜು ಮುಸುಕಿಕೊಂಡು ಹೊತ್ತಿಗೆ ಮೊದಲೇ ಸಂಜೆಯಾಗಿತ್ತು. ಊರು ಸುತ್ತುವ ಹೊತ್ತು ಮುಗಿದಿದೆ ಎನ್ನುವ ಸಂದೇಶವೂ ಬಂದಾಗಿತ್ತು. ಉಳಿದುಕೊಳ್ಳಲು ಯಾವುದೇ ಜಾಗವನ್ನು ಮೊದಲೇ ಕಾಯ್ದಿರಿಸಿರಲಿಲ್ಲ. ಕತ್ತಲಲ್ಲಿ ಯಾವ ಬೋರ್ಡುಗಳೂ ಕಾಣುತ್ತಿಲ್ಲ. ಯಾರನ್ನಾದರು ಕೇಳೋಣ ಎಂದುಕೊಂಡರೆ ಅದೊಂದು ನಿರ್ಜನ ಇಳಿಸಂಜೆಯ ಸಮಯ.

ಹೆಜ್ಜೆಹೆಜ್ಜೆಗೂ ಮದಿರೆಯ ಘಾಟಿನಿಂದ ಮುಚ್ಚಿಹೋಗಿದ್ದ ಸೈನಿಕರಿಂದ ತಪಾಸಣೆಯ ಆತಂಕ ಬೇರೆ. ಪೂರ್ತಿ ಊರಿನಲ್ಲಿ ಏರು ಇಳಿಜಾರಿನ ರಸ್ತೆಗಳೇ. ತಂಗುದಾಣವನ್ನು ಹುಡುಕುತ್ತಾ ಅದು ಹೇಗೆ ಆ ದಾರಿಯಲ್ಲಿ ಹೋಗಿಬಿಟ್ಟೆನೋ ತಿಳಿಯದಾಗಿತ್ತು. ಅದೊಂದು ನಿಷೇಧಿತ ಪ್ರದೇಶವಾಗಿತ್ತು. ತಿಳಿಯದೆ ನಾನು ಪ್ರವೇಶಿಸಿದ ನಾಲ್ಕಾರು ನಿಮಿಷಗಳಲ್ಲಿ ಐದಾರು ಸುಸಜ್ಜಿತ ಗೋರಿಲ್ಲಾ ಸೈನಿಕರು ನನ್ನನ್ನು ಸುತ್ತುವರಿದು ಬಿಟ್ಟರು. ನಮ್ಮ ನಡುವಿನ ಭಾಷೆಗೆ ಯಾವ ವಿಧದಲ್ಲೂ ಸಂಬಂಧ ಹುಟ್ಟುತ್ತಿರಲಿಲ್ಲ. ಅವರು ಹೇಳುತ್ತಿದ್ದದ್ದು ನನಗೆ ಕೊಂಚವೂ, ನನ್ನದು ಅವರಿಗೆ ಸ್ವಲ್ಪವೂ ಅರ್ಥವಾಗುತ್ತಿರಲಿಲ್ಲ. ಆ ಕತ್ತಲಲ್ಲಿ ಅವರು ಮಾಡಿರಬಹುದಾದ ಸಂಜ್ಞೆಯೂ ನನಗೆ ಕಾಣಲಿಲ್ಲವೇನೋ. ಲಗ್ಗೇಜ್ ಕೂಡ ತಪಾಸಣೆ ಮಾಡಿದರು. ಗುರುತಿನ ದಾಖಲೆಗಳನ್ನು ನೋಡಿಯೂ ನನ್ನನ್ನು ಹಿಂದೆಯೂ ಹೋಗದಂತೆ, ಮುಂದೆ ಹೆಜ್ಜೆ ಇಡದಂತೆ ತಡೆದು ಬಿಟ್ಟಿದ್ದರು. ಇನ್ನೂ ಹೆಚ್ಚಿನ ಕತ್ತಲು ಧರೆಗೆ ಇಳಿಯುತ್ತಿತ್ತು. ಧೈರ್ಯಗುಂದದಿದ್ದರೂ ಒಂದಷ್ಟು ನಿಮಿಷಗಳು ಅಸಹಾಯಕಳಂತೆ ಅನ್ನಿಸಿದ್ದು ಸತ್ಯ. ಅಷ್ಟರಲ್ಲಿ ಅಲ್ಲೇ ಸ್ವಲ್ಪ ಹಿಂದೆ ಬೀಡಿಯಂಥದ್ದೇನನ್ನೋ ಸೇದುತ್ತಾ ನಿಂತಿದ್ದ ಸೈನಿಕನೊಬ್ಬ ಹತ್ತಿರ ಬಂದು ಪುಟಾಣಿ ಟಾರ್ಚ್ ಒಂದನ್ನು ನನ್ನ ಕೆಳಗಿನಿಂದ ಮೇಲಿನವರೆಗೂ ಹಾಯಿಸಿದ. ಮುಖಕ್ಕೆ ಬೆಳಕು ಬೀಳುತ್ತಿದ್ದಂತೆಯೇ "ಓ ಆಫ್‌ಸೌತ್ ಇಂಡಿಯನ್ ಹೋ ಮೇಡಂ" ಎನ್ನುವ ಒಂದು ಸಮಾಧಾನದ ಪರಿಚಯದಂತೆ ತೋರುವ ಉದ್ಗಾರ ತೆಗೆದ. ಅಲ್ಲಿ ಯಾರ ಮುಖಭಾವವೂ ಯಾರಿಗೂ ಕಾಣುತ್ತಿರಲಿಲ್ಲ. ಅವರದೇ ಭಾಷೆಯಲ್ಲಿ ಉಳಿದವರಿಗೆ ಏನೇನೋ ಹೇಳಿದ. ಅಂತೂ ಹಿಂದಿರುಗಿ ಕಳಿಸಿದರು. ಅಲ್ಲಿಂದ ಒಂದಷ್ಟು ದೂರ ಇಳಿದು ಮತ್ತೊಂದು ಏರು ರಸ್ತೆಯನ್ನು ಹತ್ತಿದೊಡನೆ ಮಿಣುಕು ದೀಪವೊಂದರ ಕೆಳಗೆ ಅರುಣಾಚಲ ಪ್ರದೇಶ ಸರ್ಕಾರದ ಪ್ರವಾಸಿ ತಂಗುದಾಣದ ಬೋರ್ಡ್ ಕಂಡಿತು. 'ಅಬ್ಬಾ' ಎನ್ನುವ ಉಸಿರಿನೊಂದಿಗೆ ಅಲ್ಲಿಗೆ ನುಗ್ಗಿಬಿಟ್ಟೆ. ಒಬ್ಬ ಹುಡುಗ ಓಡಿ ಬಂದು ರೂಮುಗಳು ಖಾಲಿ ಇಲ್ಲ ಎಂದ. "ಅಯ್ಯೋ ಅದಕ್ಕೇನಂತೆ ನಿನ್ನ ಜೊತೆಯಲ್ಲಿ ಇರುತ್ತೇನೆ ಬಿಡು" ಎನ್ನುತ್ತಾ ನಗುತ್ತಾ ಮಾತನಾಡಿಸಿ ಅವನ ಸ್ನೇಹ ಪಡೆದುಕೊಂಡು ಮ್ಯಾನೇಜರ್ ಅನ್ನು ತಲುಪಿದೆ. ಅಂತೂ ಕೊರೆಯುವ ಕತ್ತಲಲ್ಲಿ, ಕಣ್ಣು ಕಾಣದಾಗಿದ್ದ ಚಳಿಯಲ್ಲಿ ಕೋಣೆ ಸೇರಿದ್ದಾಯ್ತು.

ಮರು ಬೆಳಗಿನಲ್ಲಿ ತಯಾರಾಗಿ ಹೊರಬಂದಾಗ ನಾನಿದ್ದ ಜಾಗ ಆ ಗಿರಿಧಾಮದಲ್ಲೇ ಎತ್ತರದಲ್ಲಿತ್ತು. ಅಲ್ಲಿಂದ ಸುತ್ತಲೂ ಊರು ಕಾಣುತ್ತಿತ್ತು. ಒಂದು ದಿಕ್ಕಿನಲ್ಲಿ ಗಜೇಂದ್ರನು ಮೋಕ್ಷಕ್ಕಾಗಿ ಎತ್ತಿದ ಸೊಂಡಿಲಿನಂತೆ ಕಂಡರೆ, ಅದರ ಪಕ್ಕದಲ್ಲೇ ಗೆಜ್ಜೆಯ ಘಲ್‌ಘಲ್ ನಾದದಂತೆ ಕಾಣುತ್ತಿತ್ತು ಭೂಮಿ. ಆ ಮೂಲೆಯಲ್ಲಿ ದಾಕ್ಷಾಯಿಣಿ ಹೋಮದ ಧೂಮವಾದಂತೆ ಎನ್ನಿಸಿಬಿಟ್ಟರೆ, ನಡುವಿನಲ್ಲೆಲ್ಲೋ ದೇವಕಿಯ ಕರೆಗೆ ಯಮುನೆ ಓಗೊಟ್ಟಂತೆ ಎನ್ನಿಸುತ್ತಿತ್ತು ಈ ಊರು, ಆ ಜಾಗ. ಹಾಲಿನ ಮೇಲಿನ ನೊರೆಯಂತೆ, ಅದನ್ನು ಹೀರಿದ ತುಟಿ ಕೊನೆಯ ತಿರುವಿನಂತೆ ಮನಮೋಹಕ ಝೀರೋ. ಹೊಟ್ಟೆಯ ಉಪಚಾರ ಮಾಡಿ ಬ್ರಹ್ಮಾಂಡದ ಚೆಲುವಿನಲ್ಲಿ ಕಳೆದು ಹೋಗಲು ಹೊರಟೆ. ಶೀತ ಮತ್ತು ಸಮಶೀತೋಷ್ಣ ಕಾಡುಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿರುವ ಈ ಗಿರಿಧಾಮದಲ್ಲಿ ಇರುವ ಪ್ರಾಕೃತಿಕ ಗುಹೆಗಳು, ಪಕ್ಷಿಧಾಮಗಳು, ಹೂವು ಹಸಿರಿನ ಪ್ರಪಾತಗಳಿಗೆ ಲೆಕ್ಕವೇ ಇಲ್ಲ. ಮೂರು ಗಂಟೆಗಳ ದೂರದಲ್ಲಿ ಕೈಬೀಸಿ ಕರೆಯುತ್ತದೆ ಮೆನ್‌ಗಾ ಗುಹೆಗಳು. ಮೂರು ಅಡಿ ಎತ್ತರದ ಕಗ್ಗತ್ತಲ ಗುಹೆಯಲ್ಲಿ ಟಾರ್ಚ್ ಹಿಡಿದು ತೆವಳಿಕೊಂಡು ಅಂಬೆಗಾಲಿಡುತ್ತಾ ಸಾಗಬೇಕಿರುತ್ತದೆ. ಪ್ರಕೃತಿಯ ವಿಸ್ಮಯಗಳಲ್ಲಿ ಕುತೂಹಲ ಉಳಿಸಿಕೊಂಡಿರುವ ಮನಸ್ಸುಗಳಿಗೆ ಇದೊಂದು ನೋಡಲೇ ಬೇಕಾದ ಜಾಗ. ಅಲ್ಲಿಂದ 23 ಕಿಲೋಮೀಟರ್‌ಗಳಷ್ಟು ಮುಂದೆ ಹೋದರೆ ತಲಿಯಾ ಮತ್ತು ಕೊಡಕ್ ಎನ್ನುವ ಜಾಗಗಳಿಂದ ವರ್ಷದ ಅಷ್ಟೂ ದಿನಗಳು ಹಿಮಾಲಯ ಪರ್ವತದ ಸುಂದರ ನೋಟ ಸಿಗುತ್ತದೆ. ದಪೋರಿಜೋ ಎನ್ನುವಲ್ಲಿ ನದಿಗೆ ಬಿದಿರಿನಿಂದ ಕಟ್ಟಿದ ಸೇತುವೆ ಅದೆಷ್ಟೋ ದಶಕಗಳಿಂದ ಕೊಂಚವೂ ಮುಕ್ಕಾಗದೆ ಇರುವುದು ಕಾಣುತ್ತದೆ. ತಲ್ಲೇ ವ್ಯಾಲಿ ಹೆಸರಿನ ಸಂರಕ್ಷಿತ ವನ್ಯಮೃಗಗಳ ತಾಣವೂ ಇಲ್ಲಿದೆ. ಇವೆಲ್ಲವನ್ನೂ ಖುಷಿಯಿಂದ ಕಂಡುಬಂದರೂ ಆ ರಾತ್ರಿಯಿಡೀ ನಿದ್ದೆ ಕೊಡದೆ, ಕುತೂಹಲದ ಬೆಂಕಿಯಲ್ಲಿ ಬೇಯಿಸಿ ಬೆಚ್ಚಗಾಗಿಸುತ್ತಿದ್ದದ್ದು ಮರುದಿನ ನಾನು ಭೇಟಿ ಮಾಡಬೇಕು ಎಂದುಕೊಂಡಿದ್ದ ಒಂದು ಬೆರಗಿನ ಬೀಡು.



**ಬಿರ್ರಿ ಹಳ್ಳಿಯಲ್ಲಿರುವ ಅಪತಾನಿ ಬುಡಕಟ್ಟು ಜನರ ಬಿದಿರಿನ ಮನೆ**

ಆ ಬೆಳಗು ಉಲ್ಲಾಸದ ಹೂಮಳೆಯನ್ನು ಜಿನುಗಿಸುತ್ತಿತ್ತು. ಹೋಗುತ್ತಿರುವುದು ಆದಿವಾಸಿಗಳ ವಾಸ ಸ್ಥಳಕ್ಕೆ. ಕೊಳಕು, ಕ್ರಿಮಿ, ಕೀಟ ಇನ್ನೂ ಅದ್ಯಾವುದರ ಕಾಟವೋ ತಿಳಿದಿಲ್ಲ. ಯಾವುದಕ್ಕೂ ಮೈಭರ್ತಿ ಬಟ್ಟೆತೊಟ್ಟು ಹೋಗಬೇಕು ಎಂದು ತೀರ್ಮಾನಿಸಿ, ತುಂಬು ತೋಳಿನ ಟಾಪ್, ಗಟ್ಟಿ ಜೀನ್ಸ್ ಪ್ಯಾಂಟ್, ಎರಡೆರಡು ಸಾಕ್ಸ್, ಶೂಜ಼್ ಎಲ್ಲಾ ಎತ್ತಿಟ್ಟುಕೊಂಡೆ. "ಅಷ್ಟರಲ್ಲೇ ಇಷ್ಟು ದಟ್ಟವಾದ ಕಾಡಾದರೂ ಅರುಣಾಚಲ ಪ್ರದೇಶ ಪ್ರಪಂಚದಲ್ಲೇ ಸಂಪೂರ್ಣ ಮಾಲಿನ್ಯ ರಹಿತ ಪ್ರದೇಶ ಎಂದು ಗುರುತಿಸಿಕೊಂಡಿದೆ" ಎನ್ನುವ ವಿಷಯವನ್ನು ಇಟಾ ನಗರದ ಲೈಬ್ರರಿಯಲ್ಲಿ ಓದಿದ ನೆನಪಾಯ್ತು. ಸ್ವಲ್ಪ ಧೈರ್ಯವೂ ಬಂತು. ನಾನಿದ್ದ ಜಾಗದಿಂದ ಮೂರು ಕಿಲೋಮೀಟರ್ ದೂರವನ್ನು ತಗ್ಗಿನಲ್ಲಿ ಕ್ರಮಿಸಿ ಬಿಟ್ಟಾಗ ಸಿಕ್ಕಿತು, 'ಬಿರ್ರಿ' ಎನ್ನುವ ಹಳ್ಳಿ. ಪ್ರಪಂಚದ ಅತೀ ಎತ್ತರದ ಪ್ರದೇಶದ ಮೀನುಗಾರಿಕೆ ಕೇಂದ್ರ ಇರುವುದು ಇಲ್ಲಿಯೇ. ಇದು 'ಅಪತಾನಿ' ಎನ್ನುವ ಆದಿವಾಸಿಗಳ ಹಾಡಿ. ವಿಶೇಷ ರೀತಿಯ ಕೃಷಿ, ಮೀನುಗಾರಿಕೆ ಮತ್ತು ಬಿದಿರಿನ ಮನೆಗಳನ್ನು ನಿರ್ಮಿಸುವುದು ಇವರ ಸಾಮುದಾಯಿಕ ಚಟುವಟಿಕೆಗಳು. ಎಳೆಬಿಸಿಲು, ಸಣ್ಣ ಚಳಿ, ಬಿಳಿ ಬೆಳಗು ಅಪ್ಯಾಯಮಾನವಾಗಿತ್ತು. ಸುತ್ತಲೂ ಅವರ ಕೃಷಿ ಭೂಮಿ. ಭತ್ತ ಬೆಳೆಯುವುದರಲ್ಲಿ ಮತ್ತು ಮೀನುಗಾರಿಕೆಯಲ್ಲಿ ಅಪತಾನಿಯರದು ಎತ್ತಿದ

ಕೈ. ತುಸು ದೂರದಲ್ಲೇ ಟ್ಯಾಕ್ಸಿ ನಿಲ್ಲಿಸಿ ಇಳಿದೆ. ಹೆಚ್ಚೆಂದರೆ 3 ಅಡಿ ಅಗಲವಿದ್ದ ಗಲ್ಲಿಗಳಂತಹ ರಸ್ತೆಗಳು. ಎರಡೂ ಬದಿಯೂ ಕಪ್ಪು ಕೊಚ್ಚೆ ನೀರು ಹರಿಯುತ್ತಿತ್ತು. ಆ ಕೊಚ್ಚೆಯ ನೀರಿನ ಮೇಲೆಯೇ ಮಂಡಿ ಎತ್ತರದ ಬೊಂಬುಗಳನ್ನು ನಿಲ್ಲಿಸಿ ಅದರ ಮೇಲೆ ಬಿದಿರಿನಲ್ಲಿ ಕಟ್ಟಿದ್ದ ಚೌಕಾಕಾರದ ಮತ್ತು ಕೆಲವು ಆಯತಾಕಾರದ ಅಟ್ಟಣಿಗೆಗಳು. 'ಜೆಂಗು' ಎನ್ನುವ ತಾಳೆಮರದಂತಹ ಮರದಿಂದ ತಯಾರು ಮಾಡಿದ ಛಾವಣಿಗಳನ್ನು ಹೊದ್ದುಕೊಂಡಿರುವ, ಮಳೆ ಚಳಿಗೆ ಅಲುಗದೆ ಬೆಚ್ಚಗೆ ನಿಲ್ಲುವ ರಚನೆಗಳು. ಅದರ ಮುಂದೆ ಮೈಕಾಯಿಸಿಕೊಳ್ಳುತ್ತಾ ಕುಳಿತ್ತಿದ್ದ ಒಬ್ಬರು ಇಬ್ಬರು ಗಂಡಸರು. ಬೆನ್ನಿಗೆ ಪಿಟ್ಟುಗಳನ್ನು ಕಟ್ಟಿಕೊಂಡು ಕೆಲಸಕ್ಕಿಳಿದಿದ್ದ ಹೆಂಗಸರು. ಅವರ ವೇಷಭೂಷಣ, ಅಂಗವಿನ್ಯಾಸ, ಕೇಶಾಲಂಕಾರ, ಎಲ್ಲವನ್ನೂ ಮೊದಲ ಬಾರಿಗೆ ನೋಡುತ್ತಿದ್ದ ನನಗೆ ಫೋಟೊ ತೆಗೆದುಕೊಳ್ಳಬೇಕೆಂಬ ಆತುರ. ಆದರೆ ಅವರಿಗೆ ನನ್ನನ್ನು ಕಂಡು ಎಷ್ಟು ಮುಜುಗರವಾಗಿತ್ತು ಎಂದರೆ ಸಿಟ್ಟಾಗುವಷ್ಟು ! "ಫೋಟೊ ತೆಗೆಯಲಾ?" ಎಂದು ಕೇಳಿದರೂ ಕೈಲಿದ್ದ ಕೋಲಿನಿಂದ ಹೊಡೆಯುವಂತೆ ನನ್ನೆಡೆಗೆ ನುಗ್ಗಿ ಬರುತ್ತಿದ್ದರು. ಒಬ್ಬಳು ಅಜ್ಜಿಯಂತೂ ತನ್ನ ಮನೆಯ ಚಿಕ್ಕ ಕಿಟಕಿಯ ಮರದ ಪರದೆ ಸರಿಸಿ, ಅವಳದ್ದೇ ಭಾಷೆಯಲ್ಲಿ ವೇದ ಘೋಷದ ಓಘದಲ್ಲಿ ಗೊಣಗಿ, ಕೈಬಾಯಿಯನ್ನು ಹೆಚ್ಚೇ ಬಲವಾಗಿ ತಿರುಗಿಸಿ, ಪರದೆ ಮುಚ್ಚಿ ಸರಿದು ಹೋದಳು. ಯಾರೆಂದರೆ ಯಾರೂ ನನ್ನೊಡನೆ ಮಾತನಾಡಲು ತಯಾರಿರಲಿಲ್ಲ. "ಓಹ್, ಎಂತಹ ನತದೃಷ್ಟೆ ನಾನು" ಎಂದುಕೊಂಡು ಪೆಚ್ಚು ಮೋರೆಯಲ್ಲಿ ನಡೆಯುತ್ತಿದ್ದೆ. ಇದ್ದಕ್ಕಿದ್ದಂತೆ ಎದುರಿನಲ್ಲಿ ಒಬ್ಬ ಹದಿನಾರು ಹದಿನೇಳು ವಯಸ್ಸಿನ ಹುಡುಗ ಕಂಡ. ಬೆಳ್ಳಗೆ, ತೆಳ್ಳಗೆ, ಅಷ್ಟೇನೂ ಎತ್ತರವಿಲ್ಲದ ಹುಡುಗನ ತಲೆಭರ್ತಿ ಒರಟು ಕೂದಲು ನೆಟ್ಟನೆಟ್ಟಗೆ ಮೇಲ್ಮುಖವಾಗಿ ನಿಂತುಬಿಟ್ಟಿದ್ದವು. ಈಗಿನ ಕಾಲದ ಲೋ ವೇಸ್ಟ್ ಜೀನ್ಸ್ ಪ್ಯಾಂಟ್ ಹಾಕಿಕೊಂಡಿದ್ದ. ಇಬ್ಬರೂ ಹತ್ತಿರವಾಗುತ್ತಿದ್ದಂತೆ ನನ್ನ ದೊಡ್ಡ ನಗುವಿಗೆ ಅವನ ತೆಳು ನಗೆ ಧೈರ್ಯ ಹುಟ್ಟಿಸಿತು. ಹಿಂದಿಯಲ್ಲಿ ಮಾತು ಶುರು ಮಾಡಿದೆ. ಅವನಿಗೆ ಒಳ್ಳೆಯ ಇಂಗ್ಲಿಷ್ ಬರುತ್ತಿತ್ತು. ಅವನ ಹೆಸರು 'ಹನಿತ್ತಿಂಗ್' ಎಂದು, ನಗರದಲ್ಲಿ ಎರಡನೆಯ ಪದವಿಪೂರ್ವ ಕಾಲೇಜಿನಲ್ಲಿ ಓದುತ್ತಿದ್ದಾನೆಂದು, ಆದರೆ ಅವನ ಅಪ್ಪ ಅಮ್ಮ ಅಕ್ಕ ಎಲ್ಲರೂ ಇಲ್ಲೇ ಆದಿವಾಸಿಗಳ ಬಸ್ತಿಯಲ್ಲಿಯೇ ಕೃಷಿ ಮಾಡಿಕೊಂಡು ಇದ್ದಾರೆಂದು ಹೇಳಿದ.

ಅಲ್ಲಿಗೆ ನಾನು ಹೋಗಿರುವ ಉದ್ದೇಶ ಹೇಳಿದ ಕೂಡಲೇ ಆತ ತನ್ನ ಮನೆಗೆ ಕರೆದುಕೊಂಡು ಹೋದ. ಬೀಗವೇನೂ ಹಾಕಿರಲಿಲ್ಲ. ಸುಮ್ಮನೆ ಚಿಲಕ ತೆಗೆದು ಒಳ ಕರೆದ. ಪೂರ್ತಿ ಬಿದಿರಿನಿಂದ ಕಟ್ಟಿದ್ದ ಆ ಮನೆಗೆ ಒಂದು ದೊಡ್ಡ ಹಜಾರ, ಅದರ ನಡುವೆ ಹೊಗೆಯೇಳಿಸುತ್ತಿದ್ದ ನಿಗಿನಿಗಿ ಕೆಂಡದ ಒಲೆ, ಅಕ್ಕಪಕ್ಕದಲ್ಲಿ ಮರದ ಪಾತ್ರೆ ಸೌಟುಗಳು, ಹಿಂಭಾಗದಲ್ಲಿ ಪುಟ್ಟದೊಂದು ಗವಾಕ್ಷಿ, ಅದರಿಂದ ನೇರವಾಗಿ ಮನೆಯೊಳಗೆ ಇಣುಕುತ್ತಿದ್ದ ಸೂರ್ಯ, ಎಡ ಪಕ್ಕದಲ್ಲಿ ಕಟ್ಟಿದ್ದ ಒಂದು ಹಗ್ಗ. ಅದರ ಮೇಲೆ ನೇತಾಡುತ್ತಿದ್ದ ಬಟ್ಟೆಗಳು, ಬಲಗಡೆಯಲ್ಲಿ ಎರಡು ಬೊಂಬಿನ ಗಳುಗಳನ್ನು ಹಾಕಿ ಮಾಡಿದ್ದ ಮೆಟ್ಟಿಲುಗಳು, ಅದರ ಮೇಲೊಂದು ಸಣ್ಣ ಅಟ್ಟ, ಅಲ್ಲಿ ಸಂಗ್ರಹವಾಗಿದ್ದೇವೆ ಎಂದು ಹೇಳುವಂತೆ ತೋರುತ್ತಿದ್ದ ಸೌದೆ ಕೊಂಟು ಸೀಳುಗಳು, ಅದರ ಕೆಳಗೇ ನೇರವಾಗಿ ಬಿದಿರಿನ ಗೋಡೆಗೆ ಒರಗಿಕೊಂಡಂತೆ ನಿಂತಿದ್ದ ಮೂರು ದೊಡ್ಡ ದೊಡ್ಡ ಮರದ ಪಿಪಾಯಿಗಳು. ಅಬ್ಬಬ್ಬಾ ಚಂದವೋ ಚಂದ ಎನಿಸುವಂಥದ್ದು ! ಒಳಗೆ ಕರೆದವನು ಒಂದು ಮರದ ಲೋಟದಲ್ಲಿ ಅಕ್ಕಿ ಹಿಟ್ಟು ನೀರಿನಲ್ಲಿ ಕದಡಿದಂತೆ ಕಾಣುತ್ತಿದ್ದ ಬಣ್ಣದ ಪಾನೀಯವನ್ನು ಕೈಗಿತ್ತು ಕುಡಿಯಲು ಹೇಳಿದ. ಹಿಂಜರಿಕೆಯಿಂದಲೇ ತೆಗೆದುಕೊಂಡು ಸುಮ್ಮನೆ ತುಟಿಗಳಿಗೆ ಸವರಿಕೊಂಡಂತೆ ಮಾಡಿ ಕೆಳಗಿಟ್ಟೆ. ಅದು ಹುಳಿ ಮತ್ತು ಒಗರು ಮಿಶ್ರಣದ ರುಚಿಯಲ್ಲಿತ್ತು. ಮನೆಯ ಬಾಗಿಲನ್ನು ಮುಂದೆ ಸರಿಸಿ ಬಸ್ತಿಯ ಒಳಗೆ ಸುತ್ತಿಸಲು ಕರೆದುಕೊಂಡು ಹೋದ. ಆದರೆ ಅಲ್ಲಿನ ಹಿರಿಯರು ಯಾರೂ ನನ್ನನ್ನು ಪರಿಚಯ ಮಾಡೊಕೊಳ್ಳಲೂ ಒಪ್ಪಲಿಲ್ಲ. ಹನಿತ್ತಿಂಗ್‌ನನ್ನು ಏರು ಧ್ವನಿಯಲ್ಲಿ ಬೈದು ಹೊರಗಟ್ಟುತ್ತಿದ್ದರು. ಅವರದ್ದೇ ಭಾಷೆಯಲ್ಲಿ ಇವನು ಪರಿಪರಿಯಾಗಿ ಕೇಳಿಕೊಳ್ಳುತ್ತಿದ್ದದ್ದು ನನ್ನ ಗಮನಕ್ಕೆ ಬರುತ್ತಿತ್ತು. ಹೊತ್ತು ಕರಗಿದಂತೆ ನನ್ನ ಮುಖದಲ್ಲಿ ಏರುತ್ತಿದ್ದ ನಿರಾಸೆಯನ್ನು ಗಮನಿಸಿದ ಹುಡುಗ "ಹಾಂ ಈಗ ನೆನಪಾಯ್ತು. ಅಲ್ಲಿ ನಮಗೆಲ್ಲಾ ಆಧಾರ್ ಗುರುತಿನ ಚೀಟಿ ಕೊಡುವ ಕ್ಯಾಂಪ್ ನಡೆಯುತ್ತಿದೆ. ಬಸ್ತಿಯ ಹಿರಿಯರೆಲ್ಲಾ ಅಲ್ಲೇ ಇದ್ದಾರೆ. ನೀವು ನನ್ನ ಜೊತೆಯಲ್ಲಿ ಬನ್ನಿ. ಅವರುಗಳ ಜೊತೆ ಮಾತನಾಡಿಸಿ ನೋಡಿ" ಎನ್ನುವ ಉಪಾಯ ಕೊಟ್ಟ. ಕೊಚ್ಚೆಯಲ್ಲಿ ಜಾರಿ ಬೀಳದಂತೆ ಅವನ ಕೈಹಿಡಿದು ಅವನೇ ಕರೆದುಕೊಂಡು ಹೋಗುತ್ತಿದ್ದ ದಾರಿಯಲ್ಲಿ ವಿಶ್ವಾಸದಿಂದ ನಡೆಯುತ್ತಿದ್ದೆ. ದೂರದಲ್ಲೇ ಕಾಣುತ್ತಿತ್ತು ಆದಿವಾಸಿಗಳ ಜನಗಣತಿ ಮಾಡಲು ಸರ್ಕಾರ ಏರ್ಪಡಿಸಿದ್ದ

ಕ್ಯಾಂಪ್‌ನ ಬ್ಯಾನರ್. ಅದರ ಮುಂದೆ ತಾತ್ಕಾಲಿಕ ನೆರಳಿನಲ್ಲಿ ಕಂಪ್ಯೂಟರ್ ಮತ್ತು ಅದಕ್ಕೆ ಸಿಕ್ಕಿಸಿದ ಕ್ಯಾಮೆರಾ ಇಟ್ಟುಕೊಂಡು ಕುಳಿತಿದ್ದ ಸರ್ಕಾರಿ ಅಧಿಕಾರಿ. ಆತನೆದುರು ಹತ್ತಾರು ಆದಿವಾಸಿ ಗಂಡಸರು ಮತ್ತು ಹೆಂಗಸರು ಕುಕ್ಕರುಗಾಲಿನಲ್ಲಿ ಕುಳಿತಿದ್ದರು. ಈ ಚೆಲುವಾದ ಹುಡುಗ ಅಲ್ಲಿರುವ ಎಲ್ಲರಿಗೂ ನನ್ನ ಬಗ್ಗೆ ಹೇಳಿದ. ಮೊದಲು ಎಲ್ಲರೂ ಒಕ್ಕೊರಲಿನಿಂದ ನನ್ನನ್ನು ಅವರಿರುವಲ್ಲಿಗೆ ಹೋಗಲು ನಿರಾಕರಿಸಿದರು. ಅಲ್ಲೊಂದು ಐದಾರು ವರ್ಷದ ಮಗು ಆಡುತ್ತಿತ್ತು. ನನ್ನ ಬ್ಯಾಗ್‌ನಿಂದ ಅಮ್ಮ ಕೊಟ್ಟಿದ್ದ ಒಂದು ರವೆ ಉಂಡೆಯನ್ನು ತೆಗೆದು ತೋರಿಸುತ್ತಾ ಆ ಮಗುವನ್ನು ಹತ್ತಿರ ಕರೆದೆ. ನಗುತ್ತಾ ಓಡಿ ಬಂದ ದೇವರು ರವೆ ಉಂಡೆಯನ್ನು ನೆಕ್ಕಿಯೇ ಬಿಟ್ಟ. ನನಗೂ ಆದಿವಾಸಿಗಳಿಗೂ ನಡುವೆ ಸ್ನೇಹ ಸೇತುವೆ ಕಟ್ಟಿಕೊಟ್ಟ. ಅವರೆಲ್ಲಾ ವಿವಿಧ ಭಂಗಿಗಳಲ್ಲಿ ಫೋಟೊ ತೆಗೆಸಿಕೊಂಡು ಮಗುವಿನಂತೆಯೇ ಮುಗ್ಧ ನಗು ಚೆಲ್ಲುತ್ತಿದ್ದರು. ಎಷ್ಟಿತ್ತೋ ಅಷ್ಟು ತಿಂಡಿಗಳನ್ನು, ಗಂಧದ ಕಡ್ಡಿಗಳನ್ನು ಅವರುಗಳಿಗೆ ಕೊಟ್ಟೆ. ಭಾಷೆ ಬಾರದಿದ್ದರೂ ನಗುವಿನಲ್ಲೇ ನಾವೆಲ್ಲಾ ಸಂಬಂಧಿಗಳಾಗಿಬಿಟ್ಟಿದ್ದೆವು. ಅಷ್ಟರಲ್ಲಿ ಅಲ್ಲಿಗೆ 'ಹಿಗ್‌ಥಾತ್' ಬಂದರು. ಆತ ನನ್ನೊಡನೆ ಇದ್ದ ಹುಡುಗನ ತಂದೆ. ಅವರಿಗೆ ಹಿಂದಿ ಚೆನ್ನಾಗಿ ಬರುತ್ತಿತ್ತು. ನನಗೆ ಆದಿವಾಸಿಗಳ ಜೀವನಶೈಲಿ, ಆಚರಣೆಗಳ ಬಗ್ಗೆ ತಿಳಿದುಕೊಳ್ಳಬೇಕೆನ್ನುವ ಆಸೆ ಇರುವುದನ್ನು ತಿಳಿದು ಅಲ್ಲಿಯೇ 'ಪಿದಿಮ್' (ತಲೆಮುಂದಿನ, ಹಣೆಯಮೇಲಿನ ಕೂದಲ ಗಂಟು) ಕಟ್ಟಿಕೊಂಡು, ಕಪ್ಪನೆಯ, ಚಮರೀಮೃಗದ ಉಣ್ಣೆಯ ದಪ್ಪನೆಯ ನಿಲುವಂಗಿ ಧರಿಸಿದ್ದ ವೃದ್ಧರೊಬ್ಬರ ಬಳಿ ಕರೆದುಕೊಂಡು ಹೋದರು. ಹಿಗ್‌ಥಾತ್ ನಮ್ಮಿಬ್ಬರ ನಡುವಿನ ಮಾತಿನ ಭಾಷೆಯ ಅನುವಾದಕರಾಗಿದ್ದರು. ಎಲ್ಲಾ ಬುಡಕಟ್ಟು ಜನರಲ್ಲೂ ಅಪತಾನಿ ಜನರು ಅತೀ ಚೆಲುವಿನವರು ಎಂದು ಗುರುತಿಸಿಕೊಂಡಿದ್ದಾರೆ. ಅವರ ಬಣ್ಣದ ಬಗೆಗಿನ ಒಲವು, ಅಭಿರುಚಿ ಎಲ್ಲವು ಅವರನ್ನು ಬೇರೆಯವರಿಗಿಂತ ಸುಂದರರನ್ನಾಗಿಸಿದೆ. ಅವರ ಬಟ್ಟೆಯ ವಿನ್ಯಾಸಗಳು, ಒಡವೆಗಳ ರಚನೆಗಳು ಎಲ್ಲವೂ ಸಂಭ್ರಮದ ಮನಸ್ಸಿನ ಪ್ರತೀಕದಂತೆ ತೋರುತ್ತದೆ. ಹಣೆ, ಗಲ್ಲ, ಕೆನ್ನೆಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುವ ಇವರ ಅಭ್ಯಾಸ ಗುಂಪಿನಲ್ಲೂ ಇವರನ್ನು ಎದ್ದು ಕಾಣುವಂತೆ ಮಾಡಿದೆ. ಅಪತಾನಿ ಗುಂಪಿನ ಹೆಂಗಸರು ಅದೆಷ್ಟು ಚೆಲುವೆಯರು ಎಂದರೆ, ಅವರ ಚೆಲುವೇ ಅವರಿಗೆ ಮುಳುವಾಗದಿರಲಿ



**ಪಿದಿಮ್ ತಲೆಗೂದಲಿನ ಗಂಟು ಕಟ್ಟಿಕೊಂಡಿರುವ ಬುಡಕಟ್ಟು ಜನಾಂಗದ ಗಂಡಸು–ಹೆಂಗಸು**

ಎನ್ನುವ ಉದ್ದೇಶದಿಂದ ಅವರ ಮುಖವನ್ನು ವಿಕೃತಗೊಳಿಸಲು ಸಣ್ಣ ಮಗುವಾಗಿದ್ದಾಗಲೇ ಅವರ ಮೂಗಿನ ಎರಡೂ ಹೊಳ್ಳೆಗಳಿಗೂ ಲೋಹದಿಂದ ಮಾಡಿದ ಚಪ್ಪಟೆಯಾಕಾರದ ತಟ್ಟೆಯನ್ನು ಮೂಗುಬೊಟ್ಟಿನಂತೆ ಚುಚ್ಚಿ ಸೇರಿಸಲಾಗುತ್ತದೆ. ಅವರು ಬೆಳೆಯುತ್ತಿದ್ದಂತೆ ಆ ತಟ್ಟೆಯ ಅಗಲ ಮತ್ತು ಭಾರದಿಂದ ಅವರುಗಳ ಮೂಗು ಜೋತು ಬಿದ್ದು, ಸೌಂದರ್ಯವನ್ನು ಕುಗ್ಗಿಸಿಬಿಡುತ್ತದೆ ಎನ್ನುವ ವಿಷಯ ತಿಳಿಯಿತು. "ಹೊತ್ತು ಮುಳುಗುವ ಮೊದಲು ಊರ ಬಾಗಿಲು ಹೊಕ್ಕದಿದ್ದರೆ ಮತ್ತೆ ಅಂದಿನಂತೆ ಆತಂಕಕ್ಕೆ ಒಳಗಾಗಬೇಕಾದೀತು" ಎಂದು ಎಚ್ಚರಿಸುತ್ತಿತ್ತು ಮನಸ್ಸು. ಅಲ್ಲಿನ ಆಡಳಿತದ ಪರ್ಮಿಷನ್ ಇಲ್ಲದೆ ನಾನು ಆದಿವಾಸಿಗಳ ಬಸ್ತಿಯಲ್ಲಿ ತಂಗುವ ಹಾಗೂ ಇರಲಿಲ್ಲ. ಮತ್ತೆ ನಾಳೆಯೂ ಅವರುಗಳನ್ನು ಭೇಟಿಯಾಗುತ್ತೇನೆ ಎಂದು ಹೇಳುತ್ತಾ ಅಲ್ಲಿಂದ ಹೊರಟು ಬಂದು ಗೂಡು ಸೇರಿದೆ. ರಸ್ತೆಯುದ್ದಕ್ಕೂ ಆ ಅಜ್ಜ ಹೇಳಿದ "ಅವರ ಚೆಲುವೇ ಅವರಿಗೆ ಮುಳುವಾಗದಿರಲಿ ಎನ್ನುವ ಉದ್ದೇಶದಿಂದ ಅವರ ಮುಖವನ್ನು ವಿಕೃತಗೊಳಿಸಲು ಲೋಹದ ತಟ್ಟೆಯನ್ನು

ಮೂಗುಬೊಟ್ಟಿನಂತೆ ಚುಚ್ಚಿ ಸೇರಿಸಲಾಗುತ್ತದೆ. ಅದು ಅವರ ಸೌಂದರ್ಯವನ್ನು ಕುಗ್ಗಿಸಿಬಿಡುತ್ತದೆ" ಎನ್ನುವ ಮಾತು ಮನಸ್ಸಿನ ಆಳದಲ್ಲಿ ಈಟಿಯಂತೆ ತಿವಿಯುತ್ತಿತ್ತು. ಆ ಕ್ಷಣದಲ್ಲಿ ಅಲ್ಲಿ ನಾನು ಮಹಿಳಾ ಹಕ್ಕುಗಳು, ಪುರುಷರ ದೌರ್ಜನ್ಯ ಎಲ್ಲವನ್ನೂ ಮರೆತು, ಎಲ್ಲದರ ಹೊರತಾಗಿ, ಎಲ್ಲವನ್ನೂ ಮೀರಿ ಒಂದು ಮನುಷ್ಯ ಜೀವವಾಗಲು ಹಾತೊರೆಯುತ್ತಿದ್ದೆ. ಹೂಂ, ಮಾರನೆಯ ದಿನವೂ ಅಲ್ಲಿಗೇ ಹೋದೆ. ಅವರುಗಳು ನನಗಿಂತ ನನ್ನ ಕತ್ತಿನಲ್ಲಿ ನೇತಾಡುತ್ತಿದ್ದ ಕ್ಯಾಮೆರಾವನ್ನು ಉತ್ಸಾಹದಿಂದ ಕಾಯುತ್ತಿದ್ದರು. ಅವರೊಡನೆ ಹೊಟ್ಟೆ ತುಂಬಾ ಮಾತನಾಡಿ, ನಕ್ಕು ಹಗುರಾಗಿ ಅಲ್ಲಿಂದ ಹೊರಟೆ. ಎಲ್ಲಿಗೆ? ಉಹುಂ ಆಗಂತೂ ತಿಳಿದಿರಲಿಲ್ಲ. ಅಪತಾನಿ ಎನ್ನುವ ಬೆರಗಿನ ನಿಶೆ ಇಳಿಯುವಂತೆ ತೋರುತ್ತಿರಲಿಲ್ಲ.

* * * * *

## 7. ನಂಬಿಕೆಯೇ ಬದುಕು, ಬದುಕೇ ದೇವರು

ಭೂಮಿಯ ಗುರುತ್ವಾಕರ್ಷಣೆಗೆ ಬಲ ಕೊಡುವುದೇ ಮನುಷ್ಯನ 'ನಂಬಿಕೆಗಳು' ಎನ್ನಿಸುತ್ತಿದೆ ಈ ಹೊತ್ತಿನಲ್ಲಿ. ನಾಗರಿಕತೆಯ ಉಚ್ಛ್ರಾಯ ಸ್ಥಿತಿಯಲ್ಲಿ ಹುಟ್ಟಿ, ಬೆಳೆದು, ಬದುಕುತ್ತಿರುವ ನನ್ನಂತಹ ವಿದ್ಯಾವಂತರು ನಂಬಿಕೆ ಮತ್ತು ಮೂಢ ನಂಬಿಕೆಗಳ ನಡುವೆ ಇರುವ ತೆಳುವಾದ ಗೆರೆಯನ್ನು ಕಾಣದೆಯೇ ಹೋಗುವ ಸಂದರ್ಭವೇ ಹೆಚ್ಚು. ಪ್ರತೀ ನಂಬಿಕೆಗೂ ವೈಜ್ಞಾನಿಕ ಆಧಾರ ಇರಲೇ ಬೇಕು ಎಂದೇ ನಂಬಿಕೊಂಡಿರುತ್ತೇವೆ. ಅದಕ್ಕೇ ಎಲ್ಲವನ್ನೂ ತರ್ಕದ ಒರೆಗೆ ಹಚ್ಚಿ, ಮನುಷ್ಯ ಬದುಕಿನ ಸಂವೇದನೆಯನ್ನು ಗುರುತಿಸುವುದರಲ್ಲಿ ಸೋಲುತ್ತೇವೆ. ವಿಜ್ಞಾನವಿಲ್ಲದ ನಂಬಿಕೆ, ಆಚರಣೆಗಳು ಸಮಾಜದ ಮಾನಸಿಕ ಸ್ವಾಸ್ಥ್ಯಕ್ಕೆ ಎಷ್ಟೊಂದು ಅವಶ್ಯಕವಾಗಿ ಬೇಕಾಗಿರುತ್ತವೆ ಎನ್ನುವುದನ್ನು ಮನಗಾಣಬೇಕಾದರೆ ಈ ನಾಡಿಗೆ ಬರಬೇಕು ಮತ್ತು ಇಲ್ಲಿನ ಹತ್ತಾರು ಬುಡಕಟ್ಟು ಜನರ ನಂಬಿಕೆ, ಪದ್ಧತಿಯ ಮೂಲ, ಆಚರಣೆಗಳನ್ನು ಅಧ್ಯಯನ ಮಾಡಲೇ ಬೇಕು. ಮೂಲತಃ ನೂರಾರು ಸಂಖ್ಯೆಯಲ್ಲಿ ಇದ್ದ ಇಲ್ಲಿನ ಪರಿಶಿಷ್ಟರು ಕಾಲಕ್ರಮೇಣ ನಾಗರಿಕತೆಯ ಹರಿವಿನಲ್ಲಿ ಬದಲಾಗುತ್ತಾ ಜಾಗತೀಕರಣದ ಒತ್ತಡಕ್ಕೆ ಬಲಿಯಾಗುತ್ತಾ ಇಂದು ಕೇವಲ ಹತ್ತಾರು ಸಂಖ್ಯೆಗಳಲ್ಲಿ ಉಳಿದಿದ್ದಾರೆ.


ಯೊಬಿನ್, ನಾಕ್ತೋಸ್, ವಾಂಚೋಸ್, ಕಾಮ್ತೀಸ್, ಥಗಿನ್ಸ್, ಶರ್ದುಕ್‌ಪೆನ್ಸ್, ನಿಶಿ, ಮೊನ್ಪಾ, ಮಿಶಿಮಿಸ್, ಖಂಬಸ್, ಮೆಂಬಾಸ್, ಸಿಂಗ್‌ಫೋಸ್, ಹ್ರುಸ್ಸೋ, ಬುಗುನ್ಸ್, ಅಪತಾನಿ, ಆದಿ, ಗಲೋ, ಅಕ, ಬೊರಿ, ಲಿಸು, ಆದಿಪದಮ್, ಥಂಗ್ಸಾ ಮತ್ತು ಬೊಕರ್ ಇವುಗಳು ಇಂದು ಉಳಿದುಕೊಂಡಿರುವ ಮುಖ್ಯ ಆದಿವಾಸಿ ಪಂಗಡಗಳಾಗಿವೆ. ಮೇಲ್ನೋಟಕ್ಕೆ ದೈಹಿಕವಾಗಿ ಒಂದೇ ರೀತಿಯ ಜನರಂತೆ ಹೊರಗಿನವರಿಗೆ ಕಂಡರೂ ಅವರ ಅಂಗ ರಚನೆ, ನೋಟ, ನಂಬಿಕೆ, ಪದ್ಧತಿ ಆಚರಣೆಗಳು, ಆಚಾರ, ವಿಚಾರ, ವಿಹಾರ, ಊಟ ಉಪಚಾರದ ವಿಧಗಳು, ಹಬ್ಬ ಸಂಭ್ರಮಾಚರಣೆಗಳು, ನೃತ್ಯ, ಹಾಡುಗಳು, ಭಾಷೆ ಮತ್ತು ಅವುಗಳ ಉಪ ಶೈಲಿಗಳು ಎಲ್ಲವೂ ಒಬ್ಬರಿಗಿಂತ ಒಬ್ಬರದ್ದು ವಿಭಿನ್ನ ಮತ್ತು ವಿಶೇಷ. ಹೆಚ್ಚಿನ ಪಂಗಡಗಳು "ಡೋನ್ಯೀ–ಪೋಲೊ" (ಸೂರ್ಯ–ಚಂದ್ರ) ಧಾರ್ಮಿಕ ನಂಬಿಕೆಯ ಹಾದಿಯನ್ನು

ಅನುಸರಿಸುವವರು. ಹಾಗೆಯೇ ಬೌದ್ಧ ಧರ್ಮದಿಂದ ಪ್ರಭಾವಿತರಾದವರು. ಬರ್ಮ, ಟಿಬೇಟಿಯನ್, ಮಂಗೋಲಿಯನ್ ಜನರ ಸಾಂಸ್ಕೃತಿಕ ಸಂವಹನಕ್ಕೆ ಸಾಕ್ಷಿಯಾದವರು. ಅಪತಾನಿ ಪಂಗಡದವರು ಹೇಳುವಂತೆ ಅವರ ಪಿತೃಗಳಾದ 'ಅಬೊ ಮತ್ತು ತಾನಿ' ಯವರುಗಳು ವಿಶ್ವದ ಮೊದಲ ಮಾನವರು. ಆದರೂ ಮಾನವಶಾಸ್ತ್ರ ತಜ್ಞರುಗಳ ಪ್ರಕಾರ ಇಲ್ಲಿನ ಜನರ ಮೂಲವನ್ನು ಕರಾರುವಕ್ಕಾಗಿ ಹೇಳಲು ಇಲ್ಲಿನವರೆಗೂ ಸಾಧ್ಯವಾಗಿಲ್ಲ ಆ ಕಾರಣಕ್ಕೇ ಅದಿನ್ನೂ ರಹಸ್ಯವಾಗಿಯೇ ಉಳಿದಿದೆ. ಮೂಲವೇನೇ ಇದ್ದರೂ, ಹುಟ್ಟಿನಿಂದ ಸಾಯುವವರೆಗೂ, ನಂತರವೂ ಆಚರಣೆಗಳಲ್ಲಿ ಅಸ್ತಿತ್ವ ಉಳಿಸಿಕೊಳ್ಳುವ ಆ ಜನಗಳ ನಂಬಿಕೆಗಳ ಬಗ್ಗೆ ತಿಳಿದಾಗ ಜೀವನ ಎಷ್ಟೊಂದು ಸುಂದರ ಎನ್ನಿಸುವುದಂತೂ ಖಂಡಿತ. ಅವರುಗಳ ಅನುಭವ ಜನ್ಯ ಜಾನಪದ ಕಥೆಗಳು, ಹಾಡುಗಳು ಎಲ್ಲವೂ ಬಹುಪಾಲು ಪರ್ವತಗಳು ಯಾಕೆ ಎತ್ತರ, ಹಾವಿಗೂ ಮನುಷ್ಯನಿಗೂ ಯಾಕಾಗಿ ವೈರತ್ವ, ಗಂಡಸರು ಯಾಕೆ ಅಳುತ್ತಾರೆ, ನಾವು ಯಾಕೆ ಸಾಯುತ್ತೇವೆ, ಹುಟ್ಟಿನ ರಹಸ್ಯ ಏನು, ಹುಲಿಯನ್ನು ಕೊಲ್ಲುವುದು ಹೇಗೆ ಮನುಷ್ಯ ವಧೆಗೆ ಸಮವಾಗಿದೆ, ಸತ್ತ ನಂತರ ಏನಾಗುತ್ತೇವೆ, ದೇವರು ಯಾಕೆ ಆಕಾಶದಲ್ಲಿಯೇ ಇರುತ್ತಾನೆ ಎನ್ನುವ ವಿಷಯಗಳ ಬಗ್ಗೆಯೇ ಆಗಿರುತ್ತದೆ.

ಮೊದಲಿಗೆ ಮಗುವಿನ ಜನನವನ್ನು 'ತಸರ್ ರಗ್ನಾಮ್' ಎನ್ನುವ ಪದ್ಧತಿಯಂತೆ ಸಂಕೇತಗಳ ಮೂಲಕ ಹೇಳಲಾಗುತ್ತದೆ. ಗಂಡು ಮಗು ಹುಟ್ಟಿದ ಮನೆಯ ಬಾಗಿಲಿಗೆ ಬಿದಿರಿನಲ್ಲಿ ಮಾಡಿದ ಬಿಲ್ಲು ಬಾಣದ ಮಾದರಿಯೊಂದನ್ನು ತೋರಣದಂತೆ ಕಟ್ಟಲಾಗುತ್ತದೆ. ಹೆಣ್ಣು ಮಗು ಹುಟ್ಟಿದರೆ ಮಳೆ ಟೊಪ್ಪಿಗೆಯ ಮಾದರಿಯನ್ನು ಹೆಬ್ಬಾಗಿಲಿಗೆ ಸಿಕ್ಕಿಸಲಾಗುತ್ತದೆ. ಕೆಲವು ಪಂಗಡಗಳಲ್ಲಿ ಮಗು ಹುಟ್ಟಿದ ಕೂಡಲೇ ನಾಮಕರಣ ಮಾಡಿಬಿಡಬೇಕು ಇಲ್ಲವಾದಲ್ಲಿ ಗಾಳಿಯೋ, ಆಕಾಶವೋ ಇಲ್ಲ ನದಿಯೋ ಮಗುವನ್ನು ತನ್ನದೆಂದು ಘೋಷಿಸಿಬಿಡುತ್ತದೆ ಮತ್ತು ಮುಂದೆ ಮಗುವಿನ ಹಣೆಬರಹವನ್ನು ಯಾವುದೋ ದುರಾತ್ಮ ಬರೆದುಬಿಡುತ್ತದೆ ಎಂದು ನಂಬಲಾಗಿದೆ. ಅವರುಗಳ ಹೆಸರು ಸಾಮಾನ್ಯವಾಗಿ ಅಕಾಶ, ಸೂರ್ಯ, ಭೂಮಿಯನ್ನು ಪ್ರತಿನಿಧಿಸುವುದೇ ಆಗಿರುತ್ತದೆ. ಮತ್ತೆ ಕೆಲವರು ಮಕ್ಕಳನ್ನು ಕೆಟ್ಟ

ದೃಷ್ಟಿಯಿಂದ ಮತ್ತು ದುರಾತ್ಮಗಳಿಂದ ರಕ್ಷಿಸಲು ಹಂದಿಯನ್ನು ಬಲಿಕೊಡಬೇಕು ಎನ್ನುತ್ತಾರೆ. ಹಂದಿ ಹಾಗೂ ನಾಯಿಯು ಬದ್ಧದ್ವೇಷಿಗಳಾಗಿರುವುದರಿಂದ ಯಾರಿಗಾದರು ನಾಯಿ ಕಚ್ಚಿದರೆ ಅವರು ಮತ್ತೆಂದೂ ಹಂದಿ ಮಾಂಸವನ್ನು ತಿನ್ನಬಾರದಾಗಿರುತ್ತದೆ ಎನ್ನುವುದೂ ಒಂದು ನಂಬಿಕೆ. ದೊಡ್ಡ ದೊಡ್ಡ ಮರಗಳಲ್ಲಿ ಅತೃಪ್ತ ಪಿತೃಗಳ ಆತ್ಮ ವಾಸವಾಗಿರುತ್ತವೆ ಮತ್ತು ಅವುಗಳು ತಮ್ಮ ಕುಲಕ್ಕೆ ಕೆಟ್ಟದ್ದು ಮಾಡುತ್ತವೆ ಎನ್ನುವ ನಂಬಿಕೆಯಿಂದ ಅಂತಹ ಮರಗಳನ್ನು ಕಡಿದು ಹಾಕುತ್ತಾರೆ. ಆದರೆ ಪ್ರಕೃತಿ ಆರಾಧಕರಾದ ಇವರು ಹಾಗೆ ಮರಗಳನ್ನು ಕಡಿಯುವುದನ್ನು ಪಾಪವೆಂದೂ ಭಾವಿಸುತ್ತಾರೆ. ಅದಕ್ಕಾಗಿಯೇ ಹಾಡಿಯ ಮುಖ್ಯಸ್ಥರ ಸಭೆ ಸೇರಿಸಿ ಅವರುಗಳ ಒಪ್ಪಿಗೆ ಪಡೆದು, ದಂಡ ಕಟ್ಟಿ 'ತಪ್ಪೊಪ್ಪಿಗೆ ಕ್ರಿಯಾವಿಧಿ'ಗಳನ್ನು ಅನುಸರಿಸಿ ಮರಗಳನ್ನು ಕಡಿಯಲಾಗುತ್ತದೆ. ಆದರೆ ಈಗ ಆಧುನಿಕ ಕಾನೂನು ಜಾರಿಗೆಯಲ್ಲಿರುವುದರಿಂದ ಇಂತಹ ಮರ ಕಡಿಯುವ ಆಚರಣೆಯನ್ನು ನಿಷೇಧಿಸಲಾಗಿದೆ. ಮೊನ್ಪಾ ಜನರಲ್ಲಿ ಹೆಂಗಸು ಗರ್ಭ ಧರಿಸಿದ ದಿನದಿಂದ ಹೆರಿಗೆ ಆಗುವವರೆಗೂ ಕೆಲವು ಸಂಸ್ಕಾರಗಳನ್ನು ಅನುಸರಿಸಲಾಗುತ್ತದೆ. ಅಕಸ್ಮಾತ್ ಗರ್ಭಪಾತವಾಗಿ ಬಿಟ್ಟರೆ ಅಥವಾ ಮಗುವು ಸತ್ತು ಹುಟ್ಟಿದರೆ ಮುಂದೆ ಇಂತಹ ಅನಾಹುತ ಆಗದಿರಲಿ ಎನ್ನುವ ಉದ್ದೇಶದಿಂದ 'ಮಂದ್ರೆಜಿಪ್' ಎನ್ನುವ ಪೂಜೆಯನ್ನು ಮಾಡಲಾಗುತ್ತದೆ. ಮಗು ಹುಟ್ಟಿದೊಡನೆ ಲಾಮಾ ಅದರ ಜಾತಕ ತಯಾರಿಸುತ್ತಾರೆ. ಈ ಜನಾಂಗದವರು ಸತ್ತಾಗ ಶವವನ್ನು 108 ತುಂಡುಗಳಾಗಿ ಕತ್ತರಿಸಿ ಭೂಮಿ ಮೇಲೆಲ್ಲಾ ಹರಡಿಬಿಡುತ್ತಾರೆ. ಲಾಮಾರ ನಿರ್ದೇಶನದಲ್ಲಿ ಕೆಲವು ಪೂಜೆಗಳನ್ನು ಮಾಡಿ ಸತ್ತವರ ಮತ್ತು ಹಾಡಿಯ ಎಲ್ಲಾ ಮನೆಗಳಲ್ಲೂ ದೀಪವನ್ನು ಬೆಳಗಿಸಲಾಗುತ್ತದೆ.

ಪ್ರತೀ ಪಂಗಡಕ್ಕೂ ತನ್ನದೇ ಆದ ಜಲ ಮತ್ತು ಹಿಮ ಸರಹದ್ದು ಇರುತ್ತದೆ. ಸಂಬಂಧಗಳ ಪರಿಧಿ ಮತ್ತು ನೈತಿಕತೆಯ ವ್ಯಾಖ್ಯಾನವೂ ಪಂಗಡದಿಂದ ಪಂಗಡಕ್ಕೆ ಬೇರೆಯದೇ ಆಗಿರುತ್ತದೆ. ಹಾಡಿಯ ಯಾವುದೇ ಕುಟುಂಬದಲ್ಲಿ ಸಾವು ಆದಾಗ ಹಾಡಿಯ ಜನರೆಲ್ಲರ ಜೊತೆಗೆ ಸತ್ತವನ ರಕ್ತಸಂಬಂಧಿಗಳೂ ಬಂದು ಸೇರುತ್ತಾರೆ. ಹದಿಮೂರು ದಿನಗಳ ಕಾಲ ಆ ಮನೆಯಲ್ಲಿ ಒಬ್ಬರೂ ನಿದ್ರಿಸದೆ 'ಪೆನ್‌ಗೆ' ಎನ್ನುವ ಆಶುಕವಿತೆಗಳ



**ಆದಿ ಬುಡಕಟ್ಟಿಗೆ ಸೇರಿದ ಆದಿವಾಸಿ**

ಸರಣಿಯನ್ನು ಹಾಡುತ್ತಾ ಕಾಲ ದೂಡಬೇಕಿರುತ್ತದೆ. ಶವವನ್ನು ತಮ್ಮ ತಮ್ಮ ಮನೆಯ ಆವರಣದಲ್ಲಿಯೇ ಪಶ್ಚಿಮಕ್ಕೆ ತಲೆ ಬರುವಂತೆಯೂ ಪೂರ್ವಕ್ಕೆ ಕಾಲು ಇರುವಂತೆಯೂ ಹೂಳುತ್ತಾರೆ. ಸತ್ತವರ ಆತ್ಮವು 'ಸೆದಿ ಅತುನ್ ಬೊರ್ಬುಂಗ್' ಅಥವಾ 'ಯಮೊ ಅಮಂಗ್ ಬರ್ಕಾಕ್' ಎನ್ನುವ ಹೆಸರುಳ್ಳ ಸೂರ್ಯನ ಮನೆ ಬಾಗಿಲನ್ನು ಸೇರುತ್ತದೆ ಎಂದು ನಂಬುತ್ತಾರೆ. ಶವವನ್ನು ಹೂತಿರುವ ಭೂಮಿಯ ಮೇಲೆ ತ್ರಿಕೋನಾಕಾರದ ಬಿದಿರಿನ ತಡಿಕೆ ಕಟ್ಟಿ ಅದರಲ್ಲೊಂದು ಚರ್ಮದ ಚೀಲವನ್ನು ನೇತು ಬಿಟ್ಟು ಅದರೊಳಗೆ ಸತ್ತವನ ಉಡುಗೆ ತೊಡುಗೆ, ಒಡವೆ ಎಲ್ಲವನ್ನೂ ಇಟ್ಟು ನೇತು ಬಿಡುತ್ತಾರೆ.

ಈ ಭೂಮಿ ಹಾಗು ಮನುಷ್ಯನ ಹುಟ್ಟಿನ ಬಗ್ಗೆ ಇರುವ ಆಸಕ್ತಿದಾಯಕ ನೂರಾರು ಕಥೆಗಳಲ್ಲಿ ಕೆಲವು ಹೀಗಿವೆ. ಈ ವಿಶ್ವದ ಆರಂಭದಲ್ಲಿ ಭೂಮಿ, ಆಕಾಶ ಎನ್ನುವುದೇನೂ ಇರಲಿಲ್ಲ. ಒಮ್ಮೆ ಇದ್ದಕ್ಕಿದ್ದಂತೆ ಹಿಮದ ಒಳಗಿನಿಂದ 'ಖುಪ್‌ನಿಂಗ್ ಕ್ನಾಮ್' ಎನ್ನುವ ಹೆಂಗಸು ಮೋಡವಾಗಿ ಮೂಡಿ ಬಂದಳು. ಕಾಲಾನುಕಾಲದಲ್ಲಿ ಆಕೆಯು ಮಂಜಿನಾಕಾರದ ಒಂದು ಹೆಣ್ಣು ಹಾಗೂ ಒಂದು ಗಂಡು ಮಗುವಿಗೆ ಜನ್ಮವಿತ್ತಳು. ಅವರಿಬ್ಬರು ದೊಡ್ಡವರಾಗಿ ಮದುವೆ ಮಾಡಿಕೊಂಡರು. ಅವರಿಬ್ಬರಿಗೆ ಇಂಗ ಎನ್ನುವ ಮಣ್ಣಿನಂತಹ ಮಗಳು, ಮು ಎನ್ನುವ ಆಕಾಶದಂತಹ ಮಗ ಹುಟ್ಟಿದರು. ಇಂಗ ಮತ್ತು ಮು ಇವರಿಬ್ಬರಿಗೆ ಇಂಬಗ್ ಎನ್ನುವ ಗಾಳಿಯಂತಹ ಮಗ ಹುಟ್ಟಿದ. ಅವನು ದೊಡ್ಡವನಾದ ಮೇಲೆ ತಂದೆಯನ್ನು ಆಕಾಶಕ್ಕೂ ತಾಯಿಯನ್ನು ಭೂಮಿಗೂ ಕಳುಹಿಸಿಬಿಟ್ಟ. ಹೀಗೆ ಮನುಕುಲದ ಉಗಮ ಆಯಿತು ಎನ್ನುತ್ತಾರೆ ತನಿ ಎನ್ನುವ ಬುಡಕಟ್ಟಿನ ಜನ. ಆದಿ ಬುಡಕಟ್ಟಿನವರು ಹೇಳುತ್ತಾರೆ ಭೂಮಿ ಮೇಲಿನ ಮೀನು ಆಕಾಶದಲ್ಲಿನ ನಕ್ಷತ್ರಗಳು ಸಮಾಗಮಗೊಂಡಾಗ ಹುಟ್ಟಿದ 'ಕೆಯುಮ್' ಎನ್ನುವ ಬೆಳಕಿನ ಕಿರಣದಿಂದ ಮನುಕುಲ ಆರಂಭವಾಯಿತು ಎಂದು. ಮಿಶಿಮಿ ಪಂಗಡದವರು ನಂಬುವ ಕಥೆ ಹೀಗಿದೆ. ಆರಂಭದಲ್ಲಿ ಚಂದ್ರನು ಇರಲೇ ಇಲ್ಲ. ಇಬ್ಬರು ಸೂರ್ಯರು ಇದ್ದರು. ಅವರುಗಳ ತಂದೆ ಎಪಂಜ ಹಾಗೂ ತಾಯಿ ಲನ್‌ಬ್ಬಾಯ್. ಒಮ್ಮೆ ಅಣ್ಣ ಸೂರ್ಯನು ತಮ್ಮ ಸೂರ್ಯನಿಗೆ ಅಪ್ಪ ಅಮ್ಮನನ್ನು ಓಡಿಸಿಬಿಡೋಣ, ಭೂಮಿಗೆ ಕಾಟ ಕೊಡೋಣ ಎಂದು ಹೇಳುತ್ತಾನೆ. ಅದಕ್ಕೆ ಒಪ್ಪದ ತಮ್ಮನನ್ನು ದೂರ ಮಾಡಿಬಿಟ್ಟು, ತನ್ನ ಪ್ರಖರತೆಯಿಂದ ಭೂಮಿಯ ಮೇಲಿನ ನೀರನೆಲ್ಲಾ ಒಣಗಿಸಿಬಿಟ್ಟು, ಗಿಡಮರಗಳನ್ನು ಬತ್ತಿಸಿಬಿಡುತ್ತಾನೆ. ಇದನ್ನು ಕಂಡ ಅನ್ಯ ಎನ್ನುವ ಹೆಸರಿನ ಮಹಾದೇವನು ಉಳಿದ ದೇವತೆಗಳನ್ನು ಅಣ್ಣ ಸೂರ್ಯನೊಡನೆ ಸಂಧಾನಕ್ಕೆ ಕಳುಹಿಸುತ್ತಾನೆ. ಅವರುಗಳ ನುಡಿಗಳಿಂದ ತನ್ನ ಅಹಂ ಅನ್ನು ತಣಿಸಿಕೊಂಡ ಅಣ್ಣ ಸೂರ್ಯನು ಮನುಷ್ಯರು ಬದುಕು ಕಟ್ಟಿಕೊಳ್ಳಲು ರೇಷ್ಮೆ ಹುಳುಗಳನ್ನು ಕೊಡುತ್ತಾನೆ. ಅಂದಿನಿಂದ ಮನುಕುಲ ಆರಂಭವಾಯಿತು. ಒಮನ್ ಎನ್ನುವ ಜನಾಂಗದವರು ಪ್ರಥಮ ಹೆಣ್ಣು ಗಂಡುಗಳು ಹಿಮಾಲಯದ ತುತ್ತ ತುದಿಗೆ ಬಂಗಾರ ಮತ್ತು ಬೆಳ್ಳಿಯ ಏಣಿಗಳಲ್ಲಿ ಬಂದು ಇಳಿದರು ಎನ್ನುವ ಕಥೆ ಹೇಳುತ್ತಾರೆ.

'ದಂದ್ಯೆ' (ಮಂತ್ರಗಳ ಒಡೆತನ ಹೊಂದಿರುವವರು) ಪಂಗಡಗಳ ಜನರಿಗೆ ಯಾವುದನ್ನು ನಿಷೇಧಿಸಿರುತ್ತಾರೋ ಅದನ್ನು ಧಿಕ್ಕರಿಸಿದರೆ ಪಾಪ ಬರುವುದಾಗಿಯೂ, ಮಂತ್ರಗಳನ್ನು ತಲೆಮಾರುಗಳಿಗೆ ಮೌಖಿಕವಾಗಿ ಮಾತ್ರ ಹೇಳಿಕೊಡಬೇಕು ಎಂದು, ಮನುಷ್ಯ ಧೂಳಿನಿಂದ ನಿರ್ಮಾಣವಾಗಿರುವುದರಿಂದ ಅವನು ಧೂಳಿಗೇ ಸೇರ ಬೇಕಿರುತ್ತಾನೆ ಹಾಗಾಗಿ ಸ್ನಾನ ಮಾಡಿಕೊಂಡು ಶುಚಿಯಾಗುವುದು ಒಂದು ಪಾಪ ಕರ್ಮವೆಂದು ನಂಬಿದ ಹಿಂದಿನ ತಲೆಮಾರಿನ ಜನರು ಈಗ ಅಪರೂಪವಾಗಿದ್ದಾರೆ. ದಂದ್ಯೆಗಳನ್ನು ಪವಾಡ ಪುರುಷರು ಎನ್ನುತ್ತಾರೆ. ಇವರುಗಳೂ ನದಿಯನ್ನು ಹೆಣ್ಣು ಎಂದು ನಂಬುತ್ತಾರೆ. ಆಕೆಯು ಹರಿಯುವುದೇ ತನ್ನ ಪ್ರಿಯಕರ ಸಮುದ್ರವನ್ನು ಸೇರಲು ಎನ್ನುವುದರ ಬಗ್ಗೆ ಹತ್ತಾರು ಕಥೆಗಳನ್ನು ಹೇಳುತ್ತಾರೆ ಹಾಡು ಕಟ್ಟುತ್ತಾರೆ.

ಭೂಮಿಯ ಯಾವ ದಿಕ್ಕಿನಲ್ಲೂ ಹೆಣ್ಣುಗಳ ವಾತ್ಸಲ್ಯಮಯಿ ಮನಸ್ಸನ್ನು ತೋರುವ, ಆದಿ ಬುಡಕಟ್ಟಿನ ಮತ್ತೊಂದು ಕಥೆ ಇಲ್ಲಿದೆ. ಡೋನ್ಯಿ ತನಗೆ ಗಂಡು ಮಗುವೊಂದು ಹುಟ್ಟಿದಾಗ ಹೊಲದ ಕೆಲಸ, ಮನೆವಾರ್ತೆಯನ್ನು ನಿಭಾಯಿಸಲು ತನ್ನೊಬ್ಬಳಿಗೇ ಕಷ್ಟವೆನಿಸಿ ಪಾರಿವಾಳವೊಂದನ್ನು ತನ್ನ ಸಹಾಯಕ್ಕೆ ಇಟ್ಟುಕೊಂಡಿರುತ್ತಾಳೆ. ಒಂದು ದಿನ ಮಗುವನ್ನು ಮಲಗಿಸಿ ಇಬ್ಬರೂ ಹೊಲಕ್ಕೆ ಹೋಗಿರುವಾಗ, ಮಗು ಹಸಿವಿನಿಂದ ಜೋರಾಗಿ ಅಳಲು ಶುರುಮಾಡಿದಾಗ ಪಾರಿವಾಳಕ್ಕೆ ಅರಿವಾಗಿ " ಅಳಬೇಡ ನನ್ನ ಕಣ್ಮಣಿಯೇ ಭೂಮಿಗೆ ಹೋಗಿ ನಿನಗಾಗಿ ಬಣ್ಣಬಣ್ಣದ ಹೂವುಗಳನ್ನು ತರುತ್ತೇನೆ" ಎಂದು ಹೇಳಿ ಭೂಮಿಗೆ ಹಾರಿ ಬಂದಿತಂತೆ. ಇದು ತಿಳಿದಾಗ ಡ್ಯೋನಿ ಪಾರಿವಾಳದ ಸಹೃದಯತೆ ನೆನೆದು ಇಂದಿಗೂ ಕಣ್ಣೀರಾಗುತ್ತಾಳಂತೆ. ಹಾಗೆ ಹರಿವ ಅವಳ ಕಣ್ಣೀರು ಭೂಮಿಯನ್ನು ಹಸಿರಾಗಿಸುವುದಂತೆ. ಹಾಗೆ ಪಾರಿವಾಳ ಭೂಮಿಗೆ ಬರುವಾಗ ತಂದಿತು ಎನ್ನುವ ಬಳ್ಳಿಯೊಂದನ್ನು ಆದಿ ಪಂಗಡದವರು ಈಗಲೂ ತಮ್ಮ ಮನೆಗಳಲ್ಲಿ ಮಗು ಹುಟ್ಟಿದಾಗ ಪೂಜೆಗಾಗಿ ಉಪಯೋಗಿಸುತ್ತಾರೆ.



**ಲೋಸಾರ್ ಹಬ್ಬಾಚರಣೆಗೆ ಅಲಂಕೃತಗೊಂಡ ಬುಡಕಟ್ಟು ಜನಾಂಗದ ಆಧುನಿಕ ಯುವತಿಯರು**

ಪ್ರೀತಿಯ ಉಗಮದ ಬಗ್ಗೆಯೂ ಇದೆ ಇಲ್ಲೊಂದು ಕಥೆ. ಅಂತೂ ಭೂಮಿಯಲ್ಲಿ ಜೀವನ ಆರಂಭಿಸಿದ ಮನುಷ್ಯರು ಮೊದಲಿಗೆ ಯಾರೂ ಮಲಗುತ್ತಿರಲಿಲ್ಲವಂತೆ. ಸದಾ ಕಾಲವೂ ಕೆಲಸದಲ್ಲಿ ನಿರತರಾಗಿರುತ್ತಿದ್ದರಂತೆ. ಅದನ್ನು ಗಮನಿಸಿದ ಪರ್ವತ ರಾಜ ಆತ್ಮಗಳ ಬಳಿ ಹೋಗಿ "ಮನುಷ್ಯರು ಹೀಗೆ ಕೆಲಸ ಮಾಡುತ್ತಲೇ ಇದ್ದರೆ ನನ್ನನ್ನು ಕಡಿದೂ ಕಡಿದೂ ನಿರ್ನಾಮ ಮಾಡಿ ಬಿಡುತ್ತಾರೆ. ಇದನ್ನು ಹೇಗಾದರೂ ತಪ್ಪಿಸಿ" ಎಂದು ವಿನಂತಿಸಿಕೊಂಡನಂತೆ. ಆ ರಾತ್ರಿಯಲ್ಲಿ ಆತ್ಮಗಳು ಒಂದು ಸುಂದರವಾದ ಹಳ್ಳಿಯನ್ನು ಸೃಷ್ಟಿಸಿ, ಹೆಣ್ಣು ಗಂಡುಗಳ ದೇಹ ಧರಿಸಿ ಭೂಮಿಗೆ ಇಳಿದು ಬಂದು ರಾತ್ರಿಗಳಲ್ಲಿ ಒಂದಾಗಲು ಶುರು ಮಾಡಿದರಂತೆ. ಇದನ್ನು ಕಂಡ ಮನುಷ್ಯರು ಪರಸ್ಪರ ಆಕರ್ಷಿತರಾಗಿ ಪ್ರೀತಿ ಪ್ರೇಮ, ಕಾಮದಲ್ಲಿ ತೊಡಗಿದರಂತೆ. ಹೀಗೆ ಬೆಳಗಿನಲ್ಲಿ ದುಡಿಯುವ ಮನುಷ್ಯ ರಾತ್ರಿಯಲ್ಲಿ ಸುಖಿಸುವುದನ್ನು ಕಲಿತಿದ್ದಂತೆ.

ಅಪಿಯೇ ಇಲ್ಲದ ಭಾಷೆಯನ್ನು ಹೊಂದಿರುವ, ತಮ್ಮ ಅಗಾಧ ನೆನಪಿನ ಶಕ್ತಿಯ ಬಗ್ಗೆ ಹೆಮ್ಮೆ ಪಡುವ ಮಿರಿ ಹಾಗೂ ನಿಬ್ಯೋ ಎನ್ನುವ ಜನಾಂಗದ ಒಂದು ಹಾಡು ಹೀಗಿದೆ. ಇಂತಹ ಹಾಡುಗಳನ್ನು ಅಬಂಗ್ ಎಂದು ಕರೆಯುತ್ತಾರೆ. ಎಷ್ಟೇ ವಿದ್ಯೆ ಕಲಿತರೂ, ಪ್ರಾಪಂಚಿಕ ಸಾಧನೆಗಳನ್ನು ಮಾಡಿದರೂ ಮೂಲಭೂತವಾಗಿ ಮನುಷ್ಯ ಹಸಿವಿನಿಂದ ಮಾಡಲ್ಪಟ್ಟಿರುವವನು. ಹಸಿವನ್ನು ಇಂಗಿಸುವುದೇ ಅಂತಿಮವಾದ ಆಧ್ಯಾತ್ಮ ಸಾಧನೆ ಎನ್ನುವ ಅರ್ಥ ಕೊಡುವ ಈ ಹಾಡಿನ ಕೆಲವು ಸಾಲುಗಳು ;

"ಎಲ್ಲಾ ಅಕ್ಷರಗಳನ್ನು ಮಾತುಗಳನ್ನು ಬರೆಯಲಾಗಿತ್ತು ಅವುಗಳನ್ನು ಬರೆಯಲಾಗಿತ್ತು ಒಣಚರ್ಮದ ಮೇಲೆ

ಎಲ್ಲಾ ಹಾಡುಗಳನ್ನು ಬರೆಯಲಾಗಿತ್ತು

ಅವುಗಳನ್ನು ಬರೆಯಲಾಗಿತ್ತು ಒಣಚರ್ಮದ ಮೇಲೆ

ನಾನು ಹಸಿದಿದ್ದೆ

ನಾನು ಹಸಿದಿದ್ದೆ ನಾನು ಕಥೆಗಳನ್ನು ತಿಂದೆ

ಹಾಡುಗಳನ್ನು ತಿಂದೆ

ಹಸಿದ ನಾನು ಒಬ್ಬನೇ ಎಲ್ಲಾ ಕಥೆಗಳನ್ನು ಹಾಡುಗಳನ್ನು ತಿಂದುಬಿಟ್ಟೆ"

ಬರೆದಷ್ಟೂ ತೀರದ, ಮಾತಿನಲ್ಲಿ ಮುಗಿಯದ, ಕಣ್ಣು ಕಂಡಷ್ಟೂ ಬಯಸುವ, ಕೇಳಿದಷ್ಟು ಕಿವಿ ತಣಿಯದ, ಮುಟ್ಟಿದಷ್ಟೂ ಮನ ಕುಣಿಯುವ ಕಥೆಗಳು, ನಂಬಿಕೆಗಳು, ಪದ್ಧತಿಗಳು, ಆಚರಣೆಗಳು ಇಲ್ಲಿನ ಜನರ ಬದುಕನ್ನು ಕಟ್ಟಿಕೊಟ್ಟಿರುವುದು ಮಾತ್ರವಲ್ಲ, ಪ್ರಪಂಚದ ಉಳಿದ ಜನರ ಬದುಕಿನ ಒಂದು ಭಾಗವನ್ನು ವರ್ಣಮಯಗೊಳಿಸಿರುವುದೂ ಸುಳ್ಳಲ್ಲ.

* * * * *

# ೮. ಮುಖವಾಡಕ್ಕೊಂದು ಹಬ್ಬ, ಹೆಜ್ಜೆಗೊಂದು ನೃತ್ಯ

ಬದುಕನ್ನು ಸಂಭ್ರವನ್ನಾಗಿಸಿಕೊಳ್ಳಲು ಕಾರಣಗಳು ಬೇಕೆನಿಸಿದಾಗ ಒಮ್ಮೆ ಈ ನಾಡನ್ನು ಇಲ್ಲಿನ ಜನರನ್ನು ತಿರುಗಿ ನೋಡಲೇಬೇಕು. ಹೆಜ್ಜೆಗೊಂದು ಹಬ್ಬ ಆಚರಿಸುವ, ನುಡಿಗೊಂದು ನೃತ್ಯ ಮಾಡುವ ಇಲ್ಲಿನವರು ಬದುಕನ್ನು ಅದೆಷ್ಟು ಸರಳವಾಗಿ ಮತ್ತು ಸಹಜವಾಗಿ ಆದರೆ ಅಷ್ಟೇ ರಂಗುರಂಗಾಗಿ ಸ್ವೀಕರಿಸಿದ್ದಾರೆ ಎಂದರೆ ವರ್ಷವಿಡೀ ಹಬ್ಬಗಳ ದಿನಾಂಕವನ್ನು ಹೊತ್ತು ಭರ್ತಿಯಾಗಿರುವ ಅವರ ಪಂಚಾಂಗವನ್ನು ನೋಡಿಯೇ ತಿಳಿಯಬೇಕು. ನನ್ನ ಪ್ರವಾಸದ ಅವಧಿಯಲ್ಲಿ ನೋಡಲು, ಭಾಗಿಯಾಗಲು ಸಿಕ್ಕಿದ್ದು ಲೋಸರ್ ಹಬ್ಬ. ಮೊನ್ಪಾ ಪಂಗಡದವರು ಹೊಸವರ್ಷವನ್ನು ಸ್ವಾಗತಿಸಲು ಈ ಹಬ್ಬವನ್ನು ಆಚರಿಸುತ್ತಾರೆ. ಅಕ್ಕಿಹಿಟ್ಟಿನಿಂದ ತಯಾರಿಸಲಾದ ಹಲವಾರು ಸಿಹಿ ಖಾದ್ಯಗಳನ್ನು ಬುದ್ಧನ ಪ್ರತಿಮೆಯ ಎದುರಿಗಿಟ್ಟು, ದೀಪಗಳನ್ನು ಹಚ್ಚಿ, ಮಂತ್ರಗಳನ್ನು ಓದುತ್ತಾ ಪೂಜೆ ಮಾಡಿ ನಂತರ ನೃತ್ಯ ಮಾಡುತ್ತಾರೆ. ಅಕ್ಕಿಹಿಟ್ಟಿನ ಹುದುಗಿನಿಂದ ತಯಾರು ಮಾಡಿದ ಪಾನೀಯವೊಂದನ್ನು ಹಂಚಿಕೊಂಡು ಕುಡಿದು ಸಂಭ್ರಮಿಸುತ್ತಾರೆ.

ಪ್ರತೀ ಪ್ರದೇಶಕ್ಕೂ ತನ್ನದೇ ಆದ ಹಬ್ಬ ಮತ್ತು ನೃತ್ಯ ಪದ್ಧತಿಗಳಿವೆ. ಅವುಗಳಿಗೆ ದಂದ್ಯೆಗಳು (ಪುರೋಹಿತರು) ಮೊದಲೇ ದಿನಾಂಕಗಳನ್ನು ಗೊತ್ತುಪಡಿಸಿರುತ್ತಾರೆ.  ಬೀಜ ಬಿತ್ತುವಾಗ, ಬೆಳೆಯ ಕಟಾವು ಮಾಡುವಾಗ, ಮಗು ಹುಟ್ಟಿದಾಗ, ಮದುವೆಯಾಗುವಾಗ, ಮಳೆ ಆರಂಭವಾದಾಗ, ಹಿಮಪಾತ ನಿಂತಾಗ, ಹೊಸ ಲಾಮ ನೇಮಕವಾದಾಗ, ಹಳೆಯ ಗುರುಗಳ ನೆನಪಾದಾಗ, ಆಕಾಶ ನಳದಾಗ, ಭೂಮಿ ಹಸಿರಾದಾಗ, ವಯಸ್ಸು ಸರಿದಾಗ, ಮನಸ್ಸು ಕೂಡಿದಾಗ, ಅಗ್ನಿ ಬಿಸಿಯಾದಾಗ, ವಾಯು ಸ್ಪರ್ಶವಾದಾಗ ಹೀಗೆ ಎಲ್ಲಕ್ಕೂ ಒಂದು ಹಬ್ಬ ಇಲ್ಲಿ. ಹನ್ನೊಂದನೇ ಫೆಬ್ರವರಿಯಿಂದ ಇಪ್ಪತ್ತೈದನೆಯ ನವೆಂಬರ್‌ವರೆಗೂ ಸತತವಾಗಿ ಆಚರಣೆಯಲ್ಲಿ ತೊಡಗಿರುತ್ತಾರೆ ಇಲ್ಲಿನವರು. ಮುಖ್ಯ ಹಬ್ಬಗಳ ಪಟ್ಟಿ ಇಲ್ಲಿದೆ.

| Date | Festival | Tribe |
|---|---|---|
| July 12 | Choskhor | Monpa |
| Jan 6 | Si-Donyi | Tagin |
| Feb 1 | Reh | Idu |
| Feb 4 - 8 | Boori Boot | Nyishi, Hill Miris |
| Feb 11 | Losar | Monpa |
| Feb 15 | Tamladu | Idu-Mishmi |
| Feb 16 | Oriah | Wancho |
| Feb 23 | Ali-Aye Ligang | Mishi |
| Feb 26 | Nyokum | Nishi |
| April 1 - 5 | Mopin | Adi |
| April 11 | Pongtu | Tutsa |
| April 14 | Sanken | Khampti, Singhpo |
| April 14 | Moh or Mol | Tangsa |
| July 5 - 8 | Dree | Apatani |
| September 1 | Solung | Adi |
| November 25 | Chalo Loku | Nocte |

**ಮುಖವಾಡಗಳಗೂ ಹಬ್ಬ:** ಇವುಗಳೊಂದಿಗೆ ಮತ್ತೊಂದು ವಿಶೇಷವಾದ ಹಬ್ಬವೆಂದರೆ 'ತೊರ್ಗ್ಯಾ'. ಇದೊದು ತವಾಂಗ್‌ನ ಬೌದ್ಧ ವಿಹಾರದಲ್ಲಿ ಆಚರಿಸುವ ಹಬ್ಬವಾಗಿದೆ. ಚಾಂದ್ರಮಾನ ಪಂಚಾಂಗದ ಹನ್ನೊಂದನೆಯ ತಿಂಗಳಿನ ಇಪ್ಪತ್ತೆಂಟನೆಯ ದಿನದಂದು ಇದನ್ನು ಆಚರಿಸಲಾಗುತ್ತದೆ. ಆ ದಿನವನ್ನು 'ದವ ಚುಕ್‌ಜಿಪ' ಎಂದು ಕರೆಯುತ್ತಾರೆ. ಮನುಷ್ಯನು ಹುಟ್ಟಿನಿಂದ ಹಣೆಬರಹದಲ್ಲಿ ತಂದಿರಬಹುದಾದ ದುರಾದೃಷ್ಟವನ್ನು ದೂರಮಾಡಲು, ದೆವ್ವಭೂತಗಳ ಕಾಟದಿಂದ ತಪ್ಪಿಸಿಕೊಳ್ಳಲು, ಪ್ರಾಕೃತಿಕ ವಿಕೋಪಗಳಿಂದ ಆಗುವ ಜೀವ ಹಾನಿ, ಬೆಳೆ ಹಾನಿಯನ್ನು ತಡೆಗಟ್ಟುವ ಹಂಬಲವೇ ಈ ಹಬ್ಬದ ಹಿಂದಿನ ಉದ್ದೇಶ. ಮುಖವಾಡಗಳಲ್ಲಿ ಅತಿಮಾನುಷ ಶಕ್ತಿ ಇದ್ದು ಅದು ಮನುಕುಲವನ್ನು ನಾಶಪಡಿಸುತ್ತದೆ ಎಂದು ನಂಬುವ ಮೊನ್ಪಾ ಜನರು ಲಾಮಾಗಳ ಮೂಲಕ 'ರಮ್ನೆ' ಎನ್ನುವ ಪೂಜಾ ವಿಧಾನದಿಂದ

ಮುಖವಾಡಗಳಲ್ಲಿ ದೈವೀ ಶಕ್ತಿಯ ಪ್ರತಿಷ್ಠಾಪನೆ ಮಾಡುತ್ತಾರೆ. ಆ ದಿನ ವಿಷೇಶ ಖಾದ್ಯ ಪದಾರ್ಥಗಳನ್ನು ತಯಾರಿಸಿ ಇಪ್ಪತ್ತೊಂದು ಲಾಮಾಗಳಿಗೆ ಬಡಿಸಲಾಗುತ್ತದೆ. ಕೆಡುಕುಗಳ ವಿರುದ್ಧ ಒಳಿತಿನ ವಿಜಯೋತ್ಸಾಹದ ದಿನವಾದ ಅಂದು ಮುಖವಾಡಗಳನ್ನು, ಬಣ್ಣಬಣ್ಣದ ಬಟ್ಟೆಗಳನ್ನು ಧರಿಸಿ, ಆ ದಿನಕ್ಕಾಗಿಯೇ ಸಂಯೋಜನೆಗೊಂಡಿರುವ ನೃತ್ಯವನ್ನು ಮಾಡುತ್ತಾರೆ. ಏಕಾಂಕ ನಾಟಕಗಳನ್ನೂ ಮಾಡುತ್ತಾರೆ. ಎಲ್ಲಾ ಹಬ್ಬಗಳಲ್ಲೂ ಅತ್ಯಂತ ಮನೋರಂಜನೀಯ, ವರ್ಣಮಯ ಹಬ್ಬವಾಗಿದೆ ತೋರ್ಗ್ಯ.

'ಸೆರ್ಬಾಂಗ್' ಎನ್ನುವುದೂ ಸಹ ತವಾಂಗ್‌ನ ಬೌದ್ಧ ವಿಹಾರದಲ್ಲಿ ಆಚರಿಸುವ ಮತ್ತೊಂದು ಮುಖ್ಯವಾದ ಹಬ್ಬ. ಆ ದಿನ ಇಪ್ಪತ್ತೊಂದು ಲಾಮಾಗಳು ಹಲವಾರು ಪೂಜಾ ಪ್ರಕ್ರಿಯೆಗಳ ನಂತರ ಧಾರ್ಮಿಕ ಗುರುಗಳಾಗುವ ದೀಕ್ಷೆ ಪಡೆಯುತ್ತಾರೆ. ಆ ದಿನ ಅವರುಗಳು ಹಳದಿ-ಕೆಂಪು ಮಿಶ್ರಿತ ವಿಶೇಷವಾದ ಬಟ್ಟೆಗಳನ್ನು ಧರಿಸಿರುತ್ತಾರೆ. ಗೌತಮ ಬುದ್ಧ ನಿರ್ವಾಣ ಹೊಂದಿದ ದಿನವನ್ನು 'ಸಕಾದವಾ' ಎನ್ನುವುದಾಗಿ ಆಚರಿಸುತ್ತಾರೆ.

**ಹೆಜ್ಜೆಗೊಂದು ನೃತ್ಯ:** ಜಾನಪದ ನೃತ್ಯವು ಈ ನೆಲದ ಸಂಸ್ಕೃತಿಯ ಅವಿಭಾಜ್ಯ ಅಂಗವೇ ಸರಿ. ಇವರುಗಳ ನೃತ್ಯ ಸಂಯೋಜನೆಯು ಅಲ್ಲಿನ ಜನಮಾನಸದ ಜೀವನ್ಮುಖತೆ, ಉತ್ಸಾಹಗಳ ದ್ಯೋತಕವಾಗಿರುತ್ತದೆ. ನೃತ್ಯವು ಈ ಜನಕ್ಕೆ ಕೇವಲ ಮನೋರಂಜನೆಯ ಮಾಧ್ಯಮವಾಗಿರದೆ ಧಾರ್ಮಿಕ ಆಚರಣೆಯ ಭಾಗವೇ ಆಗಿದೆ. ಪುರೋಹಿತರ ನೃತ್ಯ, ಯುದ್ಧ ನಾಟ್ಯ ಮತ್ತು ಇನ್ನು ಕೆಲವು ಧಾರ್ಮಿಕ ಕ್ರಿಯಾವಿಧಿಗಳ ಸಮಯದಲ್ಲಿ ಮಾಡುವ ನೃತ್ಯವನ್ನು ಹೆಂಗಸರು ಮಾಡುವ ಹಾಗಿಲ್ಲ. ಉಳಿದಂತೆ ಎಲ್ಲಾ ನೃತ್ಯಗಳನ್ನು ಹೆಂಗಸರು ಮತ್ತು ಗಂಡಸರು ಮಾಡುತ್ತಾರೆ. ಮೊನ್ಪಾ ಜನಗಳ ಅಜಿಲಮು, ನಿಶಿ ಜನಗಳ ರೊಪ್ಪಿ, ಅಪತಾನಿಗಳ ಹಿರ್ರಿ ಕಾನಿಂಗ್, ಆದಿ ಜನರ ಪೊಪಿರ್, ಪೊನಂಗ್ ಮತ್ತು ಪಸಿಕೊಂಗ್‌ಕಿ, ನೊಕ್ತೆ ಜನರ ಚಲೋ, ನಿಶಿಂಗ್ ಜನರ ರೆಖಮ್ ನೃತ್ಯಗಳು ಅತ್ಯಂತ ಪ್ರಸಿದ್ಧ ನೃತ್ಯಗಳು ಎನಿಸಿದ್ದರೂ, ತವಾಂಗ್‌ನಲ್ಲಿ ಮೊನ್ಪ ಜನಗಳು ಮುಖವಾಡ ಧರಿಸಿ, ಗಾಢ ವರ್ಣದ ವಸ್ತ್ರಗಳನ್ನು ತೊಟ್ಟು ಮಾಡುವ ಚಮರೀಮೃಗದ ನೃತ್ಯ, ಸಿಂಹ ಮತ್ತು ನವಿಲಿನ ನಾಟ್ಯಗಳು ಅತೀ ಮನಮೋಹಕ ಪ್ರಕಾರಗಳೆಂದು ಹೆಸರು ಮಾಡಿವೆ. ಎಲ್ಲಾ ನೃತ್ಯಗಳನ್ನೂ



**ಮೊನ್ಪಾ ಬುಡಕಟ್ಟಿನ ಆದಿವಾಸಿ ಚಮರೀಮೃಗದ ಮುಖವಾಡಗಳೊಂದಿಗೆ**

ಅಲ್ಲಿನ ಜನರೇ ಹಾಡುವ ಸಮೂಹ ಗಾಯನಕ್ಕೆ ಸಂಯೋಜಿಸಿರುತ್ತಾರೆ. ಅಜಿಲಮು ನೃತ್ಯವು ಸ್ಥಳೀಯರ ರಾಮಾಯಣದ ರೂಪವಾಗಿರುತ್ತದೆ. ಯಾಕ್ ನೃತ್ಯದಲ್ಲಿ ಚಮರೀಮೃಗದ ಹುಟ್ಟಿನ ಜೀವನಗಾಥೆಯನ್ನು ತೋರಿಸುತ್ತಾರೆ. ಸಿಂಹ ನೃತ್ಯ ಪ್ರಕಾರದಲ್ಲಿ ಪರಿಸರದಲ್ಲಿ ಪ್ರಾಣಿಗೂ ಮತ್ತು ಮನುಷ್ಯನಿಗೂ ಇರಬೇಕಾದ ಸಾಮರಸ್ಯವನ್ನು ಆಂಗಿಕಾಭಿನಯದ ಮೂಲಕ ತೋರಿಸಲಾಗುತ್ತದೆ. 'ಕೆಂಗ್‌ಚಾಮ್' ಎನ್ನುವ ನೃತ್ಯದಲ್ಲಿ ಇಬ್ಬರು ಬೆತ್ತಲೆ ಮನುಷ್ಯರು ಅಸ್ಥಿಪಂಜರದ ಮುಖವಾಡ ತೊಟ್ಟು ಕೆಡುಕಿನ ಮೇಲೆ ಒಳಿತಿನ ವಿಜಯವನ್ನು ಸಾರುವಂತಹ ಕಥೆಯನ್ನು ರೂಪಕವನ್ನಾಗಿಸುತ್ತಾರೆ. ಅರಪು ನೃತ್ಯವು ಕದನವನ್ನು ತೋರಿಸುವ ಸೈನಿಕರ ನೃತ್ಯವಾಗಿದ್ದು ಅಹೋರಾತ್ರಿ ಮಾಡಲಾಗುತ್ತದೆ. ಇದರಲ್ಲಿ ಹೆಂಗಸರಿಗೆ ಭಾಗವಹಿಸಲು ಅವಕಾಶವಿರುವುದಿಲ್ಲ. ಪ್ರತೀ ಉಸಿರಿನಲ್ಲೂ ಅದಮ್ಯ ಚೇತನವನ್ನು ತುಂಬಿಕೊಂಡು, ಜಗತ್ತನ್ನೇ ಜೀವನದೆಡೆಗೆ ಪ್ರೇರೇಪಿಸುವ ಶಕ್ತಿ, ಯುಕ್ತಿ ಎರಡನ್ನು ಹೊಂದಿರುವ ಅರುಣಾಚಲ ಪ್ರದೇಶದ ಬುಡಕಟ್ಟು ಜನರು ನಿಜಕ್ಕೂ ಈ ಭೂಮಿಯ ಮೇಲಿನ ಇಂದ್ರಜಾಲದಂತೆ ತೋರುತ್ತಾರೆ.

* * * * *

# ೯. ಗಂಗೆಯ ಶಿರದಲ್ಲಿ ಶಂಕರ

ಆದಿವಾಸಿಗಳ ಹಾಡಿ ಬಿಟ್ಟು ಹೊರಟಾಗ ಅನೂಹ್ಯ ಲೋಕದ ಗುಂಗಿನಲ್ಲಿದ್ದೆ. ದೇಹದ ಅರಿವೇ ಇಲ್ಲದೆ ಸುಮ್ಮನೆ ಹೋಗುತ್ತಿದ್ದೆ. ಪಟ್ಟಿಯಲ್ಲಿ ಮುಂದೆ ನೋಡಬೇಕಾದ ಜಾಗದ ಗುರುತು ಇತ್ತು. ಆದರೂ ಇಹಪರದ ಅರಿವಿಲ್ಲದಂತಹಾ ಭಾವ. ಹಗುರವಾಗಿದ್ದೆ. ಮುಂದಿನ ಹೆಜ್ಜೆಯ ಪ್ರಜ್ಞೆಯೇ ಇಲ್ಲದಂತೆನಿಸುತ್ತಿತ್ತು. ಅಂದುಕೊಂಡರೆ ಎಲ್ಲವೂ ಖಾಸಗಿ ಇಲ್ಲವಾದಲ್ಲಿ ನಾನೂ ನನ್ನದಲ್ಲ ಎನ್ನುವ ಪಾಠ ಕಲಿಸಿತ್ತು ಹಿಂದಿನದೆರಡು ರಾತ್ರಿ ಹಗಲುಗಳು. ಟ್ಯಾಕ್ಸಿ ಹತ್ತಿ ಸುಮ್ಮನೆ ಕುಳಿತೆ. ರಂಜು ಭಯ್ಯ ಕೇಳುತ್ತಲೇ ಇದ್ದ "ದೀದಿ ಈಗ ಎಲ್ಲಿಗೆ ಹೋಗೋಣ" ಅಂತ. ಆದರೇನು ಮಾಡಲಿ, ಧ್ವನಿ ತಂತುಗಳು ಮೌನವನ್ನು ಆತುಕೊಂಡಿದ್ದವು ವಿನಾಕಾರಣ. ಈ ಊರಿನಲ್ಲಿ ಕೂಡಿಟ್ಟು ಹೋಗಿರುವುದನ್ನು ಆ ಊರಿನಲ್ಲಿ ಪಡೆಯುತ್ತಿದ್ದೇನೆ ಎಂದುಕೊಂಡಿದ್ದನ್ನು ಮರೆತಂತಾಗಿತ್ತು. ದಪ್ಪ ಉಣ್ಣೆಯ ಸ್ವೆಟರ್ ಅನ್ನು ಸೀಳಿ ಛಳಿ ಒಳನುಗ್ಗಿ ತಣ್ಣಗೆ ಮುದ್ದಿಸುತ್ತಿತ್ತು. ಅಷ್ಟರಲ್ಲಿ ಹಿಂದಿನ ದಿನ ಬಸ್ತಿಯ ದಾರಿ ತೋರಿದ್ದ ನಗುಮೊಗದ ಗಂಡಸೊಬ್ಬರು ದಾರಿಗಡ್ಡಗಟ್ಟಿ "ಓಹ್, ವಾಪಸ್ಸು ಹೊರಟಿರಾ. ಶಿವಲಿಂಗ ನೋಡಿಕೊಂಡು ಹೋಗಿ" ಎಂದು ಹೇಳಿ ಕೈ ಬೀಸಿದರು. ಗಾಡಿ ಪರ್ವತದ ಇಳಿಜಾರಿನಲ್ಲಿ ಓಡುತ್ತಿತ್ತು. ಪ್ರಪಾತ ಒಮ್ಮೆ ಎಡಕ್ಕೆ ಮತ್ತೊಮ್ಮೆ ಬಲಕ್ಕೆ ಕಣ್ಣುಮುಚ್ಚಾಲೆ ಆಟವಾಡುತ್ತಿತ್ತು. ಇಷ್ಟು ಹೊತ್ತು ಇಳಿಯುತ್ತಿದ್ದ ಗಾಡಿಯನ್ನು ಈಗ ಮೇಲೆ ಹತ್ತಿಸತೊಡಗಿದ್ದ ರಂಜು. ಸ್ವಲ್ಪಸ್ವಲ್ಪವೇ ಎಚ್ಚರಕ್ಕೆ ಹೊಂದಿಕೊಳ್ಳುತ್ತಿದ್ದ ನಾನು ಅವನಿಗೆ ದಾರಿ ತಿಳಿದಿದೆ ಎನ್ನುವ ನಂಬಿಕೆಯಲ್ಲೇ ಸುಮ್ಮನೆ ಕುಳಿತಿದ್ದೆ. ತೀರಾ ಕಡಿದಾದ ಮಣ್ಣಿನ ರಸ್ತೆಯಂತಹ ರಸ್ತೆಯಲ್ಲಿ ಮೇಲೇರುತ್ತಿದ್ದೆವು. ಕಾರು ನಿಂತರೆ ಬಾಗಿಲು ತೆರೆಯಲೂ ಆರದಷ್ಟು ಅಂತರದಲ್ಲಿ ಶಿಲಾ ಏಣುಗಳು. ಪುಪ್ಪುಸಗಳಲ್ಲಿ ಹೆಚ್ಚಿನ ಗಾಳಿ ತುಂಬಿಕೊಂಡರೂ ಸಮತೋಲನ ತಪ್ಪಿ ಉರುಳುವಂಥಾ ಪ್ರಪಾತ ಇನ್ನೊಂದು ಕಡೆ. ಮಣ್ಣಿನ ಧೂಳು ಎದ್ದು ದಾರಿ ಕಾಣದಂತಾಯ್ತು. ಗಾಡಿ ನಿಲ್ಲಿಸಿ ಅವನು ಇಳಿದ ಹಿಂದೆಯೇ ಇಕ್ಕಟ್ಟಿನಲ್ಲೇ ನಾನೂ ಇಳಿದೆ. ನೋಡಿದರೆ ಅಬ್ಬಾ, ಇನ್ನೊಂದೇ ಗಾಲಿ ಉರುಳಿದ್ದರೂ ಅದು ಸಾವಿರಸಾವಿರ ಅಡಿ ಇದ್ದ ಪ್ರಪಾತದೊಳಕ್ಕೇ ಹೋಗುತ್ತಿತ್ತು. ಮುಂದೆ ರಸ್ತೆಯೇ ಇಲ್ಲ. ನಾವ್ಯಾಕೆ ಹೀಗೆ ಬಂದೆವು? ಯಾಕಾಗಿ ಇಲ್ಲಿಯೇ ನಿಂತೆವು? ಎಲ್ಲವೂ ಅಯೋಮಯ.

ಗಾಡಿಯನ್ನು ತಿರುಗಿಸಿಕೊಂಡು ಹಿಂದೆ ಹೋಗುವುದಂತೂ ಅಸಾಧ್ಯದ ಮಾತಾಗಿತ್ತು. ಮುಂದೆ ಜೀವನದ ಅಂತ್ಯವೇ ಮೂರ್ತಿವೆತ್ತಂತಿತ್ತು. ಆದರೂ ಕ್ಷಣಮಾತ್ರವೂ ಭಯವೇ ಆಗದ್ದೂ ಸೋಜಿಗ. ಆ ಮನೋಸ್ಥಿತಿ ಬಹುಶಃ ಆದಿವಾಸಿಗಳ ಜೊತೆಗಿನ ಅಲ್ಪ ಒಡನಾಟದ ಪ್ರಭಾವವೂ ಆಗಿತ್ತೇನೋ. ರಂಜು ಒಬ್ಬ ಉತ್ತಮ ಚಾಲಕನಾಗಿದ್ದ. ಆದರೂ ಈ ಬಾರಿ ನಾನೇ ಅವನಿಗೆ ಧೈರ್ಯ ಹೇಳಿದೆ. ನನ್ನನ್ನು ಒಳಗೆ ಕೂರಲು ಹೇಳಿ ಸುಮಾರು 10 ಕಿಲೋಮೀಟರ್ಗಳಷ್ಟು ರಿವರ್ಸ್ ಗೇರಿನಲ್ಲೇ ಕೆಳಗಿಳಿದ. ನಂತರ ಮತ್ತೊಂದು ಪರ್ವತವನ್ನೇರ ತೊಡಗಿದೆವು. ಏರುತ್ತಾ ಏರುತ್ತಾ ಕವಲಿಲ್ಲದೆ ಕೊನೆಯಾಗಿದ್ದ ದಾರಿಯಲ್ಲಿ ನಿಂತೆವು. "ದೀದಿ ನೀವು ಇಲ್ಲೇ ಇರಿ. ನಾನು ಮುಂದೆ ಹೋಗಿ ನೋಡಿಕೊಂಡು ಬರುತ್ತೇನೆ" ಎಂದು ಹೇಳಿಹೋದ. ನಾನು ಗಾಡಿಯಿಂದ ಇಳಿದೆ. ಛಳಿಗೆ ದೇಹವೆಲ್ಲಾ ನಡುಗುತ್ತಿತ್ತು.


ಎಷ್ಟೊಂದು ಬೆಚ್ಚನೆಯ ಬಟ್ಟೆಯ ಭಾರ ಹೊತ್ತಿದ್ದರೂ ಪ್ರಕೃತಿಯ ಶಕ್ತಿಯೆದುರು ನಾ ತರಗೆಲೆಯಂತೆ ಅಲ್ಲಾಡುತ್ತಿದ್ದೆ. ಅವನು ಬರುವವರೆಗೂ ಹಸಿರು ರಾಶಿಯನ್ನು ನೋಡುತ್ತಾ ಮೀರಾ ಭಜನೆಗಳನ್ನು ಕೇಳುತ್ತಿದ್ದವಳಿಗೆ ಒಳಗು ಅಪ್ಯಾಯಮಾನವಾಗ ತೊಡಗಿತ್ತು. ಅದೆಷ್ಟೋ ಹೊತ್ತು ಹಸಿರು ಜೀವದ ನಡುವೆ ಬಣ್ಣರಹಿತ ನಾನು ಏಕಾಂತವನ್ನು ಉಸಿರಾಡುತ್ತಿದ್ದೆ.

ಅವನು ಬಂದೇ ಬಂದ. "ದೀದಿ ಹೌದು, ಇದೇ ದಾರಿ ಬನ್ನಿ ಹೋಗೋಣ" ಎಂದು ಕಾರನ್ನು ಲಾಕ್ ಮಾಡಿದ. ಏಳೆಂಟು ಕಿಲೋಮೀಟರ್ಗಳಷ್ಟು ಕಾಲ್ನಡಿಗೆ. ಮೊದಲೇ ಕೆತ್ತಿಟ್ಟಿದ್ದ ದಾರಿಯಲ್ಲಿ ಅಲ್ಲ. ನಾವಿಬ್ಬರೇ ಹೊಸದಾಗಿ ಕಂಡುಕೊಳ್ಳುತ್ತಿದ್ದ ಕಾಲುದಾರಿ ಬೆಟ್ಟದ ಏರಿನಲ್ಲಿ. ಸ್ವಲ್ಪ ಹೊತ್ತಿನ ನಂತರ ಒಂದಷ್ಟು ಮೆಟ್ಟಿಲಿನಂತವುಗಳು ಕಾಣ ತೊಡಗಿತ್ತು. ಆದರೆ ಬಳಸದೆಯೇ ಅದರ ಮೇಲೆಲ್ಲಾ ಕುರುಚಲು ಗಿಡಗೆಂಟೆಗಳು ಬೆಳೆದಿದ್ದವು. ಹಿಮ ಕರಗಿ ಅಲ್ಲಲ್ಲೇ ಒದ್ದೆಒದ್ದೆಯಾಗಿತ್ತು. ಅಗೋಚರವಾಗಿದ್ದ ನೀರಿನ ಝುಳುಝುಳು ಮಾತ್ರ ಕೇಳುತ್ತಿತ್ತು. ಮೈ ಕೈಗೆ ಅಂಟಿಕೊಂಡ ಪೊದೆಗಳನ್ನು ಸರಿಸುತ್ತಾ ಹತ್ತಿಕೊಂಡು ನಂತರ ಒಂದಷ್ಟು ದೂರ ಇಳಿಜಾರಿನಲ್ಲಿ ಜಾರಿ ಹೋಗಿ ಎಡಕ್ಕೆ ತಿರುಗಿದರೆ ಕಂಡಿದ್ದು ಏನು?! ಬಯಲ ಬಣ್ಣವ ಮಾಡಿ; ಸ್ವಯವ ನಿಲವ ಮಾಡಿ; ಸುಳಿವಾತನು ಇಲ್ಲಿ ಆಕಾಶಕ್ಕೆದ್ದು ನಿಂತಿದ್ದ. ಪರ್ವತ

ಹಿಮ ಮೌನವಾಗಿದ್ದ. 25 ಅಡಿ ಎತ್ತರದ 22 ಅಡಿಗಳಷ್ಟು ಅಗಲದ ಶಿವಲಿಂಗಾಕೃತಿ. ವಿಭೂತಿ ಪಟ್ಟೆ, ರುದ್ರಾಕ್ಷಿ ಮಾಲೆ, ನಾಗಾಭರಣ ಎಲ್ಲವೂ ಅವನ ಮೈಮೇಲೆ ಸ್ವಯಂಭು. ಎಡದ ಹಿಂಭಾಗಕ್ಕೆ ಹೆಣ್ಣಿನಂಥಾ ಆಕೃತಿ ಇಕ್ಕೆಲಗಳಲ್ಲಿ ಗಣೇಶ, ಕಾರ್ತಿಕೇಯನಂಥ ಶಿಲಾ ರಚನೆ. ಬೂದಿಗಟ್ಟಿದ ಮೋಡ, ನೀಲಿನೀಲಿ ಮಂಜು, ಹಸಿರು ರಾಶಿಯ ನಡುವೆ ಕಪ್ಪು ಶಿಲೆಯಲ್ಲಿ ಆಕಾಶ ಭೂಮಿಗಳ ಒಂದು ಮಾಡಿನಿಂತಿದ್ದ ಶಿವ. ಅವನಿಗೂ ನನಗೂ ಜನ್ಮಾಂತರಗಳ ನಂಟು. ಈಗ ಇಲ್ಲಿ ನಾನು ಅವನು ಇಬ್ಬರೇ. ಅವನನ್ನೇ ನೋಡುತ್ತಾ ನಿಂತೆ. ನನ್ನೊಳಗಿನ ಅವನು, ಅವನಾಚೆಯ ನಾನು ಬಣ್ಣಗಳ ಮೇಳದಲ್ಲಿ ಬಿಳಿಯಾದಂತೆ. ಅಷ್ಟರಲ್ಲಿ ಕೇಸರಿ ಕಚ್ಚೆ ಧರಿಸಿದ್ದ ಕುಲಾವಿ ಧಾರಿ ಪುರೋಹಿತರೊಬ್ಬರು ಬಂದು "ಬನ್ನಿ ಮಂಗಳಾರತಿ ಮಾಡುತ್ತೇನೆ" ಎಂದರು. ನನ್ನ ಕೈಗೆ ಕಂಕಣ ಕಟ್ಟಿ ಹಣೆಗೆ ತಿಲಕವಿಟ್ಟು ಪೂಜೆಗೆ ಶುರುವಿಟ್ಟರು.

ಬೆನ್ನ ಹಿಂದಿನ ಬ್ಯಾಗ್‌ನಲ್ಲಿದ್ದ ಮೈಸೂರು ಸ್ಯಾಂಡಲ್‌ವುಡ್ ಅಗರಬತ್ತಿಯನ್ನು ಕೊಟ್ಟೆ. ಆರತಿ ಮಾಡಿ ಒಂದು ಹಿಡಿ ಭರ್ತಿ ಕಲ್ಯಾಣಿ ಕೊಟ್ಟರು. ಮಾತಿಗೆ ಶುರುವಿಟ್ಟೆ. "ಪಂಡಿತ್ ಜಿ, ನೀವು ದಿನಾ ಇಲ್ಲಿ ಪೂಜೆ ಮಾಡ್ತೀರಾ?" ಎಂದು. ಅಲ್ಲೆಲ್ಲೋ ಕಾಣುತ್ತಿದ್ದ ಸಣ್ಣ ಮನೆಯನ್ನು ತೋರಿಸಿ "ಹೌದು ನಾನು ಇಲ್ಲಿಯೇ ಇರೋದು. ದಿನಾ ಪೂಜೆ ಮಾಡ್ತೀನಿ ಹೀಗೆ. ಅಪರೂಪಕ್ಕೊಮ್ಮೆ ಯಾತ್ರಿಗಳು ಬರುತ್ತಾರೆ. ಇಲ್ಲಿನ ವಿಶ್ವಹಿಂದು ಪರಿಷತ್ತಿನವರು ಒಂದು ಕಮಿಟಿ ಮಾಡಿದ್ದಾರೆ. ನನಗೆ ಒಂದಷ್ಟು ಸಂಬಳವನ್ನೂ ಕೊಡುತ್ತಾರೆ" ಎಂದರು. ನಾನು ಶಿವನಾಕಾರವನ್ನೇ ನೋಡುತ್ತಾ "ಏನು ಇಲ್ಲಿನ ಐತಿಹ್ಯ?" ಎಂದೆ. ಅವರು ಹೇಳುತ್ತಾ ಹೋದರು.

2004ನೇ ಇಸವಿಯ ಜುಲೈ ತಿಂಗಳ ಮೊದಲ ಪಕ್ಷದಲ್ಲಿ, ಶ್ರಾವಣ ಮಾಸದ ಮುಂಜಾವಿನಲ್ಲಿ ಪ್ರೇಮ್ ಸುಭಾ ಎನ್ನುವ ನೇಪಾಳಿ ಯುವಕನೊಬ್ಬ ಕಟ್ಟಿಗೆಗಾಗಿ ಈ ದಟ್ಟ ಕಾಡಿನಲ್ಲಿ ಒಬ್ಬನೇ ಮರ ಕಡಿಯುತ್ತಿದ್ದ. ಗರಗಸದ ತುದಿಯಂಚಿಗೆ ಬಂದು ನಿಂತ ದೊಡ್ಡ ಕಾಂಡ ಬೀಳಲಿದೆ ಎಂದುಕೊಂಡ ದಿಕ್ಕಿನಲ್ಲಿ ಉರುಳದೆ ಅನಿರೀಕ್ಷಿತವಾಗಿ ವಿರುದ್ಧ ದಿಕ್ಕಿನಲ್ಲಿ ಮಲಗಿತು. ಆಶ್ಚರ್ಯದಿಂದ ಆತ ಗಮನವಿಟ್ಟು ನೋಡಿದಾಗ ಅಲ್ಲೇ ಈ ದೈತ್ಯಕಾರಾದ ಕರಿಶಿಲೆಯ ಶಿವ ಕಂಡ. ಸುತ್ತಲಿನ ನಿತ್ಯಹರಿದ್ವರ್ಣದ ಪರ್ವತಗಳ



**ಹಿಪೋಲಿಯ ಶಿವಲಿಂಗ**

ಸಂಧಿಯಿಂದ ತೂರಿ ಬರುತ್ತಿದ್ದ ಕಿರಣದ ಹಂಗಿನಲ್ಲಿ ಭೋಲೆನಾಥನ ಪರಿವಾರವೇ ಈ ಶಿಲೆಯಲ್ಲಿ ಕಂಡಿತು. 25 ಮೈಲುಗಳಾಚೆಯ ಬಸ್ತಿಗೆ ಓಡಿ ಹೋಗಿ ಎಲ್ಲರಿಗೂ ವಿಷಯ ತಿಳಿಸಿದ ನಂತರ ಜನರಿಂದ ಪೂಜೆ ಪುನಸ್ಕಾರಗಳ ರೂಪದಲ್ಲಿ ಭಕ್ತಿ ವ್ಯಕ್ತವಾಗತೊಡಗಿತು. ಇಲ್ಲಿನ ವಿಶೇಷವೆಂದರೆ ಶಿವನ ಕಾಲ ಕೆಳಗೆ ಸತತವಾಗಿ ನೀರು ಹರಿಯುತ್ತಿದೆ. ತಜ್ಞರು ಅದರ ಮೂಲವನ್ನು ಗಂಗಾ ನದಿಗೆ ಆರೋಪಿಸಿರುವುದರಿಂದ ಅದನ್ನು ಗಂಗೆಯೇ ಎಂದು ನಂಬಲಾಗಿದೆ. ಎಲ್ಲೆಡೆಯಲ್ಲಿ ಶಿವನ ಜಟೆಯಲ್ಲಿ ಇರುವ ಗಂಗಮ್ಮ ಇಲ್ಲಿ ತನ್ನ ಶಿರದಲ್ಲೇ ಅವನನ್ನು ಧರಿಸಿದ್ದಾಳೆ, ಭರಿಸುತ್ತಿದ್ದಾಳೆ. ನಂತರದ ದಿನಗಳಲ್ಲಿ ಪುರಾಣತಜ್ಞರ ಅಧ್ಯಯನದಿಂದ ತಿಳಿದು ಬಂದಿದೆ ಈ ಲಿಂಗದ ಬಗ್ಗೆ ಶಿವಪುರಾಣದ 17ನೆಯ ಅಧ್ಯಾಯವಾದ ರುದ್ರಖಂಡದಲ್ಲಿ ಉಲ್ಲೇಖಿಸಲಾಗಿದೆ ಎಂದು. ಜ್ಯೋತಿರ್ಲಿಂಗ ರೂಪದಲ್ಲಿನ ಶಿವ ಅಘನಾಶನನೆನಿಸಿಕೊಂಡರೆ, ಅಗಾಧಾಕಾರದಲ್ಲಿ ನಿಂತು ಇಲ್ಲಿ ಇಷ್ಟಾರ್ಥ ಸಿದ್ದಿಸಿಕೊಡುತ್ತಾ ಸಿದ್ಧೇಶ್ವರ ನಾಥ ಎನಿಸಿಕೊಂಡಿದ್ದಾನೆ. "ಸಿದ್ಧ ಪೀಠದಲ್ಲಿ ನೆಲೆನಿಂತ ಇವನ ಕಥೆ ಕೇಳಿದರೂ ಜನ್ಮಾಂತರಗಳ ಪಾಪ ಪರಿಹಾರವಾಗುವುದು ಮಗಳೇ, ಅಂಥಾದರಲ್ಲಿ ನೀನು ಅಷ್ಟು ದೂರದಿಂದ ಇಲ್ಲಿ

ಬಂದು ದರ್ಶನ ಪಡೆದಿದ್ದೀಯ. ನಿನಗೆ ಮೋಕ್ಷ ಸಿಗುವುದು ಖಾತರಿ" ಎಂದು ಹೇಳಿ ಆ ಪುರೋಹಿತರು ಅಲ್ಲಿಂದ ಹೊರಟಾಗ ಕಿರುನಗುವೊಂದು ನನ್ನ ತುಟಿಯಂಚಿನಲ್ಲಿ ಅರಳಿತ್ತು.

ಅರ್ಧ ದಿನವಿಡೀ ಅಲ್ಲಿ ಶಿವ ಮತ್ತು ನಾನು ಮಾತ್ರ. ಅಮ್ಮ ನೆನಪಾಗುತ್ತಿದ್ದಳು. ಆದರೆ ಮೊಬೈಲ್ ನೆಟ್ವರ್ಕ್ ಇರಲಿಲ್ಲ. ಅವಳಿಗೊಂದು ಪತ್ರ ಬರೆಯುತ್ತಾ ಕುಳಿತೆ " ಅಮ್ಮ, ಆಕಾರದಲ್ಲಿ ಬಂಧಿತನಾದ ನಿನ್ನ ದೇವರಿಗೆ ಗಂಧ ಮೆತ್ತದೆ, ಹೂವಿಡದೆ, ಉಪವಾಸವಿರದೆ ಪೂಜೆ ಮಾಡದೆ ಊರೂರು ಅಲೆಯುವ ನನ್ನನ್ನು ಅದೆಷ್ಟು ಬೈಯುತ್ತೀಯೇ?! ಕೇಳಿಕೋ ಕೊಡುತ್ತಾನೆ ಅಂತ ತಾಕೀತು ಮಾಡುತ್ತೀಯ. ನೋಡಿಲ್ಲಿ ಇವನನ್ನು ನೋಡಿದರೆ ಕೇಳಬೇಕು ಅನ್ನಿಸುತ್ತೇನು ? ಇವನ ನೋಟಕ್ಕೆ ನೋಟ ಸಿಕ್ಕುವಾಗಲೇ ಮನಸ್ಸು ಮೃದುವಾಗುತ್ತೆ. ಖಾಲಿಯಾಗುತ್ತೆ. ಬೇಡದೆಯೂ ನನ್ನೀ ಜೋಳಿಗೆಯ ತುಂಬಿತುಂಬಿ ಕೊಟ್ಟವನಿಗೆ ಎಲ್ಲವನ್ನೂ ಕೊಟ್ಟು ಕರಗಿ ಹೋಗಬೇಕು ಅನ್ನಿಸುತ್ತೆ. ಹೇಳಿ ಬಿಡೆ ಅಮ್ಮ ನನ್ನ ತಪ್ಪೇನು ? ಹಾಂ, ನನಗೆ ಗೊತ್ತು ನಮ್ಮಿಬ್ಬರ ನಡುವಿನ ವಾದಗಳು ಇನ್ನೂ ಬಾಕಿ ಇದೆ. ನನ್ನ ಜಗಳಕ್ಕೆ ಧ್ವನಿಯಾಗಿ, ಕಿವಿಯಾಗಿ ನೀನು ಸಾವಿರ ವರುಷದವಳಾಗಿ ಇದ್ದು ಬಿಡೆ. ನಾನು ನಿನ್ನನ್ನು ಪ್ರೀತಿಸುತ್ತೇನೇನು ? ಉತ್ತರ ಹುಡುಕುತ್ತಿದ್ದೇನೆ. ಇವನ ಜೊತೆ ನಾನಿಲ್ಲಿ ಕ್ಷೇಮ. ಸಿಗ್ನಲ್ಸ್ ಸಿಕ್ಕೊಡನೆ ಫೋನ್ ಮಾಡುತ್ತೀನಿ. ಊರಿಗೆ ಬಂದ ಮೇಲೆ ಫೋಟೊ ತೋರಿಸುತ್ತೀನಿ".

"ದೀದಿ ಸಂಜೆಯಾಗುತ್ತಿದೆ. ಬೆಟ್ಟ ಇಳಿಯಬೇಕು. ದಾರಿ ಗೊತ್ತಿಲ್ಲ. ಹೊರಡೋಣವಾ?" ಎನ್ನುತ್ತಾ ನನ್ನ ಇನ್ನೊಂದು ಅಂಗವೇ ಆಗಿ ಹೋಗಿದ್ದ ರಂಜು ಕೇಳಿದಾಗಲೇ ಅಲ್ಲಿಂದ ಹೊರಟಿದ್ದು. ಇಳಿಯುತ್ತಾ, ನಿಲ್ಲುತ್ತಾ, ಅಲ್ಲಲ್ಲಿ ಫೋಟೋ ತೆಗೆದುಕೊಳ್ಳುತ್ತಾ, ಅವನೊಡನೆ ಹರಟುತ್ತಾ, ಸಮುದ್ರ ಮಟ್ಟದಿಂದ 1500 ಅಡಿ ಮೇಲಿನಿಂದ ಕೆಳಮುಖವಾಗಿ ಪ್ರಯಾಣ ಮತ್ತೊಮ್ಮೆ ಶುರುವಾಯ್ತು.

- ಸಿದ್ಧೇಶ್ವರನಾಥ ದೇವಸ್ಥಾನ, ಹಿಪೊಲಿ ಟೌನ್, ಕೆಳಸುಬಾನ್ಸಿರಿ ಜಿಲ್ಲೆ, ಅರುಣಾಚಲಪ್ರದೇಶ– 791120

- ಜ಼ಿರೋ ಊರಿನಿಂದ 25 ಕಿಲೋಮೀಟರ್ಗಳಷ್ಟು ರಸ್ತೆಪ್ರಯಾಣ ಮಾಡಬೇಕು. ನಂತರ 40 ನಿಮಿಷಗಳ ಕಾಲಬೆಟ್ಟದ ಏರು–ತಗ್ಗಿನಲ್ಲಿ ನಡೆಯಬೇಕು.
- ನೋಡಲು ಬೇಕಾದ ಸಮಯ 1 ಗಂಟೆ
- ಕುಡಿಯುವ ನೀರು, ತಿಂಡಿ ತಿನಿಸುಗಳು ಏನೂಸಿಗುವುದಿಲ್ಲ.
- ನವೆಂಬರ್ನಿಂದ ಮಾರ್ಚ ತಿಂಗಳವರೆಗೂ ಹಿಮಾಚ್ಛಾದಿತ ತಣಿವಿನ ಕಾಡು ಪ್ರದೇಶ.

* * * * *

# 10. ಕೃಷ್ಣ, ರುಕ್ಮಿಣಿ, ಪಾರ್ವತಿ ಭೇಟಿಯಾದರು

"ದೀದಿ ಚಾ ಕುಡಿಯದೆಯೇ ಹೋಗ್ಬೇಡಿ" ಎನ್ನುತ್ತಾ, ನನಗೆ ಸೇರುವುದೇ ಇಲ್ಲ ಎನ್ನುವಂತಹ ಉಗುರು ಬೆಚ್ಚಗಿನ ಹಸಿಹಸಿ ವಾಸನೆಯ ಚಹಾ ತಂದಿಟ್ಟ ಆ ಹುಡುಗ. ಅವನಿಗೆ ಬೇಸರವಾಗದಿರಲೆಂದು ಒಂದೆರಡು ಗುಟುಕನ್ನು ಕುಡಿದು ಬಿಲ್ ಹಣ ಸಂದಾಯ ಮಾಡುತ್ತಿದ್ದೆ. ಅಷ್ಟರಲ್ಲಿ ರಂಜು ಅವನಿಗೆ ನನ್ನ ಬಗ್ಗೆ ಅದೇನು ಹೇಳಿದ್ದನೋ ಗೊತ್ತಿಲ್ಲ, ಈ ಹುಡುಗ ಸೀದಾ ಬಳಿಗೆ ಬಂದು "ದೀದಿ ನಮ್ಮ ಹೋಟೆಲಿನ ಪಕ್ಕದ ರಸ್ತೆಯಲ್ಲಿಯೇ ದೇಮಾಜಿ ಬಾಂಬ್ ದುರ್ಘಟನೆಯಲ್ಲಿ ಮಡಿದ ಕಾಲೇಜು ವಿದ್ಯಾರ್ಥಿಗಳ ಸ್ಮಾರಕ ಇದೆ ನೋಡಿ ಕೊಂಡು ಹೋಗಿ. ನಿಮಗೆ ಅನುಕೂಲವಾಗುತ್ತೆ" ಅಂದ. ಆದರೆ ನನ್ನ ಗಮನವೆಲ್ಲಾ "ಹೂಮಾಲೆಯ ಒಡತಿ"ಯ ಮೇಲೆಯೇ ಇತ್ತು. ಹೇಗೂ ಮತ್ತೊಮ್ಮೆ ಈ ಜಾಗವನ್ನು ಮುಟ್ಟಲೇಬೇಕಿತ್ತು. ಆಗ ನೋಡಿದರಾಯಿತು ಅಂದುಕೊಂಡು, ಹಾಗಂತ ಅವನಿಗೆ ಹೇಳದೆ ನಗುವೊಂದನ್ನು ಹಂಚಿಕೊಂಡು ಅಲ್ಲಿಂದ ಹೊರಟೆ. ಮುಂದಿನ ಎರಡು ಗಂಟೆಗಳ ಕಾಲ ನಿಲ್ಲದೆಯೆ ಪಯಣಿಸಬೇಕಿತ್ತು. ಅಸ್ಸಾಮಿನ ಹಳ್ಳಿಗಳು, ತಾಲೂಕುಗಳು ಅರುಣಾಚಲ ಪ್ರದೇಶದಂತೆ ಅಲ್ಲ. ಟಾರು ಮೆತ್ತಿಸಿಕೊಂಡ ವಿಶಾಲ ರಸ್ತೆಗಳು ಪ್ರಯಾಣಿಗರಿಗೆ ಹಿತವಾಗಿವೆ. ಒಂದೊಂದೇ ಮರಗಿಡಗಳು ಕಿಟಿಕಿಯಿಂದಾಚೆಗೆ ನನ್ನಿಂದ ದೂರದೂರವಾಗುತ್ತಿರುವುದನ್ನು ನೋಡುತ್ತಲೇ ಮುಂದೆ ಹೋಗುತ್ತಿದ್ದೆ. ಅಸ್ಸಾಂ ಪೂರ್ತೀ ತುಂಬಾ ಖುಷಿ ನೀಡುವ ನೋಟವೆಂದರೆ ಅಲ್ಲಿನ ಹೆಣ್ಣು ಮಕ್ಕಳು ವಯೋಭೇದವಿಲ್ಲದೆ ಸೀರೆಗಳನ್ನುಟ್ಟು ಸೈಕಲ್‌ಗಳಲ್ಲಿ ಓಡಾಡುತ್ತಾರೆ. ರಸ್ತೆಯ, ಅಲ್ಲಿನ ಜನರ, ವಾಹನಗಳ, ಇಕ್ಕೆಲಗಳ ಹಸುರಿನ ಉಸಿರಿನಂಥಾ ಹೆಣ್ಣುಗಳು. ಬಣ್ಣಬಣ್ಣದ ಸೀರೆಗಳುಟ್ಟು ಸೈಕಲ್ ತುಳಿಯುತ್ತಾ ಕಾಲನಿಗೆ ಸೆಡ್ಡು ಹೊಡೆವ ಜೀವಧಾತುಗಳಂತೆ ಕಾಣುತ್ತಾರೆ. ತುಂಬಾ ಹೊತ್ತು ಅವರುಗಳನ್ನೇ ನೋಡುತ್ತಾ ಒಂದೆಡೆ ನಿಂತುಬಿಟ್ಟಿದ್ದೆ. ಎಷ್ಟೊಂದು ಫೋಟೊಗಳನ್ನು ತೆಗೆದುಕೊಂಡೆ. ದೇಮಾಜಿ ಅಸ್ಸಾಂ ರಾಜ್ಯದ ತಾಲೂಕು. ಅಲ್ಲಿಂದ ತುಸುವೇ ದೂರದಲ್ಲಿ ಇದೆ ಲಿಕಾಬಲಿ ಎನ್ನುವ ತಾಲುಕು, ಅರುಣಾಚಲ ಪ್ರದೇಶದ ಪಶ್ಚಿಮ ಸಿಯಾಂಗ್ ಜಿಲ್ಲೆಗೆ ಸೇರಿದ್ದು. ಇಲ್ಲೊಂದು ಅಪೂರ್ವ ಸ್ಥಳವಿದೆ. ಅದರ ಕಥೆಯನ್ನು ಕೇಳಿದರೇ ಪ್ರೇಮಿಗಳಲ್ಲಿ "ವಾಹ್, ಎಷ್ಟೊಂದು ರೋಮ್ಯಾಂಟಿಕ್"

ಅನಿಸದೆ ಇರದು. ಪ್ರಶಾಂತವಾದ, ಅನುಪಮ ಹಸಿರು ರಾಶಿಯ ನಡುವೆ ಮುದದ ಮುದ್ದೆಯಂತೆ ತಣಿವು ನೀಡುತ್ತಾ ನಿಂತಿರುವ ಜಾಗ ಮಾಲಿನಿ ತಾನ್. ಪಾರ್ವತಿ ರುಕ್ಮಿಣಿಯರ ಸಂಗಮವಾದ ತಾಣ.

ಇಟಾನಗರದಿಂದ ಸುಮಾರು 330 ಕಿಲೋಮೀಟರ್ಗಳ ದೂರದಲ್ಲಿರುವ ಮಾಲಿನಿ ತಾನ್ ಎನ್ನುವ ಸ್ಥಳದಲ್ಲಿ ಪಾರ್ವತಿ ಮತ್ತು ರುಕ್ಮಿಣಿಯರ ದೇವಸ್ಥಾನಗಳಿವೆ. ಪುರಾತತ್ವ ಇಲಾಖೆಯ ಸಂಗ್ರಹಾಲಯವೂ ಇದೆ. ಅಲ್ಲಿಂದ 162 ಕಿಲೋಮೀಟರ್ಗಳ ದೂರದಲ್ಲಿ ಇರುವ ದಿಬಾಂಗ್ ವ್ಯಾಲಿ ಎನ್ನುವ ಜಿಲ್ಲೆಯಲ್ಲಿ ಭೀಷ್ಮಕನಗರ ಎನ್ನುವ ಅರೆಪಟ್ಟಣವೊಂದಿದೆ. ಈ ದಿನಗಳಲ್ಲಿ ಆ ಜಾಗ ಇದು ಮಿಶಿಮಿ ಎನ್ನುವ ಪರಿಶಿಷ್ಟ ಪಂಗಡದ ಪವಿತ್ರ ತಾಣ ಎನಿಸಿದೆ. ಅಲ್ಲೊಂದು 10 ಚದರ ಕಿಲೋಮೀಟರ್ಗಳ ಅಳತೆಯ ಕೋಟೆಯಿದೆ. ಅದನ್ನೀಗ ಪಾರಂಪರಿಕ ಆಸ್ತಿಯೆಂದು ಗುರುತಿಸಲಾಗಿದೆ. ಹಸಿರು ಸೌಂದರ್ಯದ ವೈವಿಧ್ಯಮಯ ಜೀವರಾಶಿಯಿಂದ ಸುತ್ತುವರೆದಿರುವ ಈ ಕೋಟೆಯನ್ನು 8 ನೆಯ ಶತಮಾನದಲ್ಲಿ ಕಟ್ಟಿರಬಹುದೆಂಬ ಅಂದಾಜು ಮಾಡಲಾಗಿದೆ. ಐತಿಹ್ಯದ ಪ್ರಕಾರ ಇದು ಕೃಷ್ಣನ ಪತ್ನಿ ರುಕ್ಮಿಣಿಯ ತಂದೆ ಭೀಷ್ಮಕ ಮಹಾರಾಜನ ಊರು ಮತ್ತು ಇದು ಆತನ ಅರಮನೆಯಾಗಿತ್ತು ಎನ್ನಲಾಗುತ್ತೆ. ಬೌದ್ಧ ಧರ್ಮದ ಉದಯದ ನಂತರ ಅಲ್ಲಿ ಸ್ತೂಪಗಳನ್ನೂ ನಿರ್ಮಿಸಲಾಗಿದೆ. ಹೀಗಿರುವ ಭೀಷ್ಮಕ ನಗರದಿಂದ ಸುಂದರಾಂಗ ಕೃಷ್ಣನು ಪ್ರಿಯತಮೆ ರುಕ್ಮಿಣಿಯನ್ನು ವಿವಾಹವಾಗಲೋಸುಗ ರಥದಲ್ಲಿ ದ್ವಾರಕೆಯೆಡೆಗೆ ಹಾರಿಸಿಕೊಂಡು ಬರುತ್ತಿರುವಾಗ ಈ ಮಾಲಿನಿ ತಾನ್ ಎನ್ನುವ ಊರಿನಲ್ಲಿ ಪಾರ್ವತಿ ದೇವಿ ಎದುರಾಗುತ್ತಾಳೆ. ಆ ದಿನ ಅಲ್ಲಿಯೇ ಇದ್ದು ತನ್ನ ಆತಿಥ್ಯ ಸ್ವೀಕರಿಸಿ ಹೋಗಬೇಕು ಎನ್ನುವ ಪಾರ್ವತಿಯ ಮನವಿಗೆ ಮನ್ನಣೆಯಿತ್ತು ಕೃಷ್ಣ ರುಕ್ಮಿಣಿಯರು ಅಲ್ಲಿ ತಂಗುತ್ತಾರೆ. ಹೊರಡುವ ಸಮಯದಲ್ಲಿ ಪಾರ್ವತಿ ಅವರಿಬ್ಬರಿಗೂ ಪುಷ್ಪಮಾಲೆ ಹಾಕುವುದರ ಮೂಲಕ ಸತ್ಕರಿಸುತ್ತಾಳೆ. ಸಂತಸಗೊಂಡ ಕೃಷ್ಣನು ಪಾರ್ವತಿಯನ್ನು "ಸುಚಾರು ಮಾಲಿನಿ" (ಹೂಮಾಲೆಯ ಒಡತಿ) ಎನ್ನುತ್ತಾನೆ. ಅಂದಿನಿಂದ ಪಾರ್ವತಿಯನ್ನು ಇಲ್ಲಿ ಮಾಲಿನಿ (ಹೂವಾಡಗಿತ್ತಿ) ಎನ್ನುವ ಹೆಸರಿನಲ್ಲಿ ಪೂಜಿಸಲಾಗುತ್ತಿದೆ.

ನೂರಿಪ್ಪತ್ತು ಮೆಟ್ಟಲುಗಳನ್ನು ಹತ್ತಿಕೊಂಡು ಹೋದರೆ ಒಡಿಶಾ ಶೈಲಿಯಲ್ಲಿ ಕಟ್ಟಿರುವ ಮುಖ್ಯ ದೇವಸ್ಥಾನ ಸಿಗುತ್ತೆ. ಅದರೊಳಗೆ ಪಾರ್ವತಿಯ ಸುಂದರ ಮೂರ್ತಿ. ಅಲ್ಲಿಂದ ಒಂದಿಪ್ಪತ್ತು ಹೆಜ್ಜೆ ಮೇಲ್ಮುಖವಾಗಿ ನಡೆದುಹೋದರೆ ಬಿಳಿಶಿಲೆಯ ರುಕ್ಮಿಣಿಯ ಮೂರ್ತಿ ಇರುವ ದೇವಸ್ಥಾನವೂ ಇದೆ. ಇಬ್ಬರಿಗೂ ನಿತ್ಯ ಪೂಜೆ ನಡೆಯುತ್ತೆ. ಹಬ್ಬಗಳಲ್ಲಿ ನೂರಾರು ಜನ ಮಹಿಳಾ ಭಕ್ತಾದಿಗಳು ಬರುತ್ತಾರೆ. ಅಲ್ಲಿಯೇ ಇರುವ ಪುರಾತತ್ವ ಸಂಗ್ರಹಾಲಯದಲ್ಲಿ 8 ರಿಂದ 15 ನೆಯ ಶತಮಾನಗಳವರೆಗಿನ ಭೀಷ್ಮಕನ ಅರಮನೆಯ ಪಳಯುಳಿಕೆಗಳು, ಕಲ್ಲಿನ ಮೇಲೆ ಕೆತ್ತಲಾಗಿರುವ ಪ್ರಾಣಿ, ಪಕ್ಷಿ ಹೂವಿನ ಚಿತ್ತಾರಗಳು, ದೇವ ದೇವತೆಗಳ ಬಿನ್ನಾಣ ಸೂಸುವ ಕೆತ್ತನೆಗಳು, ಐರಾವತದ ಮೇಲೆ ಆಸೀನನಾಗಿರುವ ಇಂದ್ರ, ರಥದಲ್ಲಿನ ಸೂರ್ಯ, ಬೃಹದಾಕಾರದ ನಂದಿಯ ವಿಗ್ರಹಗಳು, ಇನ್ನಿತರ ಶಿಲ್ಪಕಲಾ ಕೃತಿಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಅಧ್ಯಯನದ ಉದ್ದೇಶದಿಂದ ಹೋಗುವ ಯಾತ್ರಿಗಳಿಗೆ ಬಿಟ್ಟು ಮತ್ತ್ಯಾರಿಗೂ ಈ ವಿಷಯದಲ್ಲಿ ಆಸಕ್ತಿ ಇದ್ದಂತೆ ಇಲ್ಲ. ಅಲ್ಲಿನ ಕ್ಯೂರೇಟರ್ ಶಂಕರ್ ಅವರೇ ಹೇಳುವಂತೆ ಅಲ್ಲಿನ ವಸ್ತುಗಳೆಲ್ಲಾ ಧೂಳಿನಿಂದ ಮುಚ್ಚಿಹೋಗಿವೆ. ಹೆಚ್ಚಿನ ಅಧ್ಯಯನ ಮತ್ತು ಉತ್ಖನನ ನಡೆದರೆ ಇನ್ನೂ ಹೆಚ್ಚಿನ ಇತಿಹಾಸ ಮತ್ತು ಪುರಾಣಗಳು ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ.

**ಆಕಾಶಿಗಂಗಾ**: ಈ ಮಾಲಿನಿ ತಾನ್‌ನಿಂದ 12 ಕಿಲೋಮೀಟರ್‌ಗಳ ದೂರದಲ್ಲಿ 'ಆಕಾಶಿಗಂಗ' ಎನ್ನುವ ಕೊಳವಿದೆ. ಕಾಳಿಕಾಪುರಾಣದ ಪ್ರಕಾರ ಸತಿ ಹೋದ ಪಾರ್ವತಿಯ ದೇಹವನ್ನು ಶಿವ ಹೊತ್ತು ಊರೂರು ಅಲೆಯುತ್ತಿದ್ದಾಗ ಅವಳ ಒಂದು ಅಂಗದ ಒಂದು ಅಂಶ ಇಲ್ಲಿಯೂ ಬಿದ್ದಿದೆ ಎನ್ನುವ ನಂಬಿಕೆ. ಅದಕ್ಕೇ ಈ ಕೊಳದಲ್ಲಿ ಭಕ್ತರು ಸ್ನಾನ ಮಾಡುತ್ತಾರೆ. ಧೂಳು, ಕಂದು ಕೊಚ್ಚೆಯಿಂದ ಆವೃತವಾಗಿದ್ದ ಆಕಾಶಿಗಂಗ ಕೊಳದಲ್ಲಿ ನಾನಂತೂ ಸ್ನಾನವಿರಲಿ, ನೀರನ್ನು ಮುಟ್ಟುವ ಧೈರ್ಯವನ್ನೂ ಮಾಡಲಿಲ್ಲ. ಸರ್ಕಾರದ ಕಡೆಯಿಂದ ಇಲ್ಲಿ ಯಾವುದೇ ಬಗೆಯ ಅನುಕೂಲವಾಗಲಿ ಇಲ್ಲ. ಬಹುಶಃ ಸರ್ಕಾರದ ಗಮನವೇ ಈ ಜಾಗದ ಬಗ್ಗೆ ಇಲ್ಲ ಅನ್ನಿಸುತ್ತೆ.



**ಮಾಲಿನಿತಾನ್‌ನಲ್ಲಿರುವ ವಾಸ್ತು ಶೈಲಿ**

ಪ್ರಯಾಣವಂತೂ ಸುಖಕರವಾಗಿತ್ತು. ಅಸ್ಸಾಂನ ರಸ್ತೆಗಳು ನುಣುಪಾಗಿದ್ದವು. ಸೂರ್ಯ ಹದವಾಗಿದ್ದ. ಹಸಿರು ನಗುತ್ತಿತ್ತು. ಸೀರೆಧಾರಿಯರು ನನ್ನಿಷ್ಟದ ಸೈಕಲ್ ತುಳಯುತ್ತಿದ್ದರು. ಮಾಲಿನ ತಾನ್‌ನ ಬೆಟ್ಟದ ತಪ್ಪಲಲ್ಲಿ ನಿಂತಾಗ ಸುಂದರ ಸ್ತ್ರೀಯರು ಮೆಟ್ಟಲುಗಳನ್ನು ಹತ್ತಿ ಇಳಿಯುತ್ತಿದ್ದರು. ಅರುಣಾಚಲ ಪ್ರದೇಶವಾಸಿಗಳಿಗಿಂತ ಮಾಲಿನಿಗೆ ಅಸ್ಸಾಂನ ಜನಗಳೆ ಹೆಚ್ಚು ಭಕ್ತರು. ಒಂದೇ ಗೋಡೆಯ ಆಚೀಚೆ ಜನಗಳಾದರು ಇವರ ಅಳತೆ ಆಕಾರ, ಬಾಗು, ವಕ್ರ ತಿರುವುಗಳಲ್ಲಿ ಸಾಮ್ಯತೆಯೇ ಇಲ್ಲದ ಅಂತರ. ಅಸ್ಸಾಂನ ಹೆಂಗಸರು ಇಷ್ಟೊಂದು ಸುಂದರಿಯರು ಎನ್ನುವ ಅನುಭವ ಮೊದಲ ಬಾರಿಗೆ ಆಯ್ತು. ಮೇಖಲ ಎನ್ನುವ ಎರಡು ತುಂಡುಗಳ(ದಕ್ಷಿಣದಲ್ಲಿ ಇರುವ ಲಂಗ ದಾವಣಿಯಂತಹ ಉಡುಪು) ಸೀರೆಯನ್ನುಟ್ಟ ಹೆಂಗಸರು ಮತ್ತೊಮ್ಮೆ ತಿರುಗಿ ನೋಡೋಣ ಎನ್ನಿಸುವಷ್ಟು ಸುಂದರಿಯರಿದ್ದಾರೆ. ಅವರ ಬಿಗಿ ಮೈಕಟ್ಟು ಮತ್ತು ಫಳಫಳ ಹೊಳೆಯುವ ತ್ವಚೆಯ ಮೇಲೆ ನನ್ನ ಗಮನ ಹೋಗದೆಯೇ ಇರಲು ಸಾಧ್ಯವಿರಲಿಲ್ಲ. ಯಾವುದೇ ಮುಜುಗರವಿಲ್ಲದೆ ಕ್ಯಾಮೆರಾಕ್ಕೆ ಪೋಸು ಕೊಡುತ್ತಿದ್ದರು. ಪ್ರೀತಿಯಿಂದ ಪ್ರಸಾದವನ್ನು ಕೈಯೊಳಗೆ ಇಡುತ್ತಿದ್ದರು. ದೇವಸ್ಥಾನದ ಒಳಗೆ ನೇಪಾಳ ಸಂಸಾರವೊಂದನ್ನು ಕಂಡೆ. ತಂದೆಗೆ ಅನಾರೋಗ್ಯವಿದ್ದುದ್ದರಿಂದ ಇಲ್ಲ ಬಂದರೆ ವಾಸಿಯಾಗುವ

ನಂಬಿಕೆಯಿಂದ ಅಣ್ಣ ತಮ್ಮಂದಿರಿಬ್ಬರು ನೇಪಾಳದ ಹಳ್ಳಿಯೊಂದರಿಂದ ತಂದೆಯನ್ನು ಕರೆದುಕೊಂಡು ಬಂದಿದ್ದರು. ಕುಳಿತುಕೊಳ್ಳಲೂ ಆಗದಷ್ಟು ನಿತ್ರಾಣಗೊಂಡಿದ್ದ ಅಪ್ಪನನ್ನು ಶ್ರವಣಕುಮಾರನಂತೆ ಹೊತ್ತು ತಿರುಗಿಸುತ್ತಿದ್ದರು. ಮೂರ್ತ ರೂಪದ ದೇವರಿಗಿಂತ ಮನುಷ್ಯನಿಗೆ ಆ ದೇವರಲ್ಲಿ ಇರುವ ನಂಬಿಕೆ ಮತ್ತು ಶ್ರದ್ಧೆ ನನ್ನನ್ನು ಆರ್ದ್ರಗೊಳಸುತ್ತೆ. ಹೆಚ್ಚು ಮನುಷ್ಯಳನ್ನಾಗಿ ಮಾಡುತ್ತದೆ. "ಅವರ ನಂಬಿಕೆಗೆ ಎರಡು ಬಗೆಯಬೇಡವೇ ಮಾಲಿನಿ" ಎಂದು ಪ್ರಾರ್ಥಿಸುತ್ತಾ ಒಂದಷ್ಟು ಮೈಸೂರು ಸ್ಯಾಂಡಲ್ ಅಗರ ಬತ್ತಿಯನ್ನು ಹಚ್ಚುತ್ತಿದ್ದೆ. ಅಷ್ಟರಲ್ಲಿ "ದೀದಿ. . .ದೀದಿ. . ." ಎನ್ನುತ್ತಾ ಅಲ್ಲೆಲ್ಲೋ ದೂರದಲ್ಲಿ ರಂಜು ಕೂಗುತ್ತಿದ್ದ. ಏನಾಗಿರಬಹುದು ಎನ್ನುವ ಕುತೂಹಲದಲ್ಲೇ ಹೊರಗೆ ಬಂದು ಏನೆಂದು ಕೇಳಿದೆ. "ದೀದಿ ಪಂಡಿತ್‌ಜಿಯಿಂದ ನಾಲ್ಕು ರಕ್ಷಾದಾರಗಳನ್ನು ಪೂಜೆ ಮಾಡಿಸಿಕೊಂಡು ತನ್ನಿ" ಎಂದ ಅವನು. "ನೀನೂ ಒಳಗೆ ಬಾ" ಎಂದೆ ನಾನು. "ಓಹ್, ನಾನು ಕ್ರಿಶ್ಚಿಯನ್ ಅಲ್ವಾ ಅದಕ್ಕೆ ಒಳಗೆ ಬರೋಲ್ಲ. ನೀವೇ ಪೂಜೆ ಮಾಡಿಸಿಕೊಂಡು ತನ್ನಿ" ಎಂದ ರಂಜು ಮತ್ತೆ ಕೆಳಗೆ ಹೋಗಿಬಿಟ್ಟ. ಪೂಜೆಯನ್ನೆಲ್ಲಾ ಮುಗಿಸಿಕೊಂಡು ಅವನಿಗಾಗಿ ಕಂಕಣವನ್ನೂ ತೆಗೆದುಕೊಂಡು, ಅವರಿವರ ಬಳಿ ಮಾತು ಮುಗಿಸಿ ಗಾಡಿಯ ಬಳಿಬಂದು ಅವನಿಗೆ ಪ್ರಸಾದವನ್ನು ಕೊಟ್ಟೆ. ಹೊಟ್ಟೆ ಕೂಗುತ್ತಿತ್ತು. ಉಪವಾಸದಿಂದ ಅದರ ಬೇಸರ ನೆತ್ತಿ ಮುಟ್ಟುತ್ತಿತ್ತು. ಆದರೇನು ಮಾಡೋದು ? ತಿನ್ನಲು ಏನೂ ಇಲ್ಲ ಸಿಗುವುದೂ ಇಲ್ಲ. ಪಕ್ಕದಲ್ಲೇ ಇದ್ದ ಬುಟ್ಟಿಯಲ್ಲಿ ಕಿತ್ತಳೆ ಹಣ್ಣುಗಳು "ಇನ್ನೂ ಎಷ್ಟು ದಿನ ನಮ್ಮನ್ನೇ ತಿನ್ನುತ್ತೀಯೇ ಕನ್ನಡತಿ?" ಎನ್ನುತ್ತಾ ನನ್ನ ಮುಖವನ್ನೇ ನೋಡುತ್ತಿರುವಂತೆ ಎನ್ನಿಸಿತು. ಒಂದೊಂದೇ ತೊಳೆ ಬಿಡಿಸುತ್ತಾ, ಮುದ್ದು ಮಾಡುತ್ತಾ ತಿನ್ನುತ್ತಾ ತಣಿದುಕೊಳ್ಳುತ್ತಿದ್ದೆ. ಹೂಂ, ಮುಂದೇನು? ಗೇರ್ ಬದಲಾಯಿಸುತ್ತಿದ್ದ ರಂಜುವನ್ನು ಕೇಳಿದೆ "ನೀನು ದೇವಸ್ಥಾನದೊಳಗೆ ಬರೋಲ್ಲ ಕ್ರಿಶ್ಚಿಯನ್ ಅನ್ನುತ್ತೀಯ. ಮತ್ತೆ ಈ ರಕ್ಷಾದಾರಗಳನ್ನು ಏನು ಮಾಡುತ್ತೀಯಾ" ಎಂದು. "ದೀದಿ ನನ್ನ ಹಿಂದೂ ಗೆಳೆಯನ ತಂಗಿಗೆ ಬೇಕಂತೆ ಅದಕ್ಕೆ ತೆಗೆದುಕೊಂಡೆ. ಅವಳು ನನ್ನ ಕೈಗೂ ಕಟ್ಟಿಕೊಳ್ಳಲು ಹೇಳಿದ್ದಾಳೆ" ಎಂದು ರಾಗ ಎಳೆಯುತ್ತಾ ಕಳ್ಳ ನಗುನಕ್ಕ. ನನ್ನೊಳಗೂ ಒಂದು ನಿರ್ಮಲ ನಗು ಹಾದು ಹೋಯ್ತು. ಕಿಟಕಿ ಗಾಜಿನಿಂದ ಹಿಂದಿರುಗಿ ಬೆಟ್ಟದ ಮೇಲೆ ನೋಡಿದೆ. ಕೃಷ್ಣ ರುಕ್ಮಿಣಿಯರು ಮದುವೆ ಮಾಡಿಕೊಳ್ಳಲು ಓಡಿ

ಹೋಗುತ್ತಿರುವುದು ಕಂಡಂತೆನಿಸಿತು. ಮಾಲಿನಿಯ ಕೈಯಲ್ಲಿದ್ದ ಹೂಮಾಲೆಯ ಘಮ ನನ್ನ ಧ್ವನಿಗೆ ಹತ್ತಿಕೊಂಡಂತೆ ಆಯಿತು. ಮೇಲಿನ ಮಾಲಿನಿಗೆ ಮತ್ತೊಮ್ಮೆ ಮನದಲ್ಲೇ ನಮಿಸುತ್ತಾ "ಪ್ರೀತಿಗೆ ಎಲ್ಲೆ ಎಲ್ಲಿದೆ ನಲ್ಲೆ...." ಎಂದು ಹಾಡಿಕೊಳ್ಳುತ್ತಿದ್ದೆ. ಕೃಷ್ಣ ಪ್ರೀತಿಯಲ್ಲಿ ಚಕ್ರಗಳು ಮುಂದಿನೂರಿನ ದಾರಿ ಹಿಡಿದವು.

- ಮಾಲಿನಿ ತಾನ್, ಪಶ್ಚಿಮಸಿಯಾಂಗ್ ಜಿಲ್ಲೆ, ಅರುಣಾಚಲಪ್ರದೇಶ
- ಇಟಾನಗರದಿಂದ ಅಸ್ಸಾಂನ ಲಖೀಂಪುರ, ದೇಮಾಜಿ ಮತ್ತು ಲಿಕಾಬಲಿಯ ಮೂಲಕ ತಲುಪಲು ೩೩೦ ಕಿಲೋಮೀಟರ್‌ಗಳಷ್ಟು ದೂರವಾಗುತ್ತದೆ. ೬ ರಿಂದ ೮ ಗಂಟೆಗಳ ಕಾಲ ರಸ್ತೆಪ್ರಯಾಣ.
- ಅಸ್ಸಾಂನ ದೇಮಾಜಿ ತಾಲೂಕಿನಲ್ಲಿ ಮಧ್ಯಮ ದರ್ಜೆಯ ಲಾಡ್ಜ್‌ಗಳಲ್ಲಿ ರಾತ್ರಿ ಉಳಿದುಕೊಳ್ಳಬಹುದು.
- ಮಾಲಿನಿ ತಾನ್‌ನ ಸುತ್ತಮುತ್ತಾ ಕುಡಿಯುವ ನೀರಾಗಲೀ, ತಿಂಡಿ ತಿನಿಸುಗಳಾಗಲೀ ಸಿಗುವುದಿಲ್ಲ. ನೋಡಲುಬೇಕಾದ ಸಮಯ ೨ ರಿಂದ ೩ ಗಂಟೆಗಳು.

* * * * *

## 11. ದೇಮಾಜಿಯಲ್ಲಿ ಸಮಾಧಿಯಾದವರು

ಜೀರೋ ಪರ್ವತ ಶ್ರೇಣಿಯಿಂದ ಇಳಿದು 150 ಕಿಲೋಮೀಟರ್ಗಳಷ್ಟು ನೇರ ರಸ್ತೆಯಲ್ಲಿ ಪ್ರಯಾಣ ಮುಗಿಸಿ ಅಸ್ಸಾಮಿನ ಲಖೀಂಪುರ ಜಿಲ್ಲೆ ಸೇರಿಯಾಗಿತ್ತು. ಸಂಜೆ 5 ಗಂಟೆಯ ಹತ್ತಿರದ ಹೊತ್ತು. ಸೂರ್ಯ ಮುಳುಗುವುದರಲ್ಲಿದ್ದ. ಅಲ್ಲೆಲ್ಲಾ ಸಂಜೆ 5 ಗಂಟೆಯ ನಂತರ ಹೆಚ್ಚು ವಾಹನಗಳು ಓಡಾಡುವುದಿಲ್ಲ. ಆವರೆಲ್ಲರೂ ಮನೆಗಳನ್ನೋ, ತಂಗುದಾಣವನ್ನೋ ಸೇರಿ ಬಿಡುತ್ತಾರೆ. ಅಪ್ಪಿತಪ್ಪಿಯೂ ರಸ್ತೆಗಳಲ್ಲಿ ಹೆಂಗಸರ ಸುಳಿವು ಇರೋದಿಲ್ಲ. ಸಂಜೆ 5 ರಿಂದ 7 ಗಂಟೆಯ ವರೆಗಿನ ಸಮಯವನ್ನು ಅಪಾಯದ ಸಮಯ ಎಂದೇ ಗುರುತಿಸಲಾಗಿದೆ. ಉಲ್ಫ, ಅಲ್ಫ ಗುಂಪುಗಳ, ಬೋಡೋ ಜನರ ಭಯೋತ್ಪಾದಕ ಚಟುವಟಿಕೆಗಳಿಗೆ ಆ ಸಮಯ ಮೀಸಲು. ಅದಕ್ಕೇ ಇಡೀ ವಾತಾವರಣದಲ್ಲೇ ಆತಂಕ ಉಸಿರಾಡುತ್ತಿರುತ್ತದೆ. ಮಿಲಿಟರಿ ಪಡೆಯ ಅಧಿಕಾರಿಗಳು, ಪೋಲೀಸರು ಬಿಟ್ಟರೆ ರಸ್ತೆಗಳಲ್ಲಿ ಮತ್ತ್ಯಾವ ವ್ಯವಹಾರವೂ ಇರುವುದಿಲ್ಲ. ಇನ್ನೂ 250 ಕಿಲೋಮೀಟರ್ಗಳ ಪ್ರಯಾಣ ಬಾಕಿ ಇತ್ತು. ಪೂರ್ತಿ ಅಲ್ಲದಿದ್ದರೂ ಇನ್ನೊಂದು ನೂರು ಕಿಲೋಮೀಟರ್ಗಳು ಮುಂದೆ ಹೋಗಬೇಕೆನ್ನುವ ಇರಾದೆ ಮತ್ತು ಧೈರ್ಯ ನನಗಿದ್ದರೂ ಚಾಲಕ ಲಖೀಂಪುರದಲ್ಲೇ ರಾತ್ರಿ ತಂಗಿ ಬಿಡುವ ಸಲಹೆ ನೀಡುತ್ತಿದ್ದ. ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡೆ. ಅಷ್ಟರಲ್ಲಿ ಚಾಲಕ ಆತಂಕ, ಭಯದಲ್ಲಿ ಗಮನಿಸದೆ ಒಂದು ಕ್ಷಣದ ಸಿಗ್ನಲ್ಸ್ ಹಾರಿ ಬಿಟ್ಟ. ತಕ್ಷಣವೇ ಪೋಲೀಸರು ಅವನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ 3,000 ರೂಪಾಯಿಗಳ ದಂಡ ವಿಧಿಸಿಯೇ ಬಿಟ್ಟರು. ಇವನ ಗಂಟಲು ಒಣಗಿ ಹೋಯ್ತು. ಬೆವರುತ್ತಾ ನಡುಗುತ್ತಿದ್ದ. ಕೊನೆಗೆ ನಾನೇ ಹೋಗಿ ಪೋಲೀಸರೊಂದಿಗೆ ರಾಜಿ ಸಂಧಾನ ಮಾಡಿದ ನಂತರ 500 ರೂಪಾಯಿಗಳ ದಂಡಕ್ಕೆ ಒಪ್ಪಂದವಾಗಿ ನಿರಾಳವಾಯಿತು ವಾತಾವರಣ. ನಿಜ, ಕಾನೂನಿನ ಅವಗಣನೆಗೆ ಕ್ಷಮೆಯಿಲ್ಲ. ಆದರೆ ಚಾಲಕ ಒಂದಷ್ಟೇ ಇಂಚಿನಷ್ಟು ಗೆರೆ ದಾಟಿದ್ದ. ತತ್ಕ್ಷಣವೇ ಬ್ರೇಕ್ ಹಾಕಿ ನಿಂತುಕೊಂಡಿದ್ದ. ಯಾವ ಅನಾಹುತವೂ ಆಗಿರಲಿಲ್ಲ. ಗಾಡಿಯ ಎಲ್ಲಾ ದಾಖಲೆಗಳು, ಅವನ ಪರವಾನಿಗೆ ಎಲ್ಲವೂ ಸುಸ್ಥಿತಿಯಲ್ಲೇ ಇದ್ದವು. ಇಂತಿಷ್ಟೇ ದಂಡ ವಿಧಿಸಬೇಕು ಎನ್ನುವ ಕಾನೂನು ಇದ್ದರೂ ಅರುಣಾಚಲ ಪ್ರದೇಶದ ನೊಂದಣಿ ಇದ್ದ ಕಾರಣ

ಅಷ್ಟೊಂದು ದೊಡ್ಡ ಮೊತ್ತದ ದಂಡ ವಿಧಿಸಲು ಪೋಲೀಸರು ಮುಂದಾಗಿದ್ದರು. ಅಸ್ಸಾಮಿನ ನೊಂದಣಿ ಇದ್ದ ಗಾಡಿಗಳಿಗೆ ಅರುಣಾಚಲ ಪ್ರದೇಶದಲ್ಲಿ ಹೀಗೇ ಮಾಡುವುದು ಎಂದು ನಂತರದ ದಿನಗಳಲ್ಲಿ ತಿಳಿದೆ. ಇಲ್ಲೂ ನೆರೆ ರಾಜ್ಯದಲ್ಲಿ ಇಂತಹ ಅನುಭವ ಇರುವುದರಿಂದ ನನಗೆ ಅದು ಹೊಸದಾಗಿ ಕಾಣಲಿಲ್ಲ. ಆದರೆ 500 ರೂಪಾಯಿ ಕಳೆದುಕೊಂಡ ಸಂಕಟದಲ್ಲಿ ಚಾಲಕ ಮತ್ತೂ ಒತ್ತಡಕ್ಕೆ ಒಳಗಾಗಿದ್ದ. ಬೆವರುತ್ತಿದ್ದ. ಆ ಗಡಿಬಿಡಿಯಲ್ಲಿ ಊರಿನ ಹೊರಭಾಗಕ್ಕೆ ಬಂದಾಗಿತ್ತು. ಕತ್ತಲಾಗಿತ್ತು. ಅಲ್ಲಿ ತಂಗಬಹುದಾದ ಯಾವ ಜಾಗವೂ ಕಾಣುತ್ತಿರಲಿಲ್ಲ. 120 ಕಿಲೋಮೀಟರ್‌ಗಳ ದೂರದಲ್ಲಿ ಮುಂದಿನ ಜಿಲ್ಲೆ ದೇಮಾಜಿ ಎನ್ನುತ್ತಿತ್ತು ಮೈಲಿಗಲ್ಲು. ರಸ್ತೆ ಚೆನ್ನಾಗಿದ್ದುದ್ದರಿಂದ ಚಾಲಕನಿಗೆ ಧೈರ್ಯ ತುಂಬುತ್ತಿದ್ದೆ. ಕುಶಲೋಪರಿ ಮಾತನಾಡುತ್ತಾ ದಾರಿ ಸವೆಸುತ್ತಿದ್ದೆವು. ಮುಂದಿನೂರಿಗೆ ಹತ್ತಿರವಾಗುತ್ತಿದ್ದೆವು. ಅಂತೂ 8 ಗಂಟೆಯ ವೇಳೆಗೆ ದೇಮಾಜಿ ಜಿಲ್ಲೆಯ ಮುಖ್ಯ ರಸ್ತೆ ತಲುಪಿದ್ದೆವು. ಎಡಗಡೆಗೆ ಮೊದಲು ಕಂಡದ್ದು ಹೋಟೆಲ್ ದೇಮಾಜಿ ಎನ್ನುವ ಬೋರ್ಡು. ಎರಡನೆ ಯೋಚನೆಯೇ ಇಲ್ಲದೆ ಅಲ್ಲಿಗೆ ಕಾರು ತಿರುಗಿಸಿದ್ದಾಯ್ತು.

ಓಣಿಯಂತಹ ಜಾಗದ ಒಂದು ಬದಿಯಲ್ಲಿ ನಾಲ್ಕು ಕೋಣೆಗಳು. ಮುಂಬಾಗಿಲಲ್ಲೆ ಚೌಕಾರಾದ ಜಾಗದಲ್ಲಿ ನಾಲು ಟೇಬಲ್ ಕುರ್ಚಿಗಳು ಮತ್ತು ಒಂದು ಮೂಲೆಯಯಲ್ಲಿ ಗಲ್ಲಾಪೆಟ್ಟಿಗೆ, ಅದರ ಹಿಂದೆ ಯುವ ಮಾಲೀಕ. ಕತ್ತಲಲ್ಲಿ ಆ ಜಾಗ ಇರಲು ಎಷ್ಟು ಯೋಗ್ಯವೋ, ಸುರಕ್ಷಿತವೋ ಒಂದು ತಿಳಿಯುತ್ತಿರಲಿಲ್ಲ. ಆದರೆ ಅನಿವಾರ್ಯತೆ ಉಳಿದುಕೊಳ್ಳಲೇಬೇಕಿತ್ತು. ಸುತ್ತಲೂ ಕಣ್ಣಾಡಿಸಿದೆ. ಹೆಂಗಸರು ಸುಳಿಯಲೂ ಭಯಪಡುವ ಸ್ಥಳದಂತೆ ಇತ್ತು. ಲಾರಿ ಚಾಲಕರ ರಾತ್ರಿ ಜರೂರತ್ತುಗಳನ್ನು ಪೂರೈಸುವ ತಂಗುದಾಣವಾಗಿತ್ತು ಅದು. ತಗಡಿನ ಚಾವಣಿಯಿದ್ದ, ಒಂಟಿ ಕುಂಟು ಮಂಚವಿದ್ದ, ಬಾಗಿಲಿನ ಚಿಲಕ ಅಲ್ಲಾಡುತ್ತಿದ್ದ, ಇಲ್ಲಣಗಳಲ್ಲೇ ದೈತ್ಯ ಜೇಡಗಳು ನೇತಾಡುತ್ತಿದ್ದ ಕೋಣೆಯದು. ಅದಕ್ಕೇ ಸೇರಿಕೊಂಡಿದ್ದ, ನಲ್ಲಿಯಿಲ್ಲದ ಬಚ್ಚಲುಮನೆ. ಚಿಕ್ಕ ಹುಡುಗನೊಬ್ಬ ಬಂದು ಲಗೇಜ್ ಒಳಗಿಟ್ಟು ಊಟ ಏನು ಬೇಕು ಎಂದು ಕೇಳಿದ. ಅಲ್ಲಿ ಏನು ಮಹಾ ತಾನೆ ಸಿಕ್ಕೀತು ಎನ್ನುವ ಧೋರಣೆಯಲ್ಲಿ ಒಂದು ರೋಟಿ ದಾಲ್ ಸಿಕ್ಕರೆ ಸಾಕಪ್ಪ ಅಂದೆ. ಅವನು ಒಳ ಹೋದ. ಮೂರು ದಿನಗಳಿಂದ ಚಾಲಕ

ರಂಜುವಿನೊಡನೆ ವಿಶ್ವಾಸಾರ್ಹ ಸಂಬಂಧ ಬೆಳೆದುಬಿಟ್ಟಿತ್ತು. ಆತ ವಿಪರೀತ ಒಳ್ಳೆಯವನಾಗಿದ್ದ. ಅಲ್ಲಿ ಇರಲು ಅವನಿಗೆ ಜಾಗದ ತೊಂದರೆಯಾದರೆ ನನ್ನ ಕೋಣೆಯಲ್ಲೇ ಮಲಗಲು ಹೇಳಿದೆ. ಅದಕ್ಕವನು "ದೀದಿ ನೀವು ಚಿಲಕ ಹಾಕಿಕೊಂಡು ಮಲಗಿ. ನಾನು ಬಾಗಿಲಲ್ಲೇ ಇರುತ್ತೇನೆ" ಎಂದ. ಕತ್ತಲಲ್ಲಿ ರಸ್ತೆಯಲ್ಲಿರಲು ಹೆದರುತ್ತಿದ್ದವನು ಈಗ ಒಡಹುಟ್ಟಿದವನಂತೆ ನನ್ನ ರಕ್ಷಣೆಗೆ ನಿಂತಿದ್ದ. ಬಹುಶಃ ಭಾರತೀಯ ಮೌಲ್ಯಗಳು ಎಂದು ಭಾರೀ ಸದ್ದು ಮಾಡುತ್ತೇವಲ್ಲ ಅದು ಈ ಸ್ವಭಾವವೇ ಇರಬೇಕು ಅನ್ನಿಸಿ, ಆ ಹುಡುಗನ ಮೇಲೆ ಗೌರವ ಬಂತು. ಅರ್ಧ ಗಂಟೆಯಲ್ಲಿ ಅನ್ನ, ದಾಲ್, ನಾಲ್ಕಾರು ತರಹದ ಪಲ್ಯೆ, ಕುಡಿಯುವ ನೀರು ಎಲ್ಲವನ್ನೂ ತಂದಿಟ್ಟ ಆ ಚಿಕ್ಕ ಹುಡುಗ. ಆದರೂ ಏನೂ ತಿನ್ನಲಾಗಲಿಲ್ಲ. ಶೂಸ್ ಕೂಡ ಬಿಚ್ಚದೆ, ದೀಪ ಹಾಕಿಕೊಂಡೇ ಅಂತೂ ಮಲಗಿದೆ. ನಿದ್ದೆಯು ಎಂದೂ ಆಜ್ಞಾಕಾರಿ ತಾನೆ. ರಾತ್ರಿಯಿಡೀ ನಿತ್ಯ ಜೀವನದ ಊಟದ ಜರೂರತ್ತಿಗೇ ಮೈ ಮಾರಿಕೊಳ್ಳುವ ಹೆಣ್ಣುಗಳ ಬಗ್ಗೆ ಮನಸ್ಸು ಮಿಡಿಯುತ್ತಿತ್ತು. ಬೆಳಗು ಹರಿದೊಡನೆ ಎದ್ದು ತಯಾರಾದೆ ಮುಂದಿನ ಊರಿಗೆ ಹೊರಡಲು.

ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿ ಅರುಣಾಚಲ ಪ್ರದೇಶದ ಸುಂದರ ವನಸಿರಿಯಿಂದ ಆವೃತವಾಗಿ, ದಕ್ಷಿಣದಲ್ಲಿ ಬ್ರಹ್ಮಪುತ್ರ ನದಿಯ ದಡವಾಗಿ, ಪಶ್ಚಿಮದಲ್ಲಿ ಲಖೀಂಪುರ ಎನ್ನುವ ಜಿಲ್ಲೆಯನ್ನು ಹೊಂದಿರುವ 3237 ಚದರ ಕಿಲೋಮೀಟರ್ ಅಳತೆಯ ಸುಂದರ ಜಿಲ್ಲೆ ದೇಮಾಜಿ. ಆರಂಭದಲ್ಲಿ ದೇಮಾಲಿ ಎನಿಸಿಕೊಂಡಿದ್ದ ನಗರ ಇಂದು ದೇಮಾಜಿಯಾಗಿದೆ. ಗೌಹಾಟಿಯಿಂದ 12 ಗಂಟೆಗಳ ದೂರದಲ್ಲಿರುವ ಈ ಊರು ಮುಂದಿನ ಊರುಗಳಿಗೆ ಹೋಗುವವರಿಗೆ ತಂಗುದಾಣ ಮಾತ್ರ. ಇದೇ ದೇಮಾಜಿಗೆ ಮಾಲಿನಿ ತಾನ್‌ನಿಂದ ಹಿಂದಿರುಗಿದ್ದೆ. ಹಿಂದಿನ ರಾತ್ರಿ ಉಳಿದುಕೊಂಡಿದ್ದ ಹೋಟೇಲಿನ ಹಿಂದಿನ ತಿರುವಿನಲ್ಲೇ ಇದೆ ದೇಮಾಜಿ ಕಾಲೇಜು. 2004ನೇ ಇಸವಿಯ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಉಲ್ಫಾ ಭಯೋತ್ಪಾದಕರು ಇಲ್ಲಿ ಬಹುದೊಡ್ಡ ಬಾಂಬ್‌ಅನ್ನು ಸ್ಫೋಟಿಸಿದ್ದರು. ಅದರ ಪರಿಣಾಮವಾಗಿ ಹದಿನೇಳು ವಿದ್ಯಾರ್ಥಿಗಳು ಮೃತಪಟ್ಟು 40 ವಿದ್ಯಾರ್ಥಿಗಳು ಗಾಯಗೊಂಡು ಆಸ್ಪತ್ರೆ ಸೇರಿದ್ದರು. ಆ ದಿನವೇ ಇದೇ ಜಿಲ್ಲೆಯಲ್ಲಿ



**ದೇಮಾಜಿ ಬಾಂಬ್ ಸ್ಫೋಟದಲ್ಲಿ ಮಡಿದ ವಿದ್ಯಾರ್ಥಿಗಳಿಗಾಗಿ ಕಟ್ಟಿರುವ ಸ್ಮಾರಕ**

ಉಲ್ಫಾದವರಿಂದ ಯೋಜನೆಯಂತೆ 3 ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸಲಾಗಿತ್ತು. ರಾಜ್ಯದ ಅಂದಿನ ಮುಖ್ಯ ಮಂತ್ರಿಗಳು ಸೂಪರಿಡೆಂಟ್ ಆಫ್ ಪೋಲಿಸ್‌ಅನ್ನು ಕೆಲಸದಿಂದ ವಜಾಗೊಳಿಸಿದ್ದರು. ಈಶಾನ್ಯ ರಾಜ್ಯಗಳಲ್ಲಿ ವಿದ್ಯಾರ್ಥಿ ಚಳುವಳಿಗೆ ರಾಜ್ಯ ರಾಜಕಾರಣದಲ್ಲಿ ಅತೀ ಮಹತ್ವದ ಸ್ಥಾನ ಇರುವುದರಿಂದ, ಸತ್ತ ಹದಿನೇಳು ವಿದ್ಯಾರ್ಥಿಗಳಿಗೆ ಕಾಲೇಜಿನ ಒಳಾವರಣದಲ್ಲಿ ಸ್ಮಾರಕ ನಿರ್ಮಿಸಲಾಗಿದೆ. ಈಗಲೂ ವಿಶೇಷ ದಿನಗಳಲ್ಲಿ ಅಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ಮುಗ್ಧ ಜನರ ಮರಣಕ್ಕೆ ಮರುಗುತ್ತಾ, ಬಾಂಬ್ ಸಂಸ್ಕೃತಿಯಡೆಗೆ ಕೊನೆಯಿಲ್ಲದ ವಿರೋಧ ತುಂಬಿಕೊಳ್ಳುತ್ತಾ ಅಲ್ಲಿಂದ ಹೊರಟೆ. ಬಲಕ್ಕೆ ತಿರುಗಿದರೆ ಇಟಾನಗರದ ದಾರಿ, ಎಡಕ್ಕೆ ಹೊರಳಿ ದೂರ ದೂರ ಸುಮಾರು 347 ಕಿಲೋಮೀಟರ್‌ಗಳಷ್ಟು ದಾರಿ ಸವೆಸಿದರೆ ಸಿಗುತ್ತಿತ್ತು ಮತ್ತೊಂದು ಹೊಸ ಜಾಗ.

* * * * *

## 12. ನಾಗದೇವ, ಭೀಷ್ಮಕ ಮತ್ತು ಪರಶುರಾಮ

**ನಾಗ ದೇವರ ದೇವಸ್ಥಾನ**: ಪಶ್ಚಿಮ ಕಮೆಂಗ್ ಜಿಲ್ಲೆಯ ತೆಂಗಾ ಎನ್ನುವ ಸ್ಥಳದಲ್ಲಿ ಹತ್ತು ಹೆಜ್ಜೆ ನಡೆದರೆ ಕಣ್ಣು ಕಾಣುವವರೆಗೂ ಹರಡಿಕೊಂಡಿರುವ ಬಾಳೆಯ ತೋಟ. ಬಲಭಾಗದಲ್ಲಿ ಒಂದು ಸಣ್ಣ ಜಲಪಾತ. ಅದರ ಎಡ ಹಿಂಭಾಗದಲ್ಲೇ ನೀರಿನ ಸದ್ದಿನ ಗುಂಟ ಇನ್ನೊಂದಷ್ಟು ಹೆಜ್ಜೆ ನಡೆದರೆ ಗುಡ್ಡದ ಮೇಲೊಂದು ನಾಲ್ಕು ಕಂಭಗಳ ಆಶ್ರಯ ಪಡೆದಂತೆ ತೋರುವ ದೊಡ್ಡ ಹಜಾರ ಅದರ ಒಳಗೊಂದು ಪುಟ್ಟ ಗರ್ಭಗುಡಿ. ಅಲ್ಲಿ ಹೆಡೆ ಬಿಚ್ಚಿದ್ದ ನಾಗರ ಮೂರ್ತಿಗಳು. ಅವುಗಳ ನೆತ್ತಿಯ ಮೇಲೆ ತಾಮ್ರದ ಕಳಶದಿಂದ ಅಭಿಷೇಕದಂತೆ ತೊಟ್ಟಿಕ್ಕುವ ನೀರು. ಮೂಲದಲ್ಲಿ ಈ ಜಾಗವು ಸರ್ಪಗಳಿಂದ ಆವೃತವಾಗಿತ್ತಂತೆ. 1960ರ ನಂತರ ತವಾಂಗ್‌ಗೆ ರಸ್ತೆ ನಿರ್ಮಾಣ ಕಾರ್ಯ ಆರಂಭವಾದ ಮೇಲೆ ಅವುಗಳ ಸ್ಥಾನ ಪಲ್ಲಟವಾಗಿ ಸರ್ಪಗಳು ಗಲಿಬಿಲಿಗೊಂಡಿದ್ದವಂತೆ. ಹೀಗಿರುವಾಗ ಒಮ್ಮೆ ಒಬ್ಬ ಕಾರ್ಮಿಕ ಒಂದು ಗಂಡು ಸರ್ಪವನ್ನು ಕೊಂದುಬಿಟ್ಟನಂತೆ. ಅಂದಿನಿಂದ ರಸ್ತೆ ಕೆಲಸಕ್ಕೆ ಅಡ್ಡಿಯುಂಟಾಗಲು ಶುರುವಾಯಿತಂತೆ. ಮಾಡಿದ ಕೆಲಸಗಳು ರಾತ್ರೋರಾತ್ರಿ ಉರುಳಿಹೋಗುವುದು, ಕೊಚ್ಚಿಹೋಗುವುದು ಹೀಗೆ ಹತ್ತಾರು ತಾಪತ್ರಯಗಳು. ಗಂಡು ಜೊತೆಗಾರನನ್ನು ಕಳೆದುಕೊಂಡ ಸಿಟ್ಟಿನಲ್ಲಿ ನಾಗಿಣಿಯು ಅಲ್ಲಿನ ಕಾರ್ಮಿಕರನೆಲ್ಲಾ ಕಚ್ಚುತ್ತಿದ್ದಳಂತೆ. ಅವಳನ್ನು ಶಮನ ಮಾಡಲು ಆ ರಸ್ತೆಯ ಕೆಲಸವನ್ನು ಕಂಟ್ರ್ಯಾಕ್ಟ್ ಮಾಡುತ್ತಿದ್ದ ಮೇಜರ್. ರಾಮಸ್ವಾಮಿ ಈ ದೇವಸ್ಥಾನವನ್ನು ನಿರ್ಮಿಸಿದರಂತೆ. ನಂತರ ಸರ್ಪಗಳ ಕಾಟವಿಲ್ಲದೆ ಕೆಲಸ ಸುಗಮವಾಗಿ ಮುಂದುವರೆಯಿತಂತೆ. ಇಂದಿಗೂ ನಾಗರ ಪಂಚಮಿ ಹಬ್ಬದಂದು ಇಲ್ಲಿ ನೂರಾರು ಭಕ್ತಾದಿಗಳು ಸೇರಿ ಪೂಜೆ ಮಾಡಿ ಜಾತ್ರೆ ನಡೆಸುತ್ತಾರಂತೆ. ತೇಜ಼್‌ಪುರ್‌ನಿಂದ 135 ಕಿಲೋಮೀಟರ್ಗಳಷ್ಟು ದೂರದಲ್ಲಿರುವ ಈ ದೇವಸ್ಥಾನ ಕಮೆಂಗ್ ನದಿ ದಡದ ಮೇಲಿದೆ.

**ಪರಶುರಾಮ ಕುಂಡ**: ಅವನದ್ದು ದಶಾವತಾರದಲ್ಲಿ ಒಂದು ಅವತಾರವೆನ್ನುವ ಐತಿಹ್ಯ. ಕ್ಷತ್ರಿಯರ ಅಹಂಕಾರವನ್ನು ಸದೆಬಡಿಯಲು ಅವತಾರವೆತ್ತಿದ್ದ ಎನ್ನಲಾದರೂ ತಾಯಿಯ ತಲೆಯನ್ನು ಕಡಿದ ಅವನ ಕಥೆಯಲ್ಲಿ ಇಷ್ಟು ವಯಸ್ಸಾದರೂ ನನಗೆ ಯಾವುದೇ ತರ್ಕ ಕಾಣದು,

ಅರ್ಥವಾಗದು. ಪರಿಣಿತರು ಏನೆಲ್ಲ ಅರ್ಥೈಸುವಿಕೆಯ ಮುಖಗಳನ್ನು ನೀಡಿದರೂ ಈಗಲೂ ಅದು ಹೆಣ್ಣಿನ ಮೇಲಿನ ದೌರ್ಜನ್ಯದ ಪರಮಾವಧಿ ಕಥೆಯಾಗಿಯೇ ಕೇಳಿಸುತ್ತದೆ. ಹೀಗೇ ಪರಶುರಾಮ ತಂದೆ ಜಮದಗ್ನಿಯ ಆಣತಿಯ ಮೇರೆಗೆ ತಾಯಿ ರೇಣುಕಾಂಬಳ ಶಿರವನ್ನು ಛೇದಿಸಿದಾಗ ಕೊಡಲಿ ಅವನ ಅಂಗೈಗೆ ಅಂಟಿಕೊಂಡು ಬಿಟ್ಟಿತಂತೆ. ಭೂಮಂಡಲವನೆಲ್ಲಾ ಸುತ್ತಿ ಸುತ್ತಿದರೂ ಕೈಗಂಟ್ಟಿದ್ದ ಆ ಕೊಡಲಿ ಕೈಯಿಂದ ಬೇರಾಗದೆ, ಬೇರೆ ದಾರಿ ಕಾಣದ, ಕೊನೆಗೊಮ್ಮೆ ಅರುಣಾಚಲ ಪ್ರದೇಶದಲ್ಲಿ ಬ್ರಹ್ಮಪುತ್ರ ನದಿ ಪಾತ್ರದಲ್ಲಿ ಹಸಿರಿನಿಂದ ಹೂವುಗಳಿಂದ ಆಚ್ಛಾದಿತವಾದ ಸ್ಥಳವೊಂದಕ್ಕೆ ಬರುತ್ತಾನಂತೆ. ಅಲ್ಲಿಯೇ ಬ್ರಹ್ಮಪುತ್ರ ನದಿಯ ಒಳಗೆ ಹುದುಗಿಹೋಗಿದ್ದ ಬ್ರಹ್ಮಕುಂಡಕ್ಕೆ ಹೊರಗೆ ಬರಲು ದಾರಿ ಮಾಡಿಕೊಟ್ಟನಂತೆ. ಆ ಬ್ರಹ್ಮಕುಂಡದಿಂದ ಹೊರ ಬಂದ ನೀರಿನಲ್ಲಿ ತನ್ನ ಕೈ ತೊಳೆದುಕೊಂಡಾಗ ಕೈಗೆ ಅಂಟಿಕೊಂಡಿದ್ದ ಕೊಡಲಿ ಬೇರಾಗಿ, ರಕ್ತದ ಕಲೆಗಳೆಲ್ಲಾ ತೊಳೆದು ಹೋದವಂತೆ. ಹೀಗೆ ಪರಶುರಾಮ ಕೈತೊಳೆದುಕೊಂಡ ಎನ್ನಲಾದ ಬ್ರಹ್ಮಕುಂಡಕ್ಕೆ ಪರಶುರಾಮ ಕುಂಡ ಎಂದೂ ಕರೆಯಲಾಗುತ್ತದೆ ಹಾಗೂ ಅದರಿಂದ ಹರಿಯುವ ನದಿಗೆ 'ಲೋಹಿತನದಿ' ಎಂದು ಕರೆಯುತ್ತಾರೆ. ಅಲ್ಲಿಯೇ ಅವನಿಗಾಗಿ ಒಂದು ಪುಟ್ಟ ಗುಡಿಯನ್ನು ಕಟ್ಟಲಾಗಿದೆ. ಇದು ಲೋಯರ್ ಲೋಹಿತ್ ಜಿಲ್ಲೆಯಲ್ಲಿ ಇದೆ. ಲೋಹಿತ ನದಿಯನ್ನು ಗಂಗೆಯ ನಂತರದ ಸಂಪೂರ್ಣ ಅಘನಾಶಿನಿ ಎಂದು ಹೇಳಲಾಗುತ್ತದೆ. ಮಕರ ಸಂಕ್ರಾಂತಿಯ ದಿನದಂದು ಅಲ್ಲಿಯ ನೀರಿನಲ್ಲಿ ಮಿಂದರೆ ತಮ್ಮ ಎಲ್ಲಾ ಪಾಪ ನಿವಾರಣೆಯಾಗುತ್ತದೆ ಎನ್ನುವ ಅಚಲ ನಂಬಿಕೆಯಲ್ಲಿ ದೇಶ ವಿದೇಶಗಳಿಂದ ನೂರಾರು ಜನರು ಬಂದು ಅಲ್ಲಿ ಸ್ನಾನ ಮಾಡಿಕೊಳ್ಳುತ್ತಾರೆ. ಆ ಸಮಯದಲ್ಲಿ ಅಲ್ಲಿ ಒಂದು ವಾರಗಳ ಕಾಲ ಜಾತ್ರೆ ನಡೆಯುತ್ತದೆ. ಜನವರಿ ತಿಂಗಳಿನಲ್ಲಿ ಇಲ್ಲಿ ಅಸಾಧ್ಯ ಚಳಿ, ಸ್ವಲ್ಪ ಹಿಮಪಾತವೂ ಇರುತ್ತದೆ. ನೀರು ಮಂಜಾಗಿ ಬಿಡುತ್ತದೆ. ಆದರೂ ಜನರ ನಂಬಿಕೆ, ಶ್ರದ್ಧೆಗಳು ಪ್ರಕೃತಿಯ ವೈಪರೀತ್ಯಕ್ಕಿಂತ ಬಲವಾಗಿರುತ್ತವೆ ಎಂದು ಸಾಬೀತು ಪಡಿಸುತ್ತದೆ ಇಲ್ಲಿ ನೆರೆಯುವ ಸಾವಿರಾರು ಜನರ ಗುಂಪು. ಬಾಕಿ ದಿನಗಳಲ್ಲಿ ತನ್ನ ಪಾಡಿಗೆ ತಾನು ನಿಶ್ಶಬ್ದವಾಗಿ ಇರುವ ಸ್ಥಳವಿದು.



**ನಿಶಿ ಬುಡಕಟ್ಟಿಗೆ ಸೇರಿದ ಗಂಡಸು**

**ಭೀಷ್ಮಕ ನಗರ**: ಕೃಷ್ಣ ರುಕ್ಮಿಣಿಯರು ವಿವಾಹವಾಗಲು ಮನೆಯವರ, ಊರಿನ ಜನರ ಕಣ್ಣು ತಪ್ಪಿಸಿ ರಥದಲ್ಲಿ ಬರುತ್ತಿರುವಾಗ ಪಾರ್ವತಿಯನ್ನು ಭೇಟಿ ಮಾಡಿದ್ದರಲ್ಲ ಮಾಲಿನಿತಾನ್ ಎನ್ನುವ ಜಾಗ ಅಲ್ಲಿಂದ ಪೂರ್ವೋತ್ತರಕ್ಕೆ 200 ಕಿಲೋಮೀಟರ್ಗಳಷ್ಟು ದೂರದಲ್ಲಿ ಇದೆ, ರುಕ್ಮಿಣಿಯ ತವರೂರು ಭೀಷ್ಮಕ ನಗರ. ಆಕೆಯ ತಂದೆ ಭೀಷ್ಮಕನು ಆಳಿದ ಊರು. ನಂತರ 12ರಿಂದ 16ನೇ ಶತಮಾನದವರೆವಿಗೂ ಚುತಿಯಾ ಅಥವಾ ಸುತಿಯಾ ಎನ್ನುವ ರಾಜವಂಶಸ್ಥರ ಆಳ್ವಿಕೆ ಹೊಂದಿದ್ದ ಈ ನಾಡು ಒಂದೊಮ್ಮೆ ನಮ್ಮ ವಿಜಯನಗರ ಸಾಮ್ರಾಜ್ಯಕ್ಕೆ ಸರಿಸಮಾನವಾದ ವೈಭವವನ್ನು ಹೊಂದಿತ್ತು

ಎನ್ನುತ್ತಾರೆ ಇತಿಹಾಸಜ್ಞರು. ಇಲ್ಲಿ ಇಂದಿಗೂ ಗುಡ್ಡಗಾಡು ಜನರ ಹಾಗು ಶಿಷ್ಟ ಆರ್ಯ ಜನಾಂಗದವರ ಉಚ್ಛ್ರಾಯ ಜೀವನ ಶೈಲಿಯನ್ನು ಕಾಣಬಹುದಾಗಿದೆ. ಇದು ಮಿಶಿ ಎನ್ನುವ ಬಡಕಟ್ಟು ಜನರಿಗೆ ಇದು ಪವಿತ್ರ ಯಾತ್ರ ಸ್ಥಳವಾಗಿದೆ. ಪಲಿನ್ ನದಿ ದಂಡೆಯ ಮೇಲೆ ಇರುವ ಭೀಷ್ಮಕ ನಗರ ಹೆಚ್ಚು ಹಿಮಪಾತವನ್ನು ಮತ್ತು ಅದಕ್ಕೆ ಸಮನಾದ ಬಿಸಿಲನ್ನು ಕಾಣುವ ಊರಾಗಿದ್ದು, ಹಿಮದಲ್ಲಿ ನಡೆಸುವ ಸಾಹಸ ಕ್ರೀಡಾ ಪಟುಗಳ ನೆಚ್ಚಿನ ತಾಣವಾಗಿದೆ. ಹಿಂದೊಮ್ಮೆ ಅಲ್ಲಿ ದೊಡ್ಡ ಅರಮನೆ ಇದ್ದುದ್ದರ ಗುರುತಾಗಿ ಈಗ ಪಳಯುಳಿಕೆಗಳನ್ನು ಸಂರಕ್ಷಿಸಲಾಗುತ್ತಿದೆ. ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿದ್ದ ಅರಮನೆಯ ನೆಲ ಮತ್ತು ಗೋಡೆಗಳೆಲ್ಲಾ ಅಚ್ಚ ಕೆಂಪು ಬಣ್ಣದ ಸುಟ್ಟ ಮಣ್ಣಿನಿಂದ ಮಾಡಲಾಗಿದೆ. ೧೮೬೦.೫೦ ಚದರಡಿ ಜಾಗದಲ್ಲಿ ಕೋಣೆಗಳು, ಪ್ರವೇಶದ್ವಾರಗಳು ಎಲ್ಲವನ್ನೂ ಇಟ್ಟಿಗೆಯಿಂದಲೇ ಕಟ್ಟಲಾಗಿದ್ದು ಶತಮಾನಗಳಿಂದಲೂ ಮುಕ್ಕಾಗದೇ ಹಾಗೇ ಉಳಿದಿವೆ. ದಿಬಾಂಗ್ ವ್ಯಾಲಿ ಪ್ರದೇಶದಲ್ಲಿ ಇರುವ ಈ ನಗರಕ್ಕೆ ಅಸ್ಸಾಂನಿದಂಲೂ ನೇರವಾಗಿ ಪ್ರವೇಶಿಸಬಹುದು.

* * * * *

## 13. ಅಚಾನಕ್ ಸಿಕ್ಕ ಕಾವಿಧಾರಿ

ಯಾವುದೇ ಊರಿಗೆ ಹೋದರೂ ಅಲ್ಲಿನ ಆಸ್ಪತ್ರೆ ಮತ್ತು ಆರೋಗ್ಯದ ಬಗ್ಗೆ ತಿಳಿದುಕೊಳ್ಳುವುದು ಕುತೂಹಲದ ಕೆಲಸಗಳಲ್ಲಿ ಒಂದು. ಅವುಗಳ ಸ್ಥಿತಿಗತಿಗಳನ್ನು ತಿಳಿದುಕೊಂಡರೆ ಅಲ್ಲಿನ ಜನರ ಜೀವನದ ಗುಣಮಟ್ಟವು ಒಂದಷ್ಟರ ಮಟ್ಟಿಗೆ ಅರಿವಿಗೆ ಬರುತ್ತದೆ ಎನ್ನುವುದು ನನ್ನ ನಂಬಿಕೆ. ಇಟಾನಗರವನ್ನು ಸುತ್ತುವಾಗಲೂ ಹಾಗೆಯೇ ಅಲ್ಲಿನ ಆಸ್ಪತ್ರೆ, ಕ್ಲಿನಿಕ್‌ಗಳ ಮೇಲೆ ಕಣ್ಣು ಹಾಯಿಸುತ್ತಿದ್ದೆ. ಡಾಕ್ಟರ್‌ಗಳ ಹೆಸರು, ಪದವಿಗಳ ಫಲಕಗಳನ್ನು ಓದಿಕೊಳ್ಳುತ್ತಿದ್ದೆ. ಅಲ್ಲೊಂದು ಬೋರ್ಡು 'ರಾಮಕೃಷ್ಣ ಮಿಷನ್ ಆಸ್ಪತ್ರೆ' ಎನ್ನುವ ಹೆಸರು ಹೊತ್ತು ನಿಂತಿತ್ತು. ರಾಮಕೃಷ್ಣ ಮಿಷನ್‌ನವರು ಜಗತ್ತಿನಾದ್ಯಂತ ತಮ್ಮ ಸಮಾಜ ಸೇವೆಗೆ ಹೆಸರುವಾಸಿಯಾದ್ದರಿಂದ ಈ ಆಸ್ಪತ್ರೆಯ ಬಗ್ಗೆ ನನಗೆ ಕುತೂಹಲವೇನೂ ಇರಲಿಲ್ಲ. ಅಲ್ಲಿಗೆ ಭೇಟಿ ಕೊಡುವ ಯಾವ ಇರಾದೆಯೂ ಇರಲಿಲ್ಲ. ತಟಸ್ಥ ಭಾವದಲ್ಲಿ ಅದರ ಮುಂದೆ ಆ ಊರಿನಲ್ಲಿ ಇದ್ದಷ್ಟು ದಿನವೂ ಓಡಾಡುತ್ತಿದ್ದೆ. ಒಂದು ದಿನ ಮಾಲ್ತೇಶ್ "ಇಲ್ಲೊಬ್ಬ ಕನ್ನಡಿಗರು ಇದ್ದಾರೆ. ಆಸಕ್ತಿಯಿದ್ದರೆ ಭೇಟಿ ಮಾಡಿ" ಎಂದರು. ಆದರೂ ಅಷ್ಟೇನೂ ಕುತೂಹಲವಿರಲಿಲ್ಲ. ಹಾಗೆ ಸುಮ್ಮನೆ ಆ ರಸ್ತೆಯಲ್ಲಿ ಹೋಗುವಾಗ ಕಾಲುಗಳು ನನಗರಿವಿಲ್ಲದಂತೆಯೇ ರಾಮಕೃಷ್ಣ ಮಿಷನ್ ಒಳಗೆ ಹೆಜ್ಜೆ ಇಟ್ಟವು. ಕಾವಲುಗಾರನು ಶ್ರೀಕಾಂತ್ ಮಹಾರಾಜ್ ಅವರು ಊರಿನಲ್ಲಿ ಇಲ್ಲ ಎಂದು ಹೇಳಿದಾಗ ಜಾಲರಿಯಂತಿದ್ದ ಬಾಗಿಲಿನಿಂದಲೇ ಹಿಂದಿರುಗಲು ಅನುವಾದೆ. ತಕ್ಷಣ ಒಳಗಿನಿಂದ ಬಂದ ಯಾರೋ ವ್ಯಕ್ತಿ "ಮಹಾರಾಜ್ ಊಟ ಮಾಡುತ್ತೀರ ಎಂದು ಕೇಳುತ್ತಿದ್ದಾರೆ" ಎಂದರು. ಈಗಾಗಲೇ ಅರುಣಾಚಲ ಪ್ರದೇಶದಲ್ಲಿ ಊಟಕ್ಕೆ ಸಾಕಷ್ಟು ತೊಂದರೆಯನ್ನು ಎದುರಿಸಿದ್ದೆ. ಆದರೂ ಪ್ರವಾಸದಲ್ಲಿ ಊಟವನ್ನು ಎಂದೂ ನಾನು ಬಹುಮುಖ್ಯ ಎಂದು ಗಣಿಸುವುದಿಲ್ಲವಾದ್ದರಿಂದ ಅದರ ಬಗ್ಗೆ ಸಮಾಧಾನವಾಗಿಯೇ ಇದ್ದೆ. ಹೆಜ್ಜೆಗೊಂದರಂತೆ ಅಲ್ಲಿಯೇ ಬೆಳೆದ ರುಚಿಕಟ್ಟಾದ ಕಿತ್ತಳೆ ಹಣ್ಣು ತಿನ್ನುತ್ತಿದ್ದೆ. ಸಾಮಾನ್ಯವಾಗಿ ಯಾರೇ ಊಟಕ್ಕೆ ಆಹ್ವಾನವಿತ್ತರೂ ಹಿಂಜರಿಯುವುದು ನನ್ನ ಸ್ವಭಾವವೂ ಹೌದು. ಹಸಿವಿದ್ದರೂ ಸಂಕೋಚದಿಂದ ಎಷ್ಟೋ ಕಡೆ ಊಟ ಮಾಡದೆಯೇ ಎಡವಟ್ಟು ಮಾಡಿಕೊಂಡಿದ್ದೇನೆ. ಆದರೆ ಆ ದಿನ ನನ್ನ ಬುದ್ಧಿ,

ಮಾತಿನಲ್ಲಿ ಅದು ಯಾವ ಶಕ್ತಿ ಅಡಗಿ ಕುಳಿತ್ತಿತ್ತೊ, ನನ್ನ ಮಾತುಗಳೇ ಅಲ್ಲವೇನೋ ಎನ್ನುವ ಹಾಗೆ "ಹೂಂ, ಊಟ ಮಾಡುತ್ತೇನೆ" ಎಂದು ಬಿಟ್ಟೆ. ಆತ ಓಣಿಯೊಂದರ ಒಳಗೆ ಕರೆದುಕೊಂಡು ಹೋಗಿ, ಭವ್ಯವಾಗಿ ಅಲಂಕೃತಗೊಂಡಿದ್ದ ಭೇಟಿ ಕೋಣೆಯಲ್ಲಿ ಕೂರಿಸಿದರು. ಅದು ಮಠವಾದ್ದರಿಂದ ಎಲ್ಲೋ ಸಾಮೂಹಿಕ ಊಟವಿರಬಹುದು, ಅದಕ್ಕೇ ಆಹ್ವಾನವಿತ್ತಿದ್ದಾರೆ, ಮತ್ತೆಲ್ಲೋ ಕರೆದುಕೊಂಡು ಹೋಗುತ್ತಾರೆ ಎಂದುಕೊಂಡು ಕಾಯುತ್ತಾ ಕುಳಿತಿದ್ದೆ. ಐದೇ ನಿಮಿಷಗಳ ಆತ ಬಂದು "ಮಹರಾಜ್ ಕರೆಯುತ್ತಿದ್ದಾರೆ ಬರಬೇಕಂತೆ" ಎಂದು ಕರೆದೊಯ್ದರು. ಬಾಗಿಲಿನ ಪರದೆ ಸರಿಸಿ ಒಳಹೊಕ್ಕರೆ ಅದೊಂದು ಆಧುನಿಕವಾಗಿ ಸುಸಜ್ಜಿತಗೊಂಡಿದ್ದ ಊಟದ ಕೋಣೆ. ಅಷ್ಟೇ ಅಲ್ಲ ಅಲ್ಲಿನ ಟೇಬಲ್ ಮೇಲೆ ಐದು ಜನ ಸನ್ಯಾಸಿಗಳು ಊಟ ಮಾಡುತ್ತಿದ್ದಾರೆ. ಓಹ್, ಅಷ್ಟು ಹಿರಿಯರ ಸಮವಾಗಿ ಕುಳಿತು ಉಣ್ಣುವುದು ನನ್ನ ಉದ್ಧಟತನ ಅನ್ನಿಸಿತು. ಸಂಕೋಚ, ಮುಜುಗರ, ದ್ವಂದ್ವ ಎಲ್ಲವೂ ಒಟ್ಟೊಟ್ಟಿಗೆ! ದಕ್ಷಿಣ ಭಾರತೀಯರಿಗೆ ಮಠಮಾನ್ಯಗಳಿಗೆ ಹೋಗುವಾಗ ಸಾಂಪ್ರದಾಯಿಕ ಉಡುಗೆ ತೊಟ್ಟು ಅಭ್ಯಾಸ. ಆದರೆ ಆ ದಿನ ನಾನು ಜೀನ್ಸ್ ಪ್ಯಾಂಟ್ ಹಾಕಿಕೊಂಡಿದ್ದದ್ದು ನನ್ನನ್ನು ಮತ್ತೂ ಮುಜುಗರಕ್ಕೆ ಈಡು ಮಾಡಿತ್ತು. ಸ್ವಚ್ಛವಾದ, ನೇರವಾದ, ವಿಶ್ವಾಸಪೂರ್ಣ ಧ್ವನಿಯಲ್ಲಿ "ಕುಳಿತುಕೊಳ್ಳಿ. ನಾನು ಪಾರ್ಥಸಾರಥಿ ಅಂತ. ಈ ಮಿಷನ್‌ನ ಮುಖ್ಯಸ್ಥ. ನಿಮಗೆ ನಮ್ಮ ಜೊತೆ ಕುಳಿತು ಊಟ ಮಾಡಲು ಸಂಕೋಚವಿಲ್ಲವಷ್ಟೆ?" ಎಂದು ಹಿರಿಯ ಸನ್ಯಾಸಿಯೊಬ್ಬರು ಎದ್ದು ನಿಂತು ಕೇಳಿದಾಗ ಅವರ ವಿನಯಕ್ಕೆ ಭೂಮಿಯಲ್ಲಿ ಹುದುಗಿಹೋಗಿದ್ದೆ. ಅವರ ಬಲಕ್ಕಿದ್ದ ಕುರ್ಚಿಯಲ್ಲಿ ಕುಳಿತೆ. ಬಡಿಸುವ ವ್ಯಕ್ತಿ ದೊಡ್ಡ ತಟ್ಟೆ ಮತ್ತು ದೊಡ್ಡ ಲೋಟದಲ್ಲಿ ನೀರು ತಂದಿಟ್ಟರು.

ಪಾರ್ಥಸಾರಥಿ ಸ್ವಾಮೀಜಿಯವರು (ಪಾರ್ಥೋ ಮಹಾರಾಜ್) ಕಳೆದ 7 ವರ್ಷಗಳಿಂದ ಇಟಾನಗರದಲ್ಲಿ ರಾಮಕೃಷ್ಣ ಮಿಷನ್‌ನವರು ನಡೆಸುತ್ತಿರುವ ಸರ್ಕಾರಿ ಅರೆ ಅನುದಾನಿತ ಖಾಸಗಿ ಆಸ್ಪತ್ರೆಯ ಮುಖ್ಯಸ್ಥರಾಗಿದ್ದಾರೆ. 226 ಹಾಸಿಗೆಗಳನ್ನು ಹೊಂದಿರುವ ಆ ಆಸ್ಪತ್ರೆಯಲ್ಲಿ ಕಣ್ಣು, ಕಿವಿ, ಮೂಗು, ಹೃದಯ, ಮಕ್ಕಳ ಸಂಬಂಧಿ ಖಾಯಿಲೆ, ಹೆರಿಗೆ, ಮಾನಸಿಕ ಚಿಕಿತ್ಸೆ, ತುರ್ತು ಚಿಕಿತ್ಸೆ ಮತ್ತು ಅಪಘಾತ, ಮೂತ್ರಕೋಶ, ಶ್ವಾಸಕೋಶ ಮತ್ತು ಉದರ

ಸಂಬಂಧಿ ಖಾಯಿಲೆಗಳಿಗೆ ಸಂಬಂಧ ಪಟ್ಟಂತೆ ಸುಸಜ್ಜಿತ ವಿಭಾಗಗಳಿವೆ. ೩೦ಕ್ಕೂ ಹೆಚ್ಚಿನ ವೈದ್ಯರುಗಳನ್ನು ಹೊಂದಿರುವ ಇಲ್ಲಿ ರಕ್ತ ಬ್ಯಾಂಕ್, ಪ್ರಯೋಗಾಲಯ, ವೈದ್ಯಕೀಯ ಶಾಸ್ತ್ರದ ಗಂಥಾಲಯ, ಹೋಮಿಯೋಪತಿ ವಿಭಾಗ ಮತ್ತು ಶುಶ್ರೂಷಕಿಯರ ತರಬೇತಿ ಕಾಲೇಜ್ ಎಲ್ಲವೂ ಓರಣವಾಗಿ ಇವೆ. ನಿತ್ಯವೂ ಸಾಯಂಕಾಲ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳ ಬಗ್ಗೆ ಉಪನ್ಯಾಸಗಳು, ಭಜನೆಗಳು ನಡೆಯುತ್ತವೆ. ಮುಖ್ಯ ಹಬ್ಬಗಳನ್ನು, ರಾಮಕೃಷ್ಣ, ಶಾರದಾ ಮಾತೆ ಮತ್ತು ಸ್ವಾಮಿ ವಿವೇಕಾನಂದರುಗಳ ಜಯಂತಿಯನ್ನೂ ಭರ್ಜರಿಯಾಗಿ ಆಚರಿಸಲಾಗುತ್ತದೆ. ಅವಶ್ಯಕತೆ ಇರುವವರಿಗೆ ಪ್ರತ್ಯೇಕವಾದ ಆಧ್ಯಾತ್ಮಿಕ ಮಾರ್ಗದರ್ಶನ ಮತ್ತು ಸಲಹೆಗಳ ಸೌಲಭ್ಯವೂ ಇದೆ. ಆಸ್ಪತ್ರೆಯ ಹಿಂಭಾಗದಲ್ಲಿಯೇ ಸಣ್ಣ ಮಠ ಮತ್ತು ಉಸ್ತುವಾರಿ ನಡೆಸುವ ಅಧಿಕಾರದಲ್ಲಿರುವ ಸನ್ಯಾಸಿಗಳ ವಾಸಸ್ಥಾನವೂ ಇದೆ.



**ಬುಡಕಟ್ಟು ಮಹಿಳೆ**

ಈಗ ನಾನು ಊಟಕ್ಕೆ ಕುಳಿತ್ತಿದ್ದದ್ದು ಅವರುಗಳ ಖಾಸಗಿ ಊಟದ ಕೋಣೆ, ಅಡುಗೆ ಮನೆಗೇ ಆತುಕೊಂಡಿತ್ತು. ಅಲ್ಲಿ ಐದು ಜನ ಸ್ವಾಮಿಗಳು ಊಟ ಮಾಡುತ್ತಿದ್ದರು. ಎಲ್ಲರೂ ಬೇರೆ ಬೇರೆ ರಾಜ್ಯಗಳಿಂದ ಬಂದವರಾಗಿದ್ದರು. ನನ್ನ ಬಲ ಬದಿಗೆ ಕುಳಿದ್ದಿದ್ದವರು ಬಿಗುವಾದ ಮುಖ ಭಾವದಲ್ಲಿ ಸ್ವಲ್ಪವೂ ಮಾತನಾಡದೆ ಊಟ ಮಾಡುತ್ತಿದ್ದರು ಅವರ ತಟ್ಟೆಯಲ್ಲಿ ಮಾತ್ರ ರಸಗುಲ್ಲಾಗಳು ಕಾಣುತ್ತಿದ್ದವು. ಅವರ ಆಚೆ ಬದಿಗೆ ಕುಳಿದ್ದವರ ತಟ್ಟೆಯ ತಿನಿಸಿಗಳು ಅವರು ಗುಜರಾತಿ ಎನ್ನುವುದನ್ನು ಸ್ಪಷ್ಟ ಪಡಿಸುತ್ತಿತ್ತು. ಅವರು

ತಮ್ಮ ಪರಿಚಯ ಮಾಡಿಕೊಂಡು ನನ್ನ ಬಗ್ಗೆಯೂ ಕೇಳಿದರು. ಆದರೆ ನಾನು ಮಾತನಾಡುವ ಮೊದಲೇ ಪಾರ್ಥೋ ಮಹಾರಾಜ್‌ರ ಜೊತೆ ಗುಜರಾತ್ ಹಾಗು ಚೈನೈಗಳಲ್ಲಿ ಯಾವುದು ಉತ್ತಮ ಎನ್ನುವ ಮಾತಿಗೆ ಬಿದ್ದರು. ಎಡಬದಿಯ ಎದುರಿಗೆ ಕುಳಿತ್ತಿದ್ದವರ ತಟ್ಟೆಯ ಸುತ್ತಲೂ ಇದ್ದ ಚಟ್ನಿಪುಡಿಯ ಕವರ್‌ಗಳಿಂದ ಅವರು ಪಕ್ಕದ ಆಂಧ್ರದವರು ಎಂದು ತಿಳಿಯುತ್ತಿತ್ತು. ಆತ ಇವರಿಬ್ಬರ ಗಟ್ಟಿ ಮಾತಿನ ನಡುವೆ ತೂರದೆ ನನ್ನ ಬಗ್ಗೆ ಸಾಧುವಾಗಿ ವಿಚಾರಿಸಿಕೊಂಡು ಊಟ ಮಾಡಿ ಕೈತೊಳೆದು ಎದ್ದು ಹೋದರು. ಹೀಗೆ ಅಲ್ಲಿದ್ದವರೆಲ್ಲರನ್ನು ಗಮನಿಸುತ್ತಲೇ, ಊಟದ ಕೋಣೆಯ ಟೆಬಲ್‌ನಲ್ಲಿ ಜಗತ್ತಿನ ವೈವಿಧ್ಯತೆ, ಸ್ವಭಾವ ಲಕ್ಷಣಗಳು ಮೇಲ್ನೋಟ ಸಿಕ್ಕಂತೆ ಭಾಸವಾಗಿತ್ತಿತ್ತು. ಪ್ರಸಾದದಷ್ಟು ರುಚಿಯಿದ್ದ ಅಲ್ಲಿನ ಊಟದಲ್ಲಿ ಅಂದು ನನ್ನ ಹೆಸರಿತ್ತು. ನಾ ಮತ್ತೊಮ್ಮೆ ಈ ವಿಶ್ವಋಣಿ ಆಗಿಬಿಟ್ಟಿದ್ದೆ.

ನಂತರ ಪಾರ್ಥೋ ಮಹಾರಾಜ್ ಅವರು ಅತಿಥಿ ಕೋಣೆಯಲ್ಲಿ ಸುಮಾರು ಒಂದು ಗಂಟೆಗಳ ಕಾಲ ಅಲ್ಲಿನ ಜೀವನ ಶೈಲಿ, ಜನರ ಮನೋಧರ್ಮ, ಖಾಯಿಲೆಗಳ ಬಗ್ಗೆ ಮಾತನಾಡಿದರು. ಎಲ್ಲವನ್ನೂ ಧ್ವನಿ ಮುದ್ರಿಸಿಕೊಂಡೆ. ಹೆಚ್ಚು ಹೆಚ್ಚು ಮಕ್ಕಳು ಮಾಡಿಕೊಳ್ಳುವುದನ್ನು ಪ್ರತಿಷ್ಠೆಯ ಸಂಕೇತ ಎಂದು ಭಾವಿಸುವ ಅಲ್ಲಿನ ಗಂಡಸರಿಗೆ ಹೆಂಡತಿಯು ಬಸಿರಾಗಲು ನಿರಾಕರಿಸಿದಾಗ ವಿಪರೀತ ಸಿಟ್ಟು ಬರುತ್ತದೆಯಂತೆ. ಆಗಲೇ ಕೌಟುಂಬಿಕ ದೌರ್ಜನ್ಯ ಶುರುವಾಗುವುದು ತಾನೆ?! ಜಗತ್ತಿನ ಎಲ್ಲೆಡೆಯಂತೆ ಇಲ್ಲಿಯೂ ಸಹ ಹೆಂಗಸರು "ಬಚ್ಚಲು ಮನೆಯಲ್ಲಿ ಜಾರಿದ್ದು" ಎಂತಲೋ "ಅಡುಗೆ ಕೋಣೆಯಲ್ಲಿ ಬಿದ್ದದ್ದು" ಎಂತಲೋ ತಮ್ಮ ಮೇಲಿನ ಹಲ್ಲೆಯ ಕಾರಣಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಾರಂತೆ. ಅದರಲ್ಲಿ ವಿಶೇಷವೇನು ಕಾಣಲಿಲ್ಲ. ಎಷ್ಟೇ ಆದರೂ ಎಲ್ಲಾ ಹೆಣ್ಣುಗಳೂ ಅಕ್ಕತಂಗಿಯರು ತಾನೆ?! ಲೈಂಗಿಕ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸದ ಅಲ್ಲಿನ ಜನರಿಗೆ ಅದಕ್ಕೆ ಸಂಬಂಧಪಟ್ಟ ಖಾಯಿಲೆಗಳು ಹಾಗು ಕ್ಷಯ ರೋಗ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತದೆ. ಪ್ರತಿ ಮನೆಯಲ್ಲೂ ತಯಾರಾಗುವ ಮಾದಕ ಪೇಯಗಳು ಇವರಿಗೆ ಹೆಚ್ಚಿನ ಉದರ ಸಂಬಂಧಿ ಖಾಯಿಲೆಗಳಿಗೆ ತೆರೆದುಕೊಳ್ಳುವಂತೆ ಮಾಡಿದೆ. "ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿನವರಿಗೆ ಸ್ವಚ್ಛತೆಯ ಅರಿವು ಮೂಡಿಸುವುದು ಸಾಹಸವೇ ಸರಿ" ಎಂದು

ಪಾರ್ಥೋ ಮಹಾರಾಜ್ ನಿಟ್ಟುಸಿರುಬಿಟ್ಟರು. ಎಷ್ಟೇ ಜಾಗೃತಿ ಮೂಡಿಸಿದರೂ 'ಮನುಷ್ಯ ಧೂಳಿನಿಂದ ಬಂದವನು ಧೂಳಿಗೇ ಸೇರುವವನು' ಎನ್ನುವ ಅವರ ಅಚಲ ನಂಬಿಕೆಯಿಂದಾಗಿ ಅವರುಗಳಿಗೆ ತಮ್ಮ ದೇಹದ ಸ್ವಚ್ಛತೆಯ ಬಗ್ಗೆಯಾಗಲಿ, ಮನೆಯ ಊರಿನ ಶುಚಿತ್ವದ ಬಗ್ಗೆಯಾಗಲೀ ಕಾಳಜಿಯೇ ಇಲ್ಲ ಎಂದು ಹೇಳುವಾಗಲೇ ಸ್ವಾಮೀಜಿಗಳು "ದೊಡ್ಡ ನಗರಗಳ ವಿದ್ಯಾವಂತರ ಮನೆಯಲ್ಲಿ ಈಗ ವಾತಾವರಣ ಬದಲಾಗಿದೆ. ಆದರೂ ಈ ನೆಲದ ಬಹುಪಾಲು ಜನರು ಇನ್ನೂ ಸ್ವಚ್ಛತೆಯ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ" ಎನ್ನುವುದನ್ನು ಹೇಳಿದರು. ಎಷ್ಟೇ ತಿಳಿಯ ಹೇಳಿದರು ಇಲ್ಲಿ ಬರುವ ರೋಗಿಯ ಸಂಬಂಧಿಗಳು ಸ್ವಲ್ಪ ಹೊತ್ತಾದರೂ ಆಸ್ಪತ್ರೆಯ ಕಸದ ತೊಟ್ಟಿಯ ಬಳಿ ಕುಳಿತು ಹೋದರೆ ಒಳಿತು ಎಂದೇ ಭಾವಿಸಿ ಹಾಗೆಯೇ ಮಾಡುತ್ತಾರೆ. ಈಗ ಒಂದಷ್ಟು ಬದಲಾವಣೆ ಕಂಡಿದೆ. ಹೀಗೇ ಒಂದಷ್ಟು ಸಾಮಾಜಿಕ, ಮತ್ತೊಂದಷ್ಟು ಆಧ್ಯಾತ್ಮದ ಮಾತುಗಳು ಮುಗಿಯುತ್ತಿದ್ದಂತೆ ಸ್ವಾಮೀಜಿಗಳು ತಮ್ಮ ಸಹಾಯಕನೊಬ್ಬನನ್ನು ಕರೆದು ಮೇಲ್ಗೋಡೆಯ ಮೂಲೆಯನ್ನು ತೋರಿಸುತ್ತ ಅಲ್ಲಿಯದೇ ಒಂದು ಭಾಷೆಯಲ್ಲಿ ಏನೋ ಹೇಳಿದರು. ಆತ ಒಳಗೆ ಹೋಗಿ ಮರದ ಸಣ್ಣ ಏಣಿಯೊಂದನ್ನು ತಂದು ಹಾಕಿಕೊಂಡಾಗ ಅಲ್ಲಿ ನೋಡಿದೆ. ಆತ ಅಲ್ಲಿನ ಮೊಳೆಯೊಂದಕ್ಕೆ ನೇತು ಹಾಕಿದ್ದ ಗಾಜಿನ ಚೌಕಟ್ಟೊಂದನ್ನು ತೆಗೆದು, ಭುಜದ ಮೇಲಿನ ಬಟ್ಟೆಯಿಂದ ಧೂಳು ಸರಿಸಿ ಸ್ವಾಮೀಜಿಗಳ ಕೈಗಿತ್ತ. ಅವರು ಅದನ್ನು ಹಿಡಿದು "ಇದು ನಾ ಹಿಂದೊಮ್ಮೆ ಕೋಲ್ಕತ್ತಾಗೆ ದುರ್ಗಾರಾಧನೆಗೆ ಹೋಗಿದ್ದಾಗ ನನ್ನ ಶಿಷ್ಯರೊಬ್ಬರು ನನಗೆ ಉಡುಗೊರೆಯಾಗಿ ಕೊಟ್ಟಿದ್ದು. ಇವತ್ತಿನಿಂದ ಇದು ನಿಮ್ಮದು" ಎಂದು ಹೇಳುತ್ತಾ ನಗುಮುಖದಿಂದ ನನಗೆ ಕೊಟ್ಟರು. ಆಶ್ಚರ್ಯಭರಿತ ಆನಂದದಿಂದ ನಾನು ಅದನ್ನೇ ನೋಡುತ್ತಿದ್ದೆ. ಆ ಗಾಜಿನ ಚೌಕಟ್ಟಿನೊಳಗೆ ಹಾಲ್ಬಿಳುಪಿನ, ತೆಳ್ಳನೆಯ, ಸ್ಪಂಜಿನಂತಹ ಪದಾರ್ಥದಿಂದ ಮಾಡಿದ ದುರ್ಗೆಯ ಮುಖವಾಡ ನಗುತ್ತಿತ್ತು. ನಂತರ ತಿಳಿಯಿತು ಅದನ್ನು ಈಶಾನ್ಯ ರಾಜ್ಯಗಳಲ್ಲಿ ಬೆಳೆಯುವ 'ಶೋಲಪಿತ್' ಎನ್ನುವ ಗಿಡದ ಕಾಂಡದ ತಿರುಳಿನಿಂದ ಮಾಡಲಾಗಿದೆ ಎಂದು. ಇದರಿಂದ ತಯಾರು ಮಾಡಲಾದ ಕರಕುಶಲ ವಸ್ತುಗಳು ಜಗತ್ಪ್ರಸಿದ್ಧ ಎನ್ನುವುದು ತಿಳಿದ ವಿಷಯವೇ. ನಾನು ಪ್ರವಾಸದ ಅವಧಿಯಲ್ಲಿ ಭೇಟಿ ಮಾಡಬೇಕು ಎಂದುಕೊಂಡಿದ್ದ ಸ್ಥಳಗಳ ಪಟ್ಟಿಯಲ್ಲಾಗಲೀ, ವ್ಯಕ್ತಿಗಳ

ಸಾಲಿನಲ್ಲಾಗಲೀ ಇಲ್ಲದ 'ರಾಮಕೃಷ್ಣ ಮಿಷನ್ ಆಸ್ಪತ್ರೆ' ಮತ್ತು ಪಾರ್ಥೋ ಮಹಾರಾಜ್ ಅವರ ಅಚಾನಕ್‌ಭೇಟಿ ಮತ್ತು ಊಹೆಯಲ್ಲೂ ಇರದ ನಗುಮುಖದ ದುರ್ಗೆ ನನ್ನ ಮನ–ಮನೆ ಬಂದು ಸೇರಿದ್ದು ಎಲ್ಲವೂ ಸೋಜಿಗದಂತೆ ಕಾಣುತ್ತಿತ್ತು. ಪೂಜ್ಯರಿಗೆ ನಮಸ್ಕರಿಸಿ, ಅಲ್ಲಿಂದ ಹೊರಟಾಗ "ನೇ ಜೇಸಿನ ಪೂಜ ಫಲಮೋ ನಾ ಪೂರ್ವಪುಣ್ಯ ಫಲಮೋ. . . ಶ್ರೀ ಜಾನಕೀಶ ಈ ಜನ್ಮಮಿಚ್ಚಿ ನನ್ನು ಧನ್ಯುನಿಗ ಭುವಿ ಜೇಸಿತೀವಿ. ." ಎಂದು ಶಾಂತವಾಗಿ ಹಾಡಿಕೊಳ್ಳುತ್ತಿದ್ದೆ.

* * * * *

## 14. ವೈ.ಡಿ.ತೊಂಗ್ಚಿ ಎನ್ನುವ ಅನುಭವ

ಈ ಪ್ರದೇಶದ ಸಾಹಿತ್ಯ ಏನಿದೆ? ಎಲ್ಲಿದೆ? ಎಂದು ತಿಳಿದುಕೊಳ್ಳುವ ಕುತೂಹಲದಿಂದ ಅಂತರ್ಜಾಲದಲ್ಲಿ ಈಜುತ್ತಿದ್ದೆ. ಮಮಾಂಗ್ ದಾಯಿ ಎನ್ನುವ ಮಹಿಳಾ ಬಗ್ಗೆ ಬಿಟ್ಟು ಉಳಿದಂತೆ ಆಸಕ್ತಿದಾಯಕ ಮಾಹಿತಿಗಳೇನೂ ಸಿಗಲಿಲ್ಲ. ಅಲ್ಲೊಬ್ಬ ಇಲ್ಲೊಬ್ಬ ಸಾಹಿತಿ ಅರುಣಾಚಲ ಪ್ರದೇಶದಲ್ಲಿ ಹುಟ್ಟಿದ್ದರೂ ಅಸ್ಸಾಮಿಸ್ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿರುವುದನ್ನು ಓದಿದೆ. ನೋಡೋಣ ಅಲ್ಲಿಗೆ ಹೋದಮೇಲೆ ಏನಾದರು ಮಾಹಿತಿ ಸಿಗಬಹುದು ಎನ್ನುವ ಭರವಸೆಯೊಂದಿಗೆ, ಮಮಾಂಗ್ ದಾಯಿಯವರ ವಿಳಾಸ ಬರೆದಿಟ್ಟುಕೊಂಡು ಸುಮ್ಮನಾಗಿದ್ದೆ. ಇಟಾನಗರ ತಲುಪುತ್ತಿದ್ದಂತೆ ಅವರ ದೂರವಾಣಿ ಸಂಖ್ಯೆಯನ್ನು ಪಡೆದು ಮಾತನಾಡಿಸಲು ಪ್ರಯತ್ನಿಸಿದೆ. ಸಾಕಷ್ಟು ಬಾರಿ ಸತತವಾಗಿ ಫೋನ್ ಮಾಡಿದ ನಂತರ ಒಂದು ದಿನ ಕೊನೆಗೂ ಕರೆಗೆ ಉತ್ತರಿಸಿದ ಮಮಾಂಗ್ ಅವರಿಗೆ ನನ್ನ ಪರಿಚಯ ಅಷ್ಟೇನು ಮಹತ್ತ್ವದ್ದು ಎನ್ನಿಸಿದಂತೆ ತೋರಲಿಲ್ಲ. ಭೇಟಿಗಾಗಿ ವಿನಂತಿಸಿಕೊಂಡಾಗ ಅವರು ಅಷ್ಟೇನೂ ಉತ್ಸಾಹ ತೋರಲಿಲ್ಲ. ಮತ್ತೊಂದು ದಿನ ಫೋನ್ ಮಾಡಲು ಹೇಳಿ ಮಾತು ಮುಗಿಸಿದರು. ನಿರಾಸೆಗೊಳ್ಳದೆ ಇನ್ನೊಂದು ದಿನ, ಮತ್ತೊಂದು ದಿನ ಎಂದು ನಾನು ಹಿಂದಿರುಗಿ ಹೊರಡುವ ದಿನದವರೆಗೂ ಫೋನ್ ಮಾಡುತ್ತಲೇ ಇದ್ದೆ. ಅವರು ಫೋನ್ ತೆಗೆಯಲೇ ಇಲ್ಲ. ಕೊನೆಗೊಮ್ಮೆ "ನಾನು ಹಿಂದಿರುಗಿ ಹೋಗುತ್ತಿದ್ದೇನೆ. ನಿಮಗಾಗಿ ಸಣ್ಣ ಉಡುಗೊರೆ ತಂದಿದ್ದೇನೆ. ಎಲ್ಲಿ ಹೇಗೆ ತಲುಪಿಸಲಿ" ಎನ್ನುವ ಎಸ್‌ಎಂಎಸ್ ಕಳುಹಿಸಿ ಸುಮ್ಮನಾದೆ. ಎರಡು ದಿನ ಬಿಟ್ಟು ಅವರೇ ಫೋನ್ ಮಾಡಿದರು "ಕ್ಷಮಿಸಿ ನಾನು ಊರಿನಲ್ಲಿ ಇಲ್ಲ. ಹಾಗಾಗಿ ಉತ್ತರಿಸಲಾಗಲಿಲ್ಲ. ಮುಂದಿನ ವಾರ ಭೇಟಿಯಾಗೋಣ" ಎಂದರು. ಪ್ರವಾಸ ಮುಗಿಸಿದ್ದ ನನಗೆ ಹಿಂದಿರುಗಿ ಹೊರಡಲೇಬೇಕಿತ್ತು. ನನಗೆ ನಿರಾಸೆಯಾಗಿತ್ತು. ಆದರೆ ಅವರು ಅಷ್ಟೇ ಸರಳವಾಗಿ "ನನ್ನ ಬಗ್ಗೆ ಮಾಹಿತಿಯೆಲ್ಲಾ ಅಂತರ್ಜಾಲದಲ್ಲಿ ಇದೆ ತೆಗೆದುಕೊಳ್ಳಿ" ಎಂದು ಹೇಳಿ ಮಾತು ಮುಗಿಸಿದ್ದರು.

ಇಟಾನಗರದಲ್ಲಿ ವಾಸವಿರುವ ಮಮಾಂಗ್ ದಾಯಿ ಅವರದ್ದು ಭಾರತೀಯ ಇಂಗ್ಲಿಷ್ ಭಾಷೆಯ ಸಾಹಿತಿಗಳಲ್ಲಿ ಒಂದು ಮುಖ್ಯವಾದ ಹೆಸರು. ಯುಪಿಎಸ್‌ಸಿ ಯಲ್ಲಿ ಸೇವೆ ಸಲ್ಲಿಸಿ ಈಗ ಅರುಣಾಚಲ ಪ್ರದೇಶ ಆಡಳಿತ

ಸೇವಾ ವಿಭಾಗದಲ್ಲಿ ಸಲಹಾಗಾರರಾಗಿದ್ದಾರೆ. 2011 ರಲ್ಲಿ ಭಾರತ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ಪಡೆದಿರುವ ಮಮಾಂಗ್ ರಾಜ್ಯ ಪ್ರಶಸ್ತಿಯೂ ಸೇರಿದಂತೆ ಇನ್ನೂ ಕೆಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕವನ ಸಂಕಲನಗಳು, ಕಾದಂಬರಿಗಳ ಜೊತೆಗೆ ಅರುಣಾಚಲ ಪ್ರದೇಶದ ಬುಡಕಟ್ಟು ಜನರ ಜೀವನ ಶೈಲಿ, ನಂಬಿಕೆ ಮತ್ತು ಸಂಸ್ಕೃತಿ, ಅಡುಗೆಗಳ ಬಗ್ಗೆ ಬರೆದಿರುವ ಪುಸ್ತಕಗಳನ್ನೂ ಸೇರಿ ಒಟ್ಟು 11 ಪುಸ್ತಕಗಳನ್ನು ಆಂಗ್ಲ ಭಾಷೆಯಲ್ಲಿ ಬರೆದಿದ್ದಾರೆ. ಅವುಗಳಲ್ಲಿ ಹೆಚ್ಚು ಪರಿಚಿತವಾದವುಗಳೆಂದರೆ ; 1. Arunachal Pradesh- The Hidden Land 2. Mountain Harvest 3. River Poems ಇನ್ನೂ ಮುಂತಾದವುಗಳು. ಅವರ ಕೆಲವು ಕವನಗಳನ್ನು ಓದಿದ್ದೇನೆ ಹಾಗು ಅರುಣಾಚಲ ಪ್ರದೇಶದ ಬಗ್ಗೆ ಅವರು ಪ್ರಕಟಿಸಿರುವ ಸಚಿತ್ರ ಪುಸ್ತಕವನ್ನು ನೋಡಿದ್ದೇನೆ. ಆಕೆಯೊಬ್ಬ ಅತ್ಯದ್ಭುತ ಬರಗಾರ್ತಿ ಎನ್ನುವುದರ ಬಗ್ಗೆ ಅನುಮಾನವೇ ಇಲ್ಲ.

ಸರಿ, ಮಮಾಂಗ್ ದಾಯಿ ಸಿಗಲಿಲ್ಲ. ಮುಂದೇನು? ಸರಿಸುಮಾರು ಎಲ್ಲದರ ಬಗ್ಗೆಯೂ ವಿಷಯ ಸಂಗ್ರಹಣೆ ಮಾತ್ರವಲ್ಲ ಒಂದಷ್ಟರಮಟ್ಟಿಗಿನ ಅನುಭವವನ್ನೂ ಪಡೆದಾಗಿತ್ತು. ಆದರೆ ಸಾಹಿತ್ಯ ಕ್ಷೇತ್ರದ ಬಗ್ಗೆ ಉಹುಂ, ಲವಲೇಶವೂ ಸುಳಿವು ಸಿಕ್ಕಿಲ್ಲ ಎಂದುಕೊಳ್ಳುತ್ತಲೇ ಊರೂರು ಸುತ್ತುತ್ತಿದ್ದೆ. ಆಗ ಸಿಕ್ಕಿದ್ದು ವೈ.ಡಿ ತೊಂಗ್ಚಿ ಎನ್ನುವ ಸಾಹಿತಿಯ ದೂರವಾಣಿ ಸಂಖ್ಯೆ. ಇಷ್ಟು ಕಾದಿದ್ದಕ್ಕೂ ಸಾರ್ಥಕವೇನೋ ಎನ್ನುವಂತೆ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಭಾಜನರಾಗಿರುವ ಹಿರಿಯ ಸಾಹಿತಿಗಳು. ನನ್ನ ಉತ್ಸಾಹಕ್ಕೆ ಮಿತಿಯೇ ಇರಲಿಲ್ಲ. ಅರ್ಧ ಪ್ರಯಾಣ ಮುಗಿಸಿ, ಮುಂದಿನ ಪ್ರಯಾಣಕ್ಕೆ ಹೊರಡಲು ಇಟಾನಗರಕ್ಕೆ ಹಿಂದಿರುಗಿದ ಒಂದು ಸಂಜೆ ಅವರಿಗೆ ಫೋನ್ ಮಾಡಿದೆ. ತುಂಬಾ ವಿಶ್ವಾಸದಿಂದ , ತಾಳ್ಮೆಯಿಂದ ನನ್ನ ಪರಿಚಯವನ್ನು ಕೇಳಿಸಿಕೊಂಡವರು "ನೀವು ಇವತ್ತು ಫೋನ್ ಮಾಡಿದ್ದು ಒಳ್ಳೆಯದೇ ಆಯ್ತು. ನಾನು ಊರಿನಲ್ಲಿ ಇರಲಿಲ್ಲ. ನೆನ್ನೆ ಸಂಜೆಯೇ ಬಂದೆ. ಈಗಾಗಲೇ ಸಂಜೆಯಾಗಿದೆ. ನೀವು ಈಗ ಬಂದರೆ ನಾವಿಬ್ಬರು ಹೆಚ್ಚು ಮಾತನಾಡಲು ಸಮಯ ಸಾಲುವುದಿಲ್ಲ. ನಾಳೆ ಬೆಳಗ್ಗೆ 10.30ಕ್ಕೆ ಬಂದು ಬಿಡಿ.

ಎಷ್ಟು ಸಮಯವಾದರೂ ಆರಾಮವಾಗಿ ಮಾತನಾಡೋಣ" ಎಂದು ಅತ್ಯಂತ ಸೌಜನ್ಯವಾದ ಧ್ವನಿಯಲ್ಲಿ ಆಹ್ವಾನವಿತ್ತರು.

ಮರುದಿನ ಮೋಡ ಮುಸುಕಿತ್ತು. ಸಣ್ಣನೆಯ ಚಳಿ ಜೊತೆಯಾಗಿತ್ತು. ಅವರ ಮನೆ ತಲುಪಿದಾಗ 11 ಗಂಟೆಯ ಸಮಯವಾಗಿತ್ತು. ನಿಶ್ಶಬ್ದವಾದ ದೊಡ್ಡ ಆವರಣ, ಅದಕ್ಕೆ ಹೊಂದುವಂತಹ ಹಸಿರು ತೋಟದ ನಡುವೆ ಆಕಾಶ ನೀಲಿ ಬಣ್ಣವನ್ನು ಹಾಕಿಕೊಂಡು ಬೌದ್ಧ ಸ್ಥೂಪದಂತೆ ಕಾಣುತ್ತಾ, ಗಜಗಾತ್ರದ ಗೇಟಿನ ಹಿಂಭಾಗಕ್ಕೆ ನಿಂತಿತ್ತು ಅವರ ದೊಡ್ಡ ಬಂಗ್ಲೋ. ಕಾಲಿಂಗ್ ಬೆಲ್ಲಿನ ಸದ್ದಿಗೆ ವಿಧೇಯಳಾಗಿ ಬಂದು ಬಾಗಿಲು ತೆರೆದ ಪರಿಚಾರಿಕೆ "ಬರುತ್ತಾರೆ, ಇಲ್ಲಿ ಕುಳಿತಿರಿ" ಎಂದು ಪಹಾಡಿ ಶೈಲಿಯ ಹಿಂದಿಯಲ್ಲಿ ಹೇಳುತ್ತಾ ಎಡ ಭಾಗದಲ್ಲಿ ಇದ್ದ ಆಯತಾಕಾರದ ಕೋಣೆಯೊಳಗೆ ಕರೆದುಕೊಂಡು ಹೋದಳು. ಹಿತವಾದ ನಿಶ್ಶಬ್ದ ಮುಂದುವರೆದಿತ್ತು. ಬುಡಕಟ್ಟಿನ ಕಲೆಯನ್ನು ಸಾರುವ ಮರದ ಕೆತ್ತನೆಯ ಸಾಮಾನು ಎಡ ಮೂಲೆಯಲ್ಲಿ, ಅವರಿಗೆ ಬಂದಿರುವ ಪ್ರಶಸ್ತಿಗಳ ಸಾಲು ನಡುವಿನಲ್ಲಿ, ಕುಟುಂಬದ ಫೋಟೊಗಳನ್ನು ಅಂಟಿಸಿಕೊಂಡಿದ್ದ ಗೋಡೆಗಳು ಇನ್ನೊಂದು ದಿಕ್ಕಿನಲ್ಲಿ, ಅವುಗಳಿಗೆ ಅಂಟಿದಂತೆ ಅವರು ಬರೆದ ಪುಸ್ತಕಗಳ ಕೊಲ್ಯಾಜ್, ಅದರ ಪಕ್ಕದಲ್ಲೇ ಹಾಕಿದ್ದ ಲೆದರ್ ಸೋಫಾ ಸೆಟ್, ಅದರ ಎದುರಿಗೆ ಇರಿಸಿದ್ದ ಗಾಜಿನ ಟೀಪಾಯ್, ಅದರ ಮೇಲಿದ್ದ ಹತ್ತಾರು ಬಣ್ಣ ಬಣ್ಣದ ಪುಸ್ತಕಗಳನ್ನು ನೋಡುತ್ತಲೇ ನಿಂತಿದ್ದೆ. ನನ್ನದೇ ಕನಸಿನ ಅರಮನೆಯ ಸಣ್ಣ ಕೋಣೆಯೊಂದನ್ನು ಹೊಕ್ಕಿದಂತಹ ಅನುಭವ. ಎರಡೇ ನಿಮಿಷಗಳಲ್ಲಿ ಅದೇ ಸಹಾಯಕಿ ಪರಿಮಳಯುಕ್ತ, ಹಬೆಯಾಡುತ್ತಿದ್ದ ಗುಲಾಬಿ ಚಹ, ಅದರೊಂದಿಗೆ ಅಂದವಾದ ಆಕಾರವನ್ನು ಹೊಂದಿದ್ದ ಕುರುಕಲು ತಿಂಡಿ ಮತ್ತು ರುಚಿಯಾಗಿ ಕಾಣುತ್ತಿದ್ದ ಡ್ರೈ ಜಾಮೂನ್ ತಂದಿಟ್ಟು. "ಕುಳಿತು ಚಾಯ್ ಕುಡಿಯಿರಿ. ಬರುತ್ತಾರೆ" ಎಂದು ಹೇಳಿ ಹೋದಳು. ಆಹಾ, ಆ ವಾತಾವರಣ, ಅಲ್ಲಿದ್ದ ಮೌನ, ಆ ಪುಸ್ತಕಗಳು ಮತ್ತು ಗುಲಾಬಿ ಚಹ ! ಅದು ಯಾವುದೋ ಲೋಕದಲ್ಲಿದ್ದೆ. ಸುಮಾರು ಎತ್ತರದ, ದುಂಡುಮುಖದ, ಮೊಂಡು ಮೂಗಿನ, ಚಿಕ್ಕ ಚುರುಕು ಕಣ್ಣಿನ, ಸಣ್ಣಸಣ್ಣ ಬಿಳಿ ಕೂದಲಿನ ಅವರು ಬೂದು ಬಣ್ಣದ ಜಾಗಿಂಗ್ ಸೂಟ್ ಹಾಕಿಕೊಂಡು ಒಳ ಬಂದು 'ನಮಸ್ತೆ' ಎಂದಾಗ ಲ್ಯಾವೆಂಡರ್ ಘಮವಿದ್ದ ಅವರು ಪೂಸಿಕೊಂಡಿದ್ದ ಸೆಂಟ್ ಅಲ್ಲೊಂದು ಸ್ನೇಹಮಯ ವಾತಾವರಣವನ್ನು ಕಟ್ಟಿಕೊಟ್ಟಿತ್ತು.



**ವೈ.ಡಿ. ತೊಂಗ್ಚಿಯವರ ಮನೆ**

ಎಪ್ಪತ್ತರ ಆಸುಪಾಸು ವಯಸ್ಸಿನ ಹಿರಿಯ ಸಾಹಿತಿಗಳು ಅವರು. ಎಲ್ಲದರಲ್ಲೂ ನಾನೆಷ್ಟು ಸಣ್ಣವಳು. ಏನು ಮಾತು ? ಯಾವ ಮಾತನ್ನು ಎಲ್ಲಿಂದ ಶುರು ಶುರು ಮಾಡುವುದು ಎನ್ನುವ ಗೊಂದಲದಲ್ಲೇ, "ಇದು ನಿಮಗೆ" ಎನ್ನುತ್ತಾ ಮೈಸೂರು ಸ್ಯಾಂಡಲ್ ಸೋಪು ಮತ್ತು ಗಂಧದ ಕಡ್ಡಿಗಳ ಉಡುಗೊರೆ ಕಟ್ಟೊಂದನ್ನು ಅವರ ಕೈಗಿತ್ತು, ಸುಮ್ಮನೆ ಅವರನ್ನೇ ಮಿಕಮಿಕ ನೋಡುತ್ತಿದ್ದೆ. ಹಾಗೋ ಹೀಗೋ ಮಾತಂತೂ ಶುರುವಾಯಿತು. ಮರ್ಯಾದಸ್ತ ಬಿಗುವಿನ ವಾತಾವರಣ. ಅವರ ಮಾತುಗಳನ್ನು ಧ್ವನಿ ಮುದ್ರಿಸಿಕೊಳ್ಳುತ್ತಿದ್ದೆ. ಪಶ್ಚಿಮ ಕಮೆಂಗ್ ಜಿಲ್ಲೆಯಲ್ಲಿ ಬೊಂಡಿಲ್ಲಾ ಪ್ರದೇಶದ ಸುತ್ತಮುತ್ತಲು ಇರುವ 'ಶೆರ್ದುಪೆನ್' ಎನ್ನುವಬುಡಕಟ್ಟು ಜನಾಂಗಕ್ಕೆ ಸೇರಿದ 'ವೈಶೇ ದೋರ್ಜಿ ತೊಂಗ್ಚಿ' (ವೈ.ಡಿ.ತೊಂಗ್ಚಿ)ಯವರು ಅವರ ಬುಡಕಟ್ಟು ಜನರಲ್ಲಿ ಆಧುನಿಕ ರೀತಿಯ ವಿಧ್ಯಾಭ್ಯಾಸ ಪಡೆದ ಮೊದಲ ತಲೆಮಾರಿನವರು ಎನ್ನುವ ಹೆಗ್ಗಳಿಕೆ ಹೊಂದಿದ್ದಾರೆ. ಅಸ್ಸಾಮಿಸ್ ಭಾಷೆಯಲ್ಲಿ ಶಿಕ್ಷಣ ಪಡೆದ ಇವರು ಅರುಣಾಚಲ ಪ್ರದೇಶದ ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಅವರ ಧರ್ಮಪತ್ನಿಯು ಬುಡಕಟ್ಟು

ಜನಾಂಗದ ಮಕ್ಕಳಿಗಾಗಿ ಎರಡು ಶಾಲೆಗಳನ್ನು ನಡೆಸುತ್ತಿದ್ದಾರೆ. ನಮ್ಮ ಭೇಟಿಯ ದಿನದಂದು ಆಕೆ ಊರಿನಲ್ಲಿ ಇರಲಿಲ್ಲ. ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗು ಒಬ್ಬ ಮಗ. ಅಸ್ಸಾಮಿಸ್ ಭಾಷೆಯಲ್ಲಿ ಬರೆದರೂ ಅವರ ಎಲ್ಲಾ ಬರಹಗಳು ಅರುಣಾಚಲ ಪ್ರದೇಶದ ಮೂಲನಿವಾಸಿಗಳ ಜೀವನ, ಆಚರಣೆಗಳು, ನಂಬಿಕೆಗಳು, ಕಷ್ಟ-ಸುಖಗಳು, ಆಚರಣೆ-ಪದ್ಧತಿಗಳು, ಬುಡಕಟ್ಟು ಸಂವೇದನೆಗಳನ್ನೇ ಒಳಗೊಂಡಿದ್ದಾಗಿದೆ. ನೂರಾರು ಲೇಖನಗಳೊಂದಿಗೆ, 4 ಸಣ್ಣ ಕಥಾ ಸಂಕಲನಗಳು ಮತ್ತು 7 ಕಾದಂಬರಿಗಳನ್ನು ಮತ್ತು 1 ಜಾನಪದ ಕಥಾ ಸಂಕಲನವನ್ನು ಬರೆದಿದ್ದಾರೆ.

"ಆದಿ ಬುಡಕಟ್ಟಿಗೆ ಸೇರಿದ್ದ ಲುಮ್ಮೆಡಾಯಿ ಎನ್ನುವವರು ಕೆಲವು ಬರಹಗಳನ್ನು ಬರೆದಿದ್ದಾರೆ. ಆದರೆ ಅವರೀಗ ತೀರಿಕೊಂಡಿದ್ದಾರೆ. ನಮ್ಮಲ್ಲಿ ಸಾಹಿತ್ಯ ಅಷ್ಟೇನೂ ಬೆಳೆದಿಲ್ಲ" ಎನ್ನುತ್ತಲೇ ಮಾತು ಆರಂಭಿಸಿದ ಅವರೀಗ ಹಿಂದೊಮ್ಮೆ ಬೆಂಗಳೂರಿಗೆ ಬಂದ ವಿಷಯ ಹೇಳುತ್ತಿದ್ದರು. ಈಗಿನ ಸ್ಥಿತಿಗತಿಗಳ ಬಗ್ಗೆ ಕೇಳುತ್ತಿದ್ದರು. ಎದುರು ಬದುರಿನ ಸೋಫಾದ ಮೇಲೆ ಕುಳಿತ್ತಿದ್ದೆವು. ಇಷ್ಟು ಮಾಹಿತಿ ವಿನಿಮಯ ಸಮಯದಲ್ಲಿಯೇ ನಮ್ಮ ನಡುವಿನ ಬಿಗುವು ಕಡಿಮೆಯಾಗುತ್ತಿತ್ತು. ಅವರು "ಅರುಣಾಚಲ ಪ್ರದೇಶದ ಲೇಖಕರ ಫೋರಂನಿಂದ ನಾವು ಡಾ. ಯು. ಆರ್. ಅನಂತಮೂರ್ತಿಯವರನ್ನು ಕರೆಯಿಸಿ ಸನ್ಮಾನ ಮಾಡಿದ್ದೆವು" ಎಂದಾಗ ನಮ್ಮಿಬ್ಬರ ನಡುವೆ ಹಸನ್ಮುಖ ಸೇತುವೆಯಾಗಿತ್ತು. "ನನಗೆ ಮೈಸೂರಿನ ಭಾಷಾ ಭಾರತಿ ಪ್ರಶಸ್ತಿ ಬಂದಿದೆ" ಎಂದು ಅವರೆಂದಾಗ, ಅವರೆಡೆಗಿನ ನನ್ನ ಸೆಳೆತಕ್ಕೆ ಕಾರಣ ಸಿಕ್ಕಂತಾಯ್ತು. ಮೈಸೂರು ನನ್ನೂರು. ನನ್ನ ತವರೂರು. ಈಗ ನಾವಿಬ್ಬರು ಎಷ್ಟು ಸ್ನೇಹಿತರಂತಾಗಿದ್ದೆವು ಎಂದರೆ ನಾನೀಗ ಅವರ ಪಕ್ಕವೇ ಕುಳಿತಿದ್ದೆ. ಮಾತಿನ ಸದ್ದೂ ಹೆಚ್ಚಿತ್ತು. "ಪ್ರಾಥಮಿಕ ಶಾಲಾ ದಿನಗಳಲ್ಲೇ ಸಾಧಾರಣವಾಗಿ ಎಲ್ಲರಂತೆ ನಾನೂ ಬರೆಯುವುದನ್ನು ಕವನಗಳಿಂದಲೇ ಶುರು ಮಾಡಿದೆ. ಹೆಚ್ಚೇನು ಅಲ್ಲ. ಆದರೂ ಬರೆದ ಕವನಗಳನ್ನು ಕಳೆದುಕೊಂಡು ಬಿಟ್ಟಿದ್ದೇನೆ. ಈಗ ನನಗೆ ಕವನ ಬರೆಯಲು ಬರುವುದೇ ಇಲ್ಲ" ಎಂದು ಹೇಳುತ್ತಾ ಕಣ್ಣಲ್ಲೇ ನಕ್ಕರು. "ಪ್ರೌಢಶಾಲೆಗೆ ಬರುವ ವೇಳೆಗೆ ಲೇಖನಗಳನ್ನು, ಏಕಾಂಕ ನಾಟಕಗಳನ್ನು ಬರೆಯುತ್ತಿದ್ದೆ. ಉಪಾಧ್ಯಾಯರುಗಳು ಪ್ರೋತ್ಸಾಹ ಕೊಡುತ್ತಿದ್ದರು.

ಗೌಹಾಟಿಯಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳಿಗೆ ಕಳುಹಿಸುತ್ತಿದ್ದೆ. ಈಗಿನವರಿಗೆ ಪ್ರಕಟಿಸಲು ಹೆಚ್ಚು ಅವಕಾಶಗಳಿವೆ. ಆದರೆ ನಮಗೆ ಹಾಗೆ ಇರಲಿಲ್ಲ" ಎನ್ನುತ್ತಾ ಅವರ ಒಂದು ಅಸಾಮಿಸ್ ಭಾಷೆಯಲ್ಲಿರುವ ಪುಸ್ತಕವನ್ನು ಕೈಗೆತ್ತಿಕೊಂಡರು. "ಇದು ಯಾವ ಪುಸ್ತಕ? ಇದನ್ನು ನಾನು ಓದುವುದು ಹೇಗೆ? ಭಾಷಾಂತರವಾಗಿದೆಯಾ?" ಎಂದು ಕೇಳಿದೆ. ಅದು 2005ರಲ್ಲಿ ಅವರಿಗೆ ಅಕಾಡೆಮಿಯ ಪ್ರಶಸ್ತಿ ತಂದುಕೊಟ್ಟ ಪುಸ್ತಕ 'ಮೌನ್ ಔಂತ್ ಮುಖರ್ ಹ್ರಿದಯ್' (ಸ್ಥಬ್ಧ ತುಟಿಗಳು ಪಿಸುಗುಡುವ ಹೃದಯ) ಎನ್ನುವ ಪುಸ್ತಕವಾಗಿತ್ತು. ಅದನ್ನು ತೇಜ್ಪುರ್ ವಿಶ್ವವಿದ್ಯಾಲಯದ ಸಂಸ್ಕೃತಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ದೇಬಶ್ರೀ ಪ್ರಸಾದ್ ನಾಥ್ ಅವರು 'Silent Lips and Murmuring Hearts' ಎಂಬುದಾಗಿ ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಬದ್ಧದ್ವೇಷಿಗಳಾದ ಎರಡು ಬೇರೆಬೇರೆ ಬುಡಕಟ್ಟಿಗೆ ಸೇರಿದ ಯುವಕ ಮತ್ತು ಯುವತಿ ಪ್ರೀತಿಗೆ ಸಿಲುಕಿದ್ದಾಗ, ತಮ್ಮ ತಮ್ಮ ಜನಾಂಗದಿಂದ ಎದುರಿಸಬೇಕಾದ ಸಂಕಷ್ಟಗಳ ಎಳೆಯನ್ನು ಇಟ್ಟುಕೊಂಡು ಹೆಣೆದಿರುವ ಈ ಕಾದಂಬರಿಯಲ್ಲಿ ವೇಷಭೂಷಣ, ಆಚರಣೆ, ಪದ್ಧತಿಗಳು ಬೇರೆಬೇರೆಯಾಗಿದ್ದರೂ ತಾವು ಒಂದೇ ಮನುಷ್ಯ ಕುಲಕ್ಕೆ ಸೇರಿದವರು ಎನ್ನುವುದನ್ನು ಮನನ ಮಾಡಿಕೊಂಡು, ದ್ವೇಷ ಮರೆತು ಎರಡು ಬುಡಕಟ್ಟುಗಳು ಒಂದಾಗುವ ಕಥೆಯೊಂದನ್ನು ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ ಲೇಖಕರು. "ಈ ಪುಸ್ತಕದಿಂದ ನಿಮಗಿಷ್ಟವಾದ ಭಾಗವನ್ನು ದಯವಿಟ್ಟು ಓದಿಹೇಳಿ" ಎಂದು ಅವರ ಭುಜ ಅಲ್ಲಾಡಿಸುತ್ತಾ ಎಳೆಯ ಮಗುವಿನಂತೆ ದುಂಬಾಲುಬಿದ್ದೆ. ಒಂದೋ ಎರಡೋ ಪುಟಗಳನ್ನು ಓದಿ ಸುಮ್ಮನಾಗಬಹುದು ಎಂದುಕೊಂಡಿದ್ದರೆ ತಪ್ಪಾಗುತ್ತಿತ್ತು. ಎಷ್ಟೊಂದು ಪ್ರೀತಿಯಿಂದ, ಆಸಕ್ತಿಯಿಂದ, ಅಸ್ಸಾಮಿಸ್ ಭಾಷೆಯ ಪುಸ್ತಕದ ಕಾಲು ಭಾಗವನ್ನೇ ಭಾವಪೂರ್ಣವಾಗಿ, ನನಗಾಗಿ ಓದಿದರು. ಭಾಷೆ ಅರ್ಥವಾಗದೇನೋ ಎಂದು ಕೊಳ್ಳುತ್ತಲೇ ಕೇಳಿಸಿ ಕೊಳ್ಳುತ್ತಿದ್ದವಳಿಗೆ ಪ್ರತಿ ಪದವೂ ಪರಿಚಿತದಂತೆ ತೋರುತ್ತಿತ್ತು. ಜಾತಿ ದ್ವೇಷ, ಅಂತಸ್ತು ಬೇಧಗಳಿಂದ ಬೇರೆಯಾಗುವ ಪ್ರೇಮಿಗಳ ಭಾವ ಮನತಟ್ಟುತ್ತಿತ್ತು. ಓದಿದ ನಂತರ ಒಂದೈದು ನಿಮಿಷ ಇಬ್ಬರೂ ಸುಮ್ಮನೆ ಕುಳಿತಿದ್ದೆವು. ನಾವಿಬ್ಬರೂ ಈಗ ಜನ್ಮಗಳಿಂದ ಪರಿಚಿತರೇನೋ ಎನ್ನುವ ಹಾಗೆ ಮಾತನಾಡುತ್ತಿದ್ದೆವು. ಅವರ ಆ

ಧ್ವನಿ ಮುದ್ರಿಕೆಯನ್ನು ಜತನದಿಂದ ಕಾಪಾಡಿಕೊಂಡಿದ್ದೇನೆ. ನನ್ನ ಹೆಸರು ಬರೆದು ತೊಂಗ್ಚಿಯವರು ಸಹಿ ಹಾಕಿಕೊಟ್ಟಿರುವ 'Silent Lips and Murmuring Hearts' ಪುಸ್ತಕವು ನೆನಪುಗಳ ಭಂಡಾರವನ್ನು ಸೇರಿದೆ.

ಅವರ ಇಬ್ಬರು ಹೆಣ್ಣು ಮಕ್ಕಳು ಬೇರೆ ಬೇರೆ ರಾಜ್ಯಗಳಲ್ಲಿ ಸರ್ಕಾರೀ ಸೇವೆ ಮಾಡುತ್ತಾ ನೆಲೆಗೊಂಡಿದ್ದಾರೆ. 26 ವರ್ಷದ ಮಗ ಈಜುಪಟುವಾಗಿ ಒಂದಷ್ಟು ಹೆಸರುಗಳಿಸಿದ್ದ. 3–4 ವರ್ಷಗಳ ಹಿಂದೆ ಗೌಹಾಟಿಯಲ್ಲಿ ನಡೆದ ಕ್ರೀಡಾ ಮೇಳದ ಸ್ಪರ್ಧೆಯಲ್ಲಿ ಈಜುಕೊಳಕ್ಕೆ ಮೇಲಿನಿಂದ ಧುಮುಕುವಾಗ ಬೆನ್ನು ಮೂಳೆಯನ್ನು ಮುರಿದುಕೊಂಡು, ಈಗ ಗಾಲಿ ಕುರ್ಚಿ ಬಿಟ್ಟು ಏಳಲಾರದ ಸ್ಥಿತಿಯಲ್ಲಿದ್ದಾನೆ. ಸಮಸ್ತಕ್ಕೂ ಇನ್ನೊಬ್ಬರನ್ನು ಆಶ್ರಯಿಸ ಬೇಕಾದಂತಹ ಪರಿಸ್ಥಿತಿ. "ಅಪ್ಪ ವಯಸ್ಸಾದ ಮೇಲೆ ನಿಮ್ಮನ್ನು ನಾನು ನೋಡಿಕೊಳ್ಳುತ್ತೇನೆ ಎನ್ನುತ್ತಿದ್ದ ಯಾವಾಗಲು. ಆದರೆ ಈಗ ಪರಿಸ್ಥಿತಿ ಅದುಲು ಬದಲಾಗಿದೆ ನೋಡು" ಎಂದು ಅವರು ಹೇಳಿದಾಗ ಅವರೊಬ್ಬ ನಿರ್ಲಿಪ್ತ ಸಂತನಂತೆ ಕಂಡಿದ್ದು ಸುಳ್ಳಲ್ಲ. ಅಂದಿನಿಂದ ಏನನ್ನೂ ಬರೆಯದೆ ವೈ.ಡಿ.ತೊಂಗ್ಚಿ ಜೀವನ ಸಾಗಿಸುತ್ತಿದ್ದಾರೆ. ಕೇವಲ ಸಾಹಿತ್ಯ ಕೃಷಿಯ ಬಗ್ಗೆ ಮಾತನಾಡಬಹುದು ಎಂದುಕೊಂಡು ಬಂದಿದ್ದವಳೀಗ ಅವರ ಕುಟುಂಬ ಕಥೆಯ ಹಂಚಿಕೆದಾರಳಾಗಿದ್ದೆ.

ಬೌದ್ಧ ಧರ್ಮದ ಒಂದು ಬುಡಕಟ್ಟಿನಲ್ಲಿ ಮನುಷ್ಯ ಸತ್ತ ನಂತರ ಶವವನ್ನು 108 ತುಂಡುಗಳನ್ನಾಗಿ ಕತ್ತರಿಸಿ ನದಿಯಲ್ಲಿ ತೇಲಿ ಬಿಡುತ್ತಾರೆ. ಈ ರೂಢಿಯನ್ನೇ ಮೂಲವನ್ನಾಗಿ ಇಟ್ಟುಕೊಂಡು ರಚಿತವಾಗಿರುವ ಕಾದಂಬರಿ 'ಸವ್ ಕಟ ಮಾನುಸ್' (ಶವ ಕತ್ತರಿಸುವ ಮನುಷ್ಯ) ಇದನ್ನು ಆಗ್ರ ವಿಶ್ವವಿದ್ಯಾಲಯದ ಪ್ರೊ. ದುಬೆ ಅವರು ಇಂಗ್ಲೀಷಿಗೆ ಭಾಷಾಂತರಿಸಿದ್ದರಂತೆ. "ಆದರೆ ಅದನ್ನು ನಾನು ಒಪ್ಪಲಿಲ್ಲ. ಏಕೆಂದರೆ ಅವರು ಅದರಲ್ಲಿ ತಮ್ಮ ಕಲ್ಪನೆಗಳನ್ನು ಸೇರಿಸಿಬಿಟ್ಟಿದ್ದರು. ಅವರು ಅಸ್ಸಾಂನವರು. ಈ ಎರಡು ರಾಜ್ಯಗಳು ಸರಹದ್ದುಗಳನ್ನು ಹಂಚಿಕೊಳ್ಳುವಷ್ಟು ಹತ್ತಿರದಲ್ಲೇ ಇದ್ದರೂ ನಮ್ಮ ಸಂಸ್ಕೃತಿ, ಆಚಾರ, ವಿಚಾರ, ಆಹಾರ, ವಿಹಾರ ಎಲ್ಲವೂ ತೀರಾ ವಿಭಿನ್ನವಾಗಿವೆ. ಅದು ಆ ಲೇಖಕರಿಗೆ ತಿಳಿಯದೆ ಹೋಯ್ತು. ಉದಾಹರಣೆಗೆ ವಿಳ್ಳೇದೆಲೆಯನ್ನು ಅರುಣಾಚಲ ಪ್ರದೇಶದವರು ಉಪಯೋಗಿಸುವುದಿಲ್ಲ. ಅವರಿಗೆ ಅದರ ಪರಿಚಯವೇ ಇಲ್ಲ. ಆದರೆ ಅದು ಅಸ್ಸಾಂನ ಸಂಸ್ಕೃತಿಯ ಅವಿಚ್ಛಿನ್ನ ಭಾಗ.

ಅವರು ಇಂತಹ ಹಲವಾರು ತಮ್ಮ ವಿಷಯಗಳನ್ನು ಅದರಲ್ಲಿ ಸೇರಿಸಿಬಿಟ್ಟಿದ್ದರು. ಅದಕ್ಕೆ ಆ ಭಾಷಾಂತರವನ್ನು ಪ್ರಕಟಪಡಿಸಲಿಲ್ಲ" ಎಂದರು. ಮುಂದುವರೆಯುತ್ತಾ" ಅದನ್ನೇ ಈಗ ಗೌಹಾಟಿಯ ಹಿಂದಿ ಸೆಂಟಿನಲ್ ಎನ್ನುವ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ತಿನ್ಕೊ ಕುಮಾರ್ ಎನ್ನುವವರು 'Beyond Death' ಎನ್ನುವ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ಬಹಳ ಸಮಾಧಾನಕರವಾಗಿ ಬಂದಿದೆ. ಪ್ರಕಟಣೆಯೂ ಆಗಿದೆ" ಎಂದಾಗ, ಭಾಷಾಂತರದ ಬಗ್ಗೆ ಅವರ ಅಭಿಪ್ರಾಯವನ್ನು ಕೇಳಿದೆ. ಒಂದರಿಂದ ಮತ್ತೊಂದು ಪ್ರಾದೇಶಿಕ ಭಾಷೆಗಳಿಗೆ ಕೃತಿಗಳು ರೂಪಾಂತರಗೊಳ್ಳಬೇಕು. ಅದು ಆಗಲೇ ಬೇಕಾದ ಕೆಲಸ. ಆದರೆ ಮುಂದಿನ ತಲೆಮಾರುಗಳು ಮಾತೃಭಾಷೆಗಿಂತ ಇಂಗ್ಲಿಷ್ ಹಾಗು ಹಿಂದಿ ಭಾಷೆಯೆಡೆಗೆ ಮಾತ್ರ ಒಲವು ತೋರುತ್ತಿರುವುದು ಭಾಷಾಂತರ ಕೆಲಸಕ್ಕೆ ತೊಡಕಾಗುತ್ತಿದೆ. ಕೃತಿಯ ಮೂಲಭಾಷೆಯಿಂದ ಭಾಷಾಂತರ ಮಾಡುವುದು ಈ ದಿನಗಳಲ್ಲಿ ಅಸಾಧ್ಯವೇ ಸರಿ. ಆದರೆ ಕಡೆ ಪಕ್ಷ ಅದರ ಇಂಗ್ಲಿಷ್ ರೂಪದಿಂದಲಾದರೂ ಸ್ಥಳೀಯ ಭಾಷೆಗಳಿಗೆ ಭಾಷಾಂತರಗೊಳ್ಳಬೇಕು. ಒಂದಷ್ಟರ ಮಟ್ಟಿಗೆ ಸತ್ವ ಹೋಗಿಬಿಡುವ ಸಾಧ್ಯತೆ ಇದ್ದೇ ಇದೆ, ಆದರೂ ಪರಸ್ಪರ ಸಂಸ್ಕೃತಿಗಳ ಪ್ರಾಥಮಿಕ ಪರಿಚವಾದರೂ ಆಗುತ್ತದೆ. ಹೀಗೆ ಹೇಳುತ್ತಾ ಹೋದ ಹಿರಿಯರು ಇಂದಿನ ಯುವ ಬರಹಗಾರರು ಹೆಚ್ಚಾಗಿ ಕವನಗಳನ್ನು ಅದು ಬಿಟ್ಟರೆ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದಾರೆ. ಕಾದಂಬರಿ ಹಾಗು ಕಥೆಗಳನ್ನು ಬರೆಯುವುದರಲ್ಲಿ ತೊಡಗಿಸಿಕೊಂಡವರು ಅತೀ ವಿರಳ ಎಂದರು. "ವಾರಕ್ಕೊಮ್ಮೆಯೋ, ಪಕ್ಷಕ್ಕೊಮ್ಮೆಯೋ ಅರುಣಾಚಲ ಪ್ರದೇಶ ಲಿಟೆರರಿ ಸೊಸೈಟಿ' ಎನ್ನುವ ತಲೆಬರಹದಡಿ ಬೆರಳೆಣಿಕೆಯಷ್ಟು ಲೇಖಕರು ಸೇರುತ್ತಿರುತ್ತೇವೆ" ಎಂದರು.

"ಇಲ್ಲಿನ ಶಾಲೆಗಳಲ್ಲಿ ಈಗ ಅಸ್ಸಾಮಿಸ್ ಭಾಷೆಯನ್ನು ಕಲಿಸುತ್ತಿಲ್ಲ. ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಮಾತ್ರ ಕಲಿಸಲಾಗುತ್ತಿದೆ. ಅರುಣಾಚಲದ ಎಲ್ಲಾ ಭಾಷೆಗಳು ನಶಿಸಿಹೋಗಿ ಹಿಂದಿ ಈ ರಾಜ್ಯದ ಭಾಷೆಯಾಗಿ ಬಿಡುವ ದಿನ ದೂರವಿಲ್ಲ" ಎನ್ನುತ್ತಲೇ ತೊಂಗ್ಚಿಯವರು, ಲಿಪಿ ಇರುವ ಭಾಷೆಗಳನ್ನೇ ಉಳಿಸಿಕೊಳ್ಳುವುದು ಕಷ್ಟವಾಗುತ್ತಿರುವ ಈ ಕಾಲದಲ್ಲಿ ಲಿಪಿ ಇಲ್ಲದ ಭಾಷೆಯನ್ನು ಉಳಿಸಿಕೊಳ್ಳುವುದು ಅಸಾಧ್ಯವೇ ಸರಿ ಎಂದರು. ಯಾವುದೇ ಭಾಷೆಯ ಉಳಿವು ಬರವಣಿಗೆಯಿಂದ ಮಾತ್ರ ಆಗುವುದಿಲ್ಲ. ಭಾಷೆ ಜೀವಂತವಾಗಿ ಉಳಿಯುವುದು ಅದನ್ನು ಮಾತನಾಡುತ್ತಿದ್ದರೆ ಮಾತ್ರ. ಆದರೆ

ಈಗಿನ ಯುವಕರು ಹೆಚ್ಚುಪಾಲು ಇಂಗ್ಲಿಷ್‌ನಲ್ಲಿಯೇ ಮಾತನಾಡುತ್ತಾರೆ. ಹೀಗಾಗಿ ಅರಿವಿಗೆ ಬಾರದೆಯೇ ಭಾಷೆಗಳು ನಶಿಸಿ ಹೋಗುತ್ತಿವೆ. ಭಾಷೆಯಲ್ಲಿ ಬದಲಾವಣೆ ಅನಿವಾರ್ಯ ಮತ್ತು ಸ್ವಾಗತಾರ್ಹ ಆದರೆ ಒಂದು ಭಾಷೆ ಬಳಕೆಯೇ ಇಲ್ಲದೆ ನಶಿಸಿಹೋಗುವುದು ನೋವಿನ ಸಂಗತಿ ಎಂದು ಅವರು ಹೇಳಿದಾಗ ಅದು ಒಂದು ಸಮಸ್ತ ತಲೆಮಾರಿನ ಅಳಲಿನಂತೆ ಧ್ವನಿಸುತ್ತಿತ್ತು. ಸಾಹಿತ್ಯದ ಮೂಲಕ ಭಾಷೆಗಳನ್ನು ಬೆಳೆಸುವ ನಿಟ್ಟಿನಲ್ಲಿ ಸಾಹಿತ್ಯ ಅಕಾಡೆಮಿಗಳು ಆಸಕ್ತಿವಹಿಸಬೇಕು. ಬರಹಗಾರರನ್ನು ಅಧ್ಯಯನ ದೃಷ್ಟಿಯಿಂದ ಆಯ್ಕೆ ಮಾಡಿ ಕಡೆ ಪಕ್ಷ 6 ತಿಂಗಳುಗಳ ಕಾಲ ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಬೇಕು. ಅಲ್ಲಿನ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಪ್ರಾಥಮಿಕ ಅರಿವು ಪಡೆದುಕೊಂಡು ಅದರ ಬಗ್ಗೆ ತಮ್ಮ ತಮ್ಮ ಮಾತೃಭಾಷೆಯಲ್ಲಿ ಬರೆಯುವಂತೆ ಪ್ರೇರೇಪಿಸಬೇಕು ಎನ್ನುವುದು ಅವರ ಸಲಹೆಯಾಗಿತ್ತು.

"ಹತ್ತಿರ ಹತ್ತಿರ ನಲವತ್ತು ವರ್ಷಗಳ ಕಾಲ ಜನರ ಮಧ್ಯದಲ್ಲಿಯೇ ನನ್ನ ವೃತ್ತಿ ಇದ್ದದ್ದು ಮನುಷ್ಯ ಸಂವೇದನೆಗಳ ಬಗ್ಗೆ ನನ್ನ ದೃಷಿಕೋನವನ್ನು ವಿಸ್ತಾರಗೊಳಿಸಿತು. ಜನರ ಸಮಸ್ಯೆಗಳೊಡನೆ ನೇರವಾಗಿ ಮುಖಾಮುಖಿಯಾಗುತ್ತಿದ್ದದ್ದು ಸಂಬಂಧಗಳಲ್ಲಿನ ಸೂಕ್ಷ್ಮತೆಯನ್ನು ನನ್ನ ಬರಹಗಳಲ್ಲಿ ತರುವುದಕ್ಕೆ ಸಹಾಯವಾಯಿತು. ಜನರ ನಡುವೆ ಇರುವುದೇ ನನ್ನ ಬರವಣಿಗೆಗೆ ಪ್ರೇರಣೆ" ಎಂದು ಹೇಳಿಕೊಳ್ಳುತ್ತಲೇ ಈಗಿರುವ ಕಾನೂನುಗಳ ಮುಖ್ಯ ಉದ್ದೇಶ ಅಪರಾಧಿಗಳಿಗೆ ಶಿಕ್ಷೆ ಕೊಡುವುದೇ ಆಗಿದೆ. ಆದರೆ ಸ್ಥಳೀಯ ರಾಜಿ ಕಟ್ಟೆಗಳ ಮೂಲ ಆಶಯ ನೊಂದವರಿಗೆ ಪರಿಹಾರ ಒದಗಿಸಿ ಕೊಡುವುದಾಗಿರುತ್ತದೆ. ಈಗಲೂ ಸಿವಿಲ್ ರೀತಿಯ ವ್ಯಾಜ್ಯಗಳನ್ನು ಬುಡಕಟ್ಟು ಜನರ ಮುಖ್ಯಸ್ಥರು ನ್ಯಾಯಾಲಯದ ಹೊರತಾಗಿಯೇ ಪರಿಹರಿಸುತ್ತಾರೆ ಎನ್ನುವ ಮಾಹಿತಿಯನ್ನೂ ನೀಡಿದರು.

'ಸೋನಂ' ಜಾಗತಿಕ ಸಾಹಿತ್ಯ ಲೋಕದಲ್ಲಿಯೇ ಅಜರಾಮರವಾಗಿ ನಿಂತಿರುವ ಕೃತಿ. ಬಹುಪತಿತ್ವವನ್ನು ಬುಡಕಟ್ಟು ಸಮಾಜವು ಒಪ್ಪಿಕೊಂಡಿದ್ದರೂ, ಇನ್ನೊಂದು ಮದುವೆಯಾಗಿ, ತನ್ನನ್ನು ಮಾತ್ರ ಪ್ರೀತಿಸಿ ಏಕಪತ್ನಿ ನಿಷ್ಠೆಯನ್ನು ಉಳಿಸಿಕೊಂಡಿದ್ದ ಪತಿಗೆ ನೋವುಕೊಟ್ಟೆ ಎನ್ನುವ ಮನೋಭಾವವನ್ನು ಆಳವಾಗಿ ಬೆಳೆಸಿಕೊಂಡು, ಮಾನಸಿಕವಾಗಿ ಜರ್ಝರಿತಳಾಗುವ ಸುಂದರ ಹೆಣ್ಣೊಬ್ಬಳ ಕಥೆ. ಈ ಕಾದಂಬರಿಯನ್ನು ಮೊನ್ಪಾ ಭಾಷೆಯಲ್ಲಿ ಬರೆದಿದ್ದಾರೆ

ಮತ್ತು ಅದು ಚಲನಚಿತ್ರವೂ ಆಗಿದ್ದು, ಹಲವಾರು ಅಂತಾರಾಷ್ಟ್ರೀಯ ಸಿನೆಮಾ ಉತ್ಸವಗಳಲ್ಲಿ ಹೆಸರು ಮಾಡಿ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. "ನನಗೆ ಆ ಸಿನೆಮಾದ ಸಿ.ಡಿ ಸಿಗಬಹುದೇ" ಎಂದು ಕೇಳಿಕೊಂಡೆ. ಒಂದೇ ಒಂದು ಕೊನೆಯ ಕಾಪಿ ಇರುವುದಾಗಿಯೂ ಕೊಡುವುದಾಗಿಯೂ ತಿಳಿಸಿ ತೊಂಗ್ಚಿಯವರು ಒಳಕ್ಕೆ ಹೋದರು.



**ವೈ.ಡಿ. ತೊಂಗ್ಚಿಯವರ ಜೊತೆ ಲೇಖಕಿ**

ಅಲ್ಲೇ ಟೀಪಾಯಿಯ ಮೇಲೆ ಇದ್ದ ಟಿಬೇಟಿಯನ್ ಸಂಸ್ಕೃತಿಗೆ ಸಂಬಂಧಪಟ್ಟ ಚಿತ್ರಪಟಗಳ ಪುಸ್ತಕವೊಂದನ್ನು ತಿರುವಿಹಾಕುತ್ತಿದ್ದೆ. ಅದರಲ್ಲಿ ಒಂದು ಚಿತ್ರದ ಮೇಲಿನಿಂದ ಕಣ್ಣು ತೆರೆಯದಾದೆ. ಕೇಸರಿ ಬಣ್ಣದ ಹಿನ್ನೆಲೆಯಲ್ಲಿ ಕಪ್ಪು ಬಣ್ಣದ ಚಿತ್ರಗಳು ಎದ್ದು ಕಾಣುತ್ತಿದ್ದವು. ಮೊದಲು ಏನೂ ಸ್ಪಷ್ಟವಾಗಲಿಲ್ಲ. ಅದರ ಕೆಳಗೆ ಬರೆದಿದ್ದ ಬರಹವನ್ನು ನೋಡಿದೆ. ಅದೊಂದು 17ನೆಯ ಶತಮಾನದ ಮಧ್ಯ ಟಿಬೇಟಿನ ಪೇಂಟಿಂಗ್ ಆಗಿತ್ತು. ಕೋಣದ ತಲೆಬುರುಡೆಯ ಮಾಲೆ ಧರಿಸಿದ ಯಮಧರ್ಮರಾಯ, ತಲೆಯಲ್ಲಿ ಕೂದಲು ಇಲ್ಲದೆ ಇರುವ ತನ್ನ ಪತ್ನಿ ಚಾಮುಂಡಿಯನ್ನು ಬಳಸಿ, ಬಗ್ಗಿಸಿ, ಹತ್ತಿರದಲ್ಲಿ ಹಿಡಿದುಕೊಂಡು, ಇಬ್ಬರು ಪರಸ್ಪರ ದೃಷ್ಟಿ ಬೆಸೆದುಕೊಂಡಿದ್ದ ಚಿತ್ರವದು. ತುಸು ಹೆಚ್ಚೇ ಎನಿಸುವಷ್ಟು ಅಪ್ಯಾಯಮಾನವಾಗಿತ್ತು. 'ಚಾಮುಂಡಿ' ಎನ್ನುವ ಹೆಸರು ನೋಡಿದೊಡನೆ ಮೈಸೂರಿನ ನೆನಪು ಒತ್ತರಿಸಿ ಬಂದು ಅದರ ಒಂದು ಫೋಟೊ ತೆಗೆದುಕೊಂಡೆ. ಅಷ್ಟರಲ್ಲಿ ತೊಂಗ್ಚಿಯವರು " ಇದೊಂದೇ ಸಿಡಿ ಇರುವುದು. ಆದರೆ ಇದರಲ್ಲಿ ಏನೂ ಇಲ್ಲ. ಖಾಲಿ ಇದೆ. ಈಗ ತಾನೆ ಪರೀಕ್ಷಿಸಿದೆ" ಎಂದು ಬೇಸರಪಟ್ಟುಕೊಳ್ಳುತ್ತಾ ಆ ಸಿ.ಡಿಯೊಂದಿಗೆ ಬಂದರು.

ನನಗೂ ನಿರಾಸೆಯೇ. ಆದರೂ ಯಾಕೊ ಅದನ್ನೇ ಅವರಿಂದ ತೆಗೆದುಕೊಳ್ಳೋಣ ಎನ್ನಿಸಿ ಕೇಳಿದೆ. ಅಭ್ಯಂತರವಿಲ್ಲದೆ ಕೊಟ್ಟುಬಿಟ್ಟರು. ಸಂಜೆಯಾಗುತ್ತಿತ್ತು. ಊಟ ತಿಂಡಿಯ ಪರಿವೆಯಿಲ್ಲದೆ ಎರಡು ಕಪ್ ಚಹಾದೊಂದಿಗೆ ಒಂದು ಬದುಕಿಗಾಗುವಷ್ಟು ಮಾತನಾಡಿದ್ದೆವು. ಹೊರಡಲೇಬೇಕಿತ್ತು. ಬಾಗಿಲಿನವರೆಗೂ ಬಂದು ಆತ್ಮೀಯವಾಗಿ ಬೀಳ್ಕೊಟ್ಟರು. " ಇಲ್ಲಿ ಫೋನ್ ನೆಟ್‌ವರ್ಕ್ ಸಿಗುವುದು ಕಷ್ಟ. ಹಾಗಾಗಿ ಈಮೇಲ್ ಮಾಡುತ್ತಿರು" ಎಂದು ಅವರ ಈಮೇಲ್ ಐಡಿಗಳನ್ನು ಕೊಟ್ಟರು. ಈ ಭೇಟಿ ಎಂದೂ ಮರೆಯಲಾಗದ್ದು. 'ವೈಶೇ ದೋರ್ಜಿ ತೊಂಗ್ಚಿ' ಒಂದು ವ್ಯಕ್ತಿಯಲ್ಲ ಅವರೊಂದು ತಲೆಮಾರು. ಅವರೊಬ್ಬ ಲೇಖಕ ಅಲ್ಲ, ಅವರೇ ಸಾಹಿತ್ಯ. ಅವರೊಬ್ಬ ಸಂತ ಮಾತ್ರವಲ್ಲ ಹಿರಿದಾದ ಅನುಭವ. ಅದೇನು ಸುಕೃತವೋ ಈ ಅನುಭವ ನನ್ನದಾಗಿದ್ದು. ಅವರಲ್ಲಿಂದ ಹೊರಟಾಗ ಮನಸ್ಸಿನ ಖಾಲಿಯಲ್ಲಿ ಮಾಧುರ್ಯ ತುಂಬಿಕೊಂಡಿತ್ತು. ಮೆದುಳು ಶಾಂತವಾಗಿತ್ತು. ಬೆಂಗಳೂರಿಗೆ ಬಂದ ಮೇಲೆ 'ಸೋನಂ' ಗುಂಗು ಹೆಚ್ಚಾಗಿ, ಒಮ್ಮೆ ಪ್ರಯತ್ನಿಸಬಾರದೇಕೆ ಎನಿಸಿ ತೊಂಗ್ಚಿಯವರು ಕೊಟ್ಟಿದ್ದ ಖಾಲಿ ಸಿ.ಡಿಯನ್ನು ನನ್ನ ಲ್ಯಾಪ್‌ಟಾಪ್‌ಗೆ ಹಾಕಿದೆ. ಅದು ಯಾವ ಮಾಯೆ ನನ್ನನ್ನು ಅಷ್ಟು ಪ್ರೀತಿಸಿತ್ತೋ, ಲಕ್ಷಣವಾಗಿ ಪೂರ್ತೀ 'ಸೋನಂ' ಸಿನೆಮಾ ಚಾಲೂವಾಯ್ತು. ತಾಂತ್ರಿಕತೆಯ ದೃಷ್ಟಿಯಿಂದ ಅದ್ಭುತ ಸಿನೆಮಾ ಎನ್ನಲಾಗದಿದ್ದರೂ ಅತ್ಯದ್ಭುತ ಕಥೆಯಂತೂ ಹೌದು. ಸಂತೋಷದಿಂದ ತೊಂಗ್ಚಿಯವರಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ಅವರಿಗೂ ಈಗ ಒಂದು ಸಿ.ಡಿಯನ್ನು ಕಳುಹಿಸಿಕೊಡಬೇಕಿದೆ. ಉಲ್ಲಾಸದಿಂದ ನಾನೀಗ ಅವರದ್ದೇ ಮಾತುಗಳನ್ನು ಹಾಡುತ್ತಿದ್ದೇನೆ –

"ಬೆಳಗಾಗಿ ನಾ ಏಳುವಾಗ

ಮನೆಯವರ ಆರೋಗ್ಯ ನೋಡುವಂತಾಗಲಿ

ಕಿರಿಯರೆಲ್ಲಾ ಹೂವಿನಂತರಳಲು ನನ್ನಾಶೀರ್ವಾದವಿರಲಿ

ಹಿರಿಯರೆಲ್ಲಾ ಇನ್ನೂರು ವರ್ಷ ಬಾಳಲು ಹಾರೈಕೆಯಿರಲಿ

ತೋಟದ ಹೂವುಗಳು ಬಾಡದಿರಲಿ

ಮುಂದಿನ ಋತುವಲ್ಲಿ ನಾ ಚಿಟ್ಟೆಯಾಗಿ ಹಿಂದಿರುಗುವಾಗ. .."

* * * * *

## 15. ಆರ್ಕಿಡ್ ಹೂವಿನಂಥಾ ಕನ್ನಡಿಗರು

ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಮೊಟ್ಟಮೊದಲ ಕುಲಪತಿಗಳಾಗಿ ಸೇವೆ ಸಲ್ಲಿಸಿದವರು ನಮ್ಮ ಕೊಡಗಿನ ಹೆಮ್ಮೆಯ ಪುತ್ರ ಶ್ರೀಯುತ ಕಂಬಿಯಾಂಡ ಕಾರ್ಯಪ್ಪ ಬೆಳ್ಳಿಯಪ್ಪ. ಅರುಣಾಚಲ ಪ್ರದೇಶ ಸರ್ಕಾರದ ಮಾಜಿ ಕಾನೂನು ಕಾರ್ಯದರ್ಶಿಯಾಗಿದ್ದವರು ಶ್ರೀಮತಿ ರಾವ್ ಅವರೂ ಕನ್ನಡದವರೇ. ಇಟಾನಗರದಲ್ಲಿರುವ ರಾಮಕೃಷ್ಣ ಮಿಷನ್‌ನಲ್ಲಿ ಇರುವ ಸ್ವಾಮಿಜೀ ಶ್ರೀಕಾಂತ್ ಮಹಾರಾಜ್ ಅವರು, ಕೇಂದ್ರೀಯ ವಿದ್ಯಾಲಯದಲ್ಲಿ ಈಗಲೂ ಶಿಕ್ಷಕರಾಗಿರುವ ಶ್ರೀಯುತ ಬೇಂದ್ರೆಯವರು ಕನ್ನಡದವರು.

ಅರುಣಾಚಲ ಪ್ರದೇಶದ ಆರ್ಕಿಡ್ ಹೂವುಗಳನ್ನು ಜಗತ್ತಿಗೇ ಪರಿಚಯಿಸಿದ ವ್ಯಕ್ತಿಯು ಒಬ್ಬ ಕನ್ನಡಿಗ ಎನ್ನುವ ಹೆಮ್ಮೆ ಇತಿಹಾಸದ ಪುಟಗಳಲ್ಲಿ ಎಂದೂ ಮರೆಯಲಾದೆ. ಭಾರತಕ್ಕೆ ಬ್ರಿಟೀಷರಿಂದ ಮುಕ್ತಿ ಸಿಕ್ಕ ವರ್ಷವೇ (1947) ಸಿರಸಿಯಲ್ಲಿ ಜನಿಸಿ, ಅಲ್ಲೇ ವಿದ್ಯಾಭ್ಯಾಸ ಪಡೆದು ನಂತರ 1976ರಲ್ಲಿ ಧಾರವಾಡ ವಿಶ್ವವಿದ್ಯಾಲಯದಲ್ಲಿ "ಪಶ್ಚಿಮಘಟ್ಟಗಳ ಆರ್ಕಿಡ್ ಹೂವುಗಳು" ಎನ್ನುವ ವಿಷಯದಲ್ಲಿ ಡಾಕ್ಟರೇಟ್ ಪಡೆದ ಡಾ.ಸದಾನಂದಹೆಗ್ಡೆ ಅವರು ಅರುಣಾಚಲ ಪ್ರದೇಶ ಕಂಡ ಮೊಟ್ಟ ಮೊದಲ ವಿಜ್ಞಾನಿ ಎನ್ನುವ ಹೆಮ್ಮೆ ಕನ್ನಡ ನಾಡಿನದು. 1978 ರಿಂದ 2005ರಲ್ಲಿ ನಿವೃತ್ತಿ ಪಡೆಯುವವರೆಗೂ ಅರುಣಾಚಲ ಪ್ರದೇಶದಲ್ಲಿಯೇ ಇದ್ದು ಅಲ್ಲಿನ ಪರಿಸರವನ್ನು ಕ್ರಮಬದ್ಧವಾಗಿ ಉಳಿಸಲು ಬೆಳೆಸಲು ಇವರದ್ದು ಅನನ್ಯ ಕೊಡುಗೆ. ಪುಷ್ಪತಳಿ ಶಾಸ್ತ್ರವನ್ನು ಅಲ್ಲಿನ ಗುಡ್ಡಗಾಡು ಜನಕ್ಕೆ, ಅರಣ್ಯ ವಿಭಾಗಕ್ಕೆ, ಸರ್ಕಾರಕ್ಕೆ ಶಾಸ್ತ್ರೀಯವಾಗಿ ಮೊಟ್ಟಮೊದಲ ಬಾರಿಗೆ ಪರಿಚಯಿಸಿದ್ದು ಹೆಗ್ಡೆಯವರು. ಅರುಣಾಚಲ ಪ್ರದೇಶದ ವ್ಯವಸಾಯಕ್ಕೆ ಮತ್ತು ಪುಷ್ಪತಳಿ ಶಾಸ್ತ್ರದ ಸಂಶೋಧನೆಗಳಿಗೆ ತಾಂತ್ರಿಕತೆಯನ್ನು ಅಳವಡಿಸಿದ ಮೊಟ್ಟಮೊದಲ ವ್ಯಕ್ತಿ ಎಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದಿದ್ದಾರೆ. ವಿದ್ಯುತ್ಶಕ್ತಿ, ಫೋನ್, ಟಪಾಲುಗಳಂತಹ ಸಂಪರ್ಕ ಸೌಲಭ್ಯಗಳಿಲ್ಲದ ಕಾಲದಲ್ಲಿ ಪ್ರಯೋಗಾಲಯದಲ್ಲಿ ಹೂವಿನ ತಳಿಗಳಿಗೆ ಜೀವಕೊಟ್ಟು, ಬೆಳೆಸಿ, ಅವುಗಳ ಸಂಖ್ಯೆಯನ್ನು ದ್ವಿಗುಣಗೊಳಿಸಿ, ಗುಡ್ಡಗಾಡಿನ ಮಹಿಳೆಯರಿಗೆ ನೀಡಿ

ಅವರುಗಳು ಅದನ್ನು ತಮ್ಮತಮ್ಮ ಪ್ರದೇಶದಲ್ಲಿ ಬೆಳೆಸುವಂತೆ ಪ್ರೇರೇಪಣೆ ನೀಡಿದ್ದು ಇವರ ಸಾಧನೆ.

ಪ್ರೊ. ವಿಜ್ ಎನ್ನುವವರ ಸಹಕಾರ ಪಡೆದು 1984ರಲ್ಲಿ ಅರ್ಕಿಡ್ ಸೊಸೈಟಿ ಆಫ್ ಇಂಡಿಯವನ್ನು ಸ್ಥಾಪಿಸಿದರು. 1989 ರಲ್ಲಿ ಆರ್ಕಿಡ್ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರವನ್ನು ಹುಟ್ಟು ಹಾಕಿದ್ದೂ ಇವರೇ. ಇವರು ಆರ್ಕಿಡ್‌ಗಳ ಸ್ವರ್ಗ ಎಂದೇ ಪ್ರಸಿದ್ಧಿ ಪಡೆದ ಈಶಾನ್ಯ ಭಾರತದ ರಾಜ್ಯಗಳ ಪ್ರಾಂತ್ಯಕ್ಕೆ, ಅರಣ್ಯ ಇಲಾಖೆಯಿಂದ ನಿರ್ದೇಶಕರಾಗಿ 1991ರಲ್ಲಿ ನೇಮಿಸಲ್ಪಟ್ಟರು. ಜಗತ್ತಿನಲ್ಲೇ ಅತ್ಯಂತ ಪ್ರಾಚೀನವಾದ ಮತ್ತು ಸಹಜವಾದ ಕಾಡು ಎನ್ನಿಸಿಕೊಂಡಿರುವ ಅರುಣಾಚಲ ಪ್ರದೇಶದ ಒಂದು ಭಾಗದ ಕಾಡನ್ನು ಮರದ ದಿಮ್ಮಿಗಳನ್ನು ತಯಾರು ಮಾಡುವ ಜಾಗವನ್ನಾಗಿ ಪರಿವರ್ತಿಸಲು ಸರ್ಕಾರ ಮುಂದಾದಾಗ ಹೋರಾಟದ ಹಾದಿ ಹಿಡಿದು, ಸರ್ಕಾರದ ಮನವೊಲಿಸಲು ಪಾಡು ಪಟ್ಟು ಅಂತೂ ಯಶಸ್ವಿಯಾಗಿ ಕಾಡನ್ನು ಉಳಿಸಿಕೊಟ್ಟದ್ದು ಇದೇ ಕನ್ನಡಿಗ. ಅಷ್ಟೇ ಅಲ್ಲ ಭಾರತೀಯ ವನ್ಯಜೀವನ ಸಂರಕ್ಷಣಾ ಕಾಯಿದೆ 1972, ಇದರ ಪ್ರಕಾರ ಅರಣ್ಯ ಸಂರಕ್ಷಣೆ ಎಂದರೆ ದೊಡ್ಡ ದೊಡ್ಡ ಗಿಡ ಮರಗಳನ್ನು ರಕ್ಷಿಸುವುದಕ್ಕೆ ಮತ್ತು ಅಲ್ಲಿನ ಪ್ರಾಣಿ ಸಮೂಹವನ್ನು ರಕ್ಷಿಸುವುದಕ್ಕೆ ಮಾತ್ರ ಆದ್ಯತೆ ಇತ್ತು. ಆದರೆ ಅರಣ್ಯ ಎಂದರೆ ಅಲ್ಲಿ ಬೆಳೆಯುವ ಹೂವುಗಳನ್ನೂ ರಕ್ಷಿಸಿದರೆ ಮಾತ್ರ ಜೈವಿಕ ಸಮತೋಲನ ಸಾಧ್ಯ ಎನ್ನುವ ಅರಿವು ಸಾಮಾನ್ಯರಿಗಿರಲಿ ಕಾನೂನು ತಜ್ಞರಿಗೂ ಇರಲಿಲ್ಲ. ಹೆಗ್ಡೆಯವರು ಹೂವುಗಳ ಸಂರಕ್ಷಣೆಯ ಮಹತ್ವವನ್ನು, ಅವುಗಳ ಅಳಿವಿನಿಂದ ಪರಿಸರದಲ್ಲಿ ಉಂಟಾಗುವ ಅಸಮತೋಲನವನ್ನು ಶಾಸಕಾಂಗಕ್ಕೆ ಮನವರಿಕೆ ಮಾಡಿಕೊಟ್ಟು, ಪ್ರಾಣಿಗಳು ಮತ್ತು ಇತರೆ ಗಿಡ, ಮರಗಳಂತೆಯೇ ಹೂವುಗಳನ್ನೂ ಅರಣ್ಯ ಸಂಪತ್ತು ಮತ್ತು ಅವುಗಳನ್ನು ರಕ್ಷಿಸಬೇಕು ಎನ್ನುವ ಅಂಶವನ್ನು ಇದೇ ಕಾಯಿದೆಯಲ್ಲಿ ಸೇರಿಸಲು ಸಫಲರಾಗಿದ್ದಾರೆ. ಇದನ್ನು ಖ್ಯಾತ ಪಕ್ಷಿವೀಕ್ಷಕ ತಜ್ಞರಾಗಿದ್ದ ಸಲೀಂ ಅಲಿಯವರು ಗುರುತಿಸಿ ವಿಶ್ವದಾದ್ಯಂತ ಇದರ ಬಗ್ಗೆ ಪ್ರಚುರಪಡಿಸಿದ್ದಾರೆ. 'ಲೇಡಿ'ಸ್ ಸ್ಲಿಪ್ಪರ್ (Ladie's Slipper) ಆರ್ಕಿಡ್ ಅಥವಾ ಸ್ಲಿಪ್ಪರ್ ಆರ್ಕಿಡ್' ಎಂದು ಗುರುತಿಸಲ್ಪಡುವ ಒಂದುಬಗೆಯ ಅರ್ಕಿಡ್ ಹೂವು ಆಗತಾನೆ ನಡಿಗೆ ಕಲಿತ ಪುಟ್ಟ ಮಕ್ಕಳಗೆ

ಹಾಕುವ ಶೂಜ಼ಿನಾಕಾರದ ಹೂವು. ಕೆಂಪು, ಕಂದು, ಗುಲಾಬಿ, ಹಳದಿ ಮತ್ತು ಬಿಳಬಣ್ಣಗಳ ಮಿಶ್ರಣದಲ್ಲಿ ಬಿಡುವ ಈ ಹೂವು ಅತೀ ಅಪರೂಪದ್ದಾಗಿದ್ದು ನೋಡಲು ಅದ್ಭುತ ಸೌಂದರ್ಯವನ್ನು ಹೊಂದಿದೆ. ದಕ್ಷಿಣ ಅಮೆರಿಕಾ, ಯೂರೋಪಿನ ಕೆಲವು ಭಾಗಗಳು ಹಾಗು ಏಷ್ಯಾ ಖಂಡದಲ್ಲಿ ಮಾತ್ರ ಸಹಜವಾಗಿ ಬೆಳೆಯುತ್ತಿದ್ದ ಈ ಹೂವು ಅಳಿದುಹೋದ (ವಿನಾಶದಂಚಿನ) ಪ್ರಭೇದವಾಗಿತ್ತು. ಬರೀ ಚಿತ್ರಪಟಗಳಲ್ಲಿ ಮಾತ್ರ ನೋಡಲು ಸಿಗುತ್ತಿದ್ದ ಈ ಹೂವನ್ನು ಮತ್ತೆ ಅರುಣಾಚಲ ಪ್ರದೇಶದ ಕಾಡುಗಳಲ್ಲಿ ಗುರುತಿಸಿ, ಕಂಡು ಹಿಡಿದು ಅದರ ಬಗ್ಗೆ ಹೆಚ್ಚಿನ ಮಟ್ಟದ ಸಂಶೋಧನೆ ಮಾಡಿದ ಹೆಮ್ಮೆ ಕನ್ನಡಿಗ ಹೆಗ್ಡೆಯವರದ್ದು. ಇಷ್ಟೊಂದು ಮೊದಲುಗಳಿಗೆ ಕಾರಣವಾದ, ಎಲ್ಲಾ ಕನ್ನಡಿಗರೂ ಎಷ್ಟೊಂದು ಹೆಮ್ಮೆ ಪಡಲೇಬೇಕಾದ ಈ ವ್ಯಕ್ತಿಯನ್ನು ಮತ್ತು ಅವರು ಮಾಡಿರುವ ಕೆಲಸಗಳನ್ನು ನೋಡಲೇಬೇಕೆಂದು ಹೊರಟೆ.

ಇಟಾನಗರದಿಂದ ಬೊಂಡಿಲ್ಲಾ ಎನ್ನುವ ಸಣ್ಣ ನಗರ ಪ್ರದೇಶದ ಕಡೆಗೆ ಹೋಗುವಾಗ ಇಕ್ಕೆಲಗಳಲ್ಲೂ ಸಿಗುವುದು ಸೆಸಾ ಎನ್ನುವ ಸುಂದರ ಶೀತವಲಯ ಅರಣ್ಯ ಪ್ರದೇಶ. ಹೆಚ್ಚು ಸಮಯ ಮಳೆಗಾಲವೇ ಇಲ್ಲಿ ಇರುವುದರಿಂದ ಮತ್ತು ಹಿಮಪಾತವೂ ಆಗುವುದರಿಂದ ಇಲ್ಲಿನ ರಸ್ತೆಗಳು ಅತ್ಯಂತ ದುರ್ಗಮವಾಗಿಯೂ, ವಾಹನ ಸಂಚಾರಕ್ಕೆ ದುಸ್ತರವಾಗಿಯೂ ಇವೆ. ಬೊಂಡಿಲ್ಲಾ ತಲುಪುವ ಮೊದಲೇ 24 ಕಿಲೋಮೀಟರ್ಗಳ ದೂರದಲ್ಲಿಯೇ ಒಂದು ಸಣ್ಣ ತಿರುವಿನಲ್ಲಿ ಟಿಪಿ ಎನ್ನುವ ಅರೆಪಟ್ಟಣ ಪ್ರದೇಶವಿದೆ. ಇದು ಸೆಸಾ ಅರಣ್ಯ ಪ್ರದೇಶದಲ್ಲಿ 10,633 ಕ್ಕೂ ಹೆಚ್ಚು ಬೆಟ್ಟೇಣುಗಳು ಇವೆ. ವರ್ಷಕ್ಕೆ 3000 ಮಿಲಿ ಮೀಟರ್‌ಗಳಷ್ಟು ಮಳೆ ಬೀಳುವ ಈ ಜಾಗವು ಸಮುದ್ರ ಮಟ್ಟದಿಂದ 8000 ಅಡಿಗಳಷ್ಟು ಎತ್ತರದಲ್ಲಿದೆ. ಇದರ ತಪ್ಪಲಲ್ಲೇ ಟಿಪಿ ನದಿಯ ನಾಲೆಯೊಂದು ಹರಿಯುತ್ತಿದೆ.

ಸೂರ್ಯನ ಶಕ್ತಿಯನ್ನೇ ಪಡೆದು ನಿತ್ಯಹರಿದ್ವರ್ಣಳಾಗುವ ಈ ಪ್ರಕೃತಿಯದ್ದು ಅದೆಷ್ಟು ರಹಸ್ಯ ವರ್ಣ ! ಸೂರ್ಯನನ್ನೂ ಸೋಲಿಸುವಷ್ಟು ಕಪ್ಪು ಚೆಲುವೆ ಅವಳಲ್ಲಿ. ಮನದ ತಣಿವಿಗೆ ಹೃದಯವೇ ಬೆಚ್ಚನೆಯ ಅಪ್ಪುಗೆಯಾದಂತಹ ಭಾವ ಮೂಡಿಸುತ್ತಾಳೆ ಅವಳಲ್ಲಿ. ಇಲ್ಲಿನ ಸೌಂದರ್ಯವನ್ನು ನೋಡಿದಾಗಲೇ ತಿಳಿಯಲು ಸಾಧ್ಯ ಯಾಕಾಗಿ ಚೀನಾ

ದೇಶವು ಸದಾಕಾಲವೂ ಸೆಸಾ ತನಗೇ ಸೇರಬೇಕೆಂದು ಕ್ಯಾತೆ ತೆಗೆಯುತ್ತಿರುತ್ತದೆ ಎಂದು. ಇಂತಹ ಅದ್ಭುತ ಚೆಲುವಿನ ತಾಣದ ಒಂದು ಬೆಟ್ಟೇಣಿನ ಮೇಲ್ಗಡೆ ಹೆಗ್ಡೆಯವರು 'ಸೆಸಾ ಆರ್ಕಿಡ್ ಸೆಂಚುರಿ' ಎಂದು ಪ್ರತ್ಯೇಕವಾಗಿ ಕೇವಲ ಆರ್ಕಿಡ್ಗಳಿಗಾಗಿಯೇ ಒಂದು ಅರ್ಕಿಡ್ ಧಾಮವನ್ನು ಸ್ಥಾಪಿಸಿದ್ದಾರೆ. ಶೀತಕ್ಕೆ ತುಕ್ಕುಗಟ್ಟಿದ್ದ ಗೇಟನ್ನು ತಳ್ಳಿ ಒಳಗೆ ಹೋದೆ. ಅಲ್ಲಿ 1000 ಚದರ ಅಡಿಗಳಷ್ಟು ಜಾಗದಲ್ಲಿ 200ಕ್ಕೂ ಹೆಚ್ಚು ಆರ್ಕಿಡ್ ಪ್ರಬೇಧಗಳನ್ನು ರಕ್ಷಿಸಿ ಇಡಲಾಗಿದೆ. ಅದರಲ್ಲಿ 114 ಪ್ರಬೇಧಗಳು ಭಾರತದ್ದಾಗಿದ್ದು ಇನ್ನು ಉಳಿದವುಗಳನ್ನು ವಿದೇಶಗಳಿಂದ ಆಮದು ಮಾಡಿಕೊಂಡು ಇಲ್ಲಿ ಅವುಗಳನ್ನು ಬೆಳೆಸಲಾಗುತ್ತಿದೆ. ಅ ದಿನ ಅಲ್ಲಿ ಇಬ್ಬರು ಕೆಲಸದವರು ಬಿಟ್ಟರೆ ಮತ್ತ್ಯಾರೂ ಇರಲಿಲ್ಲ. ಹೆಚ್ಚಿನ ಮಾಹಿತಿಯೂ ಸಿಗಲಿಲ್ಲ. ಸದಾನಂದ ಹೆಗ್ಡೆಯವರಿಗೆ ನಿವೃತ್ತಿಯಾಗಿದ್ದು ತಿಳಿಯಿತು. ಆದರೆ ಅವರು ಈಗ ಎಲ್ಲಿದ್ದಾರೆಂದು ತಿಳಿಯಲೇ ಇಲ್ಲ. ಇಲ್ಲಿಂದ ದಕ್ಷಿಣಕ್ಕೆ 50 ಕಿಲೋ ಮೀಟರ್ಗಳಷ್ಟು ಪ್ರಯಾಣ ಮಾಡಿದರೆ ದಿರಾಂಗ್ ಎನ್ನುವ ಜಾಗದಲ್ಲಿ ಹೆಗ್ಡೆಯವರೇ ಒಂದು 'ಆರ್ಕಿಡ್ ಕೇಂದ್ರ'ವನ್ನು ಸ್ಥಾಪಿಸಿದ್ದಾರೆ. ಆ ರಸ್ತೆಗಳಸ್ಥಿತಿ, ಜಿಟಿಜಿಟಿ ಮಳೆಯನ್ನು ಕಾರಣವಾಗಿಟ್ಟುಕೊಂಡು ಅಲ್ಲದೆ ನನ್ನ ಮುಂದಿನ ಪ್ರಯಾಣದ ಗುರಿ ಇನ್ನೂ ದೂರವಿದ್ದುದ್ದರಿಂದ ಅನಿವಾರ್ಯವಾಗಿ ದಿರಾಂಗ್‌ಗೆ ನಾನು ಹೋಗಲಿಲ್ಲ.

Rhynchostylis Retusa ಅಥವಾ Foxtail Orchid ಎನ್ನುವುದು ಅರುಣಾಚಲ ಪ್ರದೇಶದ ರಾಜ್ಯದ ಹೂವೆಂದು ಘೋಷಿಸಲಾಗಿದೆ. ಇದನ್ನು ಬಯಲು ಸೀಮೆಯವರು ಸೀತಾಳೆ ಅಥವಾ ಸೀತೆ ಹೂವೆಂದು ಕರೆದರೆ ಮಲೆನಾಡಿನವರು ಕೊಪ್ಪು ಹೂವು ಎಂದು ಕರೆಯುತ್ತಾರೆ. ಮೇ ಮತ್ತು ಜೂನ್ ತಿಂಗಳಲ್ಲಿ ಅರಳಿ ಹದಿನೈದು ದಿನಗಳವರೆಗೂ ನಳನಳಸುವ ಈ ಆರ್ಕಿಡ್ ಸಣ್ಣ ಸಣ್ಣ ಕೊಳವೆಯಾಕಾರಾದ ನೂರು ಹೂವುಗಳು ಒತ್ತಾಗಿ ದಂಡೆಯಂತೆ ಒಂದಕ್ಕೊಂದು ಅಂಟಿದಂತೆ ಜೋಡಣೆಗೊಂಡು ಒಂದೇ ಹೂವಿನಂತೆ ಕಾಣುತ್ತದೆ. ರಕ್ತ ಸುರಿವ ಗಾಯಗಳನ್ನು ವಾಸಿ ಮಾಡಲು ಆಯುರ್ವೇದದಲ್ಲಿ ಈ ಹೂವನ್ನು ಬಳಸಲಾಗುತ್ತದೆ. ಆಂಧ್ರ ಪ್ರದೇಶದಲ್ಲೂ ಬೆಳೆಯುವ ಈ ಹೂವು ಬಿಳಿ, ಗುಲಾಬಿ ಮತ್ತು ತಿಳಿ ನೀಲಿ ಬಣ್ಣದ ಈ ಹೂಗುಂಪು ಗಿಡದ

ಮೇಲಿನಿಂದ ಹೆಣ್ಣಿನ ಜಡೆಯೊಂದು ಭೂಮಿಯಕಡೆಗೆ ಬಗ್ಗಿ ನೋಡುತ್ತಿರುವಂತೆ ಕಾಣುತ್ತದೆ. ನಿಜಾರ್ಥದ ಭೂಮುಖ ಸುಂದರಿ. ಅಸ್ಸಾಂನ ಬಿಹು ನೃತ್ಯಗಾರ್ತಿಯರ ಕೇಶಾಲಂಕಾರಕ್ಕೆ ಇರಲೇ ಬೇಕಾದ ಹೂವಿದು. ಆರ್ಕಿಡ್ ಹೂವುಗಳು ನೋಡಲು ಸುಂದರ ಎನ್ನುವುದು ಬಿಟ್ಟರೆ ನನಗೆ ಪರಿಸರ ವಿಜ್ಞಾನದ ದೃಷ್ಟಿಯಿಂದ ಅದರ ಮಹತ್ವ ಏನೆಂದು ತಿಳಿದಿರಲಿಲ್ಲ. ಬೆಂಗಳೂರಿಗೆ ಹಿಂದಿರುಗಿದ ಮೇಲೆ ಒಮ್ಮೆ ಸದಾನಂದ ಹೆಗ್ಡೆಯವರ ನೆನಪಾಯಿತು. ಅಂತರ್ಜಾಲದಲ್ಲಿ ಅವರ ಹೆಸರು ಹಾಕಿ ಹುಡುಕಿದೆ. ಭಾರತೀಯ ಆರ್ಕಿಡ್ ಸೊಸೈಟಿಯವರ ವೆಬ್‌ಸೈಟ್‌ನಲ್ಲಿ ಅವರ ಹೆಸರು ಸಿಕ್ಕಿತೇ ಹೊರತು ಅವರು ಅರುಣಾಚಲ ಪ್ರದೇಶದಲ್ಲಿ ಮಾಡಿರುವ ಅಸಾಮಾನ್ಯ ಕೆಲಸದ ಬಗ್ಗೆಯಾಗಲಿ, ಆರ್ಕಿಡ್ ಹೂವಿನ ಉಳಿವಿನಲ್ಲಿ ಅವರ ಪಾತ್ರದ ಬಗ್ಗೆಯಾಗಲೀ ಹೆಚ್ಚಿನ ಮಾಹಿತಿ ಸಿಗಲಿಲ್ಲ. ನನ್ನ ಆಸಕ್ತಿ ತಣಿಯಲಿಲ್ಲ. ಅವರ ಕಚೇರಿಗೆ ಫೋನಾಯಿಸಿ ಸದಾನಂದ ಹೆಗ್ಡೆಯವರ ಫೋನ್ ಸಂಖ್ಯೆಗಳನ್ನು ಪಡೆದುಕೊಂಡೆ.

ಅಲ್ಲಿಂದ ನಿತ್ಯವೂ ಅವರಿಗೆ ಫೋನ್ ಮಾಡಲು ಶುರು ಮಾಡಿದೆ. ಅವರು ಇಲ್ಲೇ ನಮ್ಮ ಬೆಂಗಳೂರಿನಲ್ಲಿಯೇ ಇರುವ ವಿಷಯ ತಿಳಿಯಿತು. ಆದರೆ ಅವರು ಊರಿನಲ್ಲಿದ್ದಾಗ ನನಗೆ ಮತ್ತೇನೋ ಕೆಲಸವಾಗಿ, ಅವರು ಭೇಟಿಗೆ ತಯಾರಾಗಿದ್ದಾಗ ನಾನು ಊರಿನಲ್ಲಿ ಇಲ್ಲವಾಗಿ ಒಟ್ಟಿನಲ್ಲಿ ಈ ಪುಸ್ತಕ ಬರೆಯುವವರೆಗೂ ಅವರ ಭೇಟಿಯೇ ಆಗಿಲ್ಲ. ಭೇಟಿ ಮಾಡಲೇ ಬೇಕೆಂಬ ಹಠವೂ ಇಳಿದಿಲ್ಲ. ಎಪ್ಪತ್ತರ ಆಸುಪಾಸಿನ ಹಿರಿಯರು ಫೋನಿನಲ್ಲಿಯೂ ಎಷ್ಟೊಂದು ಆತ್ಮೀಯವಾಗಿ ಮಾತನಾಡಿಸಿ ಅವರ ಅನುಭವಗಳನ್ನು ಪ್ರೀತಿಯಿಂದ ಹಂಚಿಕೊಂಡರು.

ಜಗತ್ತು ತಮ್ಮನ್ನು ಕಡೆಗಣಿಸಿದೆ ಎಂದು ಬಲವಾಗಿ ನಂಬಿ ತಮ್ಮ ಬಗ್ಗೆ ಸ್ವಮರುಕ ಬೆಳೆಸಿಕೊಂಡು ಅಧುನಿಕತೆ ಮತ್ತು ವಿಜ್ಞಾನದ ಸಾಧ್ಯತೆಗಳಿಗೆ ಕಣ್ಣುಮುಚ್ಚಿಕೊಂಡಂತಾಗಿದ್ದ ಅರುಣಾಚಲದ ಗುಡ್ಡಗಾಡು ಜನರ ಮನಸನ್ನು ಅವರ ನಂಬಿಕೆ, ಮೂಢನಂಬಿಕೆಗಳಿಂದ ಹೊರತಂದು ಒಲಿಸಿ ಕೆಲಸ ಮಾಡುವಾಗಿನ ಅವರ ಅನುಭವಗಳನ್ನು ನಿತ್ಯವೂ ಒಂದೊಂದೇ ಕಣ್ಣಿಗೆ ಕಟ್ಟಿದಂತೆ ಹೇಳಿದರು ಹೆಗ್ಡೆಯವರು. ‘ಕರ್ನಾಟಕ ಸರ್ಕಾರಕ್ಕೂ ಆರ್ಕಿಡ್

ಹೂವಿನ ಮಹತ್ತ್ವದ ಬಗ್ಗೆ ಮನವಿ ಸಲ್ಲಿಸಲಾಗಿದ್ದು ಇನ್ನೂ ಅದರ ಬಗ್ಗೆ ಕೆಲಸಗಳೇನೂ ನಡೆಯುತ್ತಿಲ್ಲ' ಎಂದು ಅವರೆಂದಾಗ ನನಗೆ ಕುತೂಹಲ ಉಂಟಾಯಿತು. 'ಆರ್ಕಿಡ್ ಹೂವುಗಳು ಸುಂದರ ಎನ್ನುವುದನ್ನು ಬಿಟ್ಟರೆ ಪರಿಸರ ಶಾಸ್ತ್ರದ ದೃಷ್ಟಿಯಿಂದ ಅದರ ಮಹತ್ವ ಏನು? ನೀವ್ಯಾಕೆ ಆರ್ಕಿಡ್‌ಗೋಸ್ಕರವೇ ಅಷ್ಟು ಕೆಲಸ ಮಾಡಿದ್ದು?" ಎಂದು ಕೇಳಿಯೇಬಿಟ್ಟೆ. ಅವರ ಮಾತುಗಳಿಂದ ನನ್ನ ಅಜ್ಞಾನ ದೂರವಾಯಿತು. ಸಸ್ಯ ಶಾಸ್ತ್ರದಲ್ಲಿಯೇ ಪ್ರಾಚೀನ ಪ್ರಭೇದಗಳಲ್ಲಿ ಒಂದಾದ ಆರ್ಕಿಡ್ ಹೂವು ಅತ್ಯಂತ ಗಟ್ಟಿ ಪ್ರಭೇದ ಎಂದು ಗುರುತಿಸಿಕೊಂಡಿದೆ. ಶತಶತಮಾನಗಳಿಂದ ಎಲ್ಲಾ ನೆಲಗುಣ ಬದಲಾವಣೆಗೂ, ಹವಾಮಾನ ಸ್ವಭಾವದಲ್ಲಿನ ಏರುಪೇರಿಗೂ ಹೊಂದಿಕೊಳ್ಳುವಂತೆ ತನ್ನ ಬೇರಿನಿಂದ ಎಲೆಯವರೆವಿಗೂ, ಹೂವಿನ ಗಾತ್ರ, ಅಳತೆ, ಆಕಾರವನ್ನೂ ತನಗೆ ತಾನೇ ಸಹಜ ಮಾರ್ಪಾಡುಗಳನ್ನು ಮಾಡಿಕೊಂಡು, ವೈರಸ್ ಮತ್ತು ಫಂಗಸ್‌ಗಳಿಂದ ರಕ್ಷಣಾತ್ಮಕ ಚಾಕಚಕ್ಯತೆಯನ್ನು ಮೈಗೂಡಿಸಿಕೊಂಡು, ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಮನುಷ್ಯನ ಹಿಂದಿನಿಂದಲೂ ಅವನ ಜೊತೆಜೊತೆಗೂ ಬದುಕಿ ಬಂದಿರುವುದು ಆರ್ಕಿಡ್ ಹೂವುಗಳ ವೈಶಿಷ್ಟ್ಯ. ಆರ್ಕಿಡ್ ಹೂವುಗಳನ್ನೇ ನಂಬಿಕೊಂಡಿರುವ ಹಲವಾರು ಸಣ್ಣಸಣ್ಣ ಪಕ್ಷಿಗಳು, ಸಾವಿರಾರು ವಿಧದ ಚಿಟ್ಟೆಗಳು, ಕ್ರಿಮಿಕೀಟಗಳು ಆರ್ಕಿಡ್ ಹೂವಿನೊಂದಿಗೇ ನಶಿಸಿಹೋಗಿದ್ದಿದ್ದರೆ ಭೂಮಂಡಲದ ಜೀವಜಗತ್ತಿನ ಒಂದು ಕೊಂಡಿಯೇ ಕಳಚಿಕೊಂಡು ಅಲ್ಲೋಲ ಕಲ್ಲೋಲ ಆಗುತ್ತಿದ್ದದ್ದಂತೂ ಸತ್ಯ. ಈ ನಿಟ್ಟಿನಲ್ಲಿ ಆರ್ಕಿಡ್ ಹೂವೆಡೆಗೆ ತಮ್ಮ ಸರ್ವಸ್ವವನ್ನೂ ವ್ಯಯಿಸಿ ದುಡಿದ ಮಹಾನ್ ಕನ್ನಡಿಗ ಡಾ. ಸದಾನಂದ ಹೆಗ್ಡೆಯವರಿಗೆ ಒಂದು ಸಲಾಂ ಹೇಳಲೇಬೇಕು.

ಎಷ್ಟೆಷ್ಟೋ ಮಾತುಗಳ ನಡುವೆ ಅವರು ಹೇಳಿದ ಒಂದು ಘಟನೆ ನನ್ನನು ಅತ್ಯಂತ ಸಂತೋಷಗೊಳಿಸಿತು. ಹೆಗ್ಡೆಯವರು ಟಿಪಿ ಆರ್ಕಿಡ್ ಧಾಮದಲ್ಲಿ ಕೆಲಸ ಮಾಡುತ್ತಿರುವಾಗ ಒಮ್ಮೆ ಬೆಳಗಿನ ಝಾವದಲ್ಲಿ ಜಿಲ್ಲಾಧಿಕಾರಿ ಹಾಗು ಎಸ್‌ಪಿಯವರುಗಳು ಬಂದು ಇವರಿಗೆ ಬೆಳಗ್ಗೆ 7 ಗಂಟೆಗೆ ದಲೈಲಾಮ ಅವರು ಈ ಆರ್ಕಿಡ್ ಧಾಮಕ್ಕೆ ಬರುತ್ತಲಿದ್ದಾರೆ. ಅದು ಐದು ನಿಮಿಷಗಳ ಸೌಜನ್ಯಯುತ ಭೇಟಿ ಅಷ್ಟೆ. ಹೆಚ್ಚಿನ ಸಮಯ ಇರುವುದಿಲ್ಲ. ಆದ್ದರಿಂದ

ಒತ್ತಡವೇನಿಲ್ಲ. 7 ಗಂಟೆಗೆ ತಯಾರಿದ್ದರೆ ಸಾಕು ಎಂದು ಹೇಳಿಹೋದರಂತೆ. 8 ಗಂಟೆಗೆ ಬಂದ ದಲೈಲಾಮ ಅವರು ನಮ್ಮ ಹೆಗ್ಡೆಯವರನ್ನು ಭೇಟಿ ಮಾಡಿ, ಆರ್ಕಿಡ್ ಹೂವಿನ ಬಗ್ಗೆ ಅವರ ಮಾತುಗಳಿಗೆ ಮನಸೋತು ಅವರ ಕೆಲಸಗಳನ್ನು ಶ್ಲಾಘಿಸುತ್ತಾ, ಅಧಿಕಾರಿಗಳು ಸಮಯದ ಬಗ್ಗೆ ಎಚ್ಚರಿಸುತ್ತಿದ್ದರೂ ಸರಿಸುಮಾರು ಎರಡು ಗಂಟೆಗಳ ಕಾಲ ಆರ್ಕಿಡ್ ಧಾಮದಲ್ಲಿ ಸಮಯ ಕಳೆದರಂತೆ. 'ಇದು ಆರ್ಕಿಡ್ ದೇವಸ್ಥಾನ. ತಲೆಬಾಗಿ' ಎಂದು ಒಂದು ಫಲಕವನ್ನು ಪ್ರವೇಶ ದ್ವಾರದಲ್ಲೇ ಹಾಕಿಸಿದ್ದರಂತೆ ಹೆಗ್ಡೆಯವರು. ಈಗ ಅದು ನನ್ನ ಕಣ್ಣಿಗೆ ಕಾಣಲಿಲ್ಲ. ಅದರಬಗ್ಗೆ ಯಾವ ಮಾಹಿತಿಯೂ ಇಲ್ಲದ್ದರಿಂದ ಯಾರನ್ನೂ ಅದರ ಬಗ್ಗೆ ನಾನು ಕೇಳಲೂ ಇಲ್ಲ. ಆ ಫಲಕವನ್ನು ನೋಡಿದ ದಲೈಲಾಮ ಅವರು ಅದಕ್ಕೆ ಕಾರಣ ಕೇಳಿದಾಗ ಹೆಗ್ಡೆಯವರು ಕೊಟ್ಟ ಉತ್ತರ "ಜಗತ್ತಿನ ಎಲ್ಲಾ ಜೀವಕ್ಕೂ ಇಲ್ಲಿ ಬದುಕುವ ಹಕ್ಕಿದೆ. ಆದರೆ ಗಿಡ ಮರ ಹೂವುಗಳನ್ನು ನಾವು ತೀರಾ ಕಡೆಗಣಿಸಿದ್ದೇವೆ". ಈ ಮಾತುಗಳಿಂದಲೇ ಪರಿಸರದೆಡೆಗೆ, ಅವರ ಕೆಲಸದ ಬಗ್ಗೆ ಅವರಿಗಿದ್ದ ನಿಷ್ಠೆ, ಪ್ರೀತಿ, ವಾತ್ಸಲ್ಯ ಎಲ್ಲವೂ ಎದ್ದು ಕಾಣುತ್ತದೆ. ಅದಕ್ಕಿಂತ ಹೆಚ್ಚಾಗಿ ಆರ್ಕಿಡ್ ಬಗೆಗಿನ ಅವರ ಅದಮ್ಯ ಒಲವು ಎದ್ದು ಕಾಣುವುದು ಅವರ ಒಬ್ಬಳೆ ಮಗಳಿಗೆ ಇಟ್ಟಿರುವ ಹೆಸರಿನಲ್ಲಿ! ದಲೈಲಾಮ ಅವರು ಮೈಸೂರಿನ ಬಳಿ ಇರುವ ಟಿಬೇಟಿಯನ್ನರ ಆಶ್ರಯದಾಣದಲ್ಲೂ ಇಂಥದ್ದೇ ಅರ್ಕಿಡ್ ಹೂವುಗಳ ಧಾಮವನ್ನು ಮಾಡಬೇಕೆನ್ನುವ ಆಸೆಯನ್ನು ವ್ಯಕ್ತಪಡಿಸಿ ಬೈಲುಕುಪ್ಪಕ್ಕೆ ಹೆಗ್ಡೆಯವರನ್ನು ಕರೆಸಿಕೊಂಡಿದ್ದರಂತೆ. ಆ ನಿಟ್ಟಿನಲ್ಲಿ ಹೆಗ್ಡೆಯವರು ಒಂದು ಯೋಜನೆಯನ್ನೂ ಹಾಕಿಕೊಟ್ಟಿದ್ದಾರಂತೆ. ಅದು ಚಾಲ್ತಿಗೆ ಬರುವ ಸಮಯ ಹತ್ತಿರವೇ ಇದೆ.

ಸಸ್ಯಶಾಸ್ತ್ರದಲ್ಲಿ Coerulea ಅಥವಾ Blue Vanda ಎಂದು ಗುರುತಿಸಿಕೊಂಡಿರುವ ಅರ್ಕಿಡ್ ಹೂವು ಇವರ ಮಗಳ ಹೆಸರಾಗಿದೆ. 'ಸಿರುಲಿಯಾ' ಈಗ ಅಮೇರಿಕಾ ದೇಶದಲ್ಲಿ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಮಾರ್ಕೆಟಿಂಗ್ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದಾರೆ. ಸಿರುಲಿಯಾ ಎನ್ನುವ ಹೆಸರನ್ನು ಮಗಳ ಜನನ ಪ್ರಮಾಣ ಪತ್ರದಲ್ಲಿ ಕಿರುಲಿಯಾ ಎಂದು ಹಾಕಲು ಮುಂದಾಗಿದ್ದ ಅಧಿಕಾರಿಗಳನ್ನು ನೆನೆದು ನಿರ್ಮಲಚಿತ್ತರಾಗಿ ನಗುತ್ತಿದ್ದ



**ರಸ್ತೆಯಲ್ಲಿ ಜೋಳ ಸುಡುತ್ತಿರುವುದು**

ಸದಾನಂದ ಹೆಗ್ಡೆಯವರ ಧ್ವನಿಯು ಫೋನಿನಲ್ಲಿಯೇ ಆರ್ಕಿಡ್ ಹೂವುಗಳ ಅಪ್ಪಟ ಪ್ರೇಮಿಯೊಬ್ಬನ ಸಲ್ಲಾಪದಂತೆ ಧ್ವನಿಸುತ್ತಿತ್ತು. ಸಿರುಲಿಯಾ ಹೆಸರು ಕೇಳಿದೊಡನೆ ನಿಘಂಟಿನಲ್ಲಿ ಹುಡುಕಬೇಕು ಎನ್ನಿಸುವುದು ಸಹಜವೇ. ಆದರೆ ನಮ್ಮದೇ ಮಹಾಭಾರತದಲ್ಲಿ ದ್ರೌಪದಿಗಾಗಿ ಈಶಾನ್ಯದ ಕಾಡುಗಳಿಂದ ಭೀಮ ತಂದುಕೊಟ್ಟ ಸೌಗಂಧಿಕಾ ಪುಷ್ಪ ಇದು ಎಂದು ಹೇಳಿದರೆ, ಆರ್ಕಿಡ್ ಹೂವುಗಳು, ಸಿರುಲಿಯಾ ಎನ್ನುವ ಕನ್ನಡತಿ, ಆರ್ಕಿಡ್‌ಗಳನ್ನೇ ಉಸಿರಾಡುತ್ತಿರುವ ಡಾ. ಸದಾನಂದ ಹೆಗ್ಡೆಯವರು ಎಲ್ಲರೂ ಎಷ್ಟೊಂದು ನಮ್ಮವರಾಗಿ, ನಾವು ಹೆಮ್ಮೆಪಡಬಹುದಾದ ಮುಖ್ಯ ಕಾರಣವಾಗಿ ತೋರುತ್ತಾರೆ.

* * * * *

# 16. ನೋವಿಲ್ಲಿ ನರಳುತಿದೆ

ಈ ದೇಶದ ಯಾವ ಮೂಲೆಗೆ ಹೋದರೂ ದೇಶಕ್ಕಾಗಿ ಹುತಾತ್ಮರಾದ ಸೈನಿಕರಿಗಾಗಿ ಅಲ್ಲೊಂದು ಸ್ಮಾರಕ ಇದ್ದೇ ಇರುತ್ತದೆ. ಯುದ್ಧವನ್ನೇ ನಾಶ ಮಾಡುವಲ್ಲಿ ಅಸಫಲರಾಗಿರುವ ನಾವು ನಮಗಾಗಿ ತಮ್ಮ ಪ್ರಾಣತೆತ್ತವರ ಹೆಸರಿನಲ್ಲಿ ಸ್ಮಾರಕವನ್ನು ನಿಲ್ಲಿಸಿ ಬೀಗುತ್ತಿದ್ದೇವೆ. ಅದು ನಮ್ಮ ಮಿತಿಯೋ ಅಥವಾ ಭಾವದಾರಿದ್ರ್ಯವೋ ತಿಳಿಯದು. ನಮ್ಮ ದೇಶದ ಎಲ್ಲಾ ಗಡಿ ಭಾಗಗಳಿಗೂ ಹೋಗಿ ಸೈನಿಕರನ್ನು ಹತ್ತಿರದಿಂದ ಕಂಡು, ಮಮತೆಯಿಂದ ಮಾತನಾಡಿಸಿ ಬಂದಿದ್ದೇನೆ. ಅವರಲ್ಲಿ ಒಂದಷ್ಟು ಮಂದಿ ಇಂದಿಗೂ ಫೋನ್ ಮೂಲಕ ಮಾತನಾಡುತ್ತಿರುತ್ತಾರೆ. ಅವರುಗಳಿಗೆ ಪ್ರೀತಿ ತೋರುವ ಎರಡು ಮಾತುಗಳನ್ನು ಕೊಡುವುದಷ್ಟೇ ನನ್ನ ಕೈಲಾಗುವ ಸೇವೆ ದೇಶ ಸೇವೆ ಎಂದುಕೊಳ್ಳುತ್ತೇನೆ. ಈಗ ನಾನು ಹೋಗುತ್ತಿರುವ ಸ್ಥಳವನ್ನು ಸೂಕ್ಷ್ಮ ಪ್ರದೇಶ ಎಂದು ಗುರುತಿಸಲಾಗಿದೆ. ಚೀನಿಯರು ನಿದ್ದೆಗಣ್ಣಿನಲ್ಲೂ ಅರುಣಾಚಲ ಪ್ರದೇಶ ತಮ್ಮದು ತಮ್ಮದು ಎಂದು ಕನವರಿಸುತ್ತಿರುತ್ತಾರೆ ಅಂದಮೇಲೆ ಈ ರಾಜ್ಯದಲ್ಲಿ ಸೈನಿಕರಗಾಗಿ ಸ್ಮಾರಕ ಇರಲೇ ಬೇಕು ಎನ್ನುವ ಖಾತ್ರಿ ನನಗಿತ್ತು. ಅದರಂತೆಯೇ ಅಲ್ಲಿನ ಡಿಐಜಿ ದೀಪಾಂಕರ್ ಮಿಶ್ರ ಅವರಿಂದ ಮಾಹಿತಿ ಪಡೆದೆ. ಅರುಣಾಚಲ ಪ್ರದೇಶದ ಪೂರ್ವಕ್ಕೆ ಬ್ರಹ್ಮಪುತ್ರ ನದಿಯ ನೀರಿನ ಕಾಲುವೆಯನ್ನು ದೋಣಿಯ ಮೂಲಕ ದಾಟಿ ಹೋದರೆ ಅಥವಾ ಇಟಾನಗರದಿಂದ ಅಸ್ಸಾಂ ಸರಹದ್ದಿನ ಮೂಲಕ ಹೊರ ಹೋಗಿ ಮತ್ತೆ ಒಳಬಂದು ಸರಿಸುಮಾರು 20 ಗಂಟೆಗಳ ಪ್ರಯಾಣ ಮಾಡಿದರೆ ಸಿಗುತ್ತದೆ ಚಾಂಗ್ಲಾಂಗ್ ಜಿಲ್ಲೆ. ಈ ಜಿಲ್ಲೆಯ ಪೂರ್ವ ಭಾಗದಲ್ಲಿ ನಫೊಂಗ್ ಎನ್ನುವ ಸ್ಥಳದಲ್ಲಿ ಎರಡನೆಯ ಮಹಾಯುದ್ಧದಲ್ಲಿ ಮಡಿದ ಸೈನಿಕರಿಗಾಗಿ ಸ್ಮಾರಕವೊಂದನ್ನು ಮಾಡಲಾಗಿದೆ.

1997ರ ಒಂದು ಹಗಲು ಅಸ್ಸಾಂ ರೈಫಲ್ಸ್ ಸೇನಾ ತುಕಡಿಯ ಸೈನಿಕರು ಕಾರ್ಯೋನ್ಮುಖರಾಗಿದ್ದಾಗ ನಾಲ್ಕಾರು ಗೋರಿಗಳ ಸಾಲನ್ನು ಕಂಡಂರಂತೆ. ಅದನ್ನು ಕೂಡಲೇ ಸರ್ಕಾರಕ್ಕೆ ತಿಳಿಸಲಾಯಿತು. ನಂತರದ ಕಾರ್ಯಾಚರಣೆಯಿಂದ ಅಲ್ಲಿ ಒಟ್ಟು 1000 ಗೋರಿಗಳು ಪತ್ತೆಯಾದವು. ಅವೆಲ್ಲಾ ಎರಡನೆ ಮಹಾಯುದ್ಧದಲ್ಲಿ ಮಡಿದ ಸೈನಿಕರದ್ದು ಎಂದು ತಿಳಿದ

ನಂತರ ಸರ್ಕಾರವು 2.5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಲ್ಲೊಂದು ಸ್ಮಾರಕ ಹಾಗು ಮ್ಯೂಸಿಯಂಗಳನ್ನು ನಿರ್ಮಿಸಲು ಮುಂದಾಗಿದ್ದು, ಅದರ ಕೆಲಸ ಇನ್ನೂ ಪೂರ್ಣಗೊಂಡಿಲ್ಲ. ಚಾಂಗ್ಲಾಂಗ್‌ನ ಜೈರಾಮ್ಪುರ ಎನ್ನುವ ಸ್ಥಳದಿಂದ ಕೇವಲ 6 ಕಿಲೋಮೀಟರ್ಗಳ ದೂರದಲ್ಲಿ ಇದೆ ಈ ಭೂಮಿ. ಇಲ್ಲಿಂದ ಮುಂದೆ ಸಿಗುವುದು ನಮ್ಮ ದೇಶದಿಂದ ಟಿಬೇಟ್ ಹಾಗೂ ಚೀನಾ ದೇಶಗಳಿಗೆ ಪ್ರವೇಶ ಪಡೆಯುವ ಸರಹದ್ದಿನ ತುದಿ. ಇದನ್ನು 'ಪಾಂಗ್ಸು ಪಾಸ್' ಎನ್ನಲಾಗುತ್ತದೆ. ಕಾಜಿರಂಗ ಕಾಡಿನ ಅವಳ ಸಹೋದರಿಯಂತೆ ಕಾಣುವ ಇಲ್ಲಿನ ಅರಣ್ಯ ಪ್ರದೇಶ ಅರುಣಾಚಲ ಪ್ರದೇಶದಲ್ಲೇ ಹೆಚ್ಚಿನ ಬಿಸಿಲು ಕಾಣುವ ಕಾಡಾಗಿದೆ. ಫೆಬ್ರವರಿಯಲ್ಲಂತೂ ವಿಪರೀತ ಬಿಸಿಲು ಮತ್ತು ಮಣ್ಣಿನ ಧೂಳು. ನಾನು ರಸ್ತೆ ಪ್ರಯಾಣವನ್ನೇ ಆಯ್ಕೆ ಮಾಡಿಕೊಂಡಿದ್ದೆ. ಅಲ್ಲಿಗೆ ಇನ್ನೊಂದು 150 ಕಿಲೋಮೀಟರ್ಗಳಷ್ಟು ದೂರವಿದೆ ಎನ್ನುವಾಗ ಮುಂದಿನ ರಸ್ತೆಯೇ ಇರಲಿಲ್ಲ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಪ್ರಾಧಿಕಾರದ ಫಲಕವೊಂದು ಧೂಳು ಸೇವಿಸುತ್ತಾ ನಿಂತಿತ್ತು. ಜನರ ಸುಳಿವೇ ಇಲ್ಲದ ಅಲ್ಲಿ ಸೂರ್ಯ ತನ್ನ ಮನೆ ಸೇರುವ ತರಾತುರಿಯಲ್ಲಿದ್ದ. ಸಂಜೆ ಐದು ಗಂಟೆಯ ನಂತರ ಜನರು ನಡೆದಾಡಲೂ ಮನಸ್ಸು ಮಾಡದ ಇಲ್ಲಿನ ಊರುಗಳಲ್ಲಿ ವಾಹನ ಚಾಲಕರಂತೂ ಖಡಾಖಂಡಿತವಾಗಿ ಗಾಡಿಗಳನ್ನು ಓಡಿಸುವುದಿಲ್ಲ ಎಂದು ಬಿಡುತ್ತಾರೆ. ಯಾವ ದಾರಿಯೂ ಕಾಣದಿದ್ದರೆ ರಾತ್ರಿಯಿಡೀ ಟ್ಯಾಕ್ಸಿಯಲ್ಲಿಯೇ ಮಲಗಿದ್ದು ಹಗಲನ್ನು ಕಾದರಾಯಿತು ಎನ್ನುವ ಗಟ್ಟಿ ಮನಸ್ಸು ಮಾಡಿಕೊಳ್ಳುತ್ತಿದ್ದಂತೆಯೇ, ಕೆಲಸದಿಂದ ಹಿಂದಿರುಗುತ್ತಿದ್ದ ಕಾಮಗಾರಿ ಕೆಲಸಗಾರರ ಸಣ್ಣ ಗುಂಪೊಂದು ಎದುರಾಯ್ತು. ಇನ್ನೆರಡು ದಿನಗಳು ಆ ರಸ್ತೆಯಲ್ಲಿನ ಓಡಾಟವನ್ನು ಕೆಲಸದ ನಿಮಿತ್ತ ನಿಲ್ಲಿಸಿರುವುದಾಗಿ ತಿಳಿಸಿ ಹೊರಟುಹೋದರು. ಎರಡು ದಿನಗಳನ್ನು ಒಂದೇ ಜಾಗಕ್ಕಾಗಿ ಮೀಸಲಿಡುವಷ್ಟು ಸಮಯ ನನ್ನಲ್ಲಿ ಇರಲಿಲ್ಲ. ಹಾಗಾಗಿ ನಿರಾಸೆಯನ್ನು ಬಗಲಿಗೇರಿಸಿಕೊಂಡೇ ಅಲ್ಲಿಯೇ ಸಮೀಪವಿದ್ದ ಅಸ್ಸಾಂ ಸರಹದ್ದಿನ ಊರೊಂದರಲ್ಲಿ ಆ ರಾತ್ರಿ ಕಳೆದದ್ದಾಯ್ತು.



**ತವಾಂಗ್ ಸೈನಿಕ ಸ್ಮಾರಕ**

**ನಂಗ್ಯಾಲ್ ಚೊರ್ತಾನ್**: ಕಳೆದುಕೊಳ್ಳುವುದೇ ಪಡೆದು ಕೊಳ್ಳುವುದಕ್ಕಾಗಿ ಎಂದು ನಂಬಿದವಳು ನಾನು. ಅದಕ್ಕೇ ಇರಬೇಕು ನನ್ನ ಎಲ್ಲಾ ನಿರಾಸೆಗಳೂ ಅಲ್ಪಾಯುಷಿಗಳೇ. ಈ ಬಾರಿಯೂ ಹಾಗೆಯೇ ಅಯ್ತು. ತವಾಂಗ್ ನಗರದ ಹಾದಿಯಲ್ಲಿ ನಾಲ್ಕಾರು ಸೈನಿಕರುಗಳು ಪರಿಚಯವಾಗಿದ್ದರು. ಎಂದಿನಂತೆ ಮಾತನಾಡುತ್ತಾ ನಿಂತಿದ್ದೆ. ಆಗ ತಿಳಿಯಿತು ಅಲ್ಲೇ ಹತ್ತಿರದಲ್ಲೇ ಇದ್ದ ಸೈನಿಕರ ಸ್ಮಾರಕದ ಬಗ್ಗೆ. ನಗರ ಪ್ರವೇಶಿಸುವ ಕೊಂಚ ಮೊದಲು, ನಡೆದುಕೊಂಡು ಹೋಗಬಹುದಾದಷ್ಟು ದೂರದಲ್ಲಿಯೇ ಇದೆ 'ನಂಗ್ಯಲ್ ಚೊರ್ತಾನ್'. ಜಗತ್ತಿನ ಮೊದಲ ಹಾಗೂ ಏಕೈಕ, ಬೌದ್ಧ ಧರ್ಮದ ನಂಬಿಕೆಗಳು ಮತ್ತು ಆಚರಣೆಗಳಿಗೆ ಹೊಂದುವ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿರುವ ಸ್ಮಾರಕ. 1962ರಲ್ಲಿ ಭಾರತ ಮತ್ತು ಚೀನಾ ದೇಶಗಳ ನಡುವೆ ನಡೆದ ಯುದ್ಧದಲ್ಲಿ ಮಡಿದ 2140 ಸೈನಿಕರಿಗೆ ಇಲ್ಲಿ ನಮನ ಸಲ್ಲಿಸಲಾಗುತ್ತಿದೆ. 40 ಅಡಿ ಎತ್ತರದ ಬೌದ್ಧ ಸ್ತೂಪ, ಅದರ ಕೆಳಮುಖದಲ್ಲಿ ಚಿನ್ನದ ಬಣ್ಣದ ಲೋಹದ ಸುತ್ತು ಗಂಟೆಗಳು (ಬೌದ್ಧ ಧರ್ಮೀಯರು ಪ್ರಾರ್ಥನೆಗಾಗಿ ಬಳಸುವುದು), ಅದರ ಹಿಂಭಾಗದಲ್ಲಿ ಕರಿಕಲ್ಲಿನ ಗೋಡೆಯ ಮೇಲೆ ಅಷ್ಟೂ ಸೈನಿಕರ ಹೆಸರುಗಳನ್ನು ತಾಮ್ರ ಬಣ್ಣದಲ್ಲಿ ಬರೆಯಲಾಗಿದೆ, ಅದರ ಇಕ್ಕೆಲಗಳಲ್ಲೂ ಗಾಜಿನ ಪೆಟ್ಟಿಗೆಗಳೊಳಗೆ ಉರಿಯುವ ದೊಡ್ಡದೊಡ್ಡ ದೀಪಗಳು. ಆವರಣದ ಎರಡು ಬದಿಯ, 10 X 12 ಅಡಿ ಅಳತೆಯ, ಆಯತಾಕಾರದ, ಎರಡು ಕೋಣೆಗಳಲ್ಲಿ

ಆ ಸಂದರ್ಭದಲ್ಲಿ ಯುದ್ಧದಲ್ಲಿ ಉಪಯೋಗಿಸಿದ ಸಾಮಗ್ರಿಗಳು, ಒಂದಷ್ಟು ಚಿತ್ರಪಟಗಳು, ಬಳಸಿದ ಸಮವಸ್ತ್ರ ಬೂಟುಗಳು, ತಟ್ಟೆ ಲೋಟಗಳು, ಬಾವುಟಗಳು, ಯುದ್ಧದಲ್ಲಿ ಸಹಾಯಕ್ಕೆ ಬಂದು ನಂತರ ಅವಶೇಷಗಳಾಗಿ ಉಳಿದ ಶಸ್ತ್ರಾಸ್ತ್ರಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಆ ಸಮಯದಲ್ಲಿ ವೃತ್ತಪತ್ರಿಕೆಗಳಲ್ಲಿ ಬರುತ್ತಿದ್ದ ಸುದ್ಧಿಯ ಕ್ಲಿಪಿಂಗ್‌ಗಳನ್ನೂ ಇಡಲಾಗಿದೆ. ಕಾರ್ಗಿಲ್‌ನ ಬಳಿಯಿರುವ 'ಹಾಲ್ ಆಫ್ ಫೇಂ' ಮ್ಯೂಸಿಯಂನಷ್ಟು ದೊಡ್ಡದಾಗಿಯಲ್ಲದಿದ್ದರೂ ಸೈನಿಕರ ಮೇಲೆ ಅಭಿಮಾನ ಉಕ್ಕುವಷ್ಟು ಪೂರಕವಾಗಿದೆ ಈ ಜಾಗ. 1997ರಲ್ಲಿ ದಲೈಲಾಮ ಅವರು ಉದ್ಘಾಟಿಸಿರುವ ಈ ಸ್ಮಾರಕವನ್ನು ಬೌದ್ಧರು ನಂಬುವ 'ಆತ್ಮವು ನಿರಂತರ' ಎನ್ನುವ ತತ್ವದ ಆಧಾರದ ಮೇಲೆ ಅವರ ಧಾರ್ಮಿಕ ಆಚರಣೆಗಳಿಗೆ ಅನುಗುಣವಾಗಿ ನಿರ್ಮಿಸಲಾಗಿದೆ. ಹೆಚ್ಚೇ ಚಳಿಯಿದ್ದರೂ ಎಳೆಬಿಸಿಲೂ ಜೊತೆಗೂಡಿದ್ದ ಹಿತಕರವಾದ ವಾತಾವರಣದಲ್ಲಿ ಕುಳಿತಿದ್ದರೂ ನನ್ನ ಮನಸ್ಸು ಯುದ್ಧದಿಂದ ಆಗುವ ವಿಪರೀತಗಳ ಬಗ್ಗೆ ಯೋಚಿಸುತ್ತಿತ್ತು. ಸರಹದ್ದುಗಳಲ್ಲಿನ ಸೈನಿಕರ ಜೀವನವನ್ನು ಅವರಿರುವ ತಾಣದಲ್ಲಿಯೇ ನೋಡಿರದಿದ್ದರೆ, ಅವರುಗಳೊಡನೆ ಬೆರೆತಿರದಿದ್ದರೆ ಬಹುಶಃ ಯುದ್ಧದ ಭೀಕರತೆ ಅರ್ಥವಾಗುವುದಿಲ್ಲ. ಅಲ್ಲಿಯೇ ಇದ್ದ ಸಣ್ಣ ಗಟ್ಟಿಯಾದ ಮಣ್ಣಿನ ಗುಡ್ಡೆಯ ಮೇಲೆ ಕುಳಿತು ಭೂಮಿಯನ್ನು ತನ್ನದು ಎಂದುಕೊಳ್ಳುವ ಮನುಷ್ಯ ಮನಸ್ಸಿನ ಕೃಪಣತೆಯನ್ನು ನೆನೆದು ಮೂಕಳಾಗಿದ್ದೆ. ಒಂದಷ್ಟು ಹೊತ್ತಿನ ನಂತರ ಎಂದೋ ಬರೆದ ನನ್ನವೇ ಸಾಲುಗಳನ್ನು ನೆನಪಿಸಿಕೊಳ್ಳುತ್ತಾ ಅಲ್ಲಿಂದ ಹೊರಟೆ.

"ನನ್ನ ನೆಮ್ಮದಿಗೆ ಬಲಿಯಾಗುವ ನಿನ್ನ ನಾಳೆಗಳು

ಪ್ರತೀ ಮಳೆ ಹನಿಗೂ ಮೈ ಕೊಡವಿ ನಿನ್ನ ನೆಲದಲ್ಲೇ ಅರಳಿ ನಿಲ್ಲುವ ಕಾಫಿ ಹೂವುಗಳು

ಅಂಗಳದಿ ನೀ ನೆಟ್ಟು ನೀರಿತ್ತು ಹೋದ ಈ ಗಿಡ ಮೈನೆರೆದು ಹೂವಾಗಿ ಕಾಯ್ಕಚ್ಚಿ ಹಣ್ಣಾಗಿ ಬಟ್ಟಲೊಳು ನೀರಾಗಿ ಕಾಯುತ್ತಿದೆ

ನಿನ್ನ ಸೇರಲು ಬಂದೊಮ್ಮೆ ಮಾಡಿ ಹೋಗು ಅಮೃತಪಾನ, ಕೊಡಗಿನ ವೀರ ನನ್ನ ನೆಮ್ಮದಿಗೆ ಬಲಿಯಾಗುವ ನಿನ್ನ ನಾಳೆಗಳು

ಪ್ರತೀ ಮಳೆ ಹನಿಗೂ ಮೈ ಕೊಡವಿ ನಿನ್ನ ನೆಲದಲ್ಲೇ ಅರಳಿ ನಿಲ್ಲುವ ಕಾಫಿ ಹೂವುಗಳು !"

* * * * *

## 17. ಬೆಳಕಿನ ಪ್ರಾಣಕ್ಕೆ ದಾರಿ ತೋರಿದ ಬಿಕ್ಕುಣಿ

ಅಲ್ಲಿ ಬಣ್ಣಬಣ್ಣದ ಬಟ್ಟೆ ತೊಟ್ಟು, ವಿವಿಧ ಕೇಶಾಲಂಕಾರ ಮಾಡಿಕೊಂಡು, ಒಡವೆಗಳನ್ನು ಹಾಕಿಕೊಂಡು, ಹುಡುಗ-ಹುಡುಗಿಯರೆಂಬ ಭೇದವಿಲ್ಲದ ಚುರುಕಾಗಿ ಓಡಾಡಿಕೊಂಡಿದ್ದವರೆಲ್ಲಾ ಆಧುನಿಕ ಸುಂದರಾಂಗಿಯರು. ಅವರ ನಡುವೆ ಬೋಳು ತಲೆಯ, ಹಳದಿ ಮಿಶ್ರಿತ ಎಣ್ಣೆಗೆಂಪಿನ ನಿಲುವಂಗಿ, ತಾಮ್ರ ಬಣ್ಣದ ಉಲ್ಲನ್ ಸಾಕ್ಸ್ ತೊಟ್ಟಿದ್ದ ಈಕೆ ಲೈಬ್ರೆರಿಯಲ್ಲಿ ಯಾರೊಡನೆಯೂ ಬೆರೆಯದೆ, ಹಸನ್ಮುಖಳಾಗಿ ತನ್ನ ಪಾಡಿಗೆ ತಾನು ಕೆಲಸ ಮುಗಿಸಿಕೊಂಡು ಹಾಸ್ಟೆಲ್‌ನ ಕಡೆಗೆ ನಡೆಯುತ್ತಿದ್ದಳು. ಅಷ್ಟೊಂದು ಗೌಜು ಗದ್ದಲದ, ಯುವ ತರಂಗಗಳನ್ನು ಹೊತ್ತು ಕಲರವಿಸುತ್ತಿದ್ದ ಬದುಕಿನ ನಟ್ಟನಡುವೆ ನಿರ್ಲಿಪ್ತತೆಯ ಹರಿಕಾರಳಂತೆ ಕಾಣುತ್ತಿದ್ದಳು. ಅನಾಯಾಸವಾಗಿ ಆಕೆಯೆಡೆಗೆ ಆಕರ್ಷಿತಳಾಗಿದ್ದೆ. ಸಂತೆಯಲ್ಲಿ ಅಮ್ಮನ ಕೈಬೆರಳು ಹಿಡಿದ ಪುಟ್ಟ ಮಗು ತನ್ನದೇ ದಾರಿಯ ಹುಡುಕಾಟವಿಲ್ಲದೆ ಇಲ್ಲದೆ ಅಮ್ಮನ ಗುಂಟ ಹೋದಂತೆ, ನಾನೂ ಆಕೆಯ ಹಿಂದೆಯೇ ಹೋಗಿ ಪರಿಚಯ ಮಾಡಿಕೊಂಡೆ. ಆಕೆ ಹಾಸ್ಟೆಲ್‌ನ ತನ್ನ ರೂಮಿಗೆ ಕರೆದುಕೊಂಡು ಹೋದಾಗ ರಾತ್ರಿ 10 ಗಂಟೆಯಾಗಿತ್ತು. ತಗಡಿನ ಕಿರಿದಾದ ಒಂದು ಮಂಚ, ಅದಕ್ಕೆ ಹಾಸಿದ್ದ ಕೇಸರಿ ಬಣ್ಣದ ಹಾಸು, ಅದರ ಕೊನೆಯಲ್ಲಿ ಚಿಕ್ಕದಾದ ಮರದ ಒಂದು ಟೇಬಲ್. ಅದರ ಮೇಲೆ ಬೌದ್ಧ ಧರ್ಮದ ಸಾರ, ಸತ್ವಗಳನ್ನು ಸಾರುವ ಒಂದಷ್ಟು ಪುಸ್ತಕಗಳು. 'ಸಸ್ಟೇನಿಂಗ್ ಲೈಫ್' (Sustaining Life) ಎನ್ನುವ ಪುಸ್ತಕ ಎದ್ದು ಕಾಣುತ್ತಿತ್ತು. ಅದರ ತಲೆಯ ಮೇಲಿನ ಗೋಡೆಯಲ್ಲಿ ಎರಡು ಮೊಳೆಗಳ ಮೇಲೆ, ಹೆಚ್ಚೇನೂ ಅಗಲವಿಲ್ಲದ ಒಂದು ಮರದ ಹಲಗೆಯನ್ನು ಕೂರಿಸಲಾಗಿತ್ತು. ಅದರ ಮೇಲೊಂದು ಬುದ್ಧನ ಕಂಚಿನ ಪ್ರತಿಮೆ. ಪಕ್ಕದಲ್ಲಿ ಗಂಧದ ಕಡ್ಡಿ ಸಿಕ್ಕಿಸಲು ಇಟ್ಟಿದ್ದ ಗಾಜಿನ ಕುಂಡ. ಅದರ ಪಕ್ಕಕ್ಕೇ ಇಟ್ಟಿದ್ದ ಒಂದು ಜೊತೆ ಜಪಮಣಿ. ಇವಿಷ್ಟನ್ನೂ ಆವರಿಸಿದಂತೆ ಒಂದು ಪರದೆ. ಇಷ್ಟೇ ಆಕೆಯ ಕೋಣೆ. ಅಲ್ಲೇ ಮಂಚದ ಮೇಲೆ ಕುಳಿತುಕೊಳ್ಳಲು ಹೇಳಿ ತಾನು ಇನ್ನೊಂದು ತುದಿಯಲ್ಲಿ ಕುಳಿತಳು. ನನ್ನ ಬ್ಯಾಗ್‌ನಿಂದ ಮೈಸೂರು ಸ್ಯಾಂಡಲ್ ಅಗರಬತ್ತಿಯ ಎರಡು ಪೊಟ್ಟಣಗಳನ್ನು ತೆಗೆದು ಆಕೆಗೆ ಕೊಡುತ್ತಾ ಹೆಸರು ಕೇಳಿದೆ. ಮೊನ್ಪಾ ಬುಡಕಟ್ಟು ಜನಾಂಗಕ್ಕೆ ಸೇರಿದ ಆಕೆಯ ಹೆಸರು "ಡ್ರೇಮಾ

ಚೊಝೋವ್". ಸುಮ್ಮನಿದ್ದರೂ ನಗು ಮುಖವೇ ಇದ್ದ ಶ್ವೇತವರ್ಣದ ಸುಂದರಿ ಆಕೆ. ಅವಳ ಕಣ್ಣಿನಲ್ಲಿ ಧ್ಯಾನದಂತಹ ಬೆಳಕೊಂದು ಇಣುಕುತ್ತಿತ್ತು. ನೇರಾನೇರ ಕೇಳಯೇ ಬಿಟ್ಟೆ "ನೀವು ಯಾವಾಗ ದೀಕ್ಷೆ ತೆಗೆದು ಕೊಂಡಿದ್ದು?" ಅಂತ. ತಾವಾಂಗ್ ಬಳಿಯ ಲಾವ್ಪ್ ಎನ್ನುವ ಹಳ್ಳಿಯೊಂದರಲ್ಲಿ ಮಧ್ಯಮ ವರ್ಗದ ತುಂಬು ಕುಟುಂಬವೊಂದರಲ್ಲಿ ಹುಟ್ಟಿದ 'ನಾಮ್‌ಗ್ಯಲ್ ವಾಂಗ್‌ಮೋ' ಎನ್ನುವ ಹೆಸರಿನ ಈ ಹುಡುಗಿ ಮೊದಲಿನಿಂದಲೂ ಎಲ್ಲರಂತಿರಲಿಲ್ಲ. ನಾಲ್ಕನೆಯ ತರಗತಿಯಲ್ಲಿ ಓದುತ್ತಿರುವಾಗ ತನ್ನ ಸೋದರತ್ತೆಯ ಬಳಿ ತನಗೆ ಸನ್ಯಾಸಿಯಾಗಬೇಕೆನ್ನುವ ಬಯಕೆ ಇರುವುದಾಗಿ ಹೇಳಿಕೊಂಡಳು. ಕೂಡಲೇ ಸೋದರತ್ತೆಯು ತವಾಂಗ್‌ನ ಬೌದ್ಧ ಮಂದಿರದ ದೀಕ್ಷಾ ವಿಭಾಗದ ಮುಖ್ಯಸ್ಥೆಯ ಬಳಿ ಕರೆದುಕೊಂಡು ಹೋದರು. ಬೌದ್ಧ ಧರ್ಮದ ಉದಾರ ತತ್ವದಲ್ಲಿ ಸನ್ಯಾಸ ದೀಕ್ಷೆ ಪಡೆಯಲು ಯಾರಿಗೂ ಯಾವುದೇ ನಿರ್ಬಂಧವಿಲ್ಲ. ಮೊನ್ಪಾ ಬುಡಕಟ್ಟಿಗೆ ಸೇರಿದ ಯಾವುದೇ ಕುಟುಂಬದಲ್ಲಿ ಹುಟ್ಟುವ ಮೂರನೆಯ ಮಗ ಸನ್ಯಾಸ ದೀಕ್ಷೆ ತೆಗೆದುಕೊಳ್ಳಬೇಕು ಎನ್ನುವ ಅಲಿಖಿತ ನಿಯಮವಿದೆ. ಆದರೆ ಹೆಂಗಸರು ಮಾತ್ರ ಯಾವುದೇ ನಿರ್ಬಂಧನೆಯಿಲ್ಲದೆ, ಯಾರು ಬೇಕಾದರೂ ಸ್ವಂತ ಇಚ್ಛೆಯಿಂದ, ಯಾವ ವಯಸ್ಸಿನಲ್ಲಿಯೂ ದೀಕ್ಷೆ ತೆಗೆದುಕೊಳ್ಳಬಹುದು. ನನ್ನೆದುರು ಕುಳಿತಿದ್ದ ಸರಳ ಸಾಧುವಿನಂತಹ ಬಿಕ್ಕುಣಿ ತನ್ನ ಮೃದು ಮಧುರವಾದ ಮೆಲುದನಿಯಲ್ಲಿ ತಾನು ದೀಕ್ಷೆ ತೆಗೆದುಕೊಂಡ ದಿನಗಳನ್ನು ಮೆಲುಕು ಹಾಕುತ್ತಿದ್ದಳು. ಸೋದರತ್ತೆ ತವಾಂಗ್‌ಗೆ ಕರೆದುಕೊಂಡು ಹೋದಾಗ ಅಲ್ಲಿ ಈಕೆಯ ತಲೆಗೂದಲನ್ನು ಸಂಪೂರ್ಣವಾಗಿ ತೆಗೆದು ಪವಿತ್ರ ಸ್ನಾನ ಮಾಡಿಸಿ "ಡ್ರೇಮಾ ಚೊಝೋವ್" ಎನ್ನುವ ಹೊಸ ಹೆಸರಿನ ನಾಮಕರಣ ಮಾಡಿ ಈಕೆಗೆ ಸನ್ಯಾಸಿನಿಯರು ಧರಿಸುವ ನಿಲುವಂಗಿಯನ್ನು ನೀಡಲಾಯಿತು. ಹೀಗೆ ದೀಕ್ಷೆ ತೆಗೆದುಕೊಂಡವರು ಕನಿಷ್ಠ ಆರು ವರ್ಷಗಳ ಕಾಲ ಅಲ್ಲಿಯೇ ತಂಗಬೇಕಿರುತ್ತದೆ. ಪುಟ್ಟ ಮಕ್ಕಳನ್ನು ಮಾತ್ರ ಆಗೊಮ್ಮೆ ಈಗೊಮ್ಮೆ ತಾಯಿ ತಂದೆಯರು ಬಂದು ನೋಡಿಕೊಂಡು ಹೋಗಬಹುದಿರುತ್ತದೆ. ದೊಡ್ಡವರು ಆ ಅವಧಿಯಲ್ಲಿ ಕುಟುಂಬದ ಯಾರೊಡನೆಯೂ ಸಂಪರ್ಕ ಇಟ್ಟುಕೊಳ್ಳುವ ಹಾಗಿರುವುದಿಲ್ಲ. ಮಹಾಯಾನ ಪಂಥದ ದೀಕ್ಷೆ ಸ್ವೀಕರಿಸಿದ ಈಕೆ ತವಾಂಗ್‌ನಲ್ಲಿ ಆರು ವರ್ಷಗಳ ಕಾಲ ಕಳೆದು, ನಂತರದ ಹತ್ತು ವರ್ಷಗಳು ಹುಬ್ಬಳಿಯ ಬಳಿಯಿರುವ

ಮುಂಡಗೋಡುವಿನ ಬೌದ್ಧ ಮಂದಿರದಲ್ಲಿ ಅಧ್ಯಯನದಲ್ಲಿ ತೊಡಗಿಕೊಂಡಿದ್ದು ಈಗ ಎರಡು ವರ್ಷಗಳಿಂದ ಇಟಾನಗರದ ರಾಜೀವ್ ಗಾಂಧಿ ವಿಶ್ವವಿದ್ಯಾಲಯದಲ್ಲಿ ವೇದಾಂತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಅಭ್ಯಾಸ ಮಾಡುತ್ತಿದ್ದಾಳೆ. ಡ್ರೇಮಾ ಬೈಲುಕುಪ್ಪೆಯಲ್ಲಿ ಒಮ್ಮೆ ದಲೈಲಾಮಾರನ್ನು ಭೇಟಿಯಾಗಿದ್ದನ್ನು ಸಂತೋಷದಿಂದ ನೆನಪಿಸಿಕೊಳ್ಳುತ್ತಾ ತಾನು 'ದೊಂಬಾ' (ದೊಂಬಾ ಎಂದರೆ ದೀಕ್ಷೆ ತೆಗೆದುಕೊಳ್ಳುವಾಗ ಕೆಲವು ನಿಯಮ ಪಾಲನೆ ಮಾಡುವುದಾಗಿ ತೆಗೆದುಕೊಳ್ಳುವ ಪ್ರಮಾಣ ವಚನ) ತೆಗೆದುಕೊಂಡ ದಿನದ ಬಗ್ಗೆ ಹೇಳುತ್ತಾ ಹೋದಳು. ದೊಂಬಾ ಸ್ವೀಕರಿಸಿದ ಬೌದ್ಧ ಬಿಕ್ಕುಣಿಯರು ಸದಾಕಾಲವೂ ತಲೆಗೂದಲನ್ನು ತೆಗೆದುಕೊಂಡು, ನಿಲುವಂಗಿಯನ್ನೇ ಧರಿಸಿರಬೇಕು. ದಿನಕ್ಕೆ ಒಂದು ಹೊತ್ತು ಮಾತ್ರ ಮಿತವಾದ, ಹೆಚ್ಚು ಉಪ್ಪು ಖಾರವಿಲ್ಲದೆ, ತಾವೇ ತಯಾರಿಸಿಕೊಂಡ ಅಡುಗೆಯನ್ನು ಮಾತ್ರ ಸೇವಿಸಬೇಕು. ಸಾಧ್ಯವಾದಷ್ಟು ಕಡಿಮೆ ನಿದ್ದೆ ಮಾಡಬೇಕು. ಗಂಡಸರ ಸ್ನೇಹವನ್ನು, ಮದಿರಾ ಪಾನವನ್ನು ಮಾಡಬಾರದು ಮತ್ತು ಸಿನೆಮಾಗಳನ್ನು




**ಬಿಕ್ಕುಣಿ ಡ್ರೇಮಾ ಚೋಜೋಽವ್** ೩.

ಹಾಗೆಯೇ ಇವರುಗಳಿಗೆ ಬೌದ್ಧ ಧರ್ಮದ ಉಪದೇಶಗಳ ಬಗ್ಗೆ ಅಧ್ಯಯನ ಮಾಡುವುದು, ಚರ್ಚೆಗಳಲ್ಲಿ ಭಾಗವಹಿಸುವುದು, ಉಪನ್ಯಾಸಗಳನ್ನು ಕೇಳುವುದು, ಪರೀಕ್ಷೆಗಳನ್ನು ಎದುರಿಸುವುದು ಕಡ್ಡಾಯವಾಗಿರುತ್ತದೆ. ತಮ್ಮದೇ ಆದ ಪೂಜಾ ಕೋಣೆ ಅಥವಾ ಸ್ಥಳಗಳನ್ನು ಹೊಂದಿರ ಬೇಕಿರುತ್ತದೆ. ದೀರ್ಘದಂಡ ನಮಸ್ಕಾರ ಮತ್ತು ಹೆಜ್ಜೆ ನಮಸ್ಕಾರಗಳನ್ನು ಹಾಕುವುದು ಅವರ ನಿತ್ಯ ಪೂಜೆಯ ಅವಿಭಾಜ್ಯ ಅಂಗವೇ ಆಗಿರುತ್ತದೆ. ಯಾವ ಕಾರಣಕ್ಕೂ ಹರಕೆಗಳನ್ನು ಹೊರಬಾರದಿರುತ್ತದೆ. ಹಾಗೆಯೇ ಎಂದಿಗೂ ಯಾರನ್ನೂ ಯಾವ ಕಾರಣಕ್ಕೂ ಮತಾಂತರ ಮಾಡಬಾರದು ಎನ್ನುವ ವಚನವನ್ನೂ ಸ್ವೀಕರಿಸಿರುತ್ತಾರೆ. ಹೀಗೆ ಒಮ್ಮೆ ಸನ್ಯಾಸ ದೀಕ್ಷೆ ತೆಗೆದುಕೊಂಡವರು ಯಾವುದೇ ಕಾರಣಕ್ಕೆ ಮತ್ತೆ ಸಂಸಾರಕ್ಕೆ ಹಿಂದಿರುಗಲು ಬಯಸಿದ್ದೇ ಆದರೆ 'ದೊಂಬಾಪುಲ್ವಾ' (ದೀಕ್ಷೆ ಹಿಂದೆಗೆದುಕೊಳ್ಳುವುದು) ಎನ್ನುವ ಪ್ರಕ್ರಿಯೆಯ ಮೂಲಕ ಸಂಸಾರಿಯಾಗಬಹುದಿರುತ್ತದೆ. ಭಿಕ್ಷುಣಿ ಡ್ರೇಮಾ ಇಷ್ಟೆಲ್ಲಾ ಮಾಹಿತಿಯನ್ನು ಕೊಡುತ್ತಿರುವಾಗ ಆಕೆಯ ಟೇಬಲ್ ಮೇಲಿದ್ದ ಒಂದು ವಿಚಿತ್ರಾಕೃತಿಯ ಬುದ್ಧನ ವಿಗ್ರದ ಮೇಲೆ ನನ್ನ ಗಮನ ಹರಿಯಿತು. ಅದನ್ನು ಗ್ರಹಿಸಿದ ಆಕೆ "ಇದು ಪಲ್ದೆನ್ ಲಹ್ಮೋ'' ಎನ್ನುವ ಬುದ್ಧನ ರೂಪ. ಈ ರೂಪದಲ್ಲಿ ಬುದ್ಧ ನಮ್ಮನ್ನು, ಕೆಟ್ಟ ದೃಷ್ಟಿಗಳಿಂದ ಕಾಪಾಡುತ್ತಾನೆ" ಎಂದಳು. ಆಗ ನನಗೆ ನಮ್ಮೂರಿನ ಮನೆಮನೆಯ ಗೋಡೆ, ಬಾಗಿಲುಗಳ ಮೇಲೆ ನೇತಾಡುವ ದೃಷ್ಟಿ ಗಣೇಶನ ನೆನಪಾಯಿತು. ಅಲ್ಲಿಯೇ ಇದ್ದ ಮತ್ತೊಂದು ಪುಸ್ತಕವನ್ನು ಕೈಗೆತ್ತಿಕೊಂಡೆ. ಅದರಲ್ಲಿ ನಾಲಿಗೆ ಹೊರಳದಷ್ಟು ಕಷ್ಟದ ಪದಗಳು ಇರುವ ಶ್ಲೋಕಗಳನ್ನು ನೋಡಿ "ಅಷ್ಟು ಚಿಕ್ಕವಯಸ್ಸಿನ ಮಕ್ಕಳನ್ನು ಸನ್ಯಾಸಿಯನ್ನಾಗಿ ಮಾಡಿ ದೀಕ್ಷೆ ಕೊಟ್ಟು ಬಿಟ್ಟರೆ, ಅವರಿಗೆ ಜಪ ಮಾಡುವುದಾಗಲೀ, ಶ್ಲೋಕಗಳನ್ನು ಉಚ್ಛರಿಸುವುದಾಗಲಿ ಸಾಧ್ಯವೇ?" ಎಂದು ಕೇಳಿದೆ. ಅದಕ್ಕೆ ಆಕೆ ನಗುತ್ತಾ, ಕಾಲುಗಳನ್ನು ಮಡಚಿ ಮೇಲಿಟ್ಟುಕೊಳ್ಳುತ್ತಾ, ಕೈಯಲ್ಲಿದ್ದ ಜಪಮಣಿಯನ್ನು ತಿರುಗಿಸುತ್ತಾ "ಬೌದ್ಧ ಧರ್ಮದ ಮೂಲಭೂತವಾದ ಮತ್ತು ಅತ್ಯಂತ ಶ್ರೇಷ್ಠ ಮಂತ್ರ ಎಂದರೆ ಟಿಬೇಟಿಯನ್ ಭಾಷೆಯ 'ಓಂ ಮನಿಪೆಮ್ಮೆಹಂಗ್' ಎನ್ನುವುದು. ಯಾವ ಮಗುವಿಗೆ ಅಮ್ಮ ಎನ್ನುವ ಉಚ್ಛಾರಣೆ ಬರುವುದೋ ಆ ಮಗು ಇದನ್ನು ಶ್ರಮವಿಲ್ಲದೆ ಹೇಳಬಹುದು" ಎಂದಳು. ಓಂ ಮನಿಪೆಮ್ಮೆಹಂಗ್ ಎಂದರೆ ಸಾಮಾನ್ಯವಾಗಿ

ನಾವೆಲ್ಲರೂ ಕೇಳಿರುವ ಓಂ ಮಣಿ ಪದ್ಮೇ ಹಂ ಎಂದಾಗಿರುತ್ತದೆ. ಈ ಮಂತ್ರವು ಬುದ್ಧನ ಎಲ್ಲಾ ರೂಪಗಳಲ್ಲಿನ ಶಕ್ತಿಯನ್ನು ಏಕಕಾಲಕ್ಕೆ ಪ್ರಚೋದಿಸುವ ಸಾಮರ್ಥ್ಯವನ್ನು ಉಳ್ಳ ಬೀಜಮಂತ್ರ ಎನ್ನಿಸಿಕೊಂಡಿದೆ. ಅವಲೋಕಿತೇಶ್ವರ ಎನ್ನುವುದು ಬುದ್ಧನ ಕಾರುಣ್ಯ ಸ್ವರೂಪ. ಇವನನ್ನು ಪ್ರಾರ್ಥಿಸಿದರೆ ಬುದ್ಧನ ಮತ್ತೆಲ್ಲಾ ರೂಪಗಳನ್ನು ಒಲಿಸಿಕೊಂಡಂತೆಯೇ ಹೌದು. ಬೌದ್ಧ ಧರ್ಮೀಯರ ಸುಪ್ತಾವಸ್ಥೆಯಲ್ಲೂ ಅವಲೋಕಿತೇಶ್ವರ ಹಾಸುಹೊಕ್ಕಾಗಿದ್ದಾನೆ. ಅದಕ್ಕೇ ಅವರಿಗೆ ಓಂ ಮಣಿ ಪದ್ಮೇ ಹಂ ಎನ್ನುವುದು ಉಸಿರಾಟದಷ್ಟೇ ಸರಾಗವಾದ ಜಪ ಮಂತ್ರವಾಗಿದೆ. ಎಂದೆಲ್ಲಾ ಹೇಳುತ್ತಾ ಡ್ರೇಮಾ "ನಿಮಗೆ ಈ ವಿಷಯದಲ್ಲಿ ಎಷ್ಟೊಂದು ಆಸಕ್ತಿಯಿದೆ. ತವಾಂಗ್‌ನಲ್ಲಿ ಸನ್ಯಾಸಿನಿಯರ ಮಠದ ಮುಖ್ಯಸ್ಥರ ಪರಿಚಯ ಕೊಡುತ್ತೇನೆ. ಹೋಗಿ ಮಾತಾನಾಡಿಸಿ. ಅವರು ಇನ್ನೂ ಸರಿಯಾದ ಮತ್ತು ಹೆಚ್ಚಿನ ವಿಷಯಗಳನ್ನು ತಿಳಿಸಿಕೊಡುತ್ತಾರೆ" ಎನ್ನುತ್ತಾ ಅಲ್ಲಿನವರ ವಿವರವನ್ನು ಕೊಟ್ಟಳು. ಕ್ರಿಶ್ಚಿಯನ್ ಸನ್ಯಾಸಿನಿಯರನ್ನು ನೋಡಿದಾಗಲೆಲ್ಲಾ, ಜೈನ ಧರ್ಮದ ದೀಕ್ಷೆ ತೆಗೆದುಕೊಂಡ ಯುವತಿಯರನ್ನು ಕಂಡಾಗಲೆಲ್ಲಾ ಅವರ ಸಂಯಮದ ಬಗ್ಗೆ ಒಂದು ವಿಶೇಷವಾದ ಕುತೂಹಲ ನನ್ನನ್ನು ಎಂದೂ ಕಾಡಿದೆ. ಆದರೆ ಬಿಕ್ಕುಣಿ ಡ್ರೇಮಾ ಚೊಝೋವ್ ಜೊತೆಯಲ್ಲಿನ ಇಷ್ಟೊಂದು ಹತ್ತಿರದ, ಆಪ್ತ ಭೇಟಿ ಆಕೆಯ ಸಂಯಮದ ಬಗ್ಗೆ ನನ್ನಲ್ಲಿ ಪ್ರಶ್ನಾರ್ಥಕಗಳನ್ನು ಏಳಿಸಲಿಲ್ಲ. ಬದಲಿಗೆ ಆಕೆಯ ಕಣ್ಣಲ್ಲಿ ಹೊಳೆಯುತ್ತಿದ್ದ ನಕ್ಷತ್ರಗಳು ಜಗತ್ತನ್ನು, ಜನರ ನಂಬಿಕೆ ಆಚರಣೆಗಳನ್ನು ಮತ್ತೊಂದು ಹೊಸ ದೃಷ್ಟಿಯಿಂದ ನೋಡುವಂತೆ ನನ್ನನ್ನು ಪ್ರೇರೇಪಿಸುತ್ತಿದ್ದವು. ಎಷ್ಟು ಮಾತನಾಡಿದೆವೋ ಅಷ್ಟೇ ಏಕಾಂತವನ್ನೂ ಅನುಭವಿಸಿದೆವು ನಡುವಿನಲ್ಲಿ. ಹೊರಟು ನಿಂತಾಗ ಆ ದಾರಿಗೆ ಹೊಸಬಳಾಗಿದ್ದ ನನಗೆ ದಿಕ್ಕಾಗಿ ಡ್ರೇಮಾ ಜೊತೆಯಲ್ಲಿಯೇ ಬಂದಳು. ಆ ಕಡುಗತ್ತಲಲ್ಲಿ, ಹಸಿರು ಮರಗಳ ಸದ್ದಿನ ಸಾಂಗತ್ಯದಲ್ಲಿ ನಾವಿಬ್ಬರು ನಡೆದು ಬರುತ್ತಿದ್ದಾಗ ಆಕಾಶದಲ್ಲಿ ಚಂದಿರನೊಬ್ಬನೇ ಬುದ್ಧನಗು ಬೀರುತ್ತಿದ್ದ. ಬದುಕು ಎನ್ನುವುದು ಒಂದು ಪ್ರತಿಧ್ವನಿಯಷ್ಟೇ ಎಂದುಕೊಳ್ಳುತ್ತಾ ಬೆಳಗಿಗೆ ತೆರೆದುಕೊಳ್ಳುತ್ತಿದ್ದೆ.

**ಇಲ್ಲಿದೆ ಬೆಳಕಿನ ಪ್ರಾಣ:** ಈ ನಾಡಿನಲ್ಲಿ ಹುಟ್ಟಿ ಬೇರೆಲ್ಲ ಎಡೆಗೂ ವಲಸೆ ಹೋದ ಬೋಧಿಸತ್ವನ ತತ್ವಗಳು ಮತ್ತೆ ಈ ನಾಡಿಗೆ ಮರುಪ್ರವೇಶ ಪಡೆದದ್ದು

ಈ ನಗರದಲ್ಲಿಯೇ. ಮಹಾಯಾನ ಪಂಥದ ಬೌದ್ಧ ಧರ್ಮ ಅನುಯಾಯಿಗಳ ತವರು ಎಂದೇ ಗುರುತಿಸಲ್ಪಡುವ ಇಲ್ಲಿ ಕಣ್ಣು ಹಾಯಿಸಿದ ಕಡೆಯಲೆಲ್ಲಾ ಕಾಣುವುದು ಬೌದ್ಧ ಮಂದಿರಗಳು ಮತ್ತು ಸ್ಥೂಪಗಳು. ಇಲ್ಲಿರುವ ಏಷ್ಯಾ ಖಂಡದ ಎರಡನೇ ದೊಡ್ಡ ಹಾಗು ಭಾರತದ ಅತೀ ದೊಡ್ಡ ಬೌದ್ಧ ವಿಹಾರವನ್ನು 'ಗಾಲ್ದೆನ್ ನಮ್ ಗ್ಯಾಲ್ ಲಹ್ಸ್ತೆ' ಎಂದು ಕರೆಯಲಾಗುತ್ತದೆ. ಸಮುದ್ರ ಮಟ್ಟದಿಂದ 12000 ಅಡಿಗಳಷ್ಟು ಎತ್ತರದಲ್ಲಿದ್ದು, 2085 ಚದರ ಕಿಲೋ ಮೀಟರ್ಗಳಷ್ಟು ವಿಸ್ತೀರ್ಣವನ್ನು ಹೊಂದಿ, 1768 ಚದರ ಕಿಲೋಮೀಟರ್ಗಳಷ್ಟು ವಿಸ್ತಾರವಾದ ಶೀತವಲಯದ ಕಾಡಿನಿಂದ ಆವೃತವಾದ ಈ ಪ್ರದೇಶದಲ್ಲಿರುವ ಬೌದ್ಧ ವಿಹಾರವನ್ನು 1860-61 ರ ಸಮಯದಲ್ಲಿ ಮೆರಲ್ ಲಾಮ ಲೊದ್ರೆ ಗ್ಯಾಮ್ತ್ಸೋ ನಿರ್ಮಿಸಿದ್ದು ಎನ್ನಲಾಗುತ್ತದೆ. ಚೀನಾ ಹಾಗೂ ಟಿಬೇಟ್ನೊಡನೆ ಸರಹದ್ದನ್ನು ಹಂಚಿಕೊಳ್ಳುತ್ತಾ, ತವಾಂಗ್ ಚು ವ್ಯಾಲಿಗೆ ಅಭಿಮುಖವಾಗಿ ನಿಂತು ಸಣ್ಣ ಸಣ್ಣ ಹಳ್ಳಿಗಳು, ಆದಿವಾಸಿ ಬಸ್ತಿಗಳ ಉಸ್ತುವಾರಿ ಮಾಡುತ್ತಿರುವಂತೆ ಕಾಣುವ ತವಾಂಗ್ ಜಿಲ್ಲೆ ಪೂರ್ವ ಅರುಣಾಚಲ ಪ್ರದೇಶದಲ್ಲಿದೆ. ತೇಜ್ಪುರ್ನಿಂದ 365, ಗೌಹಾಟಿಯಿಂದ 555 ಹಾಗೂ ಬೊಂಡಿಲ್ಲದಿಂದ 185 ಕಿಲೋಮೀಟರ್ಗಳಷ್ಟು ನೆಲ ದೂರದಲ್ಲಿದೆ ತವಾಂಗ್. ಕೋಲ್ಕತ್ತಾ ಹಾಗೂ ಗೌಹಾಟಿಯಿಂದ ತೇಜ್ಪುರ್ಗೆ ಹೆಲಿಕಾಪ್ಟರ್ ಸೇವೆಯೂ ಲಭ್ಯವಿದೆ.

ಮೆರಲ್ ಲಾಮ ಲೊದ್ರೆ ಗ್ಯಾಮ್ತ್ಸೋಯು ಬೌದ್ಧ ವಿಹಾರ ಸ್ಥಾಪಿಸಲು ಪ್ರಶಸ್ತ ಸ್ಥಳವನ್ನು ಅರಸುತ್ತಾ ಟಿಬೇಟ್ ಕಡೆಯಿಂದ ಭಾರತವನ್ನು ಪ್ರವೇಶಿಸಿ ಇದೇ ವಿಷಯವನ್ನು ಧ್ಯಾನಿಸುತ್ತಾ ಪ್ರಾರ್ಥನೆ ಮಾಡಿ ಕಣ್ಣು ಬಿಟ್ಟಾಗ ಆತನ ಕುದುರೆ ಕಾಣದಾಗಿತ್ತಂತೆ. ಕುದುರೆಯನ್ನು ಹುಡುಕುತ್ತಾ ಆತ ಮುಂದೆ ಮುಂದೆ ಬರುತ್ತಿರುವಾಗ ಆತನ ಕುದುರೆಯು ಈಗಿನ ತವಾಂಗ್ ಜಾಗದಲ್ಲಿ ನಿಂತು ತನ್ನ ಗೊರಸನ್ನು ಲಯಬದ್ಧವಾಗಿ ನೆಲಕ್ಕೆ ಬಡಿಯುತ್ತಿತ್ತಂತೆ. ಮೆರಲ್ ಲಾಮ ಲೊದ್ರೆ ಗ್ಯಾಮ್ತ್ಸೋಗೆ ಅದರ ದೈವೀ ಸಂಕೇತ ಅರ್ಥವಾಗಿ, ಇದೇ ಸರಿಯಾದ ಸ್ಥಳ ಎಂದು ಗೋಚರವಾಗಿ ಈ ಜಾಗಕ್ಕೆ ತವಾಂಗ್ ಎನ್ನುವ ಹೆಸರಿಟ್ಟು ಬೌದ್ಧ ವಿಹಾರ ನಿರ್ಮಿಸಿದನಂತೆ. ತ ಎಂದರೆ ಕುದುರೆ ಮತ್ತು ವಾಂಗ್ ಎಂದರೆ ಆಯ್ದದ್ದು ಎನ್ನುವ ಅರ್ಥವಿದೆ. ತವಾಂಗ್ ಎಂದರೆ ಕುದುರೆ

ಆಯ್ಕೆ ಮಾಡಿದ ಸ್ಥಳ ಎನ್ನುವ ಅರ್ಥ ಬರುತ್ತದೆ. ಬೊಂಡಿಲ್ಲಾದ ಕಡೆಯಿಂದ ತಾವಾಂಗ್‌ಗೆ ಹೋಗುವಾಗ ದೊಡ್ಡ ಹೆಜ್ಜೆ ಗುರುತಿರುವ ಒಂದು ಸಣ್ಣ ಬಂಡೆ ಸಿಗುತ್ತದೆ. ಅದರ ಸುತ್ತಲೂ ಹಳದಿ ಬಣ್ಣದ ಹೂವಿನ ಗಿಡಗಳಿವೆ. ಆ ಹೆಜ್ಜೆ ಗುರುತನ್ನು ಟಿಬೇಟಿನ ಮಿಲರೇಪ ಎನ್ನುವ ಬೌದ್ಧ ಧರ್ಮದ ಪವಾಡ ಸದೃಶ ಗುರುವಿನದ್ದು ಎಂದು ಗುರುತಿಸಲಾಗಿದೆ. ರಸ್ತೆಯುದ್ದಕ್ಕೂ ಪಂಚಭೂತಗಳನ್ನು ಪ್ರತಿನಿಧಿಸುವ 'ಚೊಫೆನ್' (ತ್ರಿಕೋನಾಕಾರದ ಪ್ರಾರ್ಥನಾ ಬಾವುಟ)ಅನ್ನು ಕಟ್ಟಲಾಗಿದೆ. ಬಿಳಿಬಣ್ಣವು ಆಕಾಶವನ್ನು, ಕಂದು ಬಣ್ಣವು ಭೂಮಿಯನ್ನು, ಕೆಂಪು ಅಗ್ನಿಯನ್ನು, ನೀಲಿಯು ನೀರನ್ನು ಮತ್ತು ಅವುಗಳ ನಡುವಿನ ಸಮಾನ ಅಂತರವು ಗಾಳಿ ತತ್ವವನ್ನು ಪ್ರತಿನಿಧಿಸುತ್ತವೆ ಎನ್ನುತ್ತಾರೆ ಅಲ್ಲಿನವರು.



**ತವಾಂಗ್‌ನ ಬೌದ್ಧ ಮಂದಿರ**

ಹಿಮಾಲಯದ ಪವಿತ್ರತೆಯನ್ನು ಮೈತುಂಬಿಕೊಂಡು ನಿಂತಿರುವ ತವಾಂಗ್ ಬೆಳಕಿನ ಪ್ರಾಣದಂತೆ ಕಾಣುತ್ತದೆ. ಆಧ್ಯಾತ್ಮ ಸಾಧಕರುಗಳಿಗೆ ದೇವರೇ ಬಂದು ಜೀವ-ಜೀವನದ ರಹಸ್ಯವನ್ನು ಗುಟ್ಟಿನಲ್ಲಿ ಹೇಳುತ್ತಾ, ವಾತ್ಸಲ್ಯದಿಂದ ಅಪ್ಪಿಕೊಂಡಂತಹ ಭಾವ ಬರಿಸುವ ತಾಣದಂತೆ ತೋರುತ್ತದೆ. 113 ಅಡಿ ಎತ್ತರ, ೮೦ ಅಡಿ ಅಗಲ ಇರುವ ಸ್ಥೂಪವನ್ನು ಹೊಂದಿರುವ ತವಾಂಗ್‌ನ ಬೌದ್ಧ ವಿಹಾರದ ಅಧ್ಯಯನಕ್ಕೇ ಒಂದಿಡೀ ಜೀವಮಾನದ ಅವಧಿ ಸಾಲದು ಎಂದರೆ ಅತಿಶಯೋಕ್ತಿಯೇನಲ್ಲ. ಬಹುಶಃ ಜಗತ್ತಿನಲ್ಲಿ ಅಕ್ಷರಗಳಿಗೆ

ಸಿಗದೆ ಬರಿಯ ಅನುಭವಕ್ಕೆ ದಕ್ಕುವ ಭೂಮಿ ಎಂದರೆ ತವಾಂಗ್ ಎನ್ನಿಸುತ್ತದೆ. ಮೂಲತಃ ಮಂಗೋಲಿಯನ್ ಜನಾಂಗಕ್ಕೆ ಸೇರಿದ ಇಲ್ಲಿನ ಬುಡಕಟ್ಟು ಜನರನ್ನು 'ಮೊನ್ಪಾ'ಗಳು ಎಂದು ಗುರುತಿಸಲಾಗಿದೆ. ಟಿಬೆಟ್ ಹಾಗು ಭೂತಾನ್ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವವರಂತೆ ಕಂಡರೂ ಮೊನ್ಪಾಗಳು ಅತ್ಯಂತ ಸೌಮ್ಯ ಸ್ವಭಾವದ, ಸೌಜನ್ಯಯುತ, ಪರಿಸರಪ್ರೇಮಿ, ಪ್ರಾಣಿಸ್ನೇಹಿಗಳಾಗಿ, ಬೇಸಾಯ ಹಾಗೂ ಕಟ್ಟಡ ಕಟ್ಟುವ ಶೈಲಿಯಲ್ಲಿ ಪ್ರತ್ಯೇಕವಾದ ಛಾಪು ಮೂಡಿಸಿದ್ದಾರೆ. ಗುಡಿಗಾರಿಕೆ, ಮರದ ಮತ್ತು ಬಿದಿರಿನ ಕರಕುಶಲ ಕಲೆ, ಚಿತ್ರ ಬಿಡಿಸುವಿಕೆ, ಬಣ್ಣ ವನ್ನು ತಯಾರು ಮಾಡಿ ಹಚ್ಚುವ ಕಲೆಗಾರಿಗೆ, ಕೈಮಗ್ಗ, ಕಾಗದ, ಮುಖವಾಡ ಮತ್ತು ಗಂಧದಕಡ್ಡಿಗಳ ತಯಾರಿಕೆಯಲ್ಲಿ ಪರಿಣಿತಿಯನ್ನು ಹೊಂದಿರುತ್ತಾರೆ. ಚಮರೀಮೃಗದ ಚರ್ಮದಿಂದ ಟೊಪ್ಪಿಗೆಗಳನ್ನು ಮತ್ತು ಪಾದರಕ್ಷೆಗಳನ್ನು ಮಾಡುವುದರಲ್ಲಿ ಮೊನ್ಪಾಗಳು ಸಿದ್ಧಹಸ್ತರು. ತಮ್ಮದೇ ವಿಶೇಷ ಭಾಷೆ, ನಡೆ, ನುಡಿ, ಆಚಾರ, ವಿಚಾರ, ಊಟ, ವಸ್ತ್ರ, ಒಡವೆ, ಹಬ್ಬ, ನಂಬಿಕೆ, ಹಾವಭಾವ, ಅಂಗವಿನ್ಯಾಸಗಳನ್ನು ಹೊಂದಿದ್ದು ಪ್ರಪಂಚದಲ್ಲಿಯೇ ಅತೀ ವಿಶಿಷ್ಟ ಜನರು ಎನಿಸಿಕೊಂಡಿದ್ದಾರೆ. ಮೊನ್ಪಾಗಳನ್ನು ಭೂಮಿಯ ಮೇಲೆ ಅವಲೋಕಿತೇಶ್ವರನ ಕೃಪೆ ಎಂದು ನಂಬಲಾಗಿದೆ.

'ಗಾಲ್ದೆನ್ ನಮ್ ಗ್ಯಾಲ್‌ಲಹ್ಸೆ್ತ' ಬೌದ್ಧ ವಿಹಾರವನ್ನು ಉತ್ತರದಲ್ಲಿ 'ಕಕಲಿಂಗ್' ಎನ್ನುವ ಹಿಮಪ್ರದೇಶದ ವಿಶೇಷವಾದ ಕಲ್ಲುಗಳಿಂದ ನಿರ್ಮಿಸಿರುವ ಗೇಟಿನ ಮೂಲಕ ಒಳಪ್ರವೇಶಿಸಿದರೆ ಪೂರ್ವಾಭಿ ಮುಖವಾಗಿ 925 ಅಡಿ ಎತ್ತರದ ಗೇಟ್ ಸಿಗುತ್ತದೆ. ಅದು ವಿಹಾರದ ಮುಖ್ಯ ಪ್ರವೇಶ ದ್ವಾರವಾಗಿದೆ. ಗೇಟುಗಳ ಹಾಗು ಮಂದಿರದ ಗೋಡೆಗಳ ಒಳ ಹೊರ ಭಾಗಗಳಲ್ಲಿ ಮಂಡಲಗಳ, ಬೌದ್ಧ ದೇವ-ದೇವತೆಗಳ, ಬುದ್ಧನ ಇತರೆ ರೂಪಗಳ, ಮುಖವಾಡಗಳ ಚಿತ್ರಗಳನ್ನು ಬಿಡಿಸಲಾಗಿದೆ. ಅವುಗಳಿಗೆಲ್ಲಾ ಎಲೆ, ಹೂವುಗಳಿಂದ ತಯಾರು ಮಾಡಿದ ಬಣ್ಣಗಳನ್ನು ಹಚ್ಚಲಾಗಿದೆ. ಹೆಚ್ಚಾಗಿ ಹಸಿರು, ಕೇಸರಿ, ಕಪ್ಪು ಮತ್ತು ನೀಲಿ ಬಣ್ಣದ ವರ್ಣಗಳೇ ಕಾಣುತ್ತವೆ. ಈ ಬೌದ್ಧ ವಿಹಾರದ ಒಳಗೆ ಹಲವಾರು ಕಟ್ಟಡ ರಚನೆಗಳನ್ನು ಕಾಣಬಹುದು. ಅವುಗಳಲ್ಲಿ ಬಹುಮುಖ್ಯವಾದದ್ದು 'ದುಖಂಗ್' ಎನ್ನುವ ದೊಡ್ಡಹಜಾರ.

ಸನ್ಯಾಸಿಗಳು, ಪ್ರವಾಸಿಗರು, ಆಧ್ಯಾತ್ಮ ಸಾಧಕರು, ಅಧ್ಯಯನಾಸಕ್ತರು ಎಲ್ಲರೂ ಮೊದಲು ಸೇರುವ ಜಾಗವಿದು. ದುಖಂಗ್ ಹಜಾರದ ನಟ್ಟ ನಡುವೆ 26 ಅಡಿಯ ಕರುಣಾರಸಯುತ ಬುದ್ಧನ ಸ್ವರ್ಣಮೂರ್ತಿ ಇದ್ದು ಪ್ರತಿಯೊಬ್ಬರ ಕಣ್ಣಿನಲ್ಲಿ ಕಣ್ಣುನೆಟ್ಟು ನೇರವಾಗಿ ಹೃದಯದ ತರಂಗಗಳನ್ನೇ ನೋಡುತ್ತಿರುವಂತೆ ಭಾಸವಾಗುತ್ತದೆ. ಒಳಭಾಗದ ಗೋಡೆಗಳ ಮೇಲೆಲ್ಲಾ ಟಿಬೇಟಿಯನ್ ಶೈಲಿಯ ಅದ್ಭುತ ಚಿತ್ರಗಳನ್ನು ಬಿಡಿಸಿ ಬಣ್ಣ ಹಚ್ಚಲಾಗಿದೆ. ಒಂದಷ್ಟು 'ಥಂಗ್‌ಖಾ'ಗಳನ್ನು ನೇತು ಬಿಡಲಾಗಿದೆ. ಥಂಗ್‌ಖಾ ಎಂದರೆ ಬೆಳ್ಳಿಯ ರೇಖಿನಿಂದ ಮಾಡಲಾದ ನುಣುಪಾದ ರೇಷಿಮೆಯ ಬಟ್ಟೆ. ಅದರ ಮೇಲೆ ಹತ್ತಿಯನ್ನು ಇರಿಸಿ ಬಣ್ಣಗಳನ್ನು ಉಪಯೋಗಿಸಿ ಬೌದ್ಧ ಧರ್ಮದ ದೇವರುಗಳ ಚಿತ್ರಗಳನ್ನು ಬಿಡಿಸಿ ಬಣ್ಣ ತುಂಬಿಸಿರುತ್ತಾರೆ. ಇವುಗಳಲ್ಲಿ ಮುಖ್ಯವಾದದ್ದು ಎಂದರೆ 'ಜಾ ದ್ರೋಯಿಮಾ' ಎನ್ನುವ ಥಂಗ್‌ಖಾ. ಇದರಲ್ಲಿ ಐದನೆಯ ದಲೈಲಾಮ ಅವರು ತಮ್ಮ ಮೂಗಿನ ತುದಿಯ ರಕ್ತದಿಂದ ಬಿಡಿಸಿದ್ದಾರೆ ಎನ್ನುವ ಜಾ ದ್ರೋಯಿ ಮಾ (ಶ್ರೀದೇವಿ) ಚಿತ್ರವಿದೆ. ಇದನ್ನು ಅವರೇ ಮೆರಲ್ ಲಾಮ ಲೊದ್ರೆ ಗ್ಯಾಮ್ತ್ಸೋ ಅವರಿಗೆ ನೀಡಿದರು ಎಂದೂ ಹೇಳಲಾಗುತ್ತದೆ. ಥಂಗ್‌ಖಾಗಳಿಗೆ ಒಂದು ದೊಡ್ಡ ಚರಿತ್ರೆಯಿದೆ. ಬುದ್ಧನ ತತ್ವದ ತುಣುಕುಗಳನ್ನು ಚಿತ್ರವಾಗಿ ಇದರಲ್ಲಿ ಬಿಡಿಸಲಾಗುತ್ತದೆ. ಮನುಷ್ಯನ ಹುಟ್ಟು ಸಾವಿನ ನಡುವಿನ ಎಲ್ಲಾ ದುರಂತಗಳನ್ನು, ಕಷ್ಟ ಕಾರ್ಪಣ್ಯಗಳನ್ನು ಇದರಲ್ಲಿ ತೋರಿಸಲಾಗುತ್ತದೆ. ಜ್ಞಾನೋದಯದ ಅಂತಿಮ ಔನತ್ಯವನ್ನು ದೃಷ್ಟಿಗೆ ಎಟುಕುವಂತೆ ಮಾಡುವ ಈ ಥಂಗ್‌ಖಾಗಳನ್ನು "ಜ್ಞಾನೋದಯದ ಹಾದಿಯ ಭೂಪಟ" ಎಂದು ಕರೆಯಲಾಗುತ್ತದೆ.

ಅಲ್ಲಿಂದ ಹೊರಬಂದು ಈಶಾನ್ಯದ ಕಡೆಗೆ ಮುಖ ಮಾಡಿ ನಿಂತರೆ ಸುಮಾರು ಅರವತ್ತು 'ಶಾ'ಗಳು ಕಾಣಸಿಗುತ್ತವೆ. 'ಶಾ' ಎನ್ನುವುದು ಗುಡಿಸಲಿನಂತಹ ರಚನೆ. (ಶಾ ಎಂದರೆ ಬೌದ್ಧ ಸನ್ಯಾಸಿಗಳ ಮಠ). 700 ಜನ ಸನ್ಯಾಸಿಗಳು ವಾಸ ಮಾಡಲು ಸಾಧ್ಯವಿರುವ ಪ್ರಸ್ತುತ 500 ಬಿಕ್ಕುಗಳು ವಾಸ ಮಾಡುತ್ತಿದ್ದಾರೆ. ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಬಿಕ್ಕುಣಿಯರ ಮಠವೂ ಇಲ್ಲಿಯೇ ಇದೆ. ಮೆರಲ್ ಲಾಮ ಲೊದ್ರೆ ಗ್ಯಾಮ್ತ್ಸೋಯವರ ಸಹೋದರಿಯನ್ನು ಬೌದ್ಧ ಧರ್ಮದ ಮೊದಲ ಬಿಕ್ಕುಣಿ ಎಂದು ಇತಿಹಾಸದಲ್ಲಿ

ಗುರುತಿಸಲಾಗಿದೆ. ಆಕೆಯೇ ಇಲ್ಲಿ ಬಿಕ್ಕುಣಿಯರ ಮಠವನ್ನು ಸ್ಥಾಪಿಸಿದ್ದು ಎನ್ನಲಾಗುತ್ತದೆ. ಈಗ ಇಲ್ಲಿ ಒಟ್ಟು ನಾಲ್ಕು ಮಠಗಳು ಬಿಕುಣ್ಣಿಯರಿಗಾಗಿಯೇ ಇವೆ. ಅದರ ಪಕ್ಕದಲ್ಲೇ 'ಪರ್-ಖಾಂಗ್' ಎನ್ನುವ ಗ್ರಂಥಾಲಯವಿದೆ. ಶತಮಾನಗಳಷ್ಟು ಹಿಂದಿನ ಹಲವಾರು ಕೈಬರಹದ ಧಾರ್ಮಿಕ ಗ್ರಂಥಗಳನ್ನೂ ಇಲ್ಲಿ ಅಧ್ಯಯನಕ್ಕೆ ಇಡಲಾಗಿದೆ. ಅದನ್ನು ದಾಟಿ ಗೊಂಪಾದ ಹಿಂಭಾಗಕ್ಕೆ ಬಂದರೆ ಅಲ್ಲಿ ವೇದಿಕೆಯಂತಹ ದೊಡ್ಡ ಚಪ್ಪಡಿ ಕಲ್ಲು ಇದೆ. ಹಬ್ಬಹರಿದಿನ ಜಾತ್ರೆ ಮಹೋತ್ಸವದ ಸಂದರ್ಭದಲ್ಲಿ ಇಲ್ಲಿ ಧಾರ್ಮಿಕ ನೃತ್ಯಗಳು ಮತ್ತು ಏಕಾಂಕ ನಾಟಕಗಳನ್ನು ಮಾಡಲಾಗುತ್ತದೆ. ಆ ದಿನಗಳಲ್ಲಿ ಪ್ರಸಾದದ ಅಡುಗೆ ಮಾಡಲು 'ರುಮ್-ಖಾಂಗ್' ಎನ್ನುವ ಎರಡು ಅಂತಸ್ತಿನ ಅಡುಗೆ ತಯಾರಿಕಾ ಕಟ್ಟಡವಿದೆ. ಹೊರಗಿನಿಂದ ಇದೊಂದು ಸ್ತೂಪದಂತೆ ಕಾಣುತ್ತದೆ.

15ನೆಯ ಶತಮಾನದ್ದು ಎನ್ನಲಾಗುವ ಅರ್ಜೆಲ್ಲಿಂಗ್ ಬೌದ್ಧ ಮಂದಿರವು ತವಾಂಗ್‌ನ ಈ ಬೌದ್ಧ ವಿಹಾರದಿಂದ ಐದು ಕಿಲೋಮೀಟರ್ ದೂರದಲ್ಲಿ ಇದೆ. ಇದು ಆರನೆಯ ದಲೈಲಾಮರ ಜನ್ಮಸ್ಥಳವಾಗಿದೆ. ಈ ಗೊಂಪಾದ ಮುಂದೆ ಇಂದಿಗೂ ಕಾಣಸಿಗುವ ಸ್ಥಳೀಯ ಜನರು 'ಚೆಂದೋಂಗ್ ಸೆಂಗ್' ಎಂದು ಕರೆಯುವ ಒಂದು ಮರವನ್ನು ಆರನೆಯ ದಲೈಲಾಮಾರೇ ನೆಟ್ಟು ಬೆಳೆಸಿದ್ದಾರೆ ಎಂದು ಹೇಳಲಾಗುತ್ತದೆ. ರಿಗ್ಯಾಲಿಂಗ್ ಬೌದ್ಧ ವಿಹಾರವು ತವಾಂಗ್‌ನ ಪ್ರಮುಖ ಮೂರು ಬೌದ್ಧ ವಿಹಾರಗಳಲ್ಲಿ ಒಂದು ಎನಿಸಿಕೊಂಡಿದೆ. 45 ಕಿಲೋಮೀಟರ್ ದೂರದಲ್ಲಿ 8 ನೆಯ ಶತಮಾನದಲ್ಲಿ ಗುರು ಪದ್ಮಸಂಭವ ಭೇಟಿ ನೀಡಿದ್ದ ಎನ್ನಲಾಗುವ ತಕ್ತ್‌ಸಂಗ್ ಬೌದ್ಧ ವಿಹಾರಗಳಿವೆ. ತಕ್ತ್‌ಸಂಗ್‌ನ ಗೋಡೆಯ ಮೇಲೆ ಹಿಂದಿನ ಗುರುಗಳ ಹೆಜ್ಜೆ ಗುರುತುಗಳು ಹಾಗೂ ಅವರೊಡನೆ ಇರುತ್ತಿದ್ದ ಕುದುರೆಗಳ ಗೊರಸುಗಳ ಗುರುತುಗಳನ್ನು ಇಂದಿಗೂ ನೋಡಬಹುದು. ತವಾಂಗ್‌ನಿಂದ 17 ಕಿಲೋಮೀಟರ್ ದೂರದಲ್ಲಿ ಪಂಗಾಂಗ್ ತಂಗ್ ತ್ಸೋ ಎನ್ನುವ ಸುಂದರ, ಶುಭ್ರ ನೀರಿನ ಕೆರೆ ಇದೆ. ಸುತ್ತಲೂ ಸಹಜವಾಗಿ ಪ್ರಕೃತಿಯೇ ಕೃಷಿ ಮಾಡಿ ಬೆಳೆದು ಕೊಟ್ಟ ಬಣ್ಣಬಣ್ಣದ ಹೂವಿನ ತೋಟವಿದೆ. ಅಸಂಖ್ಯಾತ ಹಕ್ಕಿಗಳ ಕಲರವವಿರುವ ಈ ಸ್ಥಳವು ಚೀನಾ ಮತ್ತು ಭಾರತದ ನಡುವಿನ ಅತ್ಯಂತ ಎತ್ತರದ ಹಿಮಾಲಯ ಪ್ರದೇಶದ ಗಡಿ ಭಾಗವಾಗಿದೆ.

ಆರ್ಕಿಡ್ ಹೂವುಗಳ ಸಮ್ಮೋಹನದಿಂದ ಬಿಡಿಸಿಕೊಂಡು, ಬೊಂಡಿಲ್ಲಾ ಎನ್ನುವ ಚೆಲುವೆಯ ಮೋಹಪಾಶದಿಂದ ಕಷ್ಟಪಟ್ಟು ತಪ್ಪಿಸಿಕೊಂಡು ಹೊರಟುಬಂದು, ಮೇಲೆ ತಿಳಿ ನೀಲಿ ಆಕಾಶ, ಕೈಯಳತೆಯಲ್ಲಿ ಹಸಿರು ಗಿರಿಗಳು, ಆತ್ಮಕ್ಕೆ ಹಿಮಗಾಳಿಯ ಸ್ಪರ್ಶವೀಯುವ ತವಾಂಗ್ ಎನ್ನುವ ಸ್ವರ್ಗ ಭೂಮಿಯನ್ನು ಸುತ್ತುತ್ತಾ, ವಿಷಯ ಸಂಗ್ರಹಿಸುತ್ತಾ, ದಖಾಂಗ್‌ನ ಪರಿಮಳದಲ್ಲಿ ಮುಕ್ತಳಾಗುತ್ತಾ, ಅಕ್ಷರಗಳಿಗೆ, ಮೌನಕ್ಕೆ ಮತ್ತು ಕ್ಯಾಮೆರಾಕ್ಕೆ ಹೆಚ್ಚು ಕೆಲಸ ಕೊಡುತ್ತಾ, ವಿಹಾರದ ಗಲ್ಲಿಯಂತಹ ತಿರುವಿನಲ್ಲಿ ಕುಳಿತಿದ್ದಾಗ ಸಿಕ್ಕ ಬಿಕ್ಕುಣಿಯೊಬ್ಬಳ ಮುಖದ ಕಳೆ ಈ ಗಳಿಗೆಯಲ್ಲೂ ಮನಸ್ಸಿನ ತಿಜೋರಿಯಲ್ಲಿ ಬೆಚ್ಚಗೆ ಮತ್ತು ಭದ್ರ ಭದ್ರ. ಅದು ಯಾವುದೋ ಜನ್ಮದ ಬಂಧ ಎನ್ನುವಂತೆ ಮಾತಿಲ್ಲದೆ ಸೀದಾ ನನ್ನ ಭುಜಕ್ಕೆ ತಾಕುವಂತೆ ಬಂದು ಕುಳಿತಳಾಕೆ. ಅದೊಂದು ಸಣ್ಣ ಸ್ಪರ್ಶದಲ್ಲಿ ಅನೂಹ್ಯವಾದ ಸಂಚಲನವಿತ್ತು. ಅದೆಷ್ಟೋ ಹೊತ್ತು ಸಂಜ್ಞೆಯಲ್ಲಿಯೇ ಮಾತನಾಡಿ, ಮತ್ತಿನೆಷ್ಟೋ ಹೊತ್ತು ಮೌನ ಮತ್ತು ನಗುವನ್ನು ಹಂಚಿಕೊಂಡ ಆಕೆ ನಿಜಕ್ಕೂ ಮೂಗಿಯೋ ಅಥವಾ ಆಕೆ ಸಿಕ್ಕಿದ್ದು ನನ್ನ ಭ್ರಮೆಯೋ ಇಂದಿಗೂ ತಿಳಿಯದಾಗುತ್ತೇನೆ. ಮತ್ತೆ ಮತ್ತೆ ನೆನಪಾಗುತ್ತಿದೆ ಆರನೆಯ ದಲೈಲಾಮ ಅವರ ವಿರಚಿತ ಹಾಡಿನ ಸಾಲುಗಳು;

"ಕೊಳವನ್ನು ಪ್ರೀತಿಸುತ್ತಾ ಹಂಸವೊಂದು
ಅಲ್ಲಿಯೇ ತಂಗಲು ಹಂಬಲಿಸುತ್ತದೆ
ಆದರೆ, ಹಿಮ ಮತ್ತು ಮಂಜು
ಕೊಳವನ್ನು ಆವರಿಸಿಕೊಳ್ಳುತ್ತವೆ
ಹಂಸ ಹಾರಿ ಹೋಗಲೇಬೇಕು
ಪಶ್ಚಾತ್ತಾಪವಿಲ್ಲದೆ ಹಂಸಕ್ಕೆ ಈಗ ಹಾರಲೇಬೇಕಿದೆ"

* * * * *

## 18. ಕಾಗದ ಮಾಡುವ ಗುಡಿ

ಇಲ್ಲಿರುವ ಪ್ರತೀ ಬುಡಕಟ್ಟು ಜನಾಂಗವೂ ಒಂದೊಂದು ವೈಶಿಷ್ಟ್ಯ ಹೊಂದಿದೆ. ಅಪತಾನಿ ಗುಂಪಿನವರು ಆಧುನಿಕ ವಿದ್ಯಾಭ್ಯಾಸವನ್ನು ಗಳಿಸಿಕೊಳ್ಳುವುದರಲ್ಲಿ ಹೆಚ್ಚಿನ ಚುರುಕುತನ ತೋರಿಸಿದರೆ, ಆದಿ ಬುಡಕಟ್ಟಿನವರು ನೇಯ್ಗೆಯಲ್ಲಿ ಪರಿಣಿತಿಯನ್ನು ಗಳಿಸಿಕೊಂಡಿದ್ದಾರೆ. ಮೊನ್ಪಾ ಬುಡಕಟ್ಟಿಗೆ ಸೇರಿದ ಜನರು ಧಾರ್ಮಿಕ ಸಂಸ್ಕಾರ ಕ್ರಿಯೆಗಳಿಗೆ ಬೇಕಾದ ಹಸ್ತಪ್ರತಿಯನ್ನು ರಚಿಸುವುದರಲ್ಲಿ ಸಿದ್ಧಹಸ್ತರಾಗಿದ್ದಾರೆ. ಹೀಗೆ ಧಾರ್ಮಿಕ ಕ್ರಿಯಾವಿಧಿಗಳನ್ನು ಕೈ ಬರಹಗಳಲ್ಲಿ ಬರೆಯಲು ಬೇಕಾದಂತಹ ಕಾಗದವನ್ನು ಮತ್ತು ಶಾಯಿಯನ್ನು ಸ್ಥಳೀಯವಾಗಿ ಅವರೇ ತಯಾರಿಸಿಕೊಳ್ಳುತ್ತಾರೆ. ಸ್ವಸ್ಥಾನದಲ್ಲಿ ದೊರಕುವ ಗಿಡ ಮೂಲಿಕೆಗಳನ್ನು ಬಳಸಿ ಕಾಗದ ಮತ್ತು ಇಂಕ್‌ಅನ್ನು ತಯಾರಿಸಿಕೊಳ್ಳುವ ವಿಧಾನವು ಮೂಲವಾಗಿ ಟಿಬೇಟ್ ಮತ್ತು ಚೀನಾದಿಂದ ಇಲ್ಲಿಗೆ ಬಂದಿರಬಹುದು ಎಂದು ಅಂದಾಜಿಸಲಾಗಿದೆ. ಈ ತಯಾರಿಕೆಯ ಪ್ರಕ್ರಿಯೆಯೇ ಅತ್ಯಂತ ಆಕರ್ಷಣೀಯವೂ, ದೀರ್ಘವೂ ಮತ್ತು ಆಯಾಸಕರವೂ ಆಗಿದೆ. ಈ ಕಾಗದವನ್ನು ಎಂದಿಗೂ ಹರಿಯಲು ಸಾಧ್ಯವಿಲ್ಲ. ಸಾಮಾನ್ಯ ಕತ್ತರಿಯಿಂದ ಕತ್ತರಿಸಲೂ ಆಗುವುದಿಲ್ಲ. ಅವುಗಳ ಮೇಲೆ ಬಳಸುವ ಶಾಯಿ ಎಂದೂ ಮಾಸಿ ಹೋಗದು. ಶತಮಾನಗಳ ಜೀವಿತಾವಧಿ ಇರುವುದರಿಂದ ಇವುಗಳನ್ನು ಈಗಲೂ ಬೌದ್ಧ ಧರ್ಮದ ಶ್ಲೋಕ ಮತ್ತು ಅದರ ತಾತ್ಪರ್ಯವನ್ನು ಬೊಂತಿ ಲಿಪಿ (ಟಿಬೇಟಿ ಲಿಪಿ)ಯಲ್ಲಿ ಬರೆದಿಡಲು ಲಾಮಾಗಳು ಉಪಯೋಗಿಸುತ್ತಾರೆ. ಬೌದ್ಧ ಧರ್ಮದ ಇಂತಹ ಮೂಲಪಠ್ಯವನ್ನು 'ಚೊಸ್ಪೀಚ' ಎಂದು ಕರೆಯಲಾಗುತ್ತದೆ. ಅಲ್ಲಿನ ಜನರು ತಾವು ತಯಾರು ಮಾಡಿದ ದೇಶೀಯ ಕಾಗದವನ್ನು 'ಬೋತ್‌ಶುಕು' ಎಂದು ಕರೆಯುತ್ತಾರೆ. 'ಶ ಗಮ್ಜ' (ಶ ಎಂದರೆ ಭೂಮಿ, ಗಮ್ಜ ಎಂದರೆ ದಾಖಲೆ) ಮತ್ತು 'ನೊರ್ ಗಮ್ಜ' (ನೊರ್ ಎಂದರೆ ಮದುವೆ) ದಾಖಲೆಪತ್ರಗಳನ್ನು ಕೈಬರಹದಲ್ಲಿ ಈ ಕಾಗದದ ಮೇಲೆಯೇ ತಯಾರಿಸಲಾಗುತ್ತದೆ. ಹಬ್ಬಗಳಲ್ಲಿ, ಧಾರ್ಮಿಕ ವಿಧಿವಿಧಾನದ ದಿನಗಳಲ್ಲಿ ಇಂತಹ ಕಾಗದವನ್ನು 'ಚೊಫನ್'ಆಗಿ ಬಳಸಲಾಗುತ್ತದೆ. ಚೊಫನ್ ಎಂದರೆ ವಿಶೇಷ ದಿನಗಳಲ್ಲಿ ಮರಗಳ ತುದಿಗೆ ಮತು ್ತಬೆಟ್ಟೇಣುಗಳ ಅಂಚಿಗೆ ತೋರಣದಂತೆ ಕಟ್ಟುವ ಕಾಗದ. ಒಂದು ಚೌಕಾಕಾರದ 'ಬೋತ್ ಶುಕು'ವನ್ನು ತೆಗೆದುಕೊಂಡು ಅದರ ಎರಡು ತುದಿಗಳು ಒಂದರ ಮೇಲೊಂದರಂತೆ ಬರುವಂತೆ ಇಟ್ಟು ತ್ರಿಕೋಣಾಕಾರದಲ್ಲಿ ಮಡಚಿ ಅದರೊಳಗೆ ದಾರವನ್ನು ತೂರಿಸಿ ತೋರಣದಂತಹ ಆಕೃತಿಯನ್ನು ಮಾಡಿದಾಗ ಅದನ್ನು 'ಚೊಫನ್' ಎನ್ನಲಾಗುತ್ತದೆ. ಇದನ್ನು ಸಂಸ್ಕಾರ

ವಿಧಿಗಳಲ್ಲಿ ಒಬ್ಬರಿಗೊಬ್ಬರು ನಮ್ಮಲ್ಲಿ ತಾಂಬೂಲ ಬದಲಿಸಿಕೊಂಡಂತೆ ಬದಲಿಸಿಕೊಳ್ಳಲು ಉಪಯೋಗಿಸುತ್ತಾರೆ. ಈಗಾಗಲೇ ಸೀಮಿತಗೊಂಡಿರುವ 'ಬೋತ್ ಶುಕು' ತಯಾರಿಕೆಯನ್ನು ವಿಶ್ವಸಂಸ್ಥೆಯು ಪಾರಂಪರಿಕ ಕಲೆ ಎಂಬುದಾಗಿ ಮಾನ್ಯ ಮಾಡಿ ಅದರ ರಕ್ಷಣೆಗೆ ಮುಂದಾಗಿದೆ.

**'ಬೋತ್‌ಶುಕು' ತಯಾರಿಕೆ:** ಸಸ್ಯಶಾಸ್ತ್ರದಲ್ಲಿ Daphne Cannabina ಎನ್ನುವ ಹೆಸರನ್ನು ಪಡೆದ, False Hemp ಎನ್ನುವ ಹೆಸರಿನಿಂದಲೂ ಗುರುತಿಸಿಕೊಳ್ಳುವ Indian Paper Plant ಎಂದು ಸಾಮಾನ್ಯ ಜನರಿಗೆ ಪರಿಚಯ ಇರುವ ಒಂದು ಬಗೆಯ ಸಸ್ಯವೇ ಈ ಕಾಗದ ತಯಾರಿಕೆಗೆ ಬೇಕಾದ ಮುಖ್ಯ ಕಚ್ಚಾ ಸಾಮಗ್ರಿ. ಈ ಪೊದೆಯನ್ನು ಕನ್ನಡದಲ್ಲಿ ಬುರವ ಅಥವಾ ಸಾತ್ಪುರವಾ ಎಂದು ಕರೆಯಲಾಗುತ್ತದೆ. ಮೊನ್ಪಾ ಭಾಷೆಯಲ್ಲಿ 'ಸುಕ್‌ಪಸಿಂಗ್' ಎಂದು ಕರೆಯುತ್ತಾರೆ. ಚೂಪಾದ ತೆಳ್ಳನೆಯ ಎಲೆಗಳನ್ನು ಹೊಂದಿರುವ, ಪೊದೆಯಲ್ಲಿ ಬೆಳೆಯುವ ಈ ಸಣ್ಣಮರದಂತಹ ಗಿಡವು ಪಶ್ಚಿಮ ಅರುಣಾಚಲ ಪ್ರದೇಶದ ಕಾಡುಗಳಲ್ಲಿ ಸಹಜವಾಗಿಯೇ ಬೆಳೆಯುತ್ತದೆ.

ಮೊದಲ ಹಂತದಲ್ಲಿ ಗಿಡವನ್ನು ಬೇರಿನಿಂದ ಕತ್ತರಿಸಿಕೊಂಡು ಕೊಂಬೆ–ರೆಂಬೆ, ಎಲೆಗಳಿಂದ ಬೇರ್ಪಡಿಸಿಕೊಂಡು ಮಧ್ಯದ ಕಾಂಡದಿಂದ ಬೂದಿ ಮಿಶ್ರಿತ ಹಸಿರು ಬಣ್ಣದ ಹೊರಮೈಯಿನ ತೊಗಟೆಯನ್ನು ಜಾಗೃತೆಯಿಂದ ಒಳ ತೊಗಟೆಯಿಂದ ಬೇರ್ಪಡಿಸಿಕೊಳ್ಳಲಾಗುತ್ತದೆ. ಬಿಳಿ ಮತ್ತು ಹಸಿರು ಬಣ್ಣದ್ವಯದ ಒಳಗಿನ ತೊಗಟೆಯನ್ನು ಕಾಗದ ತಯಾರಿಸಲು ಬಳಸಲಾಗುತ್ತದೆ. ಇಜ್ಜಲು ಮತ್ತು ಮರ ಸುಟ್ಟ ಬೂದಿಗಳನ್ನು ಬೇಯಿಸಿದ ನೀರನ್ನು ಶೋಧಿಸಿಕೊಂಡು ಆ ನೀರಿನಲ್ಲಿ ಈ ತೊಗಟೆಯನ್ನು ಹಾಕಿ ಒಂದು ನಿರ್ಧಾರಿತ ಹದದವರೆಗೂ ಕುದಿಸಿಕೊಳ್ಳಲಾಗುತ್ತದೆ. ಹೀಗೆ ಕುದಿಯುವಾಗ ತೊಗಟೆಯು ಮೃದುವಾಗಿ ಬೇಯುತ್ತದೆ. ಬೆಂದು ಮೃದುವಾಗಿರುವ ತೊಗಟೆಯನ್ನು ಇಪ್ಪತ್ತಾ ನಾಲ್ಕು ಗಂಟೆಗಳ ಕಾಲ ಸ್ವಚ್ಛವಾದ ತಣ್ಣನೆಯ ನೀರಿನಲ್ಲಿ ನೆನೆಯಿಸಿ ಇಡಲಾಗುತ್ತದೆ. ನಂತರ ಅದನ್ನು ಕೈಯಿಂದಲೋ ಅಥವಾ ಮರದಿಂದಲೇ ಮಾಡಿದಂತಹ ಸುತ್ತಿಗೆಯಾಕಾರದ ಆಯುಧದಿಂದಲೋ ಕುಟ್ಟಿ, ಗುದ್ದಿ, ಹಿಸುಕಿ ಬೆಂದ ತೊಗಟೆಯ ಮುದ್ದೆಯನ್ನು ತಯಾರಿಸಿಕೊಳ್ಳಲಾಗುತ್ತದೆ. ಈ ಮುದ್ದೆಯನ್ನು ನೀರಿನೊಡನೆ ಹಲವಾರು ಬಾರಿ ಜರಡಿ ಹಿಡಿದುಕೊಂಡು ನಂತರ ಅತ್ಯಂತ ಮೃದುವಾದ ತಿರುಳನ್ನು ಪಡೆದುಕೊಳ್ಳಲಾಗುತ್ತದೆ. ಮರದ ಗಳುಗಳನ್ನು ಬೇಕಾದ ಅಳತೆಯಲ್ಲಿ ಚೌಕ್ಕಟ್ಟುಗಳನ್ನಾಗಿ ಕಟ್ಟಿಕೊಂಡು ಅದರೊಳಗೆ ಮಸ್ಲಿನ್ ಬಟ್ಟೆಯನ್ನೋ ಅಥವಾ ಕಸೂತಿ ಮೇಟಿ ಬಟ್ಟೆಯನ್ನೋ ಕಟ್ಟಿ ಮತ್ತೆ ತಿರುಳನ್ನು

ಗಾಳಿಸಿಕೊಳ್ಳಲಾಗುತ್ತದೆ. ಹೀಗೆ ಪದೇ ಪದೇ ಗಾಳಿಸಿಕೊಂಡ ಪಾರದರ್ಶಕ ಪದರಗಳನ್ನು ಒಂದರ ಮೇಲೊಂದು ಹಾಕಿ, ಬೇಕಾದಷ್ಟು ದಪ್ಪವಾದಾಗ ಸೂರ್ಯನ ಬೆಳಕು ಮತ್ತು ಶಾಖದಲ್ಲಿ ಒಣಗಲು ಇಡಲಾಗುತ್ತದೆ. ಒಣಗಿದ ನಂತರ ಐದರಿಂದ ಏಳು ಹಾಳೆಗಳನ್ನು ಅಂಟು ಹಾಕಿ ಒಂದು ಹಾಳೆಯನ್ನಾಗಿ ಮಾಡಿಕೊಳ್ಳಲಾಗುತ್ತದೆ. ಹೀಗೆ ಹಾಳೆಗಳ ನಡುವೆ ಹಾಕಲು ಬೇಕಾದ ಅಂಟನ್ನು ಪ್ರಾಣಿಗಳ ಪಿತ್ತಕೋಶದಲ್ಲಿ ಸಿಗುವ ಒಂದು ರೀತಿಯ ಲೋಳೆ ಪದಾರ್ಥದಿಂದಲೂ ಹಾಗು ದೇವದಾರು ಮರದ ತೊಗಟೆಯ ಮೇಣದಿಂದಲೂ ಮಾಡಿಕೊಳ್ಳಲಾಗುತ್ತದೆ. ಒಣಗಿದ ನಂತರ ತಾಳೆಗರಿಯಂತೆ ಕಾಣಿಸುವ ಈ ಕಾಗದವನ್ನು ಇಂದಿಗೂ ತವಾಂಗ್ ಜಿಲ್ಲೆಯ ಮುಕ್ತೋ ಎನ್ನುವ ಪ್ರದೇಶದಲ್ಲಿ ತಯಾರಿಸುತ್ತಾರೆ.

ಹೀಗೆ ತಯಾರಿಸಿಕೊಂಡ ಹಾಳೆಗಳ ಮೇಲೆ ಬರೆಯಲು ಬಳಸುವ ಶಾಯಿಯನ್ನು ಮೊದಲು ಚೀನ ದೇಶದ ಗ್ಯಾನ ಎನ್ನುವ ಪ್ರದೇಶದಿಂದ ತರಿಸಿಕೊಳ್ಳಲಾಗುತ್ತಿತ್ತು. ನಂತರದ ದಿನಗಳಲ್ಲಿ ಇಲ್ಲಿಯೇ ಮೊನ್ ಎನ್ನುವ ಸ್ಥಳದಲ್ಲಿ ದೇಶೀಯ ಇಂಕ್‌ಅನ್ನು ತಯಾರು ಮಾಡಲಾಗುತ್ತಿದೆ. ದೇವದಾರು ಮರದ ತೊಗಟೆಯಿಂದ ಮೇಣವನ್ನು ಮಣ್ಣಿನ ಮಡಕೆಗಳಲ್ಲಿ ಸಂಗ್ರಹಿಸಿಕೊಂಡು ಅದನ್ನು ಆಲೆಮನೆಯ ಕಂದು ಸಕ್ಕರೆ ಅಥವಾ ಕಲ್ಲು ಸಕ್ಕರೆ, ಬಾರ್ಲಿ ಮತ್ತು ಮರದ ಗೋಂದಿನೊಡನೆ ಮಿಶ್ರ ಮಾಡಿ ಒಂದು ವಾರದ ಕಾಲ ಬಿಸಿಲು ಮತ್ತು ನೆರಳಿನಲ್ಲಿ, ಗಾಳಿಯಾಡದ ಮಣ್ಣಿನ ಜಾಡಿಯಲ್ಲಿ ಇಡಲಾಗುತ್ತದೆ. ಆ ದಿನಗಳಲ್ಲಿ ಬಿದಿರಿನ ಸಣ್ಣ ಸಣ್ಣ, ತೆಳುವಾದ, ಕೊಳವೆಗಳನ್ನು, ಲೇಖಣಿಯಾಕಾರದಲ್ಲಿ ತಯಾರಿಸಿಕೊಳ್ಳಲಾಗುತ್ತದೆ. ಅದರ ತುದಿಯು ನಿಬ್‌ನಂತೆ ಚೂಪಾಗಿ, ಅತೀ ಸಣ್ಣ ರಂಧ್ರವನ್ನು ಹೊಂದಿರುತ್ತದೆ. ಇದಕ್ಕೆ ಬೇಕಾದ ಬಿದಿರು ತವಾಂಗ್ ಹಾಗು ಪಶ್ಚಿಮ ಕಮೆಂಗ್ ಜಿಲ್ಲೆಗಳ ರಾಹುಂಗ್ ಕಾಡುಗಳಲ್ಲಿ ದೊರೆಯುತ್ತದೆ. ಇಂತಹ ಬಿದಿರಿನ ಲೇಖನಿಗಳನ್ನು ಮೊನ್ಪ ಭಾಷೆಯಲ್ಲಿ 'ಸಿಕ್' ಎಂದು ಕರೆಯುತ್ತಾರೆ. ಹಾಳೆಗಳನ್ನುಬಳಸಿರುವ ಅಂಟಿನಲ್ಲಿ ಇರುವ ಪ್ರಾಣಿಗಳ ಪಿತ್ತಕೋಶದ ಲೋಳೆಯು ವೈಜ್ಞಾನಿಕವಾಗಿ ಕಾಗದವನ್ನು ಕೀಟಾಣು ಹಾಗು ಬೂಷ್ಟುಗಳಿಂದ ನಾಶ ಹೊಂದುವುದನ್ನು ತಡೆಗಟ್ಟುತ್ತದೆ.

ಬಳಸಲಾಗುವ ಇಂಕ್ ಕೂಡ ಬಹಳವೇ ಮಂದವಾಗಿದ್ದು ಶೀತ ಹಾಗು ನೀರಿನಲ್ಲಿ ಕರಗಿ ಹೋಗದಂತೆ ಇರುತ್ತದೆ. 70 ಸೆಂಟಿ ಮೀಟರ್ ಉದ್ದ 15 ಸೆಂಟಿಮೀಟರ್ ಅಗಲ ಇರುವ ಒಂದು ಹಾಳೆಯಲ್ಲಿ ಬರೆಯಲು ಬೆರಳಚ್ಚುಗಾರನಿಗೆ ಒಂದು ಪೂರ್ತಿ ದಿನದ ಅವಧಿ ಬೇಕಿರುತ್ತದೆ. ಬಹಳ ಹಿಂದೆ

ಬರಹಗಳನ್ನು ಚಿನ್ನ ಹಾಗೂ ಬೆಳ್ಳಿ ರೇಖಿನಿಂದಲೂ ಮತ್ತು ಭೂತಾನ್‌ನಿಂದ ತಂದ ಕೆಲವು ಸಾವಯವ ಬಣ್ಣಗಳಿಂದಲೂ ಬರೆಯಲಾಗುತ್ತಿತ್ತು. ಈ ದಿನಗಳಲ್ಲಿ ಆಧುನಿಕ ಆಯಿಲ್ ಪೇಂಟ್‌ಗಳನ್ನು ಬಳಸಿಯೂ ಬರೆಯಲಾಗುತ್ತದೆ. ಬೆರಳಚ್ಚುಗಾರ ಸಂತತಿಯೂ ನಶಿಸಿಹೋಗುತ್ತಿದೆ. ಶ್ಯೋ ಎನ್ನುವ ಹಳ್ಳಿಯಲ್ಲಿ ಲುಂಗ್‌ತೆನ್ ಎನ್ನುವ ವ್ಯಕ್ತಿಯನ್ನು ಅತ್ಯಂತ ಹಿರಿಯ ಬೆರಳಚ್ಚುಗಾರ ಎಂದು ಗುರುತಿಸಲಾಗಿದೆ. ಮೊನ್ಪಾ ಬುಡಕಟ್ಟಿನ ಈ ಕೈ ಕಾಗದ ಮಾಡುವಿಕೆ ಎನ್ನುವ ಅಪರೂಪದ ಕಲೆಯನ್ನು ಮತ್ತು ಬೆರಳಚ್ಚುಗಾರರ ಸಂತತಿಯನ್ನು ಉಳಿಸಿಕೊಳ್ಳುವುದು ಈಗ ಸರ್ಕಾರದ ಜವಾಬ್ದಾರಿಯೂ ಹೌದು.

(ಮಾಹಿತಿ ಸಹಕಾರ : ಡಾ.ಮಾಲ್ತೇಶ್ ಮೋಟೆಬೆನ್ನೂರು)




**ಬುಡಕಟ್ಟು ಜನಾಂಗದ ಆಧುನಿಕ ಯುವತಿ**

* * * * *

# 19. ಅಡ್ಡಗಟ್ಟಿದ ನರಕಾಸುರ

ಹೋಗಬೇಕಿದ್ದ ಜಾಗಕ್ಕೆ ಕೇವಲ ಇಪ್ಪತ್ತು ನಿಮಿಷದ ದಾರಿ ಕ್ರಮಿಸಬೇಕಿತ್ತು. ಆದರೆ ಗೌಹಾಟಿಯ ಮಾಲೆಗಾಂವ್ ಬ್ರಿಡ್ಜ್ ಮೇಲಿನ ದಾರಿಯಲ್ಲಿ ತೆಗೆದುಕೊಂಡ ಸಮಯ ಬರೋಬರಿ ೯೦ ನಿಮಿಷಗಳು ! ಕಣ್ಣು ರೆಪ್ಪೆಯಷ್ಟೇ ಅಂತರದಲ್ಲಿ ಹರಿಯುತ್ತಿದ್ದ ವಾಹನಗಳನ್ನು ನೋಡುತ್ತಲೇ ಚಾಲಕ ಧನಂಜೋಯ್‌ನನ್ನು ಕೇಳಿದೆ "ಇಲ್ಲಿ ದಿನವೂ ಹೀಗೇನಾ?". "ಹೌದು ನಿತ್ಯವೂ ಹೀಗೆ. ಆದರೆ ಯಾಕೋ ಗೊತ್ತಿಲ್ಲ ಇವತ್ತು ಹೆಚ್ಚೇ ಜ್ಯಾಂ ಇದೆ" ಎಂದ. ಆತ ಕಳೆದ ಮೂವತ್ತು ವರ್ಷಗಳಿಂದ ಈ ಊರಲ್ಲಿ ಡ್ರೈವ್ ಮಾಡುತ್ತಿದ್ದಾನೆ. ಇದೇ ಸೇತುವೆ, ಇದೇ ಜನ, ಇಂಥದ್ದೇ ಟ್ರಾಫಿಕ್ ಜ್ಯಾಂ. "ಅಬ್ಬಾ, ನಿನಗೆ ಬೇಜಾರಗಲ್ವಾ ಧನಂಜೋಯ್?" ಅಂತ ಗೊಣಗಿದೆ. "ದೀದಿ, ಬೇಜಾರಾ?! ನಿಜ ಹೇಳಲಾ ಇದಕ್ಕೆ ಅಂತಲ್ಲ ನನಗೆ ಜೀವನದಲ್ಲಿ ಯಾವ ವಿಷಯಕ್ಕೂ ಬೇಜಾರಾಗೋಲ್ಲ" ಅಂದ ಮೂರು ಮಕ್ಕಳ ತಂದೆ, ಸ್ಲಂ ನಿವಾಸಿ. ಐದು ಜನಗಳ ಕುಟುಂಬಕ್ಕೆ ನಿತ್ಯವೂ ಎರಡು ಹೊತ್ತಿನ ಊಟವೂ ನಕ್ಕಿ ಇಲ್ಲದ ಆತನಿಗೆ ಯಾವುದಕ್ಕೂ ಬೇಸರವಾಗುವುದಿಲ್ಲವಂತೆ. ಒಂದಿಂಚೂ ಗಾಡಿ ಮುಂದೆ ಹೋಗದ್ದಾಗಿತ್ತು. ಹಾರ್ನ್‌ಗಳ ಶಬ್ದದಲ್ಲೇ ಕಣ್ಣು ಮುಚ್ಚಿದೆ. "ನೀವು ಕಾಮಾಕ್ಯ ಅಮ್ಮನ ದೇವಸ್ಥಾನಕ್ಕೆ ಹೋಗಲ್ವಾ?" ಎಂದ. ಇರುವ ಸಮಯದಲ್ಲಿ ಹೋಗಲು ಆಗುತ್ತದೋ ಇಲ್ಲವೋ ಎನ್ನುವ ಅನುಮಾನ, ಜೊತೆಗೆ ದೇವರಿಗಾಗಿ ದೇವಸ್ಥಾನಗಳಿಗೆ ಹೋಗುವವಳು ನಾನಲ್ಲ. ಹಾಗಾಗಿ ಕಾಮಕ್ಯ ದೇವಸ್ಥಾನ ನನ್ನ ವೀಕ್ಷಣಾ ಸ್ಥಳಗಳ ಪಟ್ಟಿಯಲ್ಲಿ ಇರಲಿಲ್ಲ. "ಹೂಂ, ಸಮಯ ಸಿಕ್ಕರೆ ವಾಪಸ್ಸು ಬರುವಾಗ ಹೋಗೋಣ" ಎಂದೆ. "ದೀದಿ ಎಂದೂ ಇಲ್ಲದಷ್ಟು ಟ್ರ್ಯಾಫ್ಲಿಕ್ ಜ್ಯಾಂ ಇದೆ. ಇಲ್ಲೇ ಎಡಕ್ಕೆ ತಿರುಗಿದರೆ ಮಂದಿರ ಸಿಗುತ್ತದೆ. ಹೋಗಿಬಿಡೋಣ. ಬರುವಾಗ ತುಂಬಾ ದೂರ ಆಗುತ್ತೆ" ಎಂದವನ ಮಾತಿಗೆ ಮಣಿದು ಕಾಮಾಕ್ಯಳ ದೇವಸ್ಥಾನದ ಎದುರುನಿಂತಿದ್ದೆ. ಆಹಾ, ಅದೆಷ್ಟು ಸುಂದರವಾದ, ಜನಜಂಗುಳಿಯಿದ್ದರೂ ಪ್ರಶಾಂತವಾದ, ನೀಲಾಚಲ ಪರ್ವತದ ತುದಿಯಲ್ಲಿ ಸ್ಥಿತಗೊಂಡಿರುವ ಪರಬ್ರಹ್ಮ ಸ್ವರೂಪಿಣಿಯ ಜಾಗ. ಪುರಾಣಗಳಲ್ಲಿ ಉಲ್ಲೇಖಗೊಂಡಿರುವ 51 ಶಕ್ತಿಪೀಠಗಳ ಪೈಕಿ ಕಾಮಾಕ್ಯ ದೇವಿಯ ಈ ದೇವಸ್ಥಾನವೂ ಒಂದು ಎಂದು ಹೇಳಲಾಗುತ್ತದೆ. ಭುವನೇಶ್ವರಿ, ಬಾಗಲಮುಖಿ,

ಚಿನ್ನಮಸ್ತ, ತಾರಾ, ಕಾಳ, ಭೈರವಿ, ಧೂಮಮತಿ ಎನ್ನುವ ಹೆಸರುಗಳಲ್ಲಿ ಇಲ್ಲಿ ದೇವಿಯನ್ನು ಆರಾಧಿಸುತ್ತಾರೆ. ಮುಖ್ಯ ಗೋಪುರದಲ್ಲಿ ಅವಳನ್ನು ಮಾತಂಗಿ, ತ್ರಿಪುರ ಸುಂದರಿ ಮತ್ತು ಕಮಲ ಎನ್ನುವ ಹೆಸರುಗಳಲ್ಲಿ ವಿಗ್ರಹಗಳನ್ನು ಸ್ಥಾಪಿಸಿ ತಾಂತ್ರಿಕ ಶೈಲಿಯಲ್ಲಿ ಆರಾಧಿಸಲಾಗುತ್ತದೆ. ಎಲ್ಲಾ ದೇವಿಯರ ಗರ್ಭಗುಡಿಯಲ್ಲಿಯೂ ಹತ್ತು ಇಂಚು ಆಳದ ಯೋನಿಯಾಕಾರದ ಕಪು ್ಪಶಿಲೆಯೊಳಗಿನಿಂದ ಸದಾಕಾಲವೂ ನೀರಿನ ಬುಗ್ಗೆ ಉಕ್ಕುತ್ತಿರುತ್ತದೆ. ಇದನ್ನೇ ಪವಿತ್ರ ಜಲವೆಂದು ತೀರ್ಥವನ್ನಾಗಿ ಭಕ್ತರಿಗೆ ನೀಡಲಾಗುತ್ತದೆ. ಪುರಾಣದಲ್ಲಿ ನರಕಾಸುರನ ಮನೆ ದೇವತೆಯಾಗಿ ಆರಾಧನೆಗೊಳ್ಳುತ್ತಿದ್ದಳಂತೆ ಕಾಮಾಕ್ಯ ದೇವಿ. ನಂತರ 8 ರಿಂದ 17 ನೆಯ ಶತಮಾನದವರೆಗೂ ಮ್ಲೇಚ್ಛ ರಾಜವಂಶಸ್ಥರ ಆಳ್ವಿಕೆಗೆ ಒಳಗಾಗಿಗಿದ್ದರ ದಾಖಲೆಗಳಿವೆ. 1566 ಮತ್ತು 1572ರ ನಡುವೆ ಸುಲೈಮಾನ್ ವಂಶಜರಿಂದ ಸಂಪೂರ್ಣವಾಗಿ ನಾಶವಾಗಿದ್ದ ಈ ದೇವಿತಾಣವನ್ನು ವನಮಾಲ ವರ್ಮದೇವ, ಇಂದ್ರಪಾಲ, ಧರ್ಮಪಾಲ, ಬ್ರಹ್ಮಪಾಲ ರಾಜರುಗಳು ಹಲವಾರು ಬಾರಿ ಪುನರುಜ್ಜೀವನಗೊಳಿಸಿದ್ದಾರೆ. ಮುಂಗಾರಿನ ವೇಳೆಯಲ್ಲಿ ಬ್ರಹ್ಮಪುತ್ರ ನದಿಯು ಹೊಸ ನೀರಿನಿಂದ ತುಂಬಿ ಹರಿಯುವಾಗ ಈ ಯೋನಿಯಾಕಾರದ ಕಪ್ಪು ಶಿಲೆಯೊಳಗಿನಿಂದ ಮೂರು ದಿನಗಳ ಕಾಲ ರಕ್ತವರ್ಣದ ನೀರು ಹೊರಬರುವುದರಿಂದ ಆ ಮೂರು ದಿನಗಳಲ್ಲಿ ದೇವಿಗೆ ಋತುಸ್ರಾವದ ಸಮಯವೆಂದು ನಂಬಲಾಗುತ್ತದೆ. ಆ ಸಮಯದಲ್ಲಿ 'ಅಂಬುಬಚಿ ಮೇಳ' ಎನ್ನುವ ಜಾತ್ರೆ ನಡೆಸಲಾಗುತ್ತದೆ. ಆ ಮೂರುದಿನಗಳು ದೇವಸ್ಥಾನವನ್ನು ತೆರೆಯುವುದಿಲ್ಲ, ಅಲ್ಲಿ ತಾಂತ್ರಿಕ ಶೈಲಿಯಲ್ಲಿ ಪೂಜೆ ಮಾಡುವ ಬಾಬಾಗಳ ದಂಡು ನೆರೆದಿರುತ್ತದೆ. ನಂತರದ ದಿನಗಳಲ್ಲಿ ಪೂಜೆಯ ನಂತರ ಭಕ್ತರಿಗೆ 'ಅಂಗೋದಕ್' ಮತ್ತು 'ಅಂಗ್‌ಬಸ್ತ್ರ' ಎನ್ನುವ ಪ್ರಸಾದವನ್ನು ನೀಡಲಾಗುತ್ತದೆ. ಅಂಗೋದಕ್ ಎಂದರೆ ಆ ಯೋನಿಯಾಕಾರದ ಶಿಲೆಯಿಂದ ಆ ಮೂರು ದಿನಗಳಲ್ಲಿ ಹೊರಬರುವ ರಕ್ತವರ್ಣದ ಜಲವನ್ನು ತೀರ್ಥವನ್ನಾಗಿ ಕೊಡುವುದು ಹಾಗೂ ಅಂಗ್‌ಬಸ್ತ್ರ ಎಂದರೆ ಆ ದಿನಗಳಲ್ಲಿ ದೇವಿಯ ಮೈಮೇಲೆ ಹೊದಿಸಿದ್ದ ವಸ್ತ್ರದ ತುಂಡೊಂದನ್ನು ರಕ್ಷೆಯಂತೆ ಭಕ್ತರಿಗೆ ಕೊಡುವುದು.



**ಗೌಹಾಟಿಯ ಕಾಮಾಕ್ಯ ದೇವಸ್ಥಾನದ ಪಾರ್ಶ್ವನೋಟ**

ಇತರೆ ಉತ್ತರಭಾರತದ ದೇವಸ್ಥಾನಗಳಲ್ಲಿ ಇರುವಂತೆ ಇಲ್ಲಿಯೂ ತಪ್ಪಲಿನಲ್ಲೇ 'ಪಾಂಡ' (ಪುರೋಹಿತ)ಗಳ ಹಾವಳಿ ಇದೆ. ಅಲ್ಲಿ ಪಾಂಡಗಳ ನೊಂದಾಯಿತ ಸಂಘವೇ ಇದೆ. ಪೂಜೆ ಮಾಡಿಸುವುದಾಗಿ ದುಂಬಾಲು ಬೀಳುತ್ತಾರೆ. ರಸ್ತೆಯುದ್ದಕ್ಕೂ ಅಸಾಧ್ಯ ಸಂಖ್ಯೆಯ ಭಿಕ್ಷುಕರು, ನಿರ್ಗತಿಕರು ಸಿಗುತ್ತಾರೆ. ಯಾವುದೇ ದೇವಸ್ಥಾನಗಳ ಊರಿನಲ್ಲಿರುವಂತೆ ಬೆಟ್ಟ ಹತ್ತಿಹೋಗುವ ದಾರಿ ಪೂರ್ತಿ ಪೂಜೆಯ ಸಾಮಾನುಗಳ ಹಾಗು ದೇವರಿಗೆ ಸಂಬಂಧ ಪಟ್ಟ ಸಾಮಾನುಗಳು ಸಿಗುವ ಸಣ್ಣಸಣ್ಣ ಅಂಗಡಿಗಳಿವೆ. ನಡುನಡುವೆ ಗಣೇಶ, ಹನುಮಂತರ ಗುಡಿಗಳೂ ಇದೆ. ಹಸುಗಳು ನಮ್ಮ

ಹೆಜ್ಜೆಯನ್ನು ತುಂಡರಿಸಿ ಹಾದು ಹೋಗುತ್ತಿರುತ್ತವೆ. ನಡುನಡುವೆ ಬಾಬಾಗಳು ಸಾಕಿಕೊಂಡಿರುವ ಗೂಳಗಳೂ ನುಗ್ಗಿ ಗಾಬರಿ ಹುಟ್ಟಿಸುತ್ತವೆ. ಬೆಟ್ಟದ ಕೆಳಗಿನಿಂದ ಹಾಗೇ ಹಿಂದೆ ಬಂದಿದ್ದ ಯುವ ಪಾಂಡ ಒಬ್ಬರು ಒಂದು ದಿನವಿಡೀ ಸಮಯ ತೆಗೆದುಕೊಳ್ಳಬಹುದಾಗಿದ್ದ ದೇವಸ್ಥಾನವನ್ನು ಕೇವಲ ಎರಡೇ ಗಂಟೆಗಳಲ್ಲಿ ಸುತ್ತಿಸಿ, ದೇವಿಯ ದರ್ಶನ ಮಾಡಿಸಿ ಪರಿಚಯ ಮಾಡಿಸಿಕೊಟ್ಟಿದ್ದರು. ದೇವಸ್ಥಾನದ ಹೆಬ್ಬಾಗಿಲಿನಿಂದ ಗರ್ಭಗುಡಿಯ ಒಳಕ್ಕೆ ಹೋಗುವ ದಾರಿಯಲ್ಲಿಯೇ ಬಲಿಪೀಠವಿದೆ. ಅಲ್ಲಿ ಹಿರಿಯ ಅರ್ಚಕರು ಸ್ವತಃ ಬಲಿಕಾರ್ಯ ನೆರವೇರಿಸುತ್ತಾರೆ. ಎಳೆ ಆಡು ಮತ್ತು ಮೇಕೆಗಳನ್ನು ಅಲ್ಲಿ ಬಲಿಕೊಡಲಾಗುತ್ತದೆ. ಆ ಬಲಿಯಿಂದ ಅಲ್ಲಿ ಸಣ್ಣದಾಗಿ ಹರಿಯುವ, ಹನಿಯುವ ರಕ್ತದ ಮೇಲೆ ಹೆಜ್ಜೆ ಇಟ್ಟುಕೊಂಡೇ ಒಳಕ್ಕೆ ಹೋಗಬೇಕಿರುತ್ತದೆ. ಪುಟ್ಟಪುಟ್ಟ ಮರಿಗಳು ನನ್ನ ಕಣ್ಣೆದುರೇ ಬಲಿಹೋಗುವಾಗ, ಅಲ್ಲಿ ಚಿಮ್ಮುವ ರಕ್ತವನ್ನು ನೋಡುತ್ತಿರುವಾಗ ನನಗೆ ಅರಿವಿಲ್ಲದಂತೆಯೇ ಕಣ್ಣಿನಲ್ಲಿ ನೀರು ಹರಿಯುತ್ತಿತ್ತು. ನಾಭಿಯಲ್ಲಿ ಶುರುವಾದ ನಡುಕ ಇಡೀ ದೇಹವನ್ನು ಆವರಿಸಿತ್ತು. ಇದನ್ನು ಗಮನಿಸಿದ ಜೊತೆಯಲ್ಲಿದ್ದ ಪಾಂಡ "ಇಲ್ಲಿ ಬರೀ ಬಲಿ ಕೊಡುವುದು ಎಂದು ತಿಳಿಯಬೇಡಿ, ಎಷ್ಟೋ ಜನರು ತಮ್ಮ ಕಷ್ಟ ನಿವಾರಣೆಯಾದಲ್ಲಿ ಬಲಿಗಾಗಿ ಇರುವ ಮರಿಗಳನ್ನು ಮತ್ತು ಪಕ್ಷಿಗಳನ್ನು ಬಂಧನ ಮುಕ್ತಗೊಳಿಸುವ ಹರಕೆಯನ್ನೂ ಹೊತ್ತಿರುತ್ತಾರೆ" ಎಂದರು. ಆದರೂ ಜೀವಹಿಂಸೆಯನ್ನು ವಿರೋಧಿಸುವ, ಹರಕೆಯನ್ನು ಒಂದು ಆಮಿಷ ಎಂದುಕೊಂಡಿರುವ ನನ್ನ ಮನಸ್ಸು ತಹಬಂದಿಗೆ ಬರಲು ಹೆಚ್ಚು ಸಮಯವೇ ಹಿಡಿಯಿತು. ಹೊರ ಬರುವಾಗ ಜೊತೆಯಲ್ಲಿ ಬಂದಿದ್ದ ಪಾಂಡ ಅವರಿಗೆ ದಕ್ಷಿಣೆ ಕೊಡಲು ಮುಂದಾದೆ. ಎಷ್ಟು ಬಲವಂತ ಮಾಡಿದರು ಆತ "ದುಡ್ಡಿಗಾಗಿ ನಾನು ನಿಮ್ಮೊಡನೆ ಬರಲಿಲ್ಲ. ದಯವಿಟ್ಟು ನನಗೆ ದುಡ್ಡು ಬೇಡ" ಎಂದು ಕಡ್ಡಿ ತುಂಡರಿಸಿದಂತೆ ಹೇಳಿ ಹೊರಟುಹೋದರು. ಅವರಿಗೆ ಒಳ್ಳೆಯದಾಗಲೀ ಎಂದು ಹಾರೈಸಿದೆ. ಅದಕ್ಕಿಂತ ಹೆಚ್ಚು ನಾನೇನೂ ಮಾಡಲು ಅಸಹಾಯಕಳಾಗಿದ್ದೆ. ಸರಸರನೆ ಬೆಟ್ಟ ಇಳಿದು ಬಂದವಳು ಅಸ್ಸಾಂನ ಕೈಮಗ್ಗದ ರೇಷಿಮೆ ಸೀರೆ ಖರೀದಿಗೆ ಹೊರಟೆ.

ಬೆಂಗಳೂರಿಗೆ ಹಿಂದಿರುಗಿದಾಗ ಸಿಕ್ಕಸಿಕ್ಕ ಹಿರಿಯ, ಕಿರಿಯ ಪರಿಚಯಸ್ಥರೆಲ್ಲಾ 'ಕಾಮಾಕ್ಯ ದೇವಸ್ಥಾನಕ್ಕೆ ಹೋಗಿ ಬಂದಿರಿ ತಾನೆ?' ಎಂದು ಕೇಳುತ್ತಾ ನೆಮ್ಮದಿಯ ಉಸಿರುಬಿಡುವಾಗ, ಅಷ್ಟೊಂದು ಜನಜಂಗುಳಿಯಲ್ಲಿಯೂ ಸ್ವಲ್ಪವೂ ತ್ರಾಸಿಲ್ಲದೆ ದೇವಿಯ ದರ್ಶನವಾದದ್ದನ್ನು ನೆನೆಯುವಾಗ, ಒಂದು ಕಾಸೂ ದಕ್ಷಿಣೆ ಪಡೆಯದೆ ಪ್ರಸಾದ ತೀರ್ಥವನ್ನು ಕೊಟ್ಟು ದೇವಿದರ್ಶನ ಮಾಡಿಸಿದ ಪಾಂಡರ ನೆನಪಾದಾಗ, ಎಂದೂ ಇಲ್ಲದಷ್ಟು ಟ್ರಾಫಿಕ್ ಜ್ಯಾಂ ಇದ್ದು ನನ್ನನ್ನು ದೇವಸ್ಥಾನದ ದಾರಿಗೆ ತಿರುಗಲು ಪ್ರೇರೇಪಿಸಿದ ಅಗೋಚರ ಶಕ್ತಿಯೆಡೆಗೆ ಗಮನ ಹೋದಾಗಲೆಲ್ಲಾ, ಬಹುಶಃ ನನ್ನೊಳಗಿನ ನರಕಾಸುರನೇ ರಸ್ತೆಯಲ್ಲಿ ಅಡ್ಡಗಟ್ಟಿ ಕಾಮಾಕ್ಯಳ ದರ್ಶನಕ್ಕೆ ಪ್ರೇರೇಪಣೆ ಕೊಟ್ಟನೇನೋ ಎಂದುಕೊಳ್ಳುತ್ತೇನೆ. ಜಗತ್ತಿನ ಎಲ್ಲಾ ಸಾಧ್ಯತೆಗಳ ಬಗ್ಗೆ ನನ್ನ ನಂಬಿಕೆ ಹೆಚ್ಚುತ್ತಾ ಹೋಗುತ್ತದೆ. ಒಳ್ಳೆಯತನಗಳ ಬಗ್ಗೆ ಮತ್ತಷ್ಟು ಆಕರ್ಷಿತಳಾಗುತ್ತಾ ಹೋಗುತ್ತೇನೆ. 'ಯಾ ದೇವಿ ಸರ್ವಭೂತೇಷು ಶಕ್ತಿ ರೂಪೇಣ ಸಂಸ್ಥಿತ ; ನಮಸ್ತಸ್ಯೈ ನಮಸ್ತಸ್ಯೈ, ನಮಸ್ತಸ್ಯೈ ನಮೋನ್ನಮಃ' ಎಂದು ವಿನೀತಳಾಗುತ್ತೇನೆ.

* * * * *

## ೨೦. ಗಂಗೆ ಏಕೆ ಹರಿಯುತ್ತೀಯೇ ?

ಇವತ್ತು ನನ್ನ ಪ್ರವಾಸದ ಕೊನೆಯ ದಿನ. ನನಗಾಗಿ ತುದಿಗಾಲಲ್ಲಿ ನಿಂತು ಕಾಯುತ್ತಿರುವ ಕುಟುಂಬವನ್ನು ಸೇರಿಕೊಳ್ಳುತ್ತೇನೆ ಎನ್ನುವ ಆಸೆ ಇತ್ತು. ಆದರೆ ಬೆಳಗ್ಗೆ ಎದ್ದಾಗಿನಿಂದ ಉತ್ಸಾಹವೇ ಇಲ್ಲದಂತಾಗಿತ್ತು. ಈ ನೆಲದಲ್ಲಿ ಏನೋ ಬಿಟ್ಟು ಹೋಗುತ್ತಿದ್ದೇನೆ ಎನ್ನುವ ಸಣ್ಣ ನೋವು. ಇಷ್ಟು ಬೇಗ ಇಲ್ಲಿನ ಋಣ ಮುಗಿಯಬಾರದಿತ್ತು ಎನ್ನುವಂತಹಾ ಭಾವ. "ಕರಾಗ್ರೇವಸತೇಲಕ್ಷ್ಮಿ ಕರಮಧ್ಯೆಸರಸ್ವತಿ ಕರಮೂಲೆ ಗೌರಿ ಪ್ರಭಾತೇ ಕರ ದರ್ಶನಂ" ಎಂದು ಹೇಳಕೊಂಡು ಎದ್ದೇಳಬೇಕಿದ್ದ ಮನಸ್ಸು ಅದು ಯಾಕೋ ಗೊತ್ತಿಲ್ಲ ಹಿಂದಿಯ ರುಡಾಲಿ ಸಿನೆಮಾದಲ್ಲಿ ಗುಲ್ಜಾರ್ ಅವರು ಬರೆದಿರುವ ಗೀತೆ "ದಿಲ್ ಹೂಂ ಹೂಂ ಕರೆ ಘಬ್‌ರಾಯೆ. . .ಗನ್ ಧಮ್ ಧಮ್ ಕರೇ ಡರ್ ಜಾಯೆ. . ." ಅಂತ ಹಾಡಿಕೊಳ್ಳುತ್ತಿತ್ತು. ಈ ಹಾಡನ್ನು ಲತಾಮಂಗೇಶ್ಕರ್ ಹಾಗೂ ಭುಪೇನ್‌ಹಜ್ಹಾರಿಕ ಇಬ್ಬರೂ ಹಾಡಿದ್ದರೂ ನನ್ನನ್ನು ಮೊದಲಿನಿಂದಲೂ ಸೆಳೆದದ್ದು ಹಜ್ಹಾರಿಕ ಅವರ ಧ್ವನಿ. ಅದರಲ್ಲೂ "ಜಿಸ್ ತನ್ಕೋ ಛೂವಾ ತೂನೆ. . .ಉಸ್ ತನ್ ಕೋ ಛುಪಾವೂ. . .ಜಿಸ್ ಮನ್ಕೋ ಲಾಗೆ ನೈನಾ ವೋ ಕಿಸ್ಕೊ ದಿಖಾವೂ. . ." ಎನ್ನುವ ಸಾಲುಗಳನ್ನು ಹಾಡುವಾಗ ಹಜ್ಹಾರಿಕ ಅವರ ಧ್ವನಿಯಲ್ಲಿನ ಆರ್ದ್ರತೆ ನನ್ನನ್ನು ಇನ್ನಿಲ್ಲದಂತೆ ಸೆಳೆಯುತ್ತದೆ. ಅದು ಯಾವುದೋ ಜನುಮದ ಪಳಯುಳಕೆಯೊಂದರಂತೆ ಕಾಡುತ್ತೆ. ಈ ಹಾಡಿನ ಮೊದಲೆರಡು ಸಾಲುಗಳು ಧ್ವನಿಪೆಟ್ಟಿಗೆಗಳಿಗೆ ಮೆತ್ತಿಕೊಂಡು ಬಿಟ್ಟಿತ್ತು. ಹಾಡಿಕೊಳ್ಳುತ್ತಲೇ ಪ್ಯಾಕಿಂಗ್ ಮುಗಿಸಿ ಡ್ರೈವರ್ ರಾಧಕೃಷ್ಣನಿಗಾಗಿ ಕಾಯುತ್ತಾ ನಿಂತೆ. ಆಗಲೂ ಹಾಡುತ್ತಲೇ ಇದ್ದೆ. ಕೇಳರಿಯದ ಹಕ್ಕಿಗಳ ಚಿಲಿಪಿಲಿ, ಕೆಳಗೆ ಬಿದ್ದ ಎಲೆಗಳಿಂದ ಬೆಳಕಿನ ವಾಸನೆ, ಮರದ ಮೇಲಿನ ಹಸಿರಿನಲ್ಲಿ ಹೂ ನಗು, ನಕ್ಷತ್ರದಂತೆ ಹೊಳೆಯುತ್ತಿದ್ದ ನಿಶ್ಯಬ್ದ, ನೀಲಿ ನೀಲಿ ಆಕಾಶ ಮತ್ತು ದಿಲ್ ಹೂಂ ಹೂಂ ಕರೇ ಹಾಡಿನ ಸಾಲುಗಳು ಇವುಗಳೊಂದಿಗೆ, ಇಟಾನಗರದಿಂದ ೯ ಕಿಲೋಮೀಟರ್ಗಳಷ್ಟು ಹಿಂದೆಯೇ ಇರುವ ನಹಾರ್ಲಗುನ್ ಹೆಲಿಪ್ಯಾಡ್‌ಗೆ ಬಂದಿಳಿದೆ. ರಸ್ತೆ ಪ್ರಯಾಣದಲ್ಲಿ ಗೌಹಾಟಿ ತಲುಪಲು ೧೧ ರಿಂದ ೧೨ ಗಂಟೆಗಳ ಸಮಯವಾಗುತ್ತದೆ. ಆದರೆ ಹೆಲಿಕ್ಯಾಪ್ಟರ್ನಲ್ಲಿ ಕೇವಲ ೧ ಗಂಟೆ ೧೦ ನಿಮಿಷಗಳ ಅವಧಿ ಸಾಕು. ಮತ್ತೆ

ಮತ್ತೆ ಅದೇ ಹಾಡನ್ನು ಮೌನದಲ್ಲೇ ಹಾಡಿಕೊಳ್ಳುತ್ತಾ ಗೌಹಾಟಿ ವಿಮಾನ ನಿಲ್ದಾಣ ತಲುಪಿದೆ.

ಅದೇ ಹಾಡನ್ನು ಹಾಡುತ್ತಿದ್ದೆ. ಗಡಿಯಾರ 9.30 ಬೆಳಗು ಎಂದು ಹೇಳುತ್ತಿತ್ತು. ಬೆಂಗಳೂರಿನ ಪ್ರಯಾಣಕ್ಕೆ ವಿಮಾನವಿದ್ದದ್ದು ಸಂಜೆ 7.30 ಕ್ಕೆ. ಅಕ್ಯಾಡೆಮಿಯ ಒಪ್ಪಂದದಲ್ಲಿ ಈ ಜಾಗವೇನೂ ಇರಲಿಲ್ಲ. ಹಾಗಾಗಿ ನೋಡಲೇಬೇಕು, ಟಿಪ್ಪಣಿ ಮಾಡಿಕೊಳ್ಳಲೇಬೇಕು ಎನ್ನುವ ಒತ್ತಡವೂ ಇರಲಿಲ್ಲ. ಆದರೂ ಚಕ್ರವಿರುವ ಕಾಲುಗಳು ಸುಮ್ಮನೆ ಕೊಡುತ್ತವೆಯೇನು! ಯಾವುದೇ ಯೋಜನೆ ಹಾಕಿಕೊಳ್ಳದೆ, ಯಾವುದೇ ಜಾಗವನ್ನು ನೋಡಲೇಬೇಕೆಂದು ಪಟ್ಟಿ ಮಾಡಿಕೊಳ್ಳದೆ, ಹಾಗೇ ಸುಮ್ಮನೆ ಗೊತ್ತು ಗುರಿಯಿಲ್ಲದೆ ಒಂದಷ್ಟು ಗಂಟೆಗಳ ಕಾಲ ಗೌಹಾಟಿಯನ್ನು ಸುತ್ತಿ ಬರೋಣ ಎಂದು ಟ್ಯಾಕ್ಸಿ ಗೊತ್ತು ಮಾಡಿಕೊಂಡೆ.

ಧನಂಜೋಯ್ ಎನ್ನುವ ಹೆಸರಿನ ಚಾಲಕನ ಗಾಡಿ ಹತ್ತುವಾಗಲೂ ಎತ್ತರದ ಧ್ವನಿಯಲ್ಲಿಯೇ ಹಾಡುತ್ತಿದ್ದೆ "ದಿಲ್‌ಹೂಂ ಹೂಂ ಕರೇ. . ." ಒಂದು ಹತ್ತು ನಿಮಿಷಗಳ ಪಯಣದ ನಂತರ ನಾನು ಹಾಡುತ್ತಿದ್ದ ಹಾಡನ್ನು ಕೇಳಿಸಿಕೊಂಡೋ ಏನೋ ಧನಂಜೋಯ್ ಕೇಳಿದ "ದೀದಿ ಭುಪೇನ್ ಹಜ಼ಾರಿಕ ಅವರ ಸಮಾಧಿ ಇಲ್ಲೇ ಹತ್ತಿರದಲ್ಲೇ ಇದೆ. ಕರೆದುಕೊಂಡು ಹೋಗಲಾ?" ಎಂದು ಕೇಳಿದ. ಓಹ್, ನನಗಂತೂ ಪರಮಾಶ್ಚರ್ಯ. ಬೆಳಗಿನಿಂದ ನಾಲಿಗೆಯಲ್ಲಿ ಅರಿವಿಲ್ಲದೆಯೇ ಕುಣಿಯುತ್ತಿದ್ದ ಹಾಡಿಗೂ ಚಾಲಕನ ಮಾತಿಗೂ ಈಗ ಸಂಬಂಧ ಹೊಳೆಯಿತು. ಈ ವಿಶ್ವವು ತನ್ನಂತೆಯೇ ನಮ್ಮನ್ನು ನಡೆಸಿಕೊಳ್ಳಲು ಏನೆಲ್ಲಾ ಉಪಾಯ ಹೂಡುತ್ತದೆ. ಸೂಚನೆಗಳನ್ನೂ ನೀಡುತ್ತಿರುತ್ತದೆ. ಗುರುತಿಸುವ ಸೂಕ್ಷ್ಮತೆ ನಮಗಿರಬೇಕಷ್ಟೆ. ಇಷ್ಟೊಂದು ಅದೃಷ್ಟವನ್ನು ತುಂಬಿಕೊಟ್ಟಿರುವ ಆ ಕಾಣದ ಕೈಗಳಿಗೆ ನಮಿಸುತ್ತಾ "ಆಗಲಿ ಊರೆಲ್ಲಾ ಸುತ್ತಿ ವಾಪಸ್ಸು ಬರೋವಾಗ ಕರೆದುಕೊಂಡು ಹೋಗಪ್ಪ" ಎಂದೆ.



**ಭುಪೇನ್ ಹಜ್ಹಾರಿಕ ಅವರ ಸಮಾಧಿ**

ನೀಲಕಂಠ ಮತ್ತು ಶಾಂತಿಪ್ರಿಯ ಎನ್ನುವ ಮಧ್ಯಮ ವರ್ಗದ ಅಸ್ಸಾಮಿ ದಂಪತಿಗಳ ಹತ್ತು ಜನ ಮಕ್ಕಳಲ್ಲಿ ಹಿರಿಯ ಮಗನಾಗಿ 1926 ರ ಸೆಪ್ಟೆಂಬರ್ 8 ನೆಯ ದಿನಾಂಕದಂದು ಹುಟ್ಟಿದ್ದು ಭುಪೇನೆ ಹಝಾರಿಕ. ಬಾಲ್ಯದಿಂದಲೇ ತಾಯಿ ಹಾಡುತ್ತಿದ್ದ ಜೋಗುಳ ಮತ್ತು ಬೋರ್ಗೀತ್ (ಅಸ್ಸಾಮಿ ಶೈಲಿಯ ದೇವರ ನಾಮಗಳು) ಗಳ ಬಗ್ಗೆ ಭುಪೇನ್‌ಗೆ ಎಲ್ಲಿಲ್ಲದ ಆಸಕ್ತಿ. ಶ್ರದ್ಧೆಯಿಟ್ಟು ತಾಯಿಯಿಂದ ಕಲಿತುಕೊಳ್ಳುತ್ತಿದ್ದ ಬಾಲಕ. 1935 ರಲ್ಲಿ ಹೆಚ್ಚಿನ ಉದ್ಯೋಗಾಕಾಂಕ್ಷೆಯಿಂದ ಅರುಣಾಚಲ ಪ್ರದೇಶದ ತೇಜ್ಪುರ್‌ಗೆ ಬಂದಿಳಯಿತು ಹಝಾರಿಕಾ ಕುಟುಂಬ. 9 ವರ್ಷದ ಬಾಲಕ ಯಾವುದೋ ಸಾರ್ವಜನಿಕ ಸಮಾರಂಭದಲ್ಲಿ ಬೋರ್ಗೀತ್ ಒಂದನ್ನು ಹಾಡುವಾಗ ಅವನ ಧ್ವನಿಯಲ್ಲಿದ್ದ ಮಾತ್ರಿಕತೆಗೆ ಮುಗ್ಧರಾದವರು ಆಗಿನ ದಿನಗಳಲ್ಲಿ ಖ್ಯಾತ ಸಿನೆಮಾ ಸಾಹಿತಿಗಳಾದ ಜ್ಯೋತಿ ಪ್ರಸಾದ ಅಗರ್ವಾಲ್ ಮತ್ತು ಬಿಷ್ಣುಪ್ರಸಾದ. ಇವರುಗಳ ಸಲಹೆಯ ಮೇರೆಗೆ ಅಸ್ಸಾಮಿಗೆ ಹಿಂದಿರುಗಿ ಕವಿರಾಜ್ ಪಂಡಿತ್ ನರೇಂದ್ರ ಶರ್ಮಾ ಅವರಲ್ಲಿ ಸಂಗೀತಾಭ್ಯಾಸ ಶುರುವಿಟ್ಟುಕೊಂಡ ಬಾಲಕ

ಭುಪೇನ್ ಮೊದಲ ಬಾರಿಗೆ ಇಂದ್ರಮಾಲತಿ ಎನ್ನುವ ಸಿನೆಮಾದಲ್ಲಿ ಹಾಡಿದಾಗ 13 ವರ್ಷಗಳ ಹುಡುಗ. ಅಂದಿನಿಂದ ನೂರಾರು ದೇಶ ವಿದೇಶೀ ಪ್ರಶಸ್ತಿಗಳ ಜೊತೆಗೆ, ಪದ್ಮಶ್ರೀ, ಪದ್ಮಭೂಷಣ, ಪದ್ಮ ವಿಭೂಷಣ ಮಾತ್ರವಲ್ಲ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯೂ ಅವರನ್ನು ಹುಡುಕಿಕೊಂಡು ಹೋಗಿದ್ದು ಇತಿಹಾಸ. ಪ್ರಿಯಂವದಾ ಎನ್ನುವವರನ್ನು ಮದುವೆಯಾಗಿದ್ದ ಭುಪೇನ್ ಹಜ಼ಾರಿಕ ಅವರಿಗೆ ತೇಜ್ ಭುಪೇನ್ ಎನ್ನುವ ಒಬ್ಬನೇ ಪುತ್ರ ಇದ್ದಾರೆ. ಈಗವರು ಅಮೇರಿಕಾ ದೇಶದ ನ್ಯೂಯಾರ್ಕ್‌ನಲ್ಲಿ ಇದ್ದು ತಂದೆಯ ಹೆಸರಿನಲ್ಲಿ ಸಂಗ್ರಹಾಲಯವೊಂದನ್ನು ತೆರೆಯುವ ದಿಕ್ಕಿನಲ್ಲಿ ಕೆಲಸ ಮಾಡುತ್ತಿದ್ದಾರೆ.

2011 ರ ನವೆಂಬರ್ ತಿಂಗಳ 5 ನೆಯ ತಾರೀಕಿನಂದು ತಮ್ಮ 85ನೆಯ ವಯಸ್ಸಿನಲ್ಲಿ ಮುಂಬೈನಲ್ಲಿ ತೀರಿಕೊಂಡ ಭುಪೇನ್ ಅವರ ಕಳೇಬರವನ್ನು ಗೌಹಾಟಿಯ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಸ್ಥಳದಲ್ಲಿ ಸಮಾಧಿ ಮಾಡಲಾಗಿದೆ. 200 ಎಕರೆಗಳ ಜಾಗದಲ್ಲಿ ಸ್ಮಾರಕವೊಂದು ನಿರ್ಮಾಣವಾಗುತ್ತಿದೆ. ಅಲ್ಲಿ ಸಂಗ್ರಹಾಲಯದ ಜೊತೆಗೆ ಅಧ್ಯಯನ ಪೀಠ ಸ್ಥಾಪಿಸುವುದರ ಮೂಲಕ ಅಸ್ಸಾಮಿ ಶೈಲಿಯ ಸಂಗೀತ ಕಲೆಕೆಗೆ, ಪ್ರಸ್ತುತಿಗೆ ಒತ್ತು ಕೊಡುವ ಉದ್ದೇಶವಿದೆ. ಬಿಳಿ ಶಿಲೆಯಲ್ಲಿ ವಜ್ರಾಕೃತಿಯಲ್ಲಿ ಮೇಲೆಳಲಿರುವ ಕಟ್ಟಡದ ನೀಲನಕ್ಷೆಯನ್ನು ಅಲ್ಲಿ ತೂಗು ಬಿಡಲಾಗಿದೆ. ಹಜ಼ಾರಿಕ ಅವರ ಸಮಾಧಿಯ ಬಳಿ ದೀಪವೊಂದು ಎಡೆಬಿಡದೆ ಉರಿಯುತ್ತಿದೆ. ಆಳೆತ್ತರದ ಅವರ ಫೋಟೊ ಸಂಗೀತವನ್ನು ಉಸಿರಾಡುತ್ತಾ ಜೀವಂತವಾಗಿರುವಂತೆ ತೋರುತ್ತದೆ. ಶಾಲಾ ಮಕ್ಕಳು ಕಾಲೇಜು ಯುವಕರು ಅಲ್ಲಿ ಆಗಾಗ್ಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿರುತ್ತಾರೆ. ಸದ್ಯಕ್ಕಂತೂ ಆ ಜಾಗ ಸಿಮೆಂಟಿನ ಧೂಳು, ಜಲ್ಲಿ ಕಲ್ಲಿನ ಘಾಟಿನಿಂದ ತುಂಬಿಹೋಗಿದೆ. ಆದರೂ ಅಲ್ಲೊಂದು ಹಿತವಾದ ನೀರವತೆ ಮನೆ ಮಾಡಿದೆ. ಸಮಾಧಿಯ ಮೆಟ್ಟಿಲುಗಳ ಮೇಲೆ ಅವರದ್ದೇ ಹಾಡುಗಳನ್ನು ನೆನೆಯುತ್ತಾ ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದೆ. ಹಗುರಾಗಿದ್ದೆ. ಭುಪೇನ್ ಅವರ ಎರಡನೆಯ ತಮ್ಮ ಅಲ್ಲಿಯೇ ಇರುವುದಾಗಿ ತಿಳಿದು ಬಂತು. ಮಾತನಾಡಿಸಿ ಬರೋಣ ಅಂತ ತ್ರಾಸಿನಿಂದ

ಅವರ ಫೋನ್ ನಂಬರ್ ಪಡೆದುಕೊಂಡು ಕರೆ ಮಾಡಿದೆ. ಆದರೆ ಅವರು ಊರಿನಲ್ಲಿ ಇರಲಿಲ್ಲ. ನಾಳೆಯವರೆಗೂ ಸಮಯ ನನ್ನಲಿರಲಿಲ್ಲ. ಅನಿವಾರ್ಯವಾಗಿ ಸುಮ್ಮನಾದೆ. ಹಿಂತಿರುಗುವಾಗ ಧನಂಜೋಯ್ ಹೇಳಿದ "ದೀದಿ ನಿಮಗೆ ಗೊತ್ತಾ ಹಝಾರಿಕಾ ಅವರ ದೇಹವನ್ನು ಗಂಧದ ಮರಗಳಿಂದ ಸುಡಲಾಯ್ತು. ದೊಡ್ಡ ಮನುಷ್ಯರಿಗೆ ಮಾತ್ರ ಹೀಗೆ ಮಾಡಲಾಗುತ್ತದೆ". ಅವನ ಸರಳತೆ, ನೇರ ಮಾತುಗಳು ಸೀದಾನ ನ್ನೊಳಗೆ ಇಳಿಯುತ್ತಿದ್ದಾಗ ಕೇಳಿದೆ "ನೀನು ಗಂಧದ ಮರವನ್ನು ನೋಡಿದ್ದೀಯಾ ? ಅದರ ಪರಿಮಳ ಹೇಗಿರುತ್ತೆ ನಿನಗೆ ಗೊತ್ತಾ?" ಎಂದು. ಮುಗ್ಧವಾಗಿ, ಖಚಿತವಾಗಿ ಇಲ್ಲಾ ಅಂದ ಅವನು. ಟ್ಯಾಕ್ಸಿಯ ಬಿಲ್ ಹಣವನ್ನು ಕೊಟ್ಟು ಒಂದು ನಿಮಿಷ ನಿಲ್ಲಲು ಹೇಳಿ ಬ್ಯಾಗ್‌ನಿಂದ ಎರಡು ಮೈಸೂರು ಸ್ಯಾಂಡಲ್ ಸೋಪುಗಳನ್ನು, ಅಗರಬತ್ತಿ ಕಟ್ಟುಗಳನ್ನು ಅವನಿಗೆ ಕೊಟ್ಟೆ. ಆ ಕ್ಷಣದಲ್ಲಿ ಅವನ ಕಣ್ಣಲ್ಲಿ ತನ್ನದೇ ಅಸ್ತಿತ್ವ ಗುರುತಿಸಿಕೊಂಡಂತಹ ಹೆಮ್ಮೆ ಸಂತೋಷವಿದ್ದದ್ದು ನನಗೆ ಕಾಣುತ್ತಿತ್ತು. ಈ ಪ್ರವಾಸಕ್ಕಾಗಿಯೇ ತೆಗೆದುಕೊಂಡಿದ್ದ ಹೊಸ ಝೂಜ಼್ ಜೊತೆಯೊಂದನ್ನು ಬ್ಯಾಗ್‌ನಿಂದ ತೆಗೆದು ಅವನ 12ನೆಯ ಇಯತ್ತೆಯಲ್ಲಿ ಓದುತ್ತಿರುವ ಮಗನಿಗೆ ಕೊಡಲು ಹೇಳಿ ಅವನ ಕೈಯಲ್ಲಿರಿಸಿದೆ. ಆ ನಿಮಿಷದಲ್ಲಿ ಭುಪೇನ್ ಹಝಾರಿಕ ಎರಡು ಮನುಷ್ಯ ಹೃದಯಗಳನ್ನು ಬೆಸೆದ ಕಣ್ಣಿ ಹಾಡಾಗಿದ್ದರು. ನಾನು ಮತ್ತೆ ಹಾಡಿಕೊಳ್ಳುತ್ತಿದ್ದೆ "ಏಕ್‌ಬೂಂದ್ ಕಭೀಪಾನಿ ಕೀಮೊರೆ ಅಖಿಯೋಂಸೆಬರ್ಸಾಯೇ. . ."

* * * * *

## 21. ಹೇಗೆ ತೀರಿಸಲಿ ನಿಮ್ಮ ಋಣವಾ. . .

ತಿರುಗಾಟದ ಹುಚ್ಚನ್ನು ರಕ್ತಕ್ಕೇ ಅಂಟಿಸಿಕೊಟ್ಟ ಪಪ್ಪ. . .

ಅಕಾಡೆಮಿಯ ಪ್ರವಾಸ ಅನುದಾನ ಯೋಜನೆಯ ಬಗ್ಗೆ ದಿನ ಪತ್ರಿಕೆಯಲ್ಲಿ ಪ್ರಕಟಣೆ ಬಂದ ಕೂಡಲೇ ಅರ್ಜಿ ಹಾಕು ಎಂದು ದುಂಬಾಲು ಬಿದ್ದ ಅಮ್ಮ . . .

ಆಯ್ಕೆ ಮಾಡಿ, ಜೀವಮಾನದ ಅವಕಾಶ ಕೊಟ್ಟು, ಊರು ಸುತ್ತಿಸಿ ನನ್ನ ಅನುಭವವನ್ನು ವಿಸ್ತರಿಸಿ, ತಾಳ್ಮೆಗೆಡದೆ ಪುಸ್ತಕ ಬರೆಯಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಮತ್ತು ರಿಜಿಸ್ಟ್ರಾರ್. . .

ಪ್ರವಾಸದ ಸಮಯದಲ್ಲಿ ಕುಟುಂಬವನ್ನು ಸುಧಾರಿಸಿಕೊಟ್ಟ ಅಕ್ಕ ಆಶಾ ವಿಶ್ವನಾಥ್ ಮತ್ತು ಅಮ್ಮ. . .

ಪ್ರವಾಸಕ್ಕೆ ಆಯ್ಕೆಯಾಗುತ್ತಿದ್ದಂತೆಯೇ ಖುಷಿಪಟ್ಟ ನನ್ನ ಮಕ್ಕಳು ಮತ್ತು ಅವರಪ್ಪ, ಅತ್ತೆ, ಮಾವ ಮತ್ತು ಕುಟುಂಬದ ಉಳಿದವರೆಲ್ಲರೂ. . .

ಹಂಚಿ ತಿನ್ನಲೆಂದೇ ಡಬ್ಬಿ ಭರ್ತಿ ಲಾಡು, ರವೆ ಉಂಡೆ, ಕೋಡುಬಳೆ ಮಾಡಿಕೊಟ್ಟಿದ್ದ ಅಮ್ಮ . . .

ಹಿಂದಿನ ಪ್ರವಾಸಗಳ ಅನುಭವದಿಂದ ಹೋದಲ್ಲಿ ಭೇಟಿಯಾಗುವ ಎಲ್ಲರಿಗೂ ಉಡುಗೊರೆಯಾಗಿ ಕೊಡಲೆಂದೇ ಮೈಸೂರು ಸ್ಯಾಂಡಲ್ ಸೋಪುಗಳ ಮತ್ತು ಗಂಧದ ಕಡ್ಡಿಗಳ ಉಡುಗೊರೆ ಪ್ಯಾಕ್‌ಗಳನ್ನು ಖರೀದಿಸಿಕೊಟ್ಟಿದ್ದ ಅಮ್ಮ. . .

ತೃಣಮಾತ್ರವೂ ತೊಂದರೆ ಕೊಡದೆ ನಕ್ಕು ನಲಿಯುತ್ತಾ ಸಹಕರಿಸಿ ಆರೋಗ್ಯ ಕಾಪಾಡಿಕೊಟ್ಟ ನನ್ನ ವರ್ಣತಂತುಗಳು . . .

ಓಡಾಟದ ಭರಾಟೆಯಲ್ಲಿ ಮುರಿದು ಹೋಗಿಯೂ ಒಳಗಿನ ಟಿಪ್ಪಣಿಗಳ ಸಂಗ್ರಹವನ್ನು ಹಾನಿಗೊಳಿಸದೆ ಹಾಗೇ ಜೋಪಾನ ಮಾಡಿಕೊಂಡು ನನಗೆ ಹಿಂದಿರುಗಿಸಿದ ನನ್ನ ಮತ್ತೊಂದು ಅಂಗವೇ ಆದ ಲ್ಯಾಪ್‌ಟಾಪ್. . .

ತಮ್ಮ ಅರುಣಾಚಲ ಪ್ರದೇಶ ಯಾತ್ರೆಯ ಕಿರು ಅನುಭವವನ್ನು ಹಂಚಿಕೊಂಡಿದ್ದ ವಿಜಯ ಕರ್ನಾಟಕ ಪತ್ರಿಕೆಯ ಉಮಾಪತಿ ದಾಸಪ್ಪ. .

"ಹೆಲಿಕ್ಯಾಪ್ಟರ್ನಲ್ಲಿ ಹೋಗಿ ಅದೇನು ಪುಸ್ತಕ ಬರೀತೀಯೋ" ಅಂತ ಛೇಡಿಸುತ್ತಲೇ ಎಸೆಂಎಸ್ ಮೂಲಕ ನನ್ನ ಯೋಗ ಕ್ಷೇಮ ವಿಚಾರಿಸಿಕೊಳ್ಳುತ್ತಿದ್ದ ಗೆಳೆಯ ಗೆಳತಿಯರು. . .

ಪುಸ್ತಕ ಬರೆಯುವ ಸಮಯದಲ್ಲಿ ನನ್ನ ಊಟದ ಬಗ್ಗೆ ಕಾಳಜಿ ವಹಿಸುತ್ತಿದ್ದ ಗೆಳತಿ ವೀಣಾ ಭಟ್. . .

ಅಚ್ಚಿಗೆ ಅಕ್ಷರಗಳನ್ನು ಜೋಡಿಸಿಕೊಟ್ಟ ಮೈಸೂರಿನ ಭಾನುಮತಿ. .

ನನ್ನ ಮನಸ್ಸನ್ನು ಯಥಾವತ್ ಚಿತ್ರ ಮಾಡಿ ಮುಖಪುಟ ರಚಿಸಿಕೊಟ್ಟ ಕಲಾವಿದ ವಿ.ಎಂ. ಮಂಜುನಾಥ್. . .

'ಮಾಲ್ತೇಶ್ ಅವರನ್ನು ಪರಿಚಯ ಮಾಡಿಕೊಳ್ಳಿ' ಎಂದು ಸಲಹೆ ಕೊಟ್ಟ ಸ್ನೇಹಿತ ಡಾ. ನಟರಾಜು ಸೀಗೇಕೋಟೆ. . .

ಎಷ್ಟೋ ವರ್ಷಗಳ ಪರಿಚಯವೇನೋ ಎನ್ನುವ ಹಾಗೆ ಬರಮಾಡಿಕೊಂಡು ಸತ್ಕರಿಸಿದ ಮಾಲ್ತೇಶ್ ಮೋಟೆಬೆನ್ನೂರು ದಂಪತಿಗಳು. . .

ಅರುಣಾಚಲ ಪ್ರದೇಶದ ಭೂಮಿಗೆ ಪಾದವಿಟ್ಟಾಗ ಮೊದಲು ಪರಿಚಯವಾಗಿ ಅಲ್ಲಿಂದಲೇ ಊರಿನ ವಿವರಣೆ ಕೊಡಲು ಶುರು ಮಾಡಿದ ಟ್ಯಾಕ್ಸಿ ಚಾಲಕ ಬಾಂಗ್ಲಾದೇಶ ಮೂಲದ ಖೋಬತ್ತ್ ಅಲಿ. . .

ಇಟಾನಗರವನ್ನೆಲ್ಲಾ ಸುತ್ತಿಸಿದ ಅಸ್ಸಾಂನ ಬೋಡ ಎನ್ನುವ ಯುವಕ. .

ಹೊರಡುವ ಸಮಯದಲ್ಲಿ ದೇವದಾರು ಮರದ ಎರಡು ಚಕ್ಕೆಗಳನ್ನು ಉಡುಗೊರೆಯಾಗಿ ಕೊಟ್ಟ ಟ್ಯಾಕ್ಸಿ ಮಾಲೀಕ ರಾಧಾಕೃಷ್ಣ . . .

ಪ್ರವಾಸದಲ್ಲಿ "ದೀದಿ ದೀದಿ" ಎನ್ನುತ್ತಾ ನನ್ನದೇ ಮತ್ತೊಂದು ಅಂಗವಾಗಿಬಿಟ್ಟಿದ್ದ ಚಾಲಕ ಕೇರಳದ ಯುವಕ ರಂಜು. . .

ಗೌಹಾಟಿಯ ಜನ ಜೀವನದ ಬಗ್ಗೆ ಮಾತನಾಡುತ್ತಾ ಟ್ರ್ಯಾಫಿಕ್ ಜ್ಯಾಂ ಬಗ್ಗೆ ಸ್ವಲ್ಪವೂ ಬೇಸರವಿಲ್ಲದೆ ಅಲ್ಲಿನ ಗಲ್ಲಿಗಲ್ಲಿಯನ್ನೂ ಸುತ್ತಿಸಿದ ಧನಂಜೋಯ್. .

ದೇಮಾಜಿ ಕಾಲೇಜಿನ ಬಗ್ಗೆ ಮಾಹಿತಿ ಕೊಟ್ಟ ಹೊಟೇಲಿನ ಹುಡುಗರು. .

"ಬದುಕಲು ಒಂದು ಹಿಡಿ ಅನ್ನ ಇದ್ದರೆ ಕೊಡು ಸಾಕು" ಎಂದು ನಾ ಹೇಳಿದರೂ ರಾತ್ರಿ 1 ಗಂಟೆಯಲ್ಲೂ ಶ್ರದ್ಧೆಯಿಂದ ಎರಡು ತರಹ ತರಕಾರಿ ಪಲ್ಯ, ದಾಲ್, ಅನ್ನ ಎಲ್ಲವನ್ನೂ ತಾನೇ ಮಾಡಿ ಪ್ರೀತಿಯಿಂದ ತಂದುಕೊಟ್ಟ ದೇಮಾಜಿ ಹೋಟೇಲಿನ ಅಡುಗೆಯವ. . .

ಪ್ರವಾಸದ ಪ್ರತಿ ಕ್ಷಣವೂ ನನ್ನ ಸಹಾಯಕ್ಕೆ ಒದಗಿ ಬಂದ ಹೆಸರು ತಿಳಿಸದವರು. . .

ಯಾವ ರಸ್ತೆಯಲ್ಲೂ ಸ್ನೇಹಪೂರ್ವಕವಾಗಿ ಜಾಗ, ಜನಗಳ ಬಗ್ಗೆ ವಿಷಯ ತಿಳಿಸಿಕೊಡುತ್ತಿದ್ದ ಅರುಣಾಚಲ ಪ್ರದೇಶದ ನಗುಮೊಗದ ಜನರು. . .

ಮುಖ್ಯಮಂತ್ರಿಗಳ ತಂಗಿಯ ವಿಳಾಸದ ಸುಳಿವು ಕೊಟ್ಟ ಮಲೆಯಾಳಿ ಯುವಕ ಅಶೋಕ್. . .

ನಬಂ ಹೀನಾ, ಪಾರ್ಥೋ ಮಹಾರಾಜ್, ಸದಾನಂದ ಹೆಗ್ಡೆಯವರು. . .

ಮಾಲಿನಿ ತಾನ್ ದೇವಸ್ಥಾನದಲ್ಲಿ ಅವರ ಮನೆಯ ಹೆಣ್ಣು ಮಗಳೇನೋ ಎನ್ನುವ ಹಾಗೆ ವಾತ್ಸಲ್ಯದಿಂದ ನನ್ನ ಉಡಿತುಂಬಿ, ಪ್ರಸಾದ ನೀಡಿದ ಅಸ್ಸಾಂ ಸುಂದರಿಯರು. . .

ದೇವಸ್ಥಾನದ ಮೆಟ್ಟಿಲುಗಳನ್ನು ಏರುವಾಗ "ಹುಣ್ಣಿಮೆಗಳಲ್ಲಿ ತಪ್ಪದೆ ಇಲ್ಲಿಗೆ ಬರುತ್ತೇನೆ" ಎನ್ನುತ್ತಾ ಬೆವರಿನೊಂದಿಗೆ ಎದುಸಿರು ಬಿಡುತ್ತಿದ್ದ ಧಡೂತಿಯಾಗಿದ್ದ ಆಕೆಯ ಕೈಯಿಂದ ಹೂವಿನಬುಟ್ಟಿ ತೆಗೆದುಕೊಂಡಿದ್ದಕ್ಕೇ ಬಾಯ್ತುಂಬಾ ನನ್ನನ್ನು ಹರಸಿದ ಕೇಸರಿ ಬಣ್ಣದ ಸೀರೆಯುಟ್ಟಿದ್ದ ಆ ಹೆಂಗಸು. . .

"ದಕ್ಷಿಣದ ಹೆಂಗಸರು ಸುಂದರಿಯರು ಅಲ್ವಾ?" ಎಂದು ಪದೇ ಪದೇ ಕೇಳುತ್ತಾ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಿದ್ದ, ಝೀರೋವಿನಲ್ಲಿ ಸಿಕ್ಕ ಡಾರ್ಜಿಲಿಂಗ್‌ನ ಬೆಡಗಿ. . .

ನಿಷೇಧ ವಿಧಿಸಿದ್ದ ಭಾರತ-ಚೀನಾ ಸರಹದ್ದಿನ ರಸ್ತೆಯಲ್ಲಿ ಹೋಗಿಬಿಟ್ಟಿದ್ದಾಗ ಗೋರಿಲ್ಲಾ ಸೈನಿಕರ ಕೆಂಗಣ್ಣಿಗೆ ಗುರಿಯಾಗಿ, ನನ್ನ ಹಿಂದಿ ಅವರಿಗೆ ತಿಳಿಯದೆ ಅವರ ಪಹಾಡಿ ಭಾಷೆ ನನಗೆ ಅರಿವಾಗದೆ ಒದ್ದಾಡುತ್ತಿದ್ದಾಗ "ಏ ಸೌತ್ ಇಂಡಿಯನ್‌ಹೇ. ಉಸೆ ಛೋಡ್ ದೋ" ಎನ್ನುತ್ತಾ

ಕಣ್ಣುಮಿಟುಕಿಸಿ ನನ್ನನ್ನು ಕತ್ತಲಲ್ಲೂ ಸುರಕ್ಷಿತವಾಗಿ ಹೋಗಲು ಬಿಟ್ಟ ಮತ್ತೊಬ್ಬ ಗೋರಿಲ್ಲಾ ಸೈನಿಕ. . .

ಎಲ್ಲಾ ಸರಹದ್ದಿನಲ್ಲೂ ನನ್ನ ಹಣೆಯ ಮೇಲಿನ ದೊಡ್ಡ ಕುಂಕುಮವನ್ನು ನೋಡುತ್ತಲೇ ನಗು ಮೊಗದಿಂದ " ಆಪ್ ಜಾಯಿಯೇ" ಎನ್ನುತ್ತಾ ಯಾವ ದಾಖಲೆಯನ್ನೂ ಪರಿಶೀಲಿಸದೆ ಮುಂದಕ್ಕೆ ಕಳುಹಿಸುತ್ತಿದ್ದ ಊರಬಾಗಿಲ ಕಾವಲುಗಾರರು. . .

ಹೆಲಿಕ್ಯಾಪ್ಟರ್ ರಿಸರ್ವೇಷನ್ ಸಿಗದೆ ಸೋತು ಕೂತಿದ್ದಾಗ ಎಲ್ಲಿಂದಲೋ ಓಡಿ ಬಂದು ಟಿಕೇಟು ಒದಗಿಸಿಕೊಟ್ಟ ಡೆಕಾ ಎನ್ನುವ ಹೆಸರಿನ ಸಿಬ್ಬಂದಿ. . .

ಹೆಲಿಕ್ಯಾಪ್ಟರ್ ಪೈಲೆಟ್ ಆಗಿದ್ದು, ನಗುಮುಖದಿಂದ ಪರಿಚಯ ಮಾಡಿಕೊಂಡ ಕ್ಯಾಪ್ಟನ್ ಯುವರಾಜ್ ಥಾಪ. . .

ಹದಿನೈದು ದಿನಗಳ ಮೊದಲೇ ಇನ್ನರ್ ಲೈನ್ ಪರ್ಮಿಟ್‌ಗೆ ದಾಖಲೆಗಳನ್ನು ರೆಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಿದ್ದರೂ, ನನ್ನ ಫೋಟೊಗಳನ್ನು, ಅಂಚೆ ಚೀಟಿಗಳನ್ನು ಕಳೆದುಕೊಂಡ ಅಧಿಕಾರಿಯಿಂದ, ಪರ್ಮಿಟ್ ಕೊಡಲಾಗುವುದಿಲ್ಲ ಎನ್ನುವ ಸಂದೇಶ ಕೊನೇ ಗಳಿಗೆಯಲ್ಲಿ ಬಂದಾಗ ಆತಂಕಗೊಂಡಿದ್ದ ನನಗೆ "ಈಮೇಲ್ ಮೂಲಕ ಫೋಟೊ ಕಳಿಸಿ. ನಾನು ಪರ್ಮಿಟ್ ಕಳಿಸುತ್ತೇನೆ" ಎನ್ನುತ್ತಾ ವೈಯಕ್ತಿಕ ಜವಾಬ್ದಾರಿ ಹೊತ್ತು ಪ್ರಯಾಣದ ಹಿಂದಿನ ದಿನ ಪರ್ಮಿಟ್ ಕಳಿಸಿಕೊಟ್ಟ ದೆಹಲಿ ಕಚೇರಿಯ ಅಧಿಕಾರಿ ನಜೀಂ ಬೇಗ. . .

ಅದೆಷ್ಟೋ ಹೊತ್ತು ಸಂಜ್ಞೆಯಲ್ಲಿಯೇ ಮಾತನಾಡಿದ, ಮತ್ತಿನೆಷ್ಟೋ ಹೊತ್ತು ಮೌನ ಮತ್ತು ನಗುವನ್ನು ಹಂಚಿಕೊಂಡ, ತವಾಂಗ್‌ನ ಗಲ್ಲಿಯಲ್ಲಿ ಸಿಕ್ಕ ಮಾತುಬಾರದ ಬೌದ್ಧ ಸನ್ಯಾಸಿನಿ. . .

ತರಹಾವರಿ ಪಾರಂಪರಿಕ ಉಡುಪು ಧರಿಸಿ ನನ್ನ ಕ್ಯಾಮೆರಾಕ್ಕೆ ಪೋಸು ಕೊಟ್ಟ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು.

ಅರುಣಾಚಲ ಪ್ರದೇಶದ ಮಳೆ, ಚಳಿ, ಬಿಸಿಲು ಮತು ಧೂಳು, ದೈವೀಕ ಪ್ರಕೃತಿ, ಏಕಾಂತ, ನಿರುಮ್ಮಳತೆ, ಬ್ಯಾಂಬು ಶೂಟ್‌ನಿಂದ ತಯಾರಿಸಿದ್ದ

ತರಕಾರಿಯ ರುಚಿ, ಉಪ್ಪು ಖಾರವಿಲ್ಲದ ದಾಲ್ ಮತ್ತು ಸಿಹಿಸಿಹಿ ಕಿತ್ತಲೆ ಹಣ್ಣುಗಳು. . .

"ಆಪ್ ವೆಜಿಟೇರಿಯನ್ ಹೇ? ಚಿಕನ್ ಖಾಯೇಂಗೆ? ಎಗ್ ಲೇಂಗೆ?" ("ನೀವು ಸಸ್ಯಾಹಾರಿಗಳೇ? ಚಿಕನ್ ತಿಂತೀರಾ? ಮೊಟ್ಟೆ ತೆಗೆದುಕೊಳ್ಳುತ್ತೀರಾ?") ಎಂದು ಪದೇಪದೇ ನಗುಮುಖದಿಂದ ಕೇಳುತ್ತಿದ್ದ ರಾಜೀವ್ ಗಾಂಧಿ ಯೂನಿವರ್ಸಿಟಿಯ ಗೆಸ್ಟ್‌ಹೌಸ್‌ನ ಸಹಾಯಕ. . .

ATMನಿಂದ ಹಣ ತೆಗೆದಯುವುದು ಗೌಪ್ಯ ಕೆಲಸ ಎನ್ನುವ ಅರಿವೂ ಇಲ್ಲದೆ, ಒಬ್ಬರು ದುಡ್ಡು ತೆಗೆಯುವ ಸಂದರ್ಭದಲ್ಲಿ, ವಯೋ ಭೇದವಿಲ್ಲದೆ ಅವರೊಡನೆ ಸಂತೆಯಂತೆ ನೆರೆದಿರುತ್ತಿದ್ದ ಊರಿನ ಜನ

ನಾಗರಿಕತೆಯೆಂದರೆ ಒಳಗಿನ ಶಾಂತತೆಯನ್ನು, ಸಹಜವಾಗಿಯೇ ಇರುವ ನೆಮ್ಮದಿಯನ್ನು ಕೈಯಾರೆ ಹಾಳುಗೆಡವಿಕೊಳ್ಳುವುದೇ? ಎನ್ನುವ ಅನುಮಾನವನ್ನು ನನ್ನಲ್ಲಿ ಹುಟ್ಟುಹಾಕಿದ ಮುಗ್ಧ ಆದಿವಾಸಿಗಳು. . .

ಪೂರ್ವಾಗ್ರಹವಿಲ್ಲದೆ ಜಗತ್ತನ್ನು ನೋಡಬೇಕು, ಸಂಬಂಧಗಳನ್ನು ಬದುಕಬೇಕು ಎನ್ನುವ ಪಾಠವನ್ನು ಮರು ಮನನ ಮಾಡಿಕೊಟ್ಟ ಈ ಯಾತ್ರೆ. .



**ಜೀ಼ರೋ ಗೆಸ್ಟ್ ಹೌಸ್‌ನ ಮ್ಯಾನೇಜರ್ ಡಾರ್ಜಿಲಿಂಗ್ ಸುಂದರಿಯೊಡನೆ ಲೇಖಕಿ**

ಈ ಪ್ರವಾಸ ಒಂದು ಪರಿಪೂರ್ಣ ಅಧ್ಯಯನವೆಂದು ಖಂಡಿತ ನಾನು ಹೇಳಲಾರೆ. ಆದರೆ ಜಗತ್ತಿನ ಒಂದು ವಿಶಿಷ್ಟ ಜೀವನ ಶೈಲಿಯನ್ನು ದಾಖಲಿಸುವ ಈ ಪ್ರಕ್ರಿಯೆಯು, ಅಚಲವಾದ ನಂಬಿಕೆಗಳ ದೊಡ್ಡದೊಂದು ಮೊತ್ತದ ಮೋಡಿಯೇ ಸರಿ. ಸೆರಗೇ ಹಾಯಿ, ಹೃದಯವೇ ಹುಟ್ಟು. ಮುಳುಗದ ಹೊರತು ತೇಲದು ದೋಣಿ, ಕಾಣದು ಬೆಳಕು ಎನ್ನುವ ಸತ್ಯ ದರ್ಶಿಸಿಕೊಟ್ಟ ಅರುಣಾಚಲ ಪ್ರದೇಶವನ್ನು ಬಿಟ್ಟು ಹೊರಟಿದ್ದೇನೆ. ಜಗತ್ತು ಎಷ್ಟೊಂದು ವಿಶಾಲ ಆದರೆ ಕಾಲನೇಕಿಷ್ಟು ಸಂಕುಚಿತ ಎನ್ನುವ ದೊಡ್ಡದೊಂದು ಅತೃಪ್ತಿಯೊಂದಿಗೆ ಕಾಲನ ಮರ್ಮದೆಡೆಗೆ ಸಣ್ಣದೊಂದು ನಗು ಬೀರುತ್ತಾ ಹಿಂದಿರುಗಿದ್ದೇನೆ. ಹಂಚಿಕೆ ಅನುಭವದ ಸಾಂಧ್ರತೆಯನ್ನು ಕಡಿಮೆಗೊಳಿಸಬಹುದು ಎನ್ನುವ ಭಯದಿಂದ ಬರೆಯಲು ತಡ ಮಾಡಿದೆ. ಕ್ಷಮೆಯಿರಲಿ.

"ಹಳ್ಳಿಯೇ ಇಲ್ಲದೆ
ಬೌದ್ಧ ವಿಹಾರಕ್ಕೇನಿದೆ ಅರ್ಥ
ನಂಬುವ ಜನರಿರಬೇಕು
ಮಂದಿರಕ್ಕೆ
ಪರ್ವತಗಳು ಸೂಕ್ತ ಹಿಮಪಾತಕ್ಕೆ

ಪರ್ವತವಲ್ಲದೆ ಹಿಮ್ಮಕ್ಕಾದರೂ ಬೇರೇನಿದೆ ಗಮ್ಯ. . ."

ಸಾಹಿತಿ ವೈ.ಡಿ.ತೊಂಗ್ಚಿಯವರ ಈ ಸಾಲುಗಳನ್ನು ನೆನೆಯುತ್ತಾ, ಒಳಗಿರುವ ಜೀವಕ್ಕೆ ಅದರ ಕಾಲಿಗೆ ಚಕ್ರಗಳನ್ನು ಕಟ್ಟಿ ಜಗತ್ತು ತೋರಿಸುತ್ತಿರುವ ನಿಮ್ಮನು ನಿಮ್ಮಿಂದಾದ ನನ್ನನ್ನು ಮತ್ತೂ ಹೆಚ್ಚು ಪ್ರೀತಿಸತೊಡಗಿದ್ದೇನೆ.

**ಪಯಾರೋ ಪಚು = ಧನ್ಯವಾದಗಳು**

* * * * *

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. ಪ್ರತಿಗಳು (ಪಿ1)